ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಜುಲೈ 11, 2012 ಪುಟ 20 ರೂ. 14/-




ಬಾಕ್ಸರ್ ಮೇರಿ ಕೋಮ್ ಸಾಹಸಗಾಥೆ





ಆರ್ಟ್ ಆಫ್ ಲಿವಿಂಗ್ ಹೆಣ ಬಿತ್ತು



ಬೆಮೆಲ್ ಮೆಟ್ರೋ ಹಗರಣ

ಸಚಿವ ನಾರಾಯಣ ಸ್ವಾಮಿಯೂ ಭೂಗಳ್ಳ





ಅಮೆರಿಕನ್ ಸುಂದರಿಯನ್ನು ಕೊಂದನೇ ಪವನ್?




ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್

ಅಸಮಾನ ಭಾರತ

ಚಾರ್ವಾಕ



• ಶಿವಸುಂದ



ಈ ಭಾರತ ಮೊದಲಿನಿಂದಲೂ ಅಸಮಾನ ಭಾರತವೇ. ಅದರಲ್ಲೂ ಬುಡಕಟ್ಟು ಸಮಾಜಗಳು ನಶಿಸಿ ಅದರ ಜಾಗದಲ್ಲಿ ಜಾತಿಯಾಧಾರಿತ ಶ್ರೇಣೀಕೃತ ಸಮಾಜ ರೂಪುಗೊಂಡ ನಂತರದ ಕಳೆದ 2000 ವರ್ಷಗಳ ಭಾರತ ಇತಿಹಾಸ ಅಸಮಾನತೆಯ ಅನಂತರೂಪಗಳ ವಿಶ್ವದರ್ಶನವನ್ನೇ ತೋರಿಸಿದೆ. ಈ ಅಸಮಾನತೆಗಳ ವಿರುದ್ಧ ಕಳೆದ ಎರಡು ಸಹಸ್ರಮಾನಗಳಿಂದಲೂ ಹೋರಾಟವೂ ನಡೆಯುತ್ತಲೇ ಬಂದಿದೆ. ಈ ಹೋರಾಟಗಳ ಪರಿಣಾಮವಾಗಿಯೇ ಅಸಮಾನತೆಯ ಪ್ರಮಾಣ ಅಸಹನೀಯ ಪ್ರಮಾಣಕ್ಕೆ ಏರಿರಲಿಲ್ಲ. ಆದರೆ ಜಾತಿ ಆಧಾರಿತ ಸಮಾಜವನ್ನು ಆಧರಿಸಿ ಹುಟ್ಟಿಕೊಂಡ ರಾಜಸತ್ತೆಗಳು, ಊಳಿಗಮಾನ್ಯ ವ್ಯವಸ್ಥೆ ನಂತರ ತಮಗೆ ಬೇಕಾದಂತೆ ಇದಕ್ಕೆ ಅಲ್ಪಸ್ವಲ್ಪ ಮಾರ್ಪಾಡು ಮಾಡಿಕೊಂಡು ಬ್ರಿಟಿಷರು ಅಲ್ಪಪ್ರಮಾಣದಲ್ಲಿ ಪರಿಚಯಿಸಿದ ವಸಾಹತುಶಾಹಿ-ಬಂಡವಾಳಶಾಹಿ ವ್ಯವಸ್ಥೆಗಳೆಲ್ಲವೂ ಜನರ ಹೋರಾಟಗಳಿಗೆ ಹಲವು ಬಗೆಯ ಅಡ್ಡದಾರಿ ಹಿಡಿಸಿ, ದಮನ ಮಾಡಿ ಜನರನ್ನು ಸಂಪನ್ಮೂಲಗಳನ್ನು ಶೋಷಿಸುವ ಮೂಲಕ ಸಾಮಾಜಿಕ-ಆರ್ಥಿಕ ಅಸಮಾನತೆಯನ್ನು ಕ್ರಮೇಣ ಹೆಚ್ಚಿಸುತ್ತಲೇ ಬಂದವು.

ಆದರೆ 1947ರಲ್ಲಿ ಸ್ವಾತಂತ್ರ್ಯಬಂದಾದ ಮೇಲೆ ರಾಜಸತ್ತೆ ನಶಿಸಿ ಜನರೇ ಆಯ್ಕೆ ಮಾಡುವ ಪ್ರಜಾತಂತ್ರ ಜಾರಿಗೆ ಬಂತಷ್ಟೆ. ಸಮಾನತೆಯನ್ನು ಆಡಳಿತಾತ್ಮಕ ಆಶಯವನ್ನಾಗಿ ಸಂವಿಧಾನದಲ್ಲಿ ಸೇರಿಸಲಾಯಿತು. ಆದರೆ ಅದಕ್ಕೆ ಬೇಕಾದ ಸಂಪನ್ಮೂಲ ವಿತರಣೆಯನ್ನು ಮಾತ್ರ ಕಡ್ಡಾಯಗೊಳಿಸುವ ಯಾವ ದರ್ದನ್ನು ಸಂವಿಧಾನ ವಿಧಿಸಲಿಲ್ಲ. ಹೀಗಾಗಿ "ಪ್ರಜಾಸತ್ತಾತ್ಮಕ ಭಾರತ"ದಲ್ಲಿ ಅಸಮಾನತೆ ಅಭಾದಿತವಾಗಿಯೇ ಮುಂದುವರೆಯಿತು. ಅದರಲ್ಲೂ ಜಾಗತೀಕರಣದ ಕಳೆದ ಇಪ್ಪತ್ತು ವರ್ಷಗಳಂತೂ ಸಂವಿಧಾನದ ಆಶಯಗಳನ್ನು ಅಣಕ ಮಾಡುವಂತೆ ಅಸಮಾನತೆಯನ್ನು ಹೆಚ್ಚಿಸಿದೆ.

ಹಾಗೆ ನೋಡಿದರೆ, ಸಂಪತ್ತಿನ ಅಸಮಾನ ಹಂಚಿಕೆಯನ್ನು ಒಂದು ಮಾನದಂಡವನ್ನಾಗಿ ಇಟ್ಟುಕೊಂಡು ಅಳೆಯುವುದಾದರೆ ಭಾರತವು ತನ್ನ ಇತಿಹಾಸದಲ್ಲೇ ಹಿಂದೆಂದೂ ಕಾಣದಷ್ಟು ಅಸಮಾನತೆಯನ್ನು ಅನುಭವಿಸುತ್ತಿದೆ. ಈ "ಪ್ರಜಾತಾಂತ್ರಿಕ" ಯುಗದಲ್ಲಿ- ಕೆಲವರು ಜಾಗತೀಕರಣವೆಂದರೆ "ವಸುಧೈವ ಕುಟುಂಬಕಂ" ಜಾಗತಿಕ ಭ್ರಾತೃತ್ವ ಎಂದು ಮುಗ್ಧ ಮುಠಾಳತನದಲ್ಲಿ ನಂಬುವ ಈ ಯುಗದಲ್ಲಿ - ಅಸಮಾನತೆಯ ಅಸಹನೀಯತೆಗೆ ರಾಜಕೀಯ ಸಮಾನತೆಯ ದಿರಿಸನ್ನು ಹೊದಿಸಿ ಶೋಷಿತ ಜನರಿಗೆ ಮೋಸ ಮಾಡಲಾಗುತ್ತಿದೆ.

ಆದರೆ ಈ ದಿರಿಸನ್ನು ಸ್ವಲ್ಪ ಪಕ್ಕಕ್ಕೆ ಸರಿಸಿ ನೋಡಿದರೆ ಈ ಅಸಮಾನತೆಯ ವಿಶ್ವ ಸ್ವರೂಪ ಅರ್ಥವಾಗುತ್ತದೆ. ಅದರಲ್ಲೂ ಜಾಗತೀಕರಣದ ಈ ಕಾಲಘಟ್ಟ ಎಂಥಾ ಕಂದರವನ್ನು ಹುಟ್ಟುಹಾಕುತ್ತಿದೆ ಎಂದು ಗೊತ್ತಾಗುತ್ತದೆ.

ಹಾಗೆ ನೋಡಿದರೆ ಅದು ಭಾರತದಲ್ಲಿ ಮಾತ್ರವಲ್ಲ, ಇಡೀ ವಿಶ್ವದಲ್ಲೇ ಅಸಮಾನತೆಯ ಕಂದರ ಈ ಕಾಲಘಟ್ಟದಲ್ಲಿ ಅಸಹನೀಯವಾಗಿ ಹೆಚ್ಚಿದೆ.

ಜಗತ್ತಿನ ಮಟ್ಟದಲ್ಲಿ ಆಸ್ತಿಪಾಸ್ತಿಗಳ ಗಳಿಕೆ ಮತ್ತು ಒಡೆತನದ ಹಂಚಿಕೆ ಯಾವ ಪ್ರಮಾಣದಲ್ಲಿದೆ ಎಂದು ಅಧ್ಯಯನ ಮಾಡುವ ಸೂಸೀ ಕ್ರೂಜ್ ಸಂಸ್ಥೆ ಪ್ರತಿ ವರ್ಷ ಜಾಗತಿಕ ಆಸ್ತಿಪಾಸ್ತಿ ವರದಿಯನ್ನು ಬಿಡುಗಡೆ ಮಾಡುತ್ತದೆ. ಈ World Wealth Report ಪ್ರಕಾರ:

"2011ರ ಹೊತ್ತಿಗೆ ಜಗತ್ತಿನ ಒಟ್ಟಾರೆ ಆಸ್ತಿಪಾಸ್ತಿಯಲ್ಲಿ ಜಗತ್ತಿನ 310 ಕೋಟಿಗೂ ಹೆಚ್ಚು ಜನರಿಗೆ 10,000 ಡಾಲರ್‌ಗಿಂತಲೂ ಕಡಿಮೆ ಆಸ್ತಿ ಇತ್ತು. ಇನ್ನು 100 ಕೋಟಿ ಜನರ ಆಸಿಪಾಸ್ತಿ 10,000-1,00,000 ಡಾಲರ್ ಆಷ್ಟಿತ್ತು. ಇನ್ನು ಉಳಿದ 39.8 ಕೋಟಿಯಷ್ಟು ಜನ ಒಂದು ಲಕ್ಷ ಡಾಲರ್‌ಗಿಂತಲೂ ಹೆಚ್ಚಿನ ಆಸ್ತಿಯನ್ನುಳ್ಳವರಾಗಿದ್ದರು. 2011 ರ ಮಧ್ಯದ ಹೊತ್ತಿಗೆ ಈ ಸಂಖ್ಯೆಗಳು ಇನ್ನಷ್ಟು ಬದಲಾಗಿತ್ತು. ಜಗತ್ತಿನ ಶೇ.1ಕ್ಕಿಂತಲೂ ಕಮ್ಮಿಯಾದ 2.97 ಕೋಟಿ ಜನರ ಬಳಿ ಶೇ.33ಕ್ಕಿಂತಲೂ ಹೆಚ್ಚಿನ ಆಸ್ತಿ ಪಾಸ್ತಿ ಸಂಗ್ರಹವಾಗಿದೆ. ಅವರಲ್ಲಿ 85,000 ಜನರ ಬಳಿ 50 ಮಿಲಿಯನ್ ಡಾಲರ್‌ಗಿಂತಲೂ ಹೆಚ್ಚಿನ ಆಸ್ತಿಪಾಸ್ತಿಯಿದ್ದರೆ 29,000 ಜನರ ಬಳಿ 100 ಮಿಲಿಯನ್ ಡಾಲರ್‌ಗಿಂತಲೂ ಹೆಚ್ಚಿನ ಆಸ್ತಿಪಾಸ್ತಿ ಇತ್ತು. ಇವರಲ್ಲಿ 2700 ಜನರ ಬಳಿ 500 ಮಿಲಿಯನ್ ಡಾಲರ್‌ಗಿಂತಲೂ ಹೆಚ್ಚಿನ ಆಸ್ತಿಪಾಸ್ತಿಯಿತ್ತು."

ಇದೆ ವರದಿಯ ಪ್ರಕಾರ ಭಾರತದಲ್ಲೂ ಸಹ ಈ ಆಸಿಪಾಸ್ತಿ ಗಳಿಕೆಯ ಪಿರಮಿಡ್ ಸ್ವರೂಪ ಇಡೀ ಏಷಿಯಾದಲ್ಲೇ ಅತ್ಯಂತ ಹೆಚ್ಚಾಗಿದೆ. ಪಿರಮಿಡ್ ಸ್ವರೂಪ ಎಂದರೆ ಕಡಿಮೆ ಆಸ್ತಿಪಾಸ್ತಿ ಇರುವ ವರು ಅತಿಹೆಚ್ಚು ಸಂಖ್ಯೆಯಲ್ಲಿರುವ ಕಾರಣಕ್ಕೆ ತಳಪಾಯ ಅಗಲವಿದ್ದು ಮೇಲಕ್ಕೆ ಹೋಗುತ್ತಾ ಹೋಗುತ್ತಾ ಹೆಚ್ಚೆಚ್ಚು ಆಸ್ತಿವಂತರ ಸಂಖ್ಯೆ ಕಡಿಮೆ ಆಗುತ್ತಾ ಹೋಗುವುದರಿಂದ ಪಿರಮಿಡ್‌ನ ವಿಸ್ತಾರ ಮೇಲ್ಭಾಗದಲ್ಲಿ ಕಿರಿದಾಗುತ್ತಾ ಹೋಗುತ್ತದೆ. ಇಂದು ಭಾರತದ ಆರ್ಥಿಕತೆಯ ಪಿರಮಿಡ್‌ನ ತುದಿಯಲ್ಲಿ ಕೇವಲ 1800 ಜನ ಮಾತ್ರವಿದ್ದರೆ ತಳಭಾಗದಲ್ಲಿ ಯಾವ ಆಸ್ತಿಪಾಸ್ತಿಯೂ ಇಲ್ಲದ ಕೋಟ್ಯಾಂತರ ಜನರಿದ್ದಾರೆ ಎಂದು ಈ ವರದಿ ಹೇಳುತ್ತದೆ.



ಫೋರ್ಬ್ಸ್ ಸಂಸ್ಥೆ ಮೊನ್ನೆ ಹೊರ ತಂದ ವರದಿಯ ಪ್ರಕಾರ ಕಳೆದ ಎರಡು ವರ್ಷಗಳಲ್ಲಿ ಭಾರತದ ಶತಕೋಟ್ಯಾಧಿಪತಿಗಳ ಸಂಖ್ಯೆ 47ಕ್ಕೇರಿದೆ. ಜಪಾನ್ ಅನ್ನು ಹಿಂದಿಕ್ಕಲಾಗಿದೆ. ಮತ್ತೊಂದು ವರದಿಯ ಪ್ರಕಾರ ಭಾರತದಲ್ಲಿ ಕೋಟ್ಯಾಧೀಶರ ಸಂಖ್ಯೆ 1,60,000 ಕ್ಕೇರಿದೆ. ಆದರೆ ಅದೇ ಸಮಯದಲ್ಲಿ ಸಕ್ಸೇನ ವರದಿಯ ಪ್ರಕಾರವೇ ಈ ದೇಶದಲ್ಲಿ ಶೇ.42ರಷ್ಟು ಜನರಿಗೆ ಅಂದರೆ 50 ಕೋಟಿಗೂ ಹೆಚ್ಚು ಜನರಿಗೆ ವಾರ್ಷಿಕ ಆದಾಯ ಹತ್ತು ಸಾವಿರವನ್ನೂ ದಾಟುವುದಿಲ್ಲ. ಶೇ. 25 ಕ್ಕೂ ಹೆಚ್ಚು ಜನರಿಗೆ ಆಸ್ತಿಪಾಸ್ತಿಗಳಿಲ್ಲ, ದುಡಿಯಲು ಅಂಗೈಯಗಲ ಭೂಮಿಯೂ ಇಲ್ಲ. ಸರ್ಕಾರದ ಪ್ರಕಾರವೇ 10 ಲಕ್ಷಕ್ಕೂ ಹೆಚ್ಚು ಜನರಿಗೆ ಆಸ್ತಿಪಾಸ್ತಿ ಇರಲಿ ತಲೆಯ ಮೇಲೊಂದು ಸೂರೂ ಇಲ್ಲ. ಅತಿಹೆಚ್ಚು ಸಂಖ್ಯೆಯ ಸೂರಿಲ್ಲದ ಜನ ಪಶ್ಚಿಮ ಬಂಗಾಳ (1 ಲಕ್ಷಕ್ಕೂ ಹೆಚ್ಚು), ಉತ್ತರ ಪ್ರದೇಶ ಮತ್ತು ತೀವ್ರ ಅಭಿವೃದ್ಧಿ ಪೀಡಿತ ರಾಜ್ಯಗಳಾದ ಆಂಧ್ರ ಮತ್ತು ಮಹಾರಾಷ್ಟ್ರಗಳಲ್ಲಿದ್ದಾರೆ. ಕರ್ನಾಟಕದಲ್ಲೂ 25,000 ನಿರ್ಗತಿಕರಿದ್ದಾರೆ. ಇವೆಲ್ಲಾ ಕೇವಲ ಸರ್ಕಾರಿ ಅಂಕಿ ಸಂಖ್ಯೆಗಳು. ಬಡತನದ ಪ್ರಮಾಣ ಅಳೆಯಲು ಪ್ರಾರಂಭಿಸಿದಂತೆ ಅದರ ಮಾನದಂಡಗಳೇ ಬದಲಾಗಿ ಕೋಟ್ಯಾನು ಕೋಟಿ ಬಡವರು ರಾತ್ರೋರಾತ್ರಿ ಕಾಗದದ ಮೇಲೆ ಶ್ರೀಮಂತರಾಗಿ ಬಿಡುವ ಪವಾಡ ಸಂಭವಿಸುವ ದೇಶವಿದು. ಆದ್ದರಿಂದ ಈ ಸಂಖ್ಯೆಗಳು ಅಸಲಿಯತ್ತಿನ ಶೇ.10 ಭಾಗವನ್ನು ಪ್ರತಿಫಲಿಸುವುದಿಲ್ಲ ಎಂಬುದನ್ನು ನೆನಪಿನಲ್ಲಿಡಬೇಕು. ಬೆಂಗಳೂರು ಒಂದರಲ್ಲೇ ನಗರಪಾಲಿಕೆಯ ಪ್ರಕಾರವೇ 3000 ಜನ ನಿರ್ಗತಿಕರಿದ್ದರೆ, ಅನಧಿಕೃತ ಅಂದಾಜುಗಳ ಪ್ರಕಾರ ಆ ಸಂಖ್ಯೆ ಒಂದು ಲಕ್ಷ. ಬೆಂಗಳೂರಿನ ಭಿಕ್ಷುಕರ ಕೇಂದ್ರದಲ್ಲೇ 3000 ಕ್ಕೂ ಹೆಚ್ಚು ಜನರಿರಲಿಲ್ಲವೇ. ಅವರ ಆಸ್ತಿಪಾಸ್ತಿಗಳೆಂದರೆ ಅವರ ಅಂಗಾಂಗಗಳಷ್ಟೇ! ಅದನ್ನೂ ಸಹ ಅಲ್ಲಿನ ಅಧಿಕಾರಿಗಳು ಮಾರಿಕೊಂಡು ತಿನ್ನುತ್ತಿದ್ದರೆಂಬ ಸುದ್ದಿ ಬಂದು ಇನ್ನೂ ಎರಡು ವರ್ಷಗಳೂ ಆಗಿಲ್ಲ.

ಇದಲ್ಲದೇ ಅಸಮಾನತೆಯನ್ನು ಅಳೆಯಲು_Gini coefficient - ಗಿನಿ ಸೂಚ್ಯಂಕವೆಂಬ ಮತ್ತೊಂದು ಮಾದರಿಯನ್ನು 1979ರಿಂದ ಜಗತ್ತಿನಾದ್ಯಂತ ಅನುಸರಿಸಲಾಗುತ್ತಿದೆ. ಇಟಲಿಯ ಸಮಾಜಶಾಸ್ತ್ರಜ್ಞನಾದ ಕೊರ್‍ರ್ಯಾಡೋ ಗಿನಿಯೆಂಬ ಈ ವಿದ್ವಾಂಸ ದೇಶಗಳ ನಡುವೆ, ದೇಶದೊಳಗೆ ಅಸ್ತಿತ್ವದಲ್ಲಿರುವ ಅಸಮಾನತೆಯನ್ನು ಅಳೆಯಲು ಒಂದು ಹೊಸ ಗಣಿತ ವಿಧಾನವನ್ನು ಸೂಚಿಸಿದ. ಅದರ ಫಲಿತವೇ ಈ ಗಿನಿ ಸೂಚ್ಯಂಕ. ಇದರ ಪ್ರಕಾರ ಗಿನಿ ಸೂಚ್ಯಂಕ 0 ಇದ್ದರೆ ಅಸಮಾನತೆ ಶೂನ್ಯ. ಸರ್ವರಿಗೂ ಸಮ ಅಂದರೆ ಗಣಿತದಲ್ಲೂ ಹೆಚ್ಚುಕಡಿಮೆ ಇರದಷ್ಟು ಸಮಪಾಲು. ಗಿನಿ ಸೂಚ್ಯಂಕ 1ನ್ನು ತಲುಪಿಬಿಟ್ಟರೆ ಅಸಮಾನತೆಯ ಶೃಂಗ. ಅಂದರೆ ಸಂಪತ್ತೆಲ್ಲವೂ ಒಬ್ಬರ ಬಳಿಯೇ ಇದ್ದು ಆ ದೇಶದ ಉಳಿದ ಜನರ ಬಳಿ ಏನೇನೂ ಸಂಪತ್ತಿರುವುದಿಲ್ಲ ಎಂದರ್ಥ. ಮಾನವನ ಇತಿಹಾಸದಲ್ಲಿ ಪ್ರಾಯಶಃ ಎಂದೂ ಈ 0 ಅಥವಾ 1 ಎನ್ನುವ ರೀತಿಯಲ್ಲಿ ಸಮಾಜ ಧ್ರುವೀಕರಣಗೊಂಡಿಲ್ಲವಾದರೂ ದಮನಿತ ಜನರು ಸಮಾಜವನ್ನು 0 ಎಡೆಗೂ ಶೋಷಕರು 1 ರೆಡೆಗೂ ಎಳೆಯುತ್ತಿರುವುದೇ ಜಗತ್ತಿನ ಇತಿಹಾಸವೆನ್ನಬಹುದು.

ಆದೇನೇ ಇರಲಿ ಈ ಗಿನಿ ಸೂಚ್ಯಂಕ 0 ಇಂದ 1 ರೆಡೆಗೆ ಚಲಿಸುತ್ತಿದೆ ಎಂದರೆ ಸಮಾಜ ಹೆಚ್ಚೆಚ್ಚು ಅಸಮಾನತೆಯೆಡೆಗೆ ಚಲಿಸುತ್ತಿದೆ ಎಂದರ್ಥ. ಅಂದರೆ ಆ ದೇಶದ ಸಂಪತ್ತು ಹಲವರಿಂದ ಕಸಿದುಕೊಂಡು ಕೆಲವರೆಡೆಗೇ ಸೇರುತ್ತಿದೆ ಎಂದರ್ಥ. ಗಿನಿ ಸೂಚ್ಯಂಕ ಹೆಚ್ಚಿದೆ ಎಂದರೆ ಆಸಮಾನತೆ ಹೆಚ್ಚಿದೆ ಎಂದರ್ಥ. ಕಳೆದೆರಡು ದಶಕಗಳಲ್ಲಿ ನೋಡಿದರೆ ಎಲ್ಲಾ ದೇಶಗಳಲ್ಲೂ ಗಿನಿ ಸೂಚ್ಯಂಕ ಹೆಚ್ಚುತ್ತಲೇ ಇದೆ. ಆದರೂ ಜಗತ್ತಿನಲ್ಲಿ ಅತಿ ಕಡಿಮೆ ಗಿನಿ ಸೂಚ್ಯಂಕ ಇರುವ ದೇಶ ಸ್ವೀಡನ್ (0.23). ನಂತರ ನಾರ್ವೆ (0.25).

ಜಗತ್ತಿನಲ್ಲಿ ಅತಿ ವೇಗವಾಗಿ ಗಿನಿ ಸೂಚ್ಯಂಕ ಹೆಚ್ಚುತ್ತಿ... ದೇಶಗಳೆಂದರೆ ಅತಿ ಹೆಚ್ಚು "ಅಭಿವೃದ್ಧಿ" ಗತಿಯಲ್ಲಿ... ದೇಶಗಳು. ಉದಾಹರಣೆಗೆ ಅಮೆರಿಕದ ಗಿನಿ ಸೂ... 0.45. ಹಾಗೆಯೇ ಇಂದು ಜಗತ್ತಿನಲ್ಲಿ ಅತಿ ವೇಗ... ಬೆಳೆಯುತ್ತಿರುವ ಚೀನಾದಲ್ಲಿ "ಅಭಿವೃದ್ಧಿ ಪಥ"... ಅನುಸರಿಸುವ ಮುಂಚೆ 1980ರಲ್ಲಿ ಇದ್ದ ಗಿನಿ ಸೂ... 0.23. ಆದರೆ ಕಳೆದ ಮೂವತ್ತೆರಡು ವರ್ಷ... "ಅಭಿವೃದ್ಧಿ"ಯ ನಂತರದಲ್ಲಿ ಚೀನಾದ ಗಿನಿ ಸೂ... 0.45! ಅಮೆರಿಕದಷ್ಟೆ. ಹೀಗೆ ಅಮೆರಿಕವಾಗುವುದು ಅ... ದೇಶದೊಳಗೆ ಅಸಮಾನತೆ ಹೆಚ್ಚಿಸಿಕೊಳ್ಳುವುದೇ ಆ...

ಗಿನಿ ಸೂಚ್ಯಂಕದಲ್ಲಿ ಭಾರತವು ಸಹ ಅತಿ ವೇಗ... ಅಮೆರಿಕವಾಗುತ್ತಿದೆ. ಈ "ಆರ್ಥಿಕ ಸುಧಾರಣಾ" ನೀತಿ... ಪ್ರಾರಂಭಿಸುವ ಮುನ್ನ ಭಾರತದ ಗಿನಿ ಸೂಚ್ಯಂಕ 0... ಇತ್ತು. ಸರ್ಕಾರದ ಅಂಗಸಂಸ್ಥೆಯೇ ಆಗಿರುವ NCA... ಸಂಸ್ಥೆ "ಆದಾಯ ಅಸಮಾನತೆ"ಯನ್ನು ಅಳೆ... 2005-06ರಲ್ಲಿ ಆದು ನಡೆಸಿದ ಆದಾಯ ಸರ್ವೇ ಪ್ರ... ಈ ದೇಶದಲ್ಲಿ ಆದಾಯ ಅಸಮಾನತೆಯ ಗಿನಿ ಸೂ... 0.53! ಆದರೆ ಸರ್ಕಾರ ತನ್ನ ಅಧಿಕೃತ ಹೇಳಿಕೆ... ಭಾರತದ ಗಿನಿ ಸೂಚ್ಯಂಕ 0.31 ರಿಂದ 0.35ಕ್ಕೇ ಮಾ... ಏರಿದೆ ಎಂದು ಬೊಗಳೆ ಬಿಡುತ್ತದೆ. ಆದರೆ ಸ... ಕಾಲಕಾಲಕ್ಕೆ ತನಗೆ ಅನುಕೂಲಕ್ಕೆ ತಕ್ಕಂತೆ ಬಡತ... ಮಾನದಂಡವನ್ನು ಅನುಸರಿಸುವುದರಿಂದ ವಾಸ್ತವವಾಗಿ ... ಸರಿಯಾದ ಚಿತ್ರಣವನ್ನೇನೂ ಕೊಡುವುದಿಲ್ಲ. ಅಲ್ಲದೆ ... ಎಲ್ಲಾ ದೇಶಗಳೂ ಗಿನಿ ಸೂ... ಪತ್ತೆ ಹಚ್ಚಲು ಆದಾಯ ಗಳಿ... ಸೂಚ್ಯಂಕ ಬಳಸಿದರೆ ಭಾ... ಮಾತ್ರ ವೆಚ್ಚದ ಸೂಚ್ಯಂಕ ಬ... ತ್ತದೆ. ಆದ್ದರಿಂದಲೂ ನಿಜ... ಸಮಾನತೆಯ ದರವನ್ನು ಕು... ತೋರಿಸುತ್ತದೆ. ಏಕೆಂ... ಶ್ರೀಮಂತರು ತಮ್ಮ ಗಳಿಕೆ... ಬಹುಪಾಲನ್ನು ಉಳಿಸುತ್ತಾ... ಅಥವಾ ಹೂಡುತ್ತಾರೆಯೇ ... "ವೆಚ್ಚ" ಮಾಡುವುದಿ... ಆದ್ದರಿಂದ ಕೇವಲ ವೆ... ಪ್ರಮಾಣ ಶ್ರೀಮಂತರ ಗಳಿ... ಒಟ್ಟಾರೆ ಪ್ರಮಾಣವನ್ನು ಪ್ರತಿ... ಸುವುದಿಲ್ಲ.

ಇದಲ್ಲದೇ ಭಾ... ಭೂಒಡೆತನದ ಗಿನಿ ಸೂ... 0.62ರಷ್ಟಿದ್ದು ಇಡೀ ಏಷಿಯಾದಲ್ಲೇ ಹೆಚ್ಚಿದ್ದರೆ (ಕ... ಹತ್ತು ವರ್ಷಗಳಲ್ಲಿ ಇದರಲ್ಲಿ ಬದಲಾವಣೆ ಬಂದಿದ್ದ... ಭಾರತದ ಶಿಕ್ಷಣ ಗಳಿಕೆಯ ಸೂಚ್ಯಂಕ 0.52 ರ... ಲ್ಯಾಟಿನ್ ಅಮೆರಿಕ ದೇಶಗಳಿಗಿಂತ ಹೀನಾಯ... ಪರಿಸ್ಥಿತಿಯಲ್ಲಿದೆ. ಇದಕ್ಕೆ ನಮ್ಮ ದೇಶದ ಜಾತಿ ಅಸಮಾ... ಇನ್ನಿತ್ಯಾದಿ ದೇಸೀ "ಭಾರತೀಯ" ಕಾರಣಗಳಿವೆ.


ಆದೇನೇ ಇರಲಿ ಹಳೆಯ ಜಾತಿ ಆಧಾರಿತ ಶ್ರೇಣಿ... ಸಮಾಜದಲ್ಲಿನ ಅಸಮಾನ ವ್ಯವಸ್ಥೆ ಆಮೂಲಾಗ್ರ... ಬದಲಾಗದೆ ಅದರ ಮೇಲೆ ಬಂದು ಕುಂತಿರುವ ಹೊಸ "ಜಾಗತೀಕರಣ" ಪ್ರಣೀತ ಕಾರ್ಪೊರೆ... ಬಂಡವಾಳಶಾಹಿ ವ್ಯವಸ್ಥೆ ಇರುವ ಅಸಮಾನತೆ... ಅಂತರವನ್ನು ಹೆಚ್ಚಿಸಿದೆಯೇ ಹೊರತು ಕಡಿಮೆ ಮಾ... ಎಂಬುದನ್ನು ಇದು ಮತ್ತೊಮ್ಮೆ ಸಾಬೀತುಮಾಡು...

ನೋ ಕಾಮೆಂಟ್ಸ್




"ಈಗ ಒಂದು ವಿಷಯವಂತೂ ಸ್ಪಷ್ಟವಾಗುತ್ತಿದೆ. ಬಹು ಜನಾಂಗೀಯ ಸಮಾಜಗಳಿರುವ ದೇಶಗಳು ಪ್ರಚಲಿತದಲ್ಲಿರುವ ಸುಂದರ 'ಅಭಿವೃದ್ಧಿ' ಪದವನ್ನು ಪಡೆದುಕೊಂಡೊಡನೆ ಬಡತನ ನಿರ್ಮೂಲನೆಯನ್ನು ಮಾಡುವ ಆಸಕ್ತಿಯನ್ನೇ ಕಳೆದುಕೊಳ್ಳುತ್ತವೆ. ಅದರಲ್ಲೂ ಈ ಬಡತನವೆಂಬುದು, ಸಾಕಷ್ಟು ರಾಜಕೀಯ ಬಲವನ್ನು ಮತ್ತು ಗುಂಪನ್ನು ಹೊಂದದ ಜನಾಂಗಗಳಲ್ಲಿ ಹೆಚ್ಚಿದ್ದರೆ ಈ ನಿರ್ಲಕ್ಷ್ಯ ಇನ್ನಷ್ಟು ಸ್ಪಷ್ಟವಾಗಿ ಗೋಚರಿಸುತ್ತದೆ. ಅದರಲ್ಲೂ ಸಂಖ್ಯೆಯೇ ಪ್ರಮುಖವಾಗುವ ಪ್ರಜಾತಂತ್ರದಲ್ಲಿ ಬಡವರ ಸಂಖ್ಯೆಯು, ಅವರ ಅಗತ್ಯವೇ ಇಲ್ಲದಂತೆ, ಇತರ ಹೊಂದಾಣಿಕೆಗಳ ಮೂಲಕ ಚುನಾವಣೆ ಗೆಲ್ಲಬಹುದಾದಷ್ಟು ಪ್ರಮಾಣಕ್ಕೆ ಕುಸಿಯತೊಡಗಿದಂತೆ, ರಾಜಕೀಯ ಪಕ್ಷಗಳಿಗೆ ಬಡವರಿಗಾಗಿ ಹೋರಾಡಬೇಕಾದ ಪ್ರಚೋದನೆಯೇ ಇಲ್ಲವಾಗುತ್ತದೆ. ಈ ರೀತಿಯಲ್ಲಿ ನೋಡಿದಾಗ ಒಂದು ಬಹುಜನಾಂಗೀಯ ಮತ್ತು ಬಹುಪಕ್ಷೀಯ ಪ್ರಜಾತಂತ್ರವು ಜಾಗತಿಕ ಬಂಡವಾಳದೊಡನೆ ಹೊಂದಾಣಿಕೆ ಮಾಡಿಕೊಂಡಾಗ ಉಂಟಾಗುವ ವಿಪರ್ಯಾಸದಂತೆಯೂ ಬಡತನವು ಕಾಣತೊಡಗುತ್ತದೆ. ಮತ್ತು ಇದು ರಾಜಕೀಯ, ಆರ್ಥಿಕ ಮತ್ತು ನೈತಿಕ ವಿಪರ್ಯಾಸವೂ ಆಗಿದೆ. ಈಗಂತೂ ಚಾಲ್ತಿಯಲ್ಲಿರುವ 'ಜಾಗತೀಕರಣ'ವೆಂಬ ಘೋಷಣೆಯು ಅಸ್ತಿತ್ವದಲ್ಲಿರುವ ವೈರುಧ್ಯಗಳ ಮೇಲೆ ಪರದೆ ಎಳೆಯುವ ಹೊಸ ಹುನ್ನಾರವೆಂದೂ ಅರ್ಥಮಾಡಿಕೊಳ್ಳಬಹುದಾಗಿದೆ. ಬಡತನ ನಿರ್ಮೂಲನೆ ಎಂಬುದು ಸಾರ್ವಜನಿಕ ಅಜೆಂಡಾಗಳ ಮಿಥ್ ಆಗಿ ಕೂಡಾ ಇರಬೇಕಿಲ್ಲವೆಂಬುದಕ್ಕೆ ಜಾಗತಿಕರಣ ಬಹಿರಂಗ ಸಮ್ಮತಿಯನ್ನೂ ಉತ್ಪಾದಿಸುತ್ತಿದೆ."

-ಆಶೀಶ್ ನಂದಿ



"ನೆಲದ ಕಾನೂನು ಎಲ್ಲರಿಗೂ ಅನ್ವಯವಾಗಬೇಕು. ಖಾಸಗಿ ಪ್ರಾಥಮಿಕ ಶಾಲೆಗಳ ಒಕ್ಕೂಟ ಕುಸ್ಮಾ ಸಹ ಅದಕ್ಕೆ ಹೊರತಲ್ಲ. ಯಾವುದೇ ಸಮಸ್ಯೆ ಇದ್ದರೆ ಮಾತನಾಡಿ ಬಗೆಹರಿಸಿಕೊಳ್ಳಬೇಕು. ಸಂವಿಧಾನಕ್ಕೆ ವಿರುದ್ಧವಾಗಿ ನಡೆದುಕೊಳ್ಳಬಾರದು. ಆರ್‌ಟಿಇ ವಿರೋಧಿಸಿ ಶಾಲೆ ಮುಚ್ಚುವುದರಿಂದ ಸುಪ್ರೀಂಕೋರ್ಟಿನ ನಿರ್ದೇಶನ ಉಲ್ಲಂಘಿಸಿದಂತಾಗುತ್ತದೆ. ಬಡಮಕ್ಕಳಿಗೆ ಶಿಕ್ಷಣ ನೀಡುವುದು ಔದಾರ್ಯವಲ್ಲ, ಬದಲಿಗೆ ಜವಾಬ್ದಾರಿ. ಶಿಕ್ಷಣ ಇಲಾಖೆಯ ಒಪ್ಪಿಗೆ ಇಲ್ಲದೆ ಶಾಲೆ ಬಂದ್ ಮಾಡುವುದೂ ತಪ್ಪೇ. ಇಲಾಖೆ ಇಂಥಾ ಶಾಲೆಗೆ ನೀಡಿರುವ ನಿರಾಪೇಕ್ಷ ಪತ್ರ ಹಿಂಪಡೆಯಬೇಕು."

-ನಿರಂಜನಾರಾಧ್ಯ. ಶಿಕ್ಷಣ ತಜ್ಞ



"ಸಚಿವ ಸುರೇಶ್ ಕುಮಾರ್ ಅವರನ್ನು ಮುಖ್ಯಮಂತ್ರಿ ಮಾಡಲು ಆರೆಸ್ಸೆಸ್ ಹುನ್ನಾರ ನಡೆಸಿದೆ. ಹೀಗಾಗಿ ಅವರನ್ನು ಪ್ರಾಮಾಣಿಕ ರಾಜಕಾರಣಿ ಎಂದು ಬಿಂಬಿಸಲಾಗುತ್ತಿದೆ. ಸುರೇಶ್‌ಕುಮಾರ್ ರಾಜೀನಾಮೆ ನೀಡಿದ್ದೂ, ಅವರಿಗೆ ಅಡ್ವೋಕೇಟ್ ಜನರಲ್ ಕ್ಲೀನ್‌ಚಿಟ್ ನೀಡಿದ್ದೂ ಎಲ್ಲಾ ಕೇವಲ ರಾಜಕೀಯ ಪ್ರಹಸನ. ಇಷ್ಟಕ್ಕೂ ಕ್ಲೀನ್ ಚಿಟ್ಟು ನೀಡಿದವ... ಸರ್ಕಾರದ ಪ್ರತಿನಿಧಿಯಾಗಿರುವುದರಿಂದ ಸರ್ಕಾರದ ಹಿತಾಸಕ್ತಿಯನ್ನ... ಕಾಯುತ್ತಾರೆ."

-ಬಸವರಾಜ್ ಯತ್ನಾ...

ನಂಬಿದ್ರೆನಂಬಿ ಬಿಟ್ರೆಬಿಡಿ

"1977ರ ಜೂನ್ 26. ನನ್ನ ಬಾಳಿನಲ್ಲಿ ಅತ್ಯಮೂಲ್ಯ ದಿನ. ಅಂ... ತುರ್ತುಸ್ಥಿತಿಯ ಸಂದರ್ಭದಲ್ಲಿ ಪೊಲೀಸರಿಂದ ಏಟು ತಿಂದು ಜೈ... ಸೇರಿದ್ದೆ. 2012ರ ಜೂನ್ 26 ಸಹ ನಾನು ಮರೆಯಲಾಗದ ದಿ... ಏಕೆಂದರೆ ಕಾನೂನು ಬಾಹಿರವಾಗಿ ಬಿಡಿಎ ನಿವೇಶನ ಪಡೆದ ನನ್ನ ಮೇ... ಆರೋಪಕ್ಕೆ ಸಂಬಂಧಿಸಿದಂತೆ ಅಡ್ವೋಕೇಟ್ ಜನರಲ್ ವರದಿ ನೀ... ದಿನ."

-ಸುರೇಶ್‌ಕುಮಾ...

ಕಣ್ಣು ತೆರೆಸಬಲ್ಲ ತರುಣ್ ಶೆರಾವತ್ ಎಂಬ ಯುವಕನ ಸಾವು

ಆತನಿಗಿನ್ನೂ 23 ವರ್ಷ ವಯಸ್ಸು ತುಂಬಿರಲಿಲ್ಲ. ...ರಕ್ಕೆ ಚಂದಕ್ಕೆ ಇದ್ದ ಆ ನಗುಮುಖದ ಯುವಕ ...ಭಾವಂತನಾಗಿದ್ದ. ಧೈರ್ಯಶಾಲಿಯಾಗಿದ್ದ. ಹೊಸದನ್ನು ...ಡಬೇಕು, ಸಾಹಸವನ್ನು ಮಾಡಬೇಕು ಎಂದು ...ತೊರೆಯುತ್ತಿದ್ದ. ತಾನು ಕಂಡ ಸತ್ಯಗಳನ್ನು ತನ್ನ ...ಮರಾದಲ್ಲಿ ಸೆರೆ ಹಿಡಿದು ಜಗತ್ತಿಗೇ ತೋರಿಸಲು ...ಸುತ್ತಿದ್ದ.

ಆ ವಯಸ್ಸಿಗೆ ಸಹಜವಾಗಿದ್ದ ಉತ್ಸಾಹವನ್ನು ತುಂಬಿಕೊಂಡಿದ್ದ ಆ ಯುವಕ ಕಳೆದ ವಾರ ತೀರಿಕೊಂಡ.

ಅವನ ಹೆಸರು ತರುಣ್ ಶೆರಾವತ್.

ತೆಹೆಲ್ಕಾ ಪತ್ರಿಕೆಯಲ್ಲಿ ಛಾಯಾಗ್ರಾಹಕನಾಗಿದ್ದ ತರುಣ್ ...ನ ಏಪ್ರಿಲ್ ತಿಂಗಳಲ್ಲಿ ಛತ್ತೀಸಗಢ ರಾಜ್ಯದಲ್ಲಿ ಈಗ ...ವೋವಾದಿಗಳ ಹಿಡಿತದಲ್ಲಿರುವ ಅಬುಝ್ಮರ್ದ್ ಎಂಬ ...ದೇಶಕ್ಕೆ ಹೋಗಿದ್ದ. ಅಲ್ಲಿ ವಾಸಿಸುವ ಆದಿವಾಸಿಗಳ ...ಬದುಕು ಮತ್ತು ಬವಣೆಗಳನ್ನು ತನ್ನ ಕ್ಯಾಮೆರಾದಲ್ಲಿ ಹಿಡಿದು ತಂದಿದ್ದ ತರುಣ್ ತನ್ನ ದೇಹದಲ್ಲೂ ಆ ...ದೇಶದಲ್ಲಿ ವ್ಯಾಪಕವಾಗಿರುವ ಮಲೇರಿಯಾ, ಟೈಫಾಯಿಡ್ ...ತ್ತು ಜಾಂಡೀಸ್ ರೋಗಗಳನ್ನು ಹೊತ್ತು ತಂದಿದ್ದ.

ಆರಂಭದಲ್ಲಿ ತರುಣ್‌ನಲ್ಲಿ ಸಣ್ಣದಾಗಿ ಕಾಣಿಸಿಕೊಂಡ ...ವನ್ನು ವೈದ್ಯರು ಮಲೇರಿಯಾ ಎಂದು ತಡವಾಗಿ ...ಹಚ್ಚುವ ಹೊತ್ತಿಗೆ ಕಾಲಮಿಂಚಿತ್ತು. ಒಂದೆಡೆ ಜಾಂಡೀಸ್ ...ನ ಯಕೃತ್ತಿನ ಮೇಲೆ ದಾಳಿ ಇಟ್ಟದ್ದರ ಪರಿಣಾಮ ...ದರವಾಗಿದ್ದ ಆ ಯುವಕ ಹಳದಿಬಣ್ಣದ ...ದ್ದೆಯಂತಾದ. ಇನ್ನೊಂದೆಡೆ ಟೈಫಾಯಿಡ್ ಬ್ಯಾಕ್ಟೀರಿಯಾ ...ನ ಶ್ವಾಸಕೋಶ ಮತ್ತು ಹೃದಯವನ್ನು ಕಿತ್ತು ಹಾಕಿತು. ...ತ್ತೊಂದೆಡೆ ಮಲೇರಿಯಾ ಆತನ ಮೆದುಳನ್ನೇ ನಾಶ ...ಡಿತು. ಹೀಗೆ ಮೂರೂ ಕಾಯಿಲೆಗಳ ದಾಳಿಯಿಂದಾಗಿ ...ಣ್ ಕಳೆದ ವಾರ ಕೊನೆಯುಸಿರೆಳೆದ.

ಅದೂ ವಿಶ್ವ ಖ್ಯಾತಿ ಪಡೆದಿರುವ, ದೆಹಲಿಯಲ್ಲಿರುವ ...ಸ್ ಆಸ್ಪತ್ರೆಯಲ್ಲಿ.

ತರುಣ್ ಸಾವಿನ ಸುದ್ದಿಯನ್ನು ಓದಿದಾಗ ನನಗೆ ಅಚ್ಚರಿ ಆಯಿತು. ಈಗಿನ ಯುಗದಲ್ಲೂ ಜನ ಮಲೇರಿಯಾ, ಟೈಫಾಯಿಡ್ ಮತ್ತು ಜಾಂಡೀಸ್‌ನಂತಹ ಕಾಯಿಲೆಗಳಿಂದ ದೆಹಲಿ ತರಹದ ಆಧುನಿಕ ನಗರದಲ್ಲೂ ಸಾಯುತ್ತಾರೆಯೇ ಅನ್ನಿಸಿತು. ಅಷ್ಟೇ ಅಲ್ಲ, ದೆಹಲಿಯಲ್ಲಿ ವಾಸಿಸುತ್ತಿದ್ದ ತರುಣ್ ಎಂಬ ಯುವಕನೇ ಇಂತಹ ಕಾಯಿಲೆಗಳಿಗೆ ಬಲಿಯಾಗಿದ್ದರೆ ಇನ್ನು ಆತ ಭೇಟಿ ನೀಡಿದ್ದ ಪ್ರದೇಶದಲ್ಲಿ ವಾಸಿಸುವ ಬಡ ಆದಿವಾಸಿಗಳ, ಮಾವೋವಾದಿಗಳ, ಪೊಲೀಸ್ ಪೇದೆಗಳ ಸ್ಥಿತಿ ಹೇಗಿರಬೇಕು ಎಂದೂ ಅನಿಸಿತು.

ಆಗ ನೆನಪಾಯಿತು. ಮಾವೋವಾದಿಗಳ ಹಿರಿಯ ನಾಯಕಿ ಅನುರಾಧಾ ಗಾಂಧಿ (ಈಗ ಜೈಲಿನಲ್ಲಿರುವ ಕೊಬಾಡ್ ಗಾಂಧಿಯವರ ಪತ್ನಿ) ಕೆಲವು ವರ್ಷಗಳ ಹಿಂದೆ ಇದೇ ತರಹ ಛತ್ತೀಸಗಢದ ಅರಣ್ಯ ಪ್ರದೇಶದಲ್ಲಿ ಮಲೇರಿಯಾ ಕಾಯಿಲೆ ಅಂಟಿಸಿಕೊಂಡು ಅಸುನೀಗಿದರು. ಹಾಗೆಯೇ ಮಾವೋವಾದಿಗಳನ್ನು ನಿರ್ನಾಮ ಮಾಡಲು ನಮ್ಮ ಸರ್ಕಾರ ಛತ್ತೀಸಗಢ, ಜಾರ್ಖಂಡ್ ಮತ್ತು ಒಡಿಶಾ ರಾಜ್ಯಗಳಲ್ಲಿ ನಿಯೋಜಿಸಿರುವ ಹತ್ತಾರು ಪೊಲೀಸ್ ಪೇದೆಗಳೂ ಇದೇ ರೋಗಕ್ಕೆ ತುತ್ತಾಗಿದ್ದಾರೆ. ಈ ಪ್ರದೇಶದಿಂದ ಹಲವಾರು ವರ್ಷಗಳ ಕಾಲ ವರದಿ ಮಾಡುತ್ತಿರುವ ಜಾವೆದ್ ಇಕ್ಬಾಲ್ ಎಂಬ ಯುವಕ ತಮ್ಮ ಬ್ಲಾಗ್‌ನಲ್ಲಿ ಹೀಗೆ ಬರೆದಿದ್ದಾರೆ: "ಮಲೇರಿಯಾ ಯಾರ ನಡುವೆಯೇ ಭೇದಭಾವ ಮಾಡುವುದಿಲ್ಲ. ಒಮ್ಮೆ ಸಿಆರ್‌ಪಿಎಫ್ ಜವಾನನೊಬ್ಬ ಮಲೇರಿಯಾದಿಂದ ತತ್ತರಿಸುತ್ತಿದ್ದ ಮತ್ತೊಬ್ಬ ಜವಾನನ ಕೈಹಿಡಿದು ಬರುತ್ತಿದ್ದ. ಆ ಜವಾನನ ದೇಹದಲ್ಲಿ ಶಕ್ತಿಯಾಗಲಿ, ಆತನ ಕಣ್ಣುಗಳಲ್ಲಿ ಜೀವವಾಗಲಿ ಇರಲಿಲ್ಲ. ಎತ್ತರವಾಗಿದ್ದ, ಕಟ್ಟುಮಸ್ತಾಗಿದ್ದ ಆ ಇಬ್ಬರು ಜವಾನರನ್ನು ಮಲೇರಿಯಾ ಕರುಣಾಜನಕ ಸ್ಥಿತಿಗೆ ದೂಡಿದ್ದ ದೃಶ್ಯವನ್ನು ನಾನೆಂದೂ ಮರೆಯಲಾಗುವುದಿಲ್ಲ."

ಎರಡು ವರ್ಷಗಳ ಹಿಂದೆ 'ಲಾನ್ಸೆಟ್' ಎಂಬ ಪ್ರತಿಷ್ಠಿತ ಬ್ರಿಟಿಷ್ ಪತ್ರಿಕೆಯಲ್ಲಿ ಪ್ರಕಟಗೊಂಡ ಒಂದು ಅಧ್ಯಯನದ ಪ್ರಕಾರ ಪ್ರತಿವರ್ಷ ಭಾರತದಲ್ಲಿ ಎರಡು ಲಕ್ಷಕ್ಕಿಂತಲೂ ಹೆಚ್ಚು ಜನ ಮಲೇರಿಯಾಗೆ ತುತ್ತಾಗುತ್ತಾರೆ. ಆದರೆ ನಮ್ಮ ಸರ್ಕಾರದ ಪ್ರಕಾರ ಆ ಸಂಖ್ಯೆ ಕೇವಲ 15,000!

ಸ್ವತಂತ್ರ ಅಧ್ಯಯನ ಮತ್ತು ಸರ್ಕಾರ ನೀಡುತ್ತಿರುವ ಸಂಖ್ಯೆಗಳ ನಡುವೆ ಯಾಕಿಷ್ಟೊಂದು ವ್ಯತ್ಯಾಸ ಎಂದು ಅನ್ನಿಸಬಹುದು. ಅದಕ್ಕೆ ಕಾರಣ ನಮ್ಮ ಸರ್ಕಾರಕ್ಕೆ ಮಲೇರಿಯಾ ತರಹದ ಕಾಯಿಲೆಗಳನ್ನು ನಿವಾರಿಸಲು ಆಸಕ್ತಿ ಇಲ್ಲದಿರುವುದು. ಯಾಕೆಂದರೆ ತರುಣ್ ತರಹದ ಕೆಲವು ನಗರವಾಸಿ ಯುವಕರನ್ನು ಹೊರತುಪಡಿಸಿದರೆ ಈ ರೋಗಕ್ಕೆ ಬಲಿಯಾಗುತ್ತಿರುವವರಲ್ಲಿ ಹೆಚ್ಚಿನವರು ಬಡವರು, ಗ್ರಾಮೀಣ ಪ್ರದೇಶದವರು ಅಥವಾ ಯಾರ ಗಮನಕ್ಕೂ ಬಾರದೆ ಅರಣ್ಯ ಪ್ರದೇಶಗಳಲ್ಲಿ ವಾಸಿಸುತ್ತಿರುವ ಆದಿವಾಸಿಗಳು.



ಕಂಡಹಾಗೆ

editorlankesh@gmail.com • ಗೌರಿ ಲಂಕೇಶ್

ಛತ್ತೀಸಗಢ, ಒಡಿಶಾ ಮತ್ತು ಜಾರ್ಖಂಡ್ ತರಹದ ರಾಜ್ಯಗಳಲ್ಲಿರುವ ಆದಿವಾಸಿಗಳಿಗೆ ಅಲ್ಲಿನ ಸರ್ಕಾರಗಳು ಆರೋಗ್ಯ ವ್ಯವಸ್ಥೆಗಳನ್ನು ಮಾಡಿಲ್ಲ. ಆ ಕಾರಣಕ್ಕೆ ಅಲ್ಲಿಯ ಜನ ಮಲೇರಿಯಾ ತರಹದ ಕಾಯಿಲೆಗಳಿಗೆ ಗುರಿಯಾಗುತ್ತಿದ್ದಾರೆ. ಅಂಥವರಿಗೆ ನೆರವು ನೀಡಬೇಕೆಂದೇ ಸಮಾಜಮುಖಿ ವೈದ್ಯ ಡಾ. ಬಿನಾಯಕ್ ಸೇನ್ ಛತ್ತೀಸಗಢದ ಕಾಡಿನಲ್ಲಿ ಒಂದು ಕ್ಲಿನಿಕ್‌ಅನ್ನು ತೆರೆದು ಅಲ್ಲಿನ ಜನರ ಸೇವೆ ಮಾಡುತ್ತಿದ್ದರು. ಆದರೆ ಸೇನ್ ಅವರು ಛತ್ತೀಸ್‌ಗಢ ಪೊಲೀಸರು ನಕಲಿ ಎನ್‌ಕೌಂಟರ್‌ಗಳಲ್ಲಿ ಅಮಾಯಕ ಆದಿವಾಸಿಗಳನ್ನು ಕೊಂದದ್ದನ್ನು ಪ್ರಶ್ನಿಸಿದ್ದಕ್ಕೆ ಅವರು ನಕ್ಸಲರ ಬೆಂಬಲಿಗರು ಎಂದು ಆರೋಪಿಸಿ ಜೈಲಿಗೆ ದೂಡಲಾಗಿತ್ತು. ಎರಡು ವರ್ಷಗಳ ಕಾಲ ಜೈಲಿನಲ್ಲಿದ್ದ ಸೇನ್ ಅವರು ಕೊನೆಗೂ ಸುಪ್ರೀಂಕೋರ್ಟಿನಿಂದ ಜಾಮೀನು ಪಡೆದು ಹೊರಬರುವಷ್ಟರಲ್ಲಿ ಅವರ ಕ್ಲಿನಿಕ್‌ಅನ್ನು ಸರ್ಕಾರ ಧ್ವಂಸ ಮಾಡಿತ್ತು. ಮಾತ್ರವಲ್ಲ ಅವರೆಂದೂ ಮತ್ತೆ ಆ ಪ್ರದೇಶಕ್ಕೆ ಹಿಂದಿರುಗಿ ಬಡ ಜನರಿಗೆ ಆರೋಗ್ಯ ಸೇವೆ ನೀಡದಂತೆ ಇಲ್ಲಿಯತನಕ ನೋಡಿಕೊಳ್ಳಲಾಗುತ್ತಿದೆ. ಪರಿಣಾಮವಾಗಿ ಅದೆಷ್ಟು ಜನ ಆದಿವಾಸಿಗಳು ಮಲೇರಿಯಾ ತರಹದ ರೋಗಗಳಿಗೆ ಬಲಿಯಾಗಿದ್ದಾರೆಂದು ಯಾರಿಗೂ ಗೊತ್ತಾಗುತ್ತಿಲ್ಲ.

ಡಾ. ಯೋಗೇಶ್ ಜೈನ್ ಎಂಬುವವರ ಪ್ರಕಾರ "ನನ್ನ ಆರೋಗ್ಯ ವ್ಯವಸ್ಥೆಯಲ್ಲಿ ಎಂತಹ ಅಸಮತೋಲನ ಇದೆ ಎಂದರೆ ಕಡಿಮೆ ಜನ ವಾಸಿಸುವ ನಗರಗಳಲ್ಲಿ ಹೆಚ್ಚಿನ ಆಸ್ಪತ್ರೆಗಳು ಮತ್ತು ವೈದ್ಯರು ಕೇಂದ್ರೀಕೃತವಾಗಿದ್ದರೆ ಹೆಚ್ಚು ಜನ ವಾಸಿಸುವ ಗ್ರಾಮೀಣ ಪ್ರದೇಶಗಳಲ್ಲಿ ಮೂಲಭೂತ ಆರೋಗ್ಯ ಕೇಂದ್ರಗಳೂ ಇಲ್ಲದಂತಾಗಿದೆ. ವಿಪರ್ಯಾಸದ ಸಂಗತಿ ಯಾವುದೆಂದರೆ ಮಲೇರಿಯಾ, ಜಾಂಡೀಸ್ ಮತ್ತು ಟೈಫಾಯಿಡ್ ರೋಗಗಳು ಅವ್ಯಾಹತವಾಗಿರುವ ಪ್ರದೇಶಗಳಿಗೆ ಸಾರಿಗೆ ಸಂಪರ್ಕವೂ ಇಲ್ಲದಂತೆ ಛತ್ತೀಸಗಢ, ಜಾರ್ಖಂಡ್ ಮತ್ತು ಒಡಿಶಾ ರಾಜ್ಯಗಳ ಸರ್ಕಾರಗಳು ನೋಡಿಕೊಂಡಿವೆ. ಆ ರಾಜ್ಯಗಳಲ್ಲಿನ ಸಾರಿಗೆ ವ್ಯವಸ್ಥೆಯನ್ನು ಖಾಸಗೀಕರಿಸಿರುವುದರಿಂದ ಖಾಸಗಿಯವರು ಗ್ರಾಮೀಣ ಪ್ರದೇಶಗಳಿಗೆ ಬಸ್‌ಗಳನ್ನು ನಡೆಸಿದರೆ ಲಾಭದಾಯಕವಲ್ಲ ಎಂದು ಕೈಬಿಟ್ಟಿದ್ದಾರೆ. ಆ ಕಾರಣಕ್ಕೂ ಅದೆಷ್ಟೋ ಜನ ಹತ್ತಿರದ ಆರೋಗ್ಯ ಕೇಂದ್ರಗಳಿಗೂ ಬರಲಾಗದೆ ತಾವಿದ್ದ ಸ್ಥಳದಲ್ಲಿಯೇ ಸಾವನ್ನಪ್ಪುತ್ತಿದ್ದಾರೆ."

ಭಾರತದಲ್ಲಿ ಒಂದೆಡೆ ಹಸಿವಿನಿಂದಾಗಿ ಅಪೌಷ್ಟಿಕತೆ ತಾಂಡವವಾಡುತ್ತಿರುವುದು, ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ಸೌಲಭ್ಯ ಇಲ್ಲದಿರುವುದರಿಂದ ಅನಾರೋಗ್ಯದಿಂದ ಸಾವಿರಾರು ಬಡಜನ ಪ್ರತಿನಿತ್ಯ ಸಾಯುತ್ತಿರುವುದು ಒಂದು ಸತ್ಯವಾದರೆ... ಇನ್ನೊಂದೆಡೆ ಭಾರತದಲ್ಲಿ ಬಿಲಿಯಾಧೀಶರ ಸಂಖ್ಯೆ ಹೆಚ್ಚುತ್ತಿರುವುದು, ನಮ್ಮ ಸಂಸದರ ಮತ್ತು ಶಾಸಕರ ಐಶ್ವರ್ಯ ಪ್ರತಿದಿನ ಗಗನಕ್ಕೇರುತ್ತಿರುವುದು ಇನ್ನೊಂದು ಸತ್ಯ.... ಎರಡನೆ ಭಾರತದ ಕಣ್ಣುಮುಂದೆ ಮೊದಲನೆ ಭಾರತದ ದೃಶ್ಯಗಳನ್ನು ತೋರಿಸಲು ಹೋಗಿದ್ದ ತರುಣ್ ಶೆರಾವತ್ ಎಂಬ ಯುವಕ ತನ್ನ ಪ್ರಾಣವನ್ನೇ ಕಳೆದುಕೊಂಡಿದ್ದಾನೆ.

ಆತನ ಈ ತ್ಯಾಗ ಬಡ ಭಾರತದ ಬಗ್ಗೆ ನಮ್ಮನ್ನಾಳುವವರ ಆತ್ಮಸಾಕ್ಷಿಯನ್ನು ತಟ್ಟುವಂತಾಗಲಿ, ಆತನಂತೆ ಇತರೆ ಅಮಾಯಕರು ಇನ್ನು ಮುಂದಾದರೂ ಮಲೇರಿಯಾ, ಟೈಫಾಯಿಡ್ ಮತ್ತು ಜಾಂಡೀಸ್‌ನಂತಹ ರೋಗಗಳಿಗೆ ಬಲಿಯಾಗದಿರಲಿ...



ಆದಿವಾಸಿ ಮಕ್ಕಳೊಂದಿಗೆ ತರುಣ್....



ತರುಣ್ ತೆಗೆದಿದ್ದ ಚಿತ್ರ


...ಶಾಸಕ ಶ್ರೀನಿವಾಸ್ ಮಗ ವೆಂಕಟೇಶ್ ಬಾಬು ಬಂಟನ ಕೊಲೆ

ರಾಜರಾಜೇಶ್ವರಿನಗರದ ಶಾಸಕ ಶ್ರೀನಿವಾಸ್ ವಿರುದ್ಧ ...ಕಾಯುಕ್ತರು ರೇಡು ಬಿದ್ದ ಬೆನ್ನಲ್ಲೇ ಅವರ ಪುತ್ರನ ಬಲಗೈ ...ಟನನ್ನು ಪುಡಿ ಪಡ್ಡೆ ಹುಡುಗರು ಮುಗಿಸಿದ್ದಾರೆ.

ಶಾಸಕ ಶ್ರೀನಿವಾಸ್ ಪುತ್ರ ವೆಂಕಟೇಶ್ ಬಾಬು ಸದ್ಯ ...ಟ್ಟಿಗೆಪಾಳ್ಯ ವಾರ್ಡಿನ ಬಿಜೆಪಿ ಕೌನ್ಸಿಲರ್ ಮತ್ತು ಬಿಬಿಎಂಪಿಯ ...ರೋಗ್ಯ ಸ್ಥಾಯಿ ಸಮಿತಿಯ ಅಧ್ಯಕ್ಷ. ಗೆದ್ದ ಕೌನ್ಸಿಲರ್‌ಗಳೆಲ್ಲ ...ರೌಡಿಯೊಬ್ಬನನ್ನು ಚೇಲಾ ಮಾಡಿಕೊಳ್ಳುವುದು, ಆತನ ...ಮೂಲಕ ತಮ್ಮ ಎದುರಾಳಿಗಳನ್ನು ಬಗ್ಗು ಬಡಿಯುವುದು, ತನ್ನ ...ರ್ಡಿನ ಕಾಮಗಾರಿ ಗುತ್ತಿಗೆ, ಕಾಂಟ್ರ್ಯಾಕ್ಟು, ರಿಯಲ್ ಎಸ್ಟೇಟು, ...ಡ್ ಡೀಲುಗಳನ್ನೆಲ್ಲ ಆತನ ಮೂಲಕವೇ ನಿಭಾಯಿಸುವುದು ...ದಿ ಕೌನ್ಸಿಲರ್‌ಗಳ ಚೇಲಾ, ರೈಟ್‌ಹ್ಯಾಂಡ್‌ಗಿರಿಯ ...ಗೊಂದು ಸದ್ದಿಲ್ಲದೆ ಬೆಂಗಳೂರಿನಲ್ಲಿ ತಲೆ ಎತ್ತಿದೆ.

ಹೀಗೆ ಶಾಸಕ ಶ್ರೀನಿವಾಸರ ಕೌನ್ಸಿಲರ್ ಪುತ್ರನಿಗೆ ಬಲಗೈ ...ಸುತ್ತಿದ್ದ ನಾಗರಾಜ್ ಜೂನ್ 22 ರಂದು ನಡುರಸ್ತೆಯಲ್ಲೇ ...ಣವಾದ.

ನಾಗರಾಜ್ ಕೊಟ್ಟಿಗೆಪಾಳ್ಯ ವಾರ್ಡ್ ಬಿಜೆಪಿಗೆ ಅಧ್ಯಕ್ಷನಾಗಿದ್ದ. ...ವಾರ್ಡಿಗೆ ವೆಂಕಟೇಶ್ ಬಾಬು ಕೌನ್ಸಿಲರ್ ಆಗಿದ್ದರಿಂದ ...ದೇ ಬಿಜೆಪಿ ಸರ್ಕಾರವಿದ್ದುದರಿಂದ ಶಾಸಕ ತಂದೆ, ಕೌನ್ಸಿಲರ್ ...ನ ಕೃಪಾಕೃಪೆಯಿಂದ ನಾಗರಾಜ್ ವಿಕಾರವಾಗಿ ಬೆಳೆದು ನಿಂತ. ವಾರ್ಡಿನ ...ಕ ಕಾಂಟ್ರ್ಯಾಕ್ಟುಗಳನ್ನೆಲ್ಲ ತಾನೇ ಆಕ್ರಮಿಸಿಕೊಂಡ. ಜ್ಞಾನಭಾರತಿ, ...ಳ್ಯ, ಕೊಟ್ಟಿಗೆಪಾಳ್ಯ ಸುತ್ತಮುತ್ತ ತಲೆ ಎತ್ತಿದ ಖಾಸಗಿ ಲೇಔಟುಗಳಲ್ಲಿ ಕಂಡೋರ ಸೈಟಿಗೆ ಕಾಂಪೌಂಡ್ ಹಾಕುವ ಕಾಯಕವನ್ನು ಕೌನ್ಸಿಲರ್ ವೆಂಕಟೇಶ್ ಬಾಬು ಈತನಿಗೆ ವಹಿಸಿಕೊಟ್ಟರು.






ರಿಯಲ್ ಎಸ್ಟೇಟ್, ಭೂಕಬಳಿಕೆ ದಂಧೆಯನ್ನೇ ರಾಜಕೀಯದ ಸೋಪಾನವಾಗಿಸಿಕೊಂಡ ವೆಂಕಟೇಶ್ ಬಾಬು ಇದಕ್ಕೆಂದೇ ಹುಟ್ಟಿಹಾಕಿದ ಪುಡಿ ರೌಡಿಗಳ ಪೈಕಿ ಕೊಟ್ಟಿಗೆಪಾಳ್ಯ ಬಿಜೆಪಿ ಅಧ್ಯಕ್ಷ ನಾಗರಾಜ್ ಯಾವ ವೇಗದಲ್ಲಿ ಹಾವಳಿಗಿಳಿದನೆಂದರೆ ರಾಜಗೋಪಾಲನಗರದ ಕೆಂಪೇಗೌಡ ಲೇಔಟಿನ ಮುಗ್ಧ ಗುಮಾಸ್ತರೊಬ್ಬರ ಸೈಟಿಗೆ ರಾತ್ರೋರಾತ್ರಿ ಬೇಲಿಸುತ್ತಿಬಿಟ್ಟ. ಪ್ರಶ್ನಿಸಿದ ಸೈಟುದಾರರ ಮಕ್ಕಳ ವಿರುದ್ಧವೇ ರೌಡಿಗಳನ್ನು ಛೂಬಿಟ್ಟ. ನಾಗರಾಜ್ ಚೇಲಾ ರೌಡಿಯೊಬ್ಬ ಸೈಟುದಾರನ ಪರವಹಿಸಿದ್ದ ವಿಜಿ ಎಂಬ ಯುವಕನಿಗೆ ಮಚ್ಚಿನಿಂದ ಹೊಡೆಸಿದ್ದ.

ಸೈಟು ಕಳಕೊಂಡು ಮಚ್ಚೇಟು ತಿಂದದ್ದೂ ಅಲ್ಲದೆ ತನ್ನ ಬಿಜೆಪಿ ಅಧ್ಯಕ್ಷಗಿರಿಯ ಲೆಟರ್‌ಹೆಡ್ ಬಳಸಿ ನಾಗರಾಜ್ ಸುಳ್ಳು ದೂರು ಕೊಟ್ಟ ಫಲವಾಗಿ ಲಗ್ಗೆರೆಯ ವಿಜಿ, ನಾಣಿ ಮುಂತಾದ ಹುಡುಗರು ಜೈಲಿಗೂ ಹೋಗಬೇಕಾಯ್ತು. ಎಲ್ಲದಕ್ಕೂ ಒಂದು ಮಿತಿಯಿರುತ್ತದೆ. ಆದರೆ ನಾಗರಾಜ್‌ನ ಅಟ್ಟಹಾಸಕ್ಕೆ ಮಿತಿಯೆಲ್ಲಿಯದು. ರೋಸತ್ತ ಹುಡುಗರು ನಾಗರಾಜ್‌ನನ್ನೇ ಮುಗಿಸಲು ನಿರ್ಧರಿಸಿ ಜೂನ್ 22 ಕ್ಕೆ ಮುಹೂರ್ತವಿಟ್ಟರು. ಚಿಲ್ಲರೆ ಹುಡುಗರು ಏನು ತಾನೇ ಕಿತ್ತಾರು ಎಂದು ಉಡಾಫೆಯಿಂದಿದ್ದ ನಾಗರಾಜ್ ಜೂನ್ 22 ರ ಶುಕ್ರವಾರ ತಾನು ಕಾಂಟ್ರ್ಯಾಕ್ಟ್ ವಹಿಸಿಕೊಂಡಿದ್ದ ಜ್ಞಾನಭಾರತಿ ಲೇಔಟಿನ ರಸ್ತೆ ಕಾಮಗಾರಿಯನ್ನು ಪರಿಶೀಲಿಸುತ್ತಾ ನಿಂತಿದ್ದ. ಇದ್ದಕ್ಕಿದ್ದಂತೆ ಮೂರು ಬೈಕುಗಳಲ್ಲಿ ನಾಗರಾಜ್‌ನನ್ನು ಸುತ್ತುವರಿದಿದೆ ಹಂತಕರ ಹಿಂಡು.

ಕ್ಷಣಾರ್ಧದಲ್ಲೇ ಐದಾರು ಲಾಂಗುಗಳು ನಾಗರಾಜನನ್ನು ಅಪ್ಪಳಿಸಿವೆ. ಓಡಲೂ ಆಗದೆ ಕೂಗಲು ಆಗದೆ ನಿಂತ ಸ್ಥಳದಲ್ಲೇ ಹೆಣವಾಗಿದ್ದಾನೆ ವಾರ್ಡ್ ಬಿಜೆಪಿ ಅಧ್ಯಕ್ಷ ನಾಗರಾಜ್. ಪಾಪಿ ಶಾಸಕ ಶ್ರೀನಿವಾಸ್ ಮತ್ತು ಕೌನ್ಸಿಲರ್ ಪುತ್ರ ವೆಂಕಟೇಶ್ ಬಾಬು ಧಾವಿಸಿ ಬಂದಿದ್ದೇ ಬಾಯಿಬಾಯಿ ಬಡಕೊಂಡರು. ಏನು ಬಂತು; ಬೆಳೆಸಿದ ಬಂಟನೇ ಹೆಣವಾಗಿದ್ದ. ಸದ್ಯ ಜ್ಞಾನಭಾರತಿ ಪೊಲೀಸರು ಲಗ್ಗೆರೆಯ ವಿಜಿ, ನಾರಾಯಣ, ದಿಲೀಪ್, ಮುಕುಂದ, ರಾಜ ಮುಂತಾದವರನ್ನು ಹಿಡಿದು ಲಾಕಪ್ಪಿನಲ್ಲಿಟ್ಟಿದ್ದಾರೆ. ಬದುಕಿದ್ದಾಗ ನಾಗರಾಜ್ ವಾರ್ಡಿನುದ್ದಕ್ಕೂ ಹಾಕಿಸಿದ್ದ ಫ್ಲೆಕ್ಸ್, ಬ್ಯಾನರ್‌ಗಳ ತುಂಬೆಲ್ಲ ಶಾಸಕ ಶ್ರೀನಿವಾಸ್ ಮತ್ತವರ ಮಗ ವೆಂಕಟೇಶ್ ಬಾಬು ಫೋಟೋಗಳೇ ರಾರಾಜಿಸುತ್ತಿವೆ. ಬಿಜೆಪಿಯ ಕಮಲ ಮತ್ತು ಕೊಲೆಯಾದ ನಾಗರಾಜನ ಫೋಟೋಗಳು ಕೂಡ ಅದೇ ಬ್ಯಾನರು, ಫ್ಲೆಕ್ಸ್‌ಗಳ ತುಂಬ ನೋಡುಗರನ್ನು ಅಣಕಿಸುವಂತಿದೆ. ದುರಂತವೆಂದರೆ ಕೊಂದವರು ಕೂಡ ಪಾಲಿಕೆ ಸದಸ್ಯ ಬಾಬು ಶಿಷ್ಯರೆ. ಕಳೆದ ಪಾಲಿಕೆ ಚುನಾವಣೆಯಲ್ಲಿ ಬಿಜೆಪಿ ಪರವಾಗೇ ಓಡಾಡಿದ್ದರು.



ಗೆದ್ದ ಕೌನ್ಸಿಲರ್‌ಗಳಿಗಿದು ಪಾಠವಾಗಬೇಕು. ಪ್ರತಿ ವಾರ್ಡುಗಳ ತುಂಬ ತಲೆಎತ್ತಿದ ಕೌನ್ಸಿಲರ್ ಬಂಟರ ಹಾವಳಿ ಇನ್ನಾದರೂ ನಿಲ್ಲಬೇಕು.




ಹೆಣ ಬಿದ್ದ ಕೆರೆಯ ಏರಿ ಹಿನ್ನೆಲೆಯಲ್ಲಿ ರವಿಶಂಕರ್ ಆಶ್ರಮ



ಉದಿಪಾಳ್ಯದಕೆರೆ




ಬಲಿಯಾದ ಮಹಿಳೆಯ ಶವ



ರವಿಶಂಕರನ ವಿಶಾಲಾಕ್ಷಿ ಮಂಟಪ

ಆರ್ಟ್ ಆಫ್ ಅಡ್ಡೆಯಲ್ಲಿ ಹೆಣ ಬಿದ್ದ ಕತೆ



ಖದೀಮ ರವಿಶಂಕರ್

ನಿತ್ಯಾನಂದನ ಬಿಡದಿಯ ಅಡ್ಡೆಗೆ ನುಗ್ಗಿ ಬೀಗ ಜಡಿದ ಪೊಲೀಸರ ಪೌರುಷ ಯಾಕೋ ಗೊತ್ತಿಲ್ಲ; ಆರ್ಟ್ ಆಫ್ ಲೀವಿಂಗ್ ಖದೀಮ ರವಿಶಂಕರ್ ಗುರೂಜಿಯ ವಿಷಯದಲ್ಲಿ ಮಾತ್ರ ಠುಸ್ ಪಟಾಕಿ ಹೊಡೆಯುತ್ತಿದೆ!

ಕನಕಪುರ ರಸ್ತೆಯ ರವಿಶಂಕರನ ಆರ್ಟ್ ಆಫ್ ಲೀವಿಂಗ್ ಅಡ್ಡೆಯಲ್ಲಿ ಈ ಬಾರಿ ಹೆಂಗಸೊಬ್ಬಳ ಹೆಣ ಬಿದ್ದಿದೆ!

ಅದು ಕೊಲೆಯಾ, ಆತ್ಮಹತ್ಯೆಯಾ, ರವಿಶಂಕರನ ಆಶ್ರಮದ ಪಾಪದ ಫಲವಾ? ನಿತ್ಯಾನಂದನ ಮೇಲೆ ಅಷ್ಟೊಂದು ನಿರ್ದಾಕ್ಷಿಣ್ಯವಾಗಿ ಪೌರುಷ ಮೆರೆದ ರಾಮನಗರದ ಪೊಲೀಸರೇಕೆ ಇಡೀ ಪ್ರಕರಣವನ್ನು ಮುಚ್ಚಿಹಾಕಲು ಯತ್ನಿಸುತ್ತಿದ್ದಾರೆ? ಬಲಿಯಾದ ಹೆಂಗುಸು ಯಾರು, ಏಕೆ ರವಿಶಂಕ್ರನ ಆಶ್ರಮದ ಮೆಡಿಕಲ್ ಕಾಲೇಜು, ಶ್ರೀಶ್ರೀ ಪದವಿ ಪೂರ್ವ ಕಾಲೇಜ್, ಶ್ರೀ ಶ್ರೀ ಆಯುರ್ವೇದಿಕ್ ಇಂಟರ್‌ನ್ಯಾಷನಲ್ ಹಾಸ್ಪಿಟಲ್, ಪಂಚಕರ್ಮ ಧಾಮ; ಹೀಗೆ ರವಿಶಂಕರ್ ಗುರೂಜಿ ಶುರು ಹಚ್ಚಿಕೊಂಡ ಅಸಂಖ್ಯಾತ ಕಾಂಚಾಣ ಕರ್ಮ ಕೇಂದ್ರಗಳ ಕ್ಯಾಂಪಸ್ಸಿನೊಳಕ್ಕೇ ಪುರಾತನ ಉದಿಪಾಳ್ಯದ ಕೆರೆಯೂ ಸೇರಿದೆ.

ನಿಗೂಢ ಮಹಿಳೆಯ ಶವ

ಹೆಸರಿಗದು ಸರ್ಕಾರಿ ಕೆರೆಯಾದರೂ ಅದನ್ನು ರವಿಶಂಕರ್ ಆಕ್ರಮಿಸಿಕೊಂಡಿದ್ದಾನೆ. ಅಕ್ಕಪಕ್ಕದ ಹಳ್ಳಿಗರಿಗಾಗಲಿ, ಸಾರ್ವಜನಿಕರಾಗಲಿ ಪ್ರವೇಶವಿಲ್ಲದ, ಹೆಜ್ಜೆಹೆಜ್ಜೆಗೂ ಬಿಹಾರಿ ಸೆಕ್ಯೂರಿಟಿ ಗಾರ್ಡುಗಳಿಂದಾವೃತ್ತ ಉದಿಪಾಳ್ಯದ ಕೆರೆಯಲ್ಲಿ ಜೂನ್ 17ರ ಬೆಳ್ಳಂಬೆಳಗ್ಗೆಯೇ ಅಪರಿಚಿತ ಮಹಿಳೆ

ಕೆರೆಯಲ್ಲೇ ಆಕೆಯ ಹೆಣ ತೇಲಿದ್ದು, ಪೊಲೀಸರು ಈತನಕ ರವಿಶಂಕರ್ ಗುರೂಜಿಯನ್ನಾಗಲಿ, ಆತನ ಆಶ್ರಮದ ಅಧಿಕಾರಿಗಳನ್ನಾಗಲಿ ಕಾಟಾಚಾರಕ್ಕೂ ಏಕೆ ಪ್ರಶ್ನಿಸುತ್ತಿಲ್ಲ? ಪೊಲೀಸರ ಕೈಕಟ್ಟಿರುವವರು ಯಾರು, ಆರ್ಟ್ ಆಫ್ ಲೀವಿಂಗ್ ಅಡ್ಡೆಯಲ್ಲೇ ಏಕೆ ಒಂದರ ಮೇಲೊಂದಾಗಿ ದುರಂತಗಳು ಸಂಭವಿಸುತ್ತಿವೆ; ಇತ್ಯಾದಿ ಯಾವೊಂದು ಪ್ರಶ್ನೆಗಳಿಗೂ ಉತ್ತರವಿಲ್ಲ.

ಬಲಿಯಾದ ಹೆಂಗಸಿನ ವಯಸ್ಸು ಸರಿಸುಮಾರು 45 ವರ್ಷ. ಜೂನ್ 17 ರ ಭಾನುವಾರ ಬೆಳಗ್ಗೆ ಕನಕಪುರ ರಸ್ತೆಯ ಉದಿಪಾಳ್ಯದ ಕೆರೆಯಲ್ಲೊಂದು ಹೆಣ ತೇಲಿದೆ. ಈ ಉದಿಪಾಳ್ಯದ ಕೆರೆಯಿರುವುದು ರವಿಶಂಕರನ ಆರ್ಟ್ ಆಫ್ ಲೀವಿಂಗ್ ಆವರಣದಲ್ಲಿ, ವೇದವಿಜ್ಞಾನ ಮಹಾವಿದ್ಯಾಲಯ, ವಿಶಾಲಾಕ್ಷಿ ಮಂಟಪ, ಆರ್ಟ್ ಆಫ್ ಲೀವಿಂಗ್ ಅಂತರರಾಷ್ಟ್ರೀಯ ಕೇಂದ್ರ, ಪಂಚಗಿರಿ ಎಜುಕೇಷನ್ ಟ್ರಸ್ಟ್, ಶ್ರೀಶ್ರೀ ವಿದ್ಯಾಮಂದಿರ, ಶ್ರೀಶ್ರೀ ಆಯುರ್ವೇದಿಕ್

ಯೊಬ್ಬಳ ಶವ ತೇಲುತ್ತಿತ್ತು. ನೋಡಿದ ಹಳ್ಳಿಗರೆಲ್ಲ ಸುತ್ತಮುತ್ತಲ ಹತ್ತಾರು ಗ್ರಾಮಗಳಲ್ಲಿ ವಿಚಾರಿಸಿದ ನಂತರವೇ ಅದು ಆರ್ಟ್ ಆಫ್ ಲೀವಿಂಗ್ ಅಡ್ಡೆಗೆ ಬಂದಿದ್ದ ಹೆಂಗಸೆಂಬುದು ನಿಕ್ಕಿಯಾಗಿದೆ. ಅಷ್ಟರಲ್ಲೇ ರವಿಶಂಕರನ ಆಶ್ರಮದ ಮುಂದಿನ ಆಟೋ ಮತ್ತು ಟ್ಯಾಕ್ಸಿ ಚಾಲಕರೆಲ್ಲ ಹೆಣ ನೋಡಲೆಂದು ಬಂದವರು 'ಈಕೆ ಕಳೆದೊಂದು ವಾರದಿಂದ ಗುರೂಜಿ ಆಶ್ರಮದಲ್ಲೇ ಇದ್ದಳು. ಈಕೆ ಆಶ್ರಮಕ್ಕೆಂದು ಬಂದಿದ್ದ ಪರದೇಶಿ ಹೆಂಗಸೇ ಹೊರತು ಸುತ್ತಮುತ್ತಲ ಯಾವುದೇ ಹಳ್ಳಿಯವಳಲ್ಲ.....!' ಎಂದಿದ್ದಾರೆ. ಯಾರೋ ಒಬ್ಬ ಕೆರೆಗೆ ಧುಮುಕಿದ್ದೇ ಮಕಾಡೆ ತೇಲುತ್ತಿದ್ದ ಶವವನ್ನು ದಡಕ್ಕೆಳೆದು ಹಾಕಿದ್ದಾನೆ.

ಹೆಣವಾಗಿದ್ದ ಆ ಹೆಂಗಸು ನೈಟಿ ತೊಟ್ಟಿದ್ದಳು. ಕತ್ತಿಗೆ ಸುತ್ತಿಕೊಂಡಿದ್ದ ದುಪಟ್ಟಾ ಚೂರೂ ಸಡಿಲಗೊಳ್ಳದೆ ಹಾಗೇ ಇತ್ತು, ಮೂಗು ಮತ್ತು ಬಾಯಿಂದ ನೊರೆ ಬರುತ್ತಿತ್ತು, ಎರಡೂ ಕೈಗಳು ಅಂಗಾತ ಆಡಿಸಲೆಣಿಸಿದಂತಿತ್ತು, ಕೊರಳಲ್ಲಿದ್ದ ಚಿನ್ನದ ತಾಳಿ ಹಾಗೇ ಇಳಿಬಿದ್ದಿತ್ತು, ಹಣೆಗೆ ಅಂಟಿಸಿಕೊಂಡಿದ್ದ ಅಗಲದ ಬಿಂದಿ ಕೂಡ ನೀರಿನಿಂದಾಗಿ ಕಿತ್ತು ಬೀಳದೆ ಹಣೆಯಲ್ಲೇ ಮೆತ್ತಿಕೊಂಡ... ಆಕೆಗೆ ಕೆರೆಗೆ ಬಿದ್ದು ಹೆಚ್ಚು ಸಮಯವಾಗಿಲ್ಲ ಎಂಬುದನ್ನು ಸಾರಿ ಹೇಳುತ್ತಿ...

ಇದರರ್ಥ ಜೂನ್ 16 ರ ರಾತ್ರಿ 3 ರಿಂದ 4.30 ರ ಮಧ್ಯೆ ಆಕೆ... ಶವವನ್ನು ಯಾರೋ ಕೆರೆಗೆ ತಂದು ಎಸೆದಿದ್ದಾರೆ. ಹಾಗೊಮ್ಮೆ ಆಕೆ ಆತ್ಮಹ... ಮಾಡಿಕೊಂಡಿದ್ದೇ ಆಗಿದ್ದರೆ ದೇಹ ನೀರು ಕುಡಿದಿರಬೇಕಿತ್ತು, ಸಾಮಾನ್ಯವಾ... ಯಾರೇ ಆತ್ಮಹತ್ಯೆ ಮಾಡಿಕೊಂಡರೂ ನೀರು ಕುಡಿದ ಅವರ ದೇಹ ಮೇ... ತೇಲಲು ಎರಡೋಮೂರೋ ದಿನಗಳು ಬೇಕು. ಆ ಹೊತ್ತಿಗೆ ದೇಹ ನೀ... ಕುಡಿದು ಊದಿಕೊಂಡಿರುತ್ತದೆಯಲ್ಲದೆ ಚರ್ಮ, ಮುಖ, ಮೂಗು, ಬಾಂ... ಕೆನ್ನೆ ಇತ್ಯಾದಿ ಮೃದು ಭಾಗಗಳನ್ನು ಮೀನುಗಳು ತಿಂದು ಹಾಕಿರುತ್ತವೆ.

ಕೊಂದು ಎಸೆದರೆ?


ಉದಿಪಾಳ್ಯದ ಕೆರೆ ಹೇಳಿಕೊಳ್ಳುವಂಥ ದೊಡ್ಡಕೆರೆಯಲ್ಲದೆ ಹೋದರ... ಆದರಲ್ಲಿ ವರ್ಷವಿಡೀ ಮೀನುಗಾರಿಕೆ ನಡೆಯುತ್ತದೆ. ಪಕ್ಕದ ಪಟ್ಟಾರ... ಪಾಳ್ಯದ ಚಂದ್ರ ಎಂಬಾತ ಆ ಕೆರೆಯ ಮೀನುಗಾರಿಕೆ ಕಾಂಟ್ರಾಕ್ಟ್ ಹಿಡಿದಿದ್ದಾ... ಕೆರೆಯ ಏರಿಯ ಮೇಲೆ ಕೆಲಸಗಾರರಿಗೆಂದು ಚಿಕ್ಕದೊಂದು ಶೆಡ್ ಕೂ... ಇದೆ. ಅಲ್ಲಿ ಸದಾ ಕಾಲಕ್ಕೂ ಕೆಲಸಗಾರರಿರುತ್ತಾರೆ. ಇನ್ನು ಹೆಣ ಮುಳು... ಎರಡೋ ಮೂರೋ ದಿನವಾಗಿದ್ದರೆ ಈಗಾಗಲೇ ಕೆರೆಯಲ್ಲಿರುವ ದೈ... ಮೀನುಗಳಿಗೆ ಕ್ಷಣಾರ್ಧದಲ್ಲೇ ಇಡೀ ದೇಹ ಆಹುತಿಯಾಗಬೇಕಿತ್ತು, ಏಕೆಂದ... ಅವು ಮಾಂಸಾಹಾರಿ ಮೀನುಗಳು, ಪ್ರತಿನಿತ್ಯ ಸತ್ತ ಕೋಳಿ, ಕೋಳಿ... ತ್ಯಾಜ್ಯವಾದ ಕಾಲು, ಲಿವರ್, ತಲೆ ಇತ್ಯಾದಿಗಳೇ ಅವುಗಳ ಆಹಾರವಾಗಿರುವ... ಬಿದ್ದ ಹೆಂಗಸಿನ ಶವವನ್ನು ಮೀನುಗಳು ಮುಟ್ಟದೆ ಬಿಟ್ಟಿವೆಯೆಂದರೆ ಆಕೆ... ಶವ ಕೆರೆಗೆ ಬಿದ್ದು ಹೆಚ್ಚೆಂದರೆ ಮೂರೂವರೆ ಗಂಟೆಯಷ್ಟೇ ಆಗಿರಬೇ... ಅಂದರೆ ರಾತ್ರಿ 3 ರ ನಂತರ ಮತ್ತು 4.30 ರ ಮಧ್ಯೆಯೇ ಹೆಣವ... ಎಸೆದಿರಬೇಕು.

ಆಕೆಯ ಕತ್ತಿನಲ್ಲಿದ್ದ ತಾಳಿಯೇ ಆಕೆ ತಮಿಳುನಾಡಿಗೋ ಕೇರಳಕ್ಕೋ... ಸೇರಿದವಳೆಂಬುದನ್ನು ಸ್ಪಷ್ಟಪಡಿಸುತ್ತಿತ್ತು, ತಲೆ ಕೂದಲಿಗೆ ಹಾಕಿದ್ದ ಹೇರ್... ಮತ್ತು ಆಕೆಯ ಕೇಶವಿನ್ಯಾಸದ ಆಧಾರದ ಮೇಲೇ ಹೇಳಬೇಕೆಂದರೆ ... ನಿರ್ಗತಿಕ ರೈತಾಪಿ ಮಹಿಳೆಯಂತೂ ಅಲ್ಲವೇ ಅಲ್ಲ, ಇಂಗ್ಲಿಷ್ ಬಲ್ಲ, ಅ... ಕುಲಸ್ಥ ನಗರವಾಸಿ ಮಹಿಳೆಯೆಂಬ ಬಗ್ಗೆ ಅನುಮಾನವೇ ಇಲ್ಲ, ಕಳೆದೊಂ... ವಾರದಿಂದ ಆಕೆ ರವಿಶಂಕರನ ಆಶ್ರಮದಲ್ಲಿ ಓಡಾಡಿಕೊಂಡಿದ್ದನ್ನು ನೋಡಿ...

ಮಸಾಜ್ ಪಾರ್ಲರ್, ಐಷಾರಾಮಿ ಟೌನ್‌ಶಿಪ್ ಯಾವ ಆಧ್ಯಾತ್ಮವಯ್ಯ?

ಕನಕಪುರ ರಸ್ತೆಯ ಆರ್ಟ್ ಆಫ್ ಲೀವಿಂಗ್ ಹೆಸರಿಗಷ್ಟೇ ಆಶ್ರಮವಾದರೂ ಅದನ್ನು ನಿಯಂತ್ರಿಸುವುದು ರವಿಶಂಕರನ ತಂಗಿ ಭಾನುಮತಿ, ಆಕೆಯ ಗಂಡ ನರಸಿಂಹನ್ ಮತ್ತು ಮಗ ಅರವಿಂದ್!

ಇಲ್ಲಿಗೆ ತಿಂಗಳ ಹಿಂದಷ್ಟೇ ತಂಗಿ ಭಾನು ಮತಿಯ ಮಗ ಅರವಿಂದನ ಮದುವೆಯನ್ನು ರವಿಶಂಕರನೇ ನಿಂತು ಅತೀ ವಿಜೃಂಭಣೆ ಯಿಂದ ಆಶ್ರಮದ ಆವರಣದಲ್ಲೇ ನೆರವೇರಿಸಿ ದ್ದಾನೆ. ಇದರರ್ಥ ಆರ್ಟ್ ಆಫ್ ಲೀವಿಂಗ್ ಎಂಬು ದು ರವಿಶಂಕರನ ಕೌಟುಂಬಿಕ ವ್ಯಾಪಾರವೇ ಹೊರತು ಅಲ್ಲಿ ಆಧ್ಯಾತ್ಮವಾಗಲಿ, ಆದರ್ಶ ವಾಗಲಿ ತೋರಿಕೆಗೆ ಮಾತ್ರ. ಇಲ್ಲಿಗೆ ಆರು ತಿಂಗಳ ಹಿಂದೆ ರವಿಶಂಕ್ರನ ತಂದೆ ರತ್ನಂ ತೀರಿಕೊಂಡರು. ಮುದುಕ ರತ್ನಂನ ಮುದಿ ಚಪಲ ಎಂಥಾ ದ್ದೆಂದರೆ ಹಣ್ಣು ಮುದುಕನಾಗಿದ್ದಾಗಲೂ ಫ್ರೆಂಚ್ ಮಹಿಳೆ ಯೊಬ್ಬಳೊಂದಿಗೆ ಆಶ್ರಮದ ಆವರಣದಲ್ಲೇ ಸಂಸಾರ ಶುರು ಹಚ್ಚಿಕೊಂಡಿದ್ದ.




ಚಪಲದ ಮುದಿ ಅಪ್ಪ ರತ್ನಂ

ರವಿಶಂಕರನ ತಂಗಿ ಭಾನುಮತಿ ಸರ್ವಾಧಿಕಾರಿಣಿ ಯಾದರೆ ಆಕೆಯ ಗಂಡ ನರಸಿಂಹನ್ ಪಕ್ಕಾ ತಮಿಳು ಭಾಷಾಂಧ ಮತ್ತು ಧನಪಿಶಾಚಿ. ಆಶ್ರಮದ ಆಯಕಟ್ಟಿನ ಹುದ್ದೆಗಳಿಗೆಲ್ಲ ತಮಿಳರನ್ನೇ ನೇಮಿಸಿಕೊಂಡ. ವರ್ಷಗಟ್ಟಲೇ ಆಶ್ರಮದಲ್ಲಿ ದುಡಿದ ಅಕ್ಕಪಕ್ಕದ ಗ್ರಾಮಸ್ಥರ ಸಂಬಳವನ್ನೆಲ್ಲ ನುಂಗಿ ಹಾಕಿದ. ಸ್ವತಃ ರವಿಶಂಕರನೇ ಸುತ್ತಮುತ್ತಲ ಬಡರೈತರನ್ನು ವಂಚಿಸಿ ಅವರ ಭೂಮಿ ಕಬಳಿಸಿದ. ತನ್ನ ಶಾಲೆಯ ಮಕ್ಕಳಿಗೆ ಸರ್ಕಾರಿ ವೆಚ್ಚದಲ್ಲಿ ಬಿಸಿಯೂಟ ಕೊಟ್ಟಿದ್ದರ ಫೋಟೋ ತೆಗೆದು ಅದನ್ನು ವಿದೇಶದಲ್ಲಿ ತೋರಿಸಿ ಬಡಮಕ್ಕಳಿಗೆ ತಾನೇ ವಿದ್ಯೆ-ಊಟ ನೀಡುತ್ತಿದ್ದೇನೆಂದು ಡಾಲರ್ ಗಟ್ಟಲೆ ದುಡ್ಡು ಹೊಡೆದ. ಉದಿಪಾಳ್ಯದ ಬಡವರಿಗೆ ಪಂಚಾಯ್ತಿ ವತಿಯಿಂದ ಕಟ್ಟಿಸಿಕೊಟ್ಟ ಮನೆಗಳ ವೀಡಿಯೋ ಮಾಡಿಸಿ ಅದನ್ನೂ ತಾನೇ ಕಟ್ಟಿಸಿಕೊಟ್ಟೆನೆಂದು ವಿದೇಶದಲ್ಲಿ ತೋರಿಸಿ ಡಾಲರ್ ದೋಚಿದ.

ಇವತ್ತು ರವಿಶಂಕರನ ಬೇಕಾಬಿಟ್ಟಿ ಆಸ್ತಿ ಮತ್ತು ಎಕರೆ ಗಟ್ಟಲೆ ಭೂಮಿಯನ್ನು ಲೆಕ್ಕ ಹಾಕಿದರೆ ಈತ ವಿದೇಶದಿಂದ ಹೊಡೆದ ಡಾಲರುಗಳ ಲೆಕ್ಕ ಸಿಗುತ್ತದೆ. ಕಗ್ಗಲಿಪುರ ಪಂಚಾಯ್ತಿ ಅಧ್ಯಕ್ಷ ಪರ್ವೇಜ್ ತಾನೊಬ್ಬ ಜನಪ್ರತಿನಿಧಿ ಎಂಬುದನ್ನೇ ಮರೆತು ರವಿಶಂಕರನ ರಿಯಲ್ ಎಸ್ಟೇಟ್ ದಾಹಕ್ಕಾಗಿ ಬಡರೈತರನ್ನು ಪೀಡಿಸುತ್ತಾನೆ. ಓಬಿಚೂಡಹಳ್ಳಿಯ ಕಂಟ್ರಾಕ್ಟರ್ ಮಹಾದೇವ, ಜಿಲ್ಲಾ ಪಂಚಾಯ್ತಿ ಮೆಂಬರ್ ಅಶ್ವತ್ಥನಾಯ್ಕ, ಹುಳಿಮಾವು ಕಾರ್ತಿಕ್ ಮುಂತಾದ ರವಿಶಂಕ್ರನ ಲೋಕಲ್ ಚೇಲಾಗಳಿಗೆ ದಲಿತರು, ಬಡರೈತರ ಮೇಲೆ ಗೂಂಡಾಗಿರಿ ಮಾಡಿ ಅವರ ಭೂಮಿ ಕಿತ್ತು ಗುರೂಜಿಗೆ ಅರ್ಪಿಸುವುದೇ ಫುಲ್‌ಟೈಂ ಕಾಯಕ. ಈ ಪೈಕಿ ಪಟಾಪಟ್ ಶ್ರೀನಿವಾಸ್ ಎಂಬ ಮಾಜಿ ದಲಿತ ನಾಯಕನಂತೂ 'ಗುರೂಜಿಯಿಂದಾಗಿ ನಾನು ಬ್ರಾಹ್ಮಣನಾಗಿದ್ದೀನಿ, ನಾನೇ ಈಗ ಆರೆಸ್ಸೆಸ್ ಲೀಡರ್. ಅಣ್ಣಾ ಹಜಾರೆ ಹೋರಾಟವನ್ನು ಗುರೂಜಿ ಪರವಾಗಿ ಬೆಂಗಳೂರಿನಲ್ಲಿ ಸಂಘಟಿಸಿದ್ದೇ ನಾನು' ಎಂದು ಪೋಜು ಕೊಟ್ಟುಕೊಂಡೇ ದಲಿತರ ಆಸ್ತಿ ಕಬಳಿಸುತ್ತಾನೆ.

ಇಂಥ ಲೋಕಲ್ ಚೇಲಾಗಳನ್ನು ಹಾಕಿಕೊಂಡೇ ರವಿಶಂಕರ್ ಸುತ್ತಮುತ್ತಲ ಗ್ರಾಮಸ್ಥರನ್ನು ಪಳಗಿಸುತ್ತಾನೆ. ರವಿಶಂಕರ್ ವಿರುದ್ಧ ಯಾರಾದರೂ ಪೊಲೀಸರಿಗೆ ದೂರು ಕೊಟ್ಟರೆಂದರೆ ಈ ಚೇಲಾಗಳೇ ಹಾವಳಿಗಿಳಿಯುತ್ತಾರೆ. ಇಲ್ಲಿಗೆ ಆರು ತಿಂಗಳ ಹಿಂದೆ ಕೆರೆ ಸುತ್ತಮುತ್ತ ಬೆಳೆದಿದ್ದ ಶ್ರೀಗಂಧದ ಮರಗಳನ್ನು ಕಡಿ... ರವಿಶಂಕರನೇ ನಿಂತು ಆಯುರ್ವೇದಿಕ್ ಫ್ಯಾಕ್ಟರಿಗೆ ಸಾಗಿ... ಈ ಬಗ್ಗೆ ಜನ ಅರಣ್ಯ ಇಲಾಖೆ ಮತ್ತು ಪೊಲೀಸ... ದೂರು ಕೊಟ್ಟರೆ ಪೊಲೀಸರು ದೂರು ಕೊಟ್ಟವ... ಗದರಿಸಿ ಓಡಿಸಿಬಿಟ್ಟರು.



ತಂಗಿಯ ಗಂಡ ನರಸಿಂಹನ್

ರವಿಶಂಕ್ರನ ದುಡ್ಡಿನ ದಾಹ ಯಾವ ಮಟ್ಟದ್ದೆಂ... ದೂರದ ನೇಪಾಳದಿಂದ ಹದಿನೈದಿಪ್ಪತ್ತು ಮ... ಯುವತಿಯರನ್ನು ಕರೆತಂದು ಪ್ರತ್ಯೇಕ ... ಮಾಡಿಟ್ಟಿದ್ದಾನೆ. ಅವರ ಕೆಲಸವೆಂ... ರವಿಶಂಕರ್ ನಡೆಸುವ ಮಸಾ... ಪಾರ್ಲರಿಗೆ ಬರುವ ರಸಿಕ... ಅಂಗಮರ್ಧನ ಮಾಡುವುದು. ನಿಜ... ಮಸಾಜ್ ಮಾತ್ರವೇ ಈ... ಉದ್ದೇಶವಾಗಿದ್ದರೆ ಅದಕ್ಕೆ ನೇ... ಯುವತಿಯರೇ ಏಕೆ ಬೇಕು? ಪುರು... ವೇ ಒತ್ತಿದರೆ ಅದು ಮಸಾ... ಅನ್ನಿಸಿಕೊಳ್ಳುವುದಿಲ್ಲವೆ? ಪ್ರತಿಯೊ... ಮಸಾಜಿಗೆ ನಾಲ್ಕರಿಂದ ಐದು ಸಾವಿ... ಬಿಲ್ಲು ಹಾಕುತ್ತಾನೆಂದರೆ ಅದು ನೇಪಾಳಿ ಯುವತಿ... ಮೈಮಾಟಕ್ಕೋ ಅಥವಾ ಅಂಗಮರ್ಧನ ಹೆಸ... ಮದನಲೀಲೆಗೋ? ಇದೇ ಟೈಪಿನಲ್ಲಿ ದುಡ್ಡು ದುಡಿಯ... ಹೋಗಿ ರವಿಶಂಕರ್ ಆಧ್ಯಾತ್ಮ ಕ್ಕೆಂದು ಸರ್ಕಾರ ಕೊ... ಜಮೀನಿನಲ್ಲಿ ಸಾವಿರಾರು ಫ್ಲಾಟು ಗಳ ಭವ್ಯ ಟೌನ್... ಮಾಡುತ್ತಿದ್ದಾನೆ. ಸುಮೇರು ಹೆಸರಿನಲ್ಲಿ ಐಟಿ ಕಂಪೆನಿಯ... ಶುರುಹಚ್ಚಿಕೊಂಡಿದ್ದಾನೆ.

ಆಧ್ಯಾತ್ಮದ ಹೆಸರಲ್ಲಿ ಕುರುಡು ಕಾಂಚಾಣ ಬ... ರವಿಶಂಕರನ ಆರ್ಟ್ ಆಫ್ ಲೀವಿಂಗ್‌ನಲ್ಲಿ ಯಾವ ಆ... ವಿರಲು ಸಾಧ್ಯ? ನಿತ್ಯಾನಂದ ಹುಂಬ ಮತ್ತು ದಡ್ಡ. ... ರವಿಶಂಕರ್ ಪಾಖಂಡಿ. ಸ್ಥಳೀಯ ಗೂಂಡಾಗಳನ್ನೇ ಬ... ಸ್ಥಳೀಯ ರೈತರ ಮೇಲೆ ದೌರ್ಜನ್ಯವೆಸಗುವುದೂ ಗೊ... ಮಾಡಬಾರದ ಅನಾಚಾರ ಮಾಡಿ ಬಚಾವಾಗುವ... ಗೊತ್ತು.



ರವಿಶಂಕ್ರನ ಕಾನ್ವೆಂಟು



ರವಿಶಂಕರನ ರಿಯಲ್ ಎಸ್ಟೇಟ್ ಟೌನ್‌ಶಿಪ್



ಆರ್ಟ್ ಆಫ್ ಕೇಂದ್ರದಲ್ಲಿ ಐಟಿ ಕಂಪನಿ

ಸಚಿವ ನಾರಾಯಣಸ್ವಾಮಿಯೂ ಭೂಗಳ್ಳ!


'ಎಲ್ಲೂ ಸಲ್ಲದವರು ಬಿಜೆಪಿಯಲ್ಲಿ
ಸಲ್ಲುವರಯ್ಯ
ಬಿಜೆಪಿಯಲ್ಲಿ ಸಲ್ಲುವವರು
ಬೇರೆಲ್ಲೂ ಸಲ್ಲರಯ್ಯ'

-ಭೂಗಳ್ಳ ಬಿಜೆಪಿ ರಾಜಕಾರಣಿಗಳಿಗೆ ಸರಿಹೊಂದುವ ...ದು. ಏಕೆಂದರೆ ಭೂಗಳ್ಳ ಖದೀಮರೆಲ್ಲ ತಮ್ಮ ...ನ ಮುಂದುವರೆಸಲು ಬಿಜೆಪಿ ಸೇರಿಕೊಂಡರಾ ಅಥವಾ ...ಜಿಗೆ ಸೇರಿದ ಮೇಲೆ ಈ ಚೋರ ವಿದ್ಯೆ ಕಲಿತರಾ ...ಈ ಪ್ರಶ್ನೆಗೆ ಅಷ್ಟು ಸುಲಭವಾಗಿ ಉತ್ತರ ಸಿಗಲಾರದು.

...ಬಿಜೆಪಿಯ ಸಮಾಜ ಕಲ್ಯಾಣ ಹಾಗೂ ಬಂದೀಖಾನೆ ...ತ, ಆನೇಕಲ್ ಶಾಸಕ ಎ. ನಾರಾಯಣಸ್ವಾಮಿಗೂ ...ಭೂಗಳ್ಳತನದ ವೈರಸ್ ಅಂಟಿಕೊಂಡಿದೆ. ಜೊತೆಗೆ ...ಸಚಿವ ಮಹಾಶಯ ತನ್ನ ಆಸ್ತಿ ಘೋಷಣೆ ಮಾಡುವಾಗ ...ಕೋಟ್ಯಾಂತರ ರೂಪಾಯಿಗಳ ಆಸ್ತಿಗೆ ಸಂಬಂಧಿಸಿದಂತೆ ...ಳ್ಳು ಮಾಹಿತಿ ನೀಡಿರುವುದನ್ನು 'ಲಂಕೇಶ್' ಪತ್ತೆ ಹಚ್ಚಿದೆ.

...ಮೊದಲಿಗೆ ಸಾಕ್ಷಾತ್ ಬಿಜೆಪಿ ಮುಖ್ಯ...ಮಂತ್ರಿಯಾಗಿದ್ದ ಯಡಿಯೂರಪ್ಪನೇ ಭೂಗಳ್ಳ...ದ ಡಿನೋಟಿಫಿಕೇಶನ್ ಡೀಲ್‌ನಲ್ಲಿ ರೆಡ್ ...ಡಾಗಿ ಸಿಕ್ಕಿಬಿದ್ದರು. ಜೊತೆಗೆ ಯಡ್ಡಿಯ ...ವೀರಪುತ್ರರತ್ನರಾದ ರಾಘವೇಂದ್ರ, ...ವಿಜಯೇಂದ್ರ ಹಾಗೂ ಅಳಿಯ ಸೋಹನ್ ...ಕುಮಾರ್ ಕೂಡ ಆರೋಪಿಗಳಾದರು. ನಂತರ ...ಈಶ್ವರಪ್ಪ, ಸಿಟಿ ರವಿ, ವಿ.ಸೋಮಣ್ಣ, ...ಮುರುಗೇಶ್ ನಿರಾಣಿ, ಎ. ರಾಮದಾಸ್, ...ಉಮೇಶ್ ...ಗೌಡ ಶಿವಣ್ಣ, ಕೃಷ್ಣಯ್ಯ ಶೆಟ್ಟಿ, ಸುರೇಶ್ ಕುಮಾರ್, ಶೋಭಾ ಕರಂದ್ಲಾಜೆ... ಒಬ್ಬರಾ, ಇಬ್ಬರಾ ...ಮುಗಿಸಲು.....


...ಈಗ ಈ ಭೂಗಳ್ಳರ ಗುಂಪಿಗೆ ನಾರಾಯಣಸ್ವಾಮಿಯೂ ...ಬೇಕಾಗಿದೆ.



ಯಡ್ಡಿ

ಆತ್ತೂ ಕರೆದು ಮಂತ್ರಿಯಾದ

2008ರಲ್ಲಿ ಯಡ್ಡಿ ನೇತೃತ್ವದಲ್ಲಿ ಬಿಜೆಪಿ ಸರ್ಕಾರ ...ಯಾದಾಗಿನಿಂದಲೂ 'ನನ್ನ ಮಂತ್ರಿ ಮಾಡಿ' ಎಂದು ...ನಾರಾಯಣಸ್ವಾಮಿ ಗೋಳಾಡುತ್ತಲೇ ಇದ್ದ. ...ಕಲ್‌ನಿಂದ ಮೂರು ಬಾರಿ ಶಾಸಕನಾಗಿ ಗೆದ್ದಿದ್ದೇನೆ. ...ಕ ಶಾಸಕರ ಪೈಕಿ ನಾವೇ ಸೀನಿಯರ್ ಬಿಜೆಪಿ ಶಾಸಕ ...ಮು ಬೇಡಿಕೊಂಡಿದ್ದ. ಆಗ ಯಡ್ಡಿ ನಾರಾಯಣ ...ಮಿಯತ್ತ ತಿರುಗಿಯೂ ನೋಡಿರಲಿಲ್ಲ, ಮೊದಲ ಸುತ್ತಿನ ...ಪುಟ ರಚನೆಯಲ್ಲಿ ದಲಿತರ ಕೋಟಾದಲ್ಲಿ ಆಗ ...ವಿಂದ ಕಾರಜೋಳ ಮಂತ್ರಿಯಾದರು. ಆದರೂ ...ಬಿಡದ ನಾರಾಯಣಸ್ವಾಮಿ ಯಾರ ಜೊತೆ ಡೀಲ್ ...ಏರಿಸಿದನೋ ಏನೋ 2010 ರ ಸೆಪ್ಟಂಬರ್‌ನಲ್ಲಿ ಮಂತ್ರಿಗಿರಿಯ ಚಾನ್ಸ್ ಗಿಟ್ಟಿಸಿಕೊಂಡ. ಮಂತ್ರಿಗಿರಿ ಅಂದರೆ ತನ್ನನ್ಯಾರು ಪ್ರಶ್ನಿಸುವಂತಿಲ್ಲ ಎಂದು ಈ ದಡ್ಡನಿಗೆ ಅನಿಸಿತೇನೊ. ಹಾಗಾಗಿ ಸರ್ಕಾರಿ ಭೂಮಿ ಕದಿಯಲು ಶುರುಮಾಡಿದ. ಎಲೆಕ್ಷನ್‌ಗೆ ನಿಂತಾಗ ಚುನಾವಣಾ ಆಯೋಗಕ್ಕೆ ತನ್ನ ಆಸ್ತಿ ವಿವರಗಳನ್ನು ಒಂದು ರೀತಿ ಕೊಟ್ಟರೆ, ಲೋಕಾಯುಕ್ತರಿಗೆ ಪ್ರತಿ ವರ್ಷ ನೀಡಬೇಕಾದ ಆಸ್ತಿ ವಿವರಗಳಲ್ಲಿ ಅನೇಕ ವಿಚಾರಗಳನ್ನು ಮರೆಮಾಚಿದ್ದಾನೆ. ಅರ್ಥಾತ್ ಇವೆರಡೂ ದಾಖಲೆಗಳ ವಿವರಗಳು ಒಂದಕ್ಕೊಂದು ತಾಳೆಯಾಗುತ್ತಿಲ್ಲ. ಜೊತೆಗೆ ಬಡವರ ಭೂಮಿ ನುಂಗಿರುವುದು, ಬಗರ್‌ಹುಕುಂ ಸಾಗುವಳಿದಾರರ ಜಮೀನು ಕಬಳಿಸುವ ಅಕ್ರಮ ಕೆಲಸಗಳನ್ನು ನಾರಾಯಣಸ್ವಾಮಿ ಮಾಡಿದ್ದಾನೆ. ಈತ ಅದೆಂತಹ ಕುಟುಂಬ ಪ್ರೇಮಿಯೆಂದರೆ ತಾನು ಕದ್ದ ಜಮೀನನ್ನೆಲ್ಲಾ ಹೆಂಡತಿ ವಿಜಯ ಕುಮಾರಿಯ ಹೆಸರಿನಲ್ಲಿ ರಿಜಿಸ್ಟರ್ಡ್ ಮಾಡಿಸಿದ್ದಾನೆ!



...ijayakumari ಇವರಿಂದ ಹಾಜರ ಮಾಡಲ್ಪಟ್ಟಿದೆ

ಹೆಸರು	ಫೋಟೋ	ಹೆಬ್ಬೆಟ್ಟಿನ ಗುರುತು	ಸಹಿ
...N. Vijayakumari			


ಸಬ್ ರಜಿಸ್ಟ್ರಾರ
ಉಪನೋಂದಣಾಧಿಕಾರಿ
ಆನೇಕಲ್

ಭೂ ದಾಖಲೆಗಳು.......

ಚೋರ ವಿದ್ಯಾ ನಿಪುಣ

ಆನೇಕಲ್ ತಾಲೂಕಿನ ಸರ್ಜಾಪುರ ಹೋಬಳಿಯ ರಾಯಸಂದ್ರ ಗ್ರಾಮದ ಸರ್ವೆ ನಂಬರ್ 91ರ ಸರ್ಕಾರಿ ಗೋಮಾಳದಲ್ಲಿ ಆನಾಮತ್ತು ಎಂಟು ಎಕರೆ ನುಂಗಿ ನೀರು ಕುಡಿದಿರುವುದು ನಾರಾಯಣಸ್ವಾಮಿಯ ಮೊಟ್ಟ ಮೊದಲ ಸಾಧನೆಯಾಗಿದೆ.

ಈ ಗೋಮಾಳದಲ್ಲಿ ಒಟ್ಟು 58 ಎಕರೆ, 33 ಗುಂಟೆ ಸರ್ಕಾರಿ ಜಮೀನಿತ್ತು, ರೆವಿನ್ಯೂ ದಾಖಲೆಗಳಲ್ಲೂ ಇದನ್ನು ಸರ್ಕಾರಿ ಗೋಮಾಳ ಎಂತಲೇ ವರ್ಗೀಕರಿಸಲಾಗಿದೆ. 1982ರ ಫೆಬ್ರವರಿ 10 ರಂದು ಈ ಗೋಮಾಳ ಭೂಮಿಯ ಪೈಕಿ 26 ಮಂದಿ ಭೂಹೀನ ದಲಿತರಿಗೆ ತಲಾ 1.15 ಎಕರೆಯಂತೆ ಒಟ್ಟು 35.30 ಎಕರೆ ಜಮೀನನ್ನು ಸರ್ಕಾರ ಹಂಚಿಕೆ ಮಾಡಿತ್ತು, ಅಂತವರ ಪೈಕಿ ಗೊಲ್ಲಹಳ್ಳಿಯ ಮುನಿಯಲ್ಲಗ ಎಂಬಾತನ ಕುಟುಂಬದ ಸದಸ್ಯರಿಗೆಲ್ಲಾ ಸೇರಿ ಒಟ್ಟು 8 ಎಕರೆ ಭೂಮಿ ಮಂಜೂರಾಗಿತ್ತು, ಈ ಮುನಿಯಲ್ಲಗ ತನ್ನದೇ ತಾಪತ್ರಯಗಳಿಗೆ ಸಿಲುಕಿ ಗೊಲ್ಲಹಳ್ಳಿ ಬಿಟ್ಟು ಗೋವಿಂದಪುರಕ್ಕೆ ವಲಸೆ ಹೋದ. ಇತ್ತೀಚೆಗೆ ಅಲ್ಲೇ ತೀರಿಕೊಂಡು ಬಿಟ್ಟ. ಈ ಸುದ್ದಿ ತಿಳಿದಿದ್ದ ನಾರಾಯಣ ಸ್ವಾಮಿಯ ಬಂಟರು ಆ ಜಮೀನು ನುಂಗಲು ಒಂದು ಪ್ಲಾನ್ ಮಾಡಿದರು. ಮುನಿಯಲ್ಲಗನ ಹೆಸರಿಗೆ 1982 ರಲ್ಲೇ ಸರ್ವೆ ನಂ 91 ರಲ್ಲಿ ಭೂಹಂಚಿಕೆಯಾಗಿ ಆತನ ಹೆಸರಲ್ಲೇ ಖಾತೆ ಇದ್ದರೂ ಸಹ ಅದೇ ಜಮೀನಿಗೆ 130 ಎಂಬ ಬೇರೊಂದು ಸರ್ವೆ ನಂಬರ್ ತಂದು ಕೂರಿಸಿ ಆ ಇಡೀ ಜಮೀನು ಸರ್ಕಾರಿ ಜಮೀನು, ಅದಕ್ಕೆ ಬೇರೆ ವಾರಸುದಾರರ್‍ಯಾರು ಇಲ್ಲ ಎಂಬಂತೆ ನಕಲಿ ದಾಖಲೆಗಳನ್ನು ಸೃಷ್ಟಿಸಿ ಬಿಟ್ಟರು. ಆ ಭೂಮಿಯ ಮೇಲೆ ಮೃತ ಮುನಿಯಲ್ಲಗನಿಗಾಗಲೀ ಅಥವಾ ಆತನ ಮಕ್ಕಳಿಗಾಗಲೀ ಯಾವ ಹಕ್ಕೂ ಇಲ್ಲ ಎಂಬ ಸೀನ್ ಕ್ರಿಯೇಟ್ ಮಾಡಲು ಈ ನಾಟಕ ಆಡಲಾಗಿತ್ತು.



ಸ್ಪೆಷಲ್ ಡಿಸಿ ರಾಮಾಂಜನೇಯ

ಮುನಿಯಲ್ಲಗ ಸತ್ತ ನಂತರ ಆತನ ಮಗ ಆಂಜನಪ್ಪ ತಮ್ಮ ಕುಟುಂಬಕ್ಕೆ ಸೇರಿದ ಜಮೀನಿನ ಬಳಿ ಹೋದಾಗ 'ಅದು ನಿಮ್ಮ ಜಮೀನಲ್ಲ, ಸರ್ವೆ ನಂಬರ್ ಕೂಡ ಬೇರೆಯಾಗಿದೆ. ನಿಮಗೆ ಮಂಜೂರಾಗಿರುವ 8 ಎಕರೆ ಜಮೀನು ಅದೆಲ್ಲಿದೆಯೋ ನೀನೇ ಹುಡುಕಿಕೋ' ಎಂದು ನಾರಾಯಣಸ್ವಾಮಿಯ ಚೇಲಾಗಳು ಬೆದರಿಸಿ ಆಂಜನಪ್ಪನನ್ನು ಅಲ್ಲಿಂದ ಓಡಿಸಿದರು. ಇದರಿಂದ ಆಘಾತಗೊಂಡ ಆಂಜನಪ್ಪ ಬೆಂಗಳೂರು ಜಿಲ್ಲಾಧಿಕಾರಿ ಕಚೇರಿಗೆ ಹೋಗಿ ಒಂದು ದೂರು ಕೊಟ್ಟ. ಡಿಸಿ ಕೋರ್ಟ್‌ನಲ್ಲಿ ವಿಚಾರಣೆ ಶುರುವಾಯಿತು.

ಆಗ ವಿಶೇಷ ಜಿಲ್ಲಾಧಿಕಾರಿಯಾಗಿದ್ದವನು ರಾಮಾಂಜನೇಯನೆಂಬ ಮಹಾನ್ ಖದೀಮ!

ಈ ರಾಮಾಂಜನೇಯ ಸ್ಪೆಷಲ್ ಡಿಸಿಯಾಗಿದ್ದಾಗ ನಡೆಸಿದ ಭೂಹಗರಣಗಳ ಬಗ್ಗೆ ಸರಿಯಾದ ತನಿಖೆಯೇನಾದರೂ ಆದರೆ ಜೀವನಪರ್ಯಂತ ಜೈಲಿನಲ್ಲೇ ಇರಬೇಕಾದಷ್ಟು ಅಕ್ರಮಗಳು ಹೊರಬರುತ್ತವೆ.


ಡಿಸಿ ಕೋರ್ಟ್‌ನಲ್ಲಿ ಆಂಜನಪ್ಪ ಜಮೀನಿನ ಕೇಸಿನ ವಿಚಾರಣೆ ನಡೆದು 2010ರ ಮೇ10 ರಂದು ತೀರ್ಪು ಬಂತು. ಸದರಿ 8 ಎಕರೆ ಭೂಮಿಯು ಮುನಿಯಲ್ಲಗನ ಕುಟುಂಬಕ್ಕೆ ಸೇರಬೇಕೆಂತಲೂ ಸದರಿ ಜಮೀನುಗಳು ಸರ್ವೆ ನಂಬರ್ 91/1, 91/2, 91/3, 94/4 ರಲ್ಲಿವೆ ಎಂತಲೂ ಡಿಸಿ ರಾಮಾಂಜನೇಯ ತೀರ್ಪು ಕೊಟ್ಟ.

ಆದರೆ ಅಷ್ಟರೊಳಗಾಗಿ ಮಿನಿಸ್ಟರ್ ನಾರಾಯಣಸ್ವಾಮಿ ಆಂಜನಪ್ಪನೊಂದಿಗೆ ಒಂದು ಡೀಲ್ ಕುದುರಿಸಿ ಕೊಂಡುಬಿಟ್ಟಿದ್ದ. ಕೋರ್ಟ್ ಕಚೇರಿ ಅಂತಾ ಅಲೆದಾಡುವ ಬದಲಿಗೆ ಎಕರೆಗೆ 30 ಲಕ್ಷ ರೂ.ನಂತೆ ಒಟ್ಟು 8 ಎಕರೆಗೆ 2 ಕೋಟಿ 40 ಲಕ್ಷ ರೂ. ಕೊಡುವುದಾಗಿಯೂ ಅದಕ್ಕೆ ಆಂಜನಪ್ಪ ಒಪ್ಪಿದರೆ ಡಿಸಿ ರಾಮಾಂಜನೇಯನಿಗೆ ಹೇಳಿ ಜಮೀನು ವಿವಾದ ಬಗೆಹರಿಸಿಕೊಡುವುದಾಗಿಯೂ ನಂಬಿಸಿದ. ಇದಕ್ಕೆ ಬಡವ ಆಂಜನಪ್ಪ ಒಪ್ಪಿಕೊಂಡ.

ಆಶ್ಚರ್ಯ ಏನೆಂದರೆ 2010ರ ಮೇ 10 ರಂದು ಡಿಸಿ ಕೋರ್ಟ್‌ನ ತೀರ್ಪು ಪ್ರಕಟವಾಗುವ ಮೊದಲೇ ಅಂದರೆ 2010ರ ಜನವರಿ 22 ರಂದೇ ಈ ಜಮೀನನ್ನು ನಾರಾಯಣಸ್ವಾಮಿಯ ಹೆಂಡತಿ ವಿಜಯ ಕುಮಾರಿಯ ಹೆಸರಿನಲ್ಲಿ ಸೇಲ್ ಡೀಡ್ ಮಾಡಿಸಿ ರಿಜಿಸ್ಟರ್ ಮಾಡಿಸಲಾಗಿದೆ.

ಸರ್ಜಾಪುರ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಈ ಕಾನೂನುಬಾಹಿರ ರಿಜಿಸ್ಟ್ರೇಷನ್ ಆಗಿದೆ.

ಸಚಿವ ನಾರಾಯಣಸ್ವಾಮಿಯನ್ನು ಎದುರು ಹಾಕಿಕೊಂಡರೆ ಅತ್ತ ಜಮೀನೂ ಸಿಗಲ್ಲ, ಇತ್ತ ಹಣವೂ ಸಿಗಲ್ಲ ಎಂದು ಹೆದರಿದ ಆಂಜನಪ್ಪ ಮತ್ತವನ ಕುಟುಂಬದ ಸದಸ್ಯರಾದ ದೊಡ್ಡಪಾಪಮ್ಮ (70), ಯಲ್ಲಪ್ಪ (50), ವೆಂಕಟೇಶ (45), ಅಬ್ಬಪ್ಪ (65) ಮುಂತಾದವರು ತಮ್ಮ ಪಾಲಿಗೆ ಬಂದದ್ದೇ ಪಂಚಾಮೃತವೆಂದು ನಾರಾಯಣಸ್ವಾಮಿ ಕೊಟ್ಟಷ್ಟು ಹಣ ಪಡೆದು ತಮ್ಮ 8 ಎಕರೆ ಭೂಮಿ ಬಿಟ್ಟುಕೊಟ್ಟಿದ್ದಾರೆ. ಹೀಗೆ ಮಾರ್ಕೆಟ್ ರೇಟ್‌ನಲ್ಲಿ 10 ಕೋಟಿ ರೂಪಾಯಿ ಬೆಲೆ ಬಾಳುತ್ತಿದ್ದ ಸರ್ಕಾರಿ ಗೋಮಾಳಕ್ಕೆ ನಾರಾಯಣ ಸ್ವಾಮಿಯ ಹೆಂಡತಿ ವಿಜಯಕುಮಾರಿ ಜುಜುಬಿ 2.40 ಕೋಟಿ ಕೊಟ್ಟು ಮಾಲೀಕಳಾಗಿ ಬಿಟ್ಟಳು.



ನಾರಾಯಣ ಸ್ವಾಮಿ

ಲೋಕಾಯುಕ್ತರಿಗೆ ಸುಳ್ಳು ಮಾಹಿತಿ

ಸಚಿವ ನಾರಾಯಣಸ್ವಾಮಿಯ ಹೆಂಡತಿ ವಿಜಯಕುಮಾರಿ ಹೆಸರಿನಲ್ಲಿ ಈ ರಾಯಸಂದ್ರದ 8 ಎಕರೆ ಜಮೀನಲ್ಲದೆ ಗೊಲ್ಲಹಳ್ಳಿಯಲ್ಲಿ 3 ಎಕರೆ, ತೋಗೂರಿನಲ್ಲಿ 2 ಎಕರೆ ಭೂಮಿ ಇದೆ. ಇದನ್ನು ಸ್ವತಃ ನಾರಾಯಣಸ್ವಾಮಿಯೇ ಲೋಕಾಯುಕ್ತರಿಗೆ 2010-11 ನೇ ಸಾಲಿನಲ್ಲಿ ಸಲ್ಲಿಸಿರುವ ಆಸ್ತಿ ವಿವರಗಳಲ್ಲಿ ಘೋಷಿಸಿಕೊಂಡಿದ್ದಾನೆ. ಇದೆಲ್ಲಾ ಜಮೀನಿನ ಬೆಲೆ 25 ಕೋಟಿ ರೂಗಳಿಗಿಂತ ಜಾಸ್ತಿ ಇದೆ. ಆದರೂ ನಾರಾಯಣ ಸ್ವಾಮಿ ಇವುಗಳ ಮೌಲ್ಯ ಕೇವಲ 1 ಕೋಟಿ ರೂಪಾಯಿ ಎಂದು ದಾಖಲಿಸಿದ್ದಾನೆ.

ಇಲ್ಲಿನ ವಂಚನೆ ಏನೆಂದರೆ ರಾಯಸಂದ್ರದ 8 ಎಕರೆ ಜಮೀನನ್ನು 2010ರ ಜನವರಿಯಲ್ಲಿ ಖರೀದಿಸಿ ರಿಜಿಸ್ಟರ್ ಮಾಡಿಸಿಕೊಂಡಾಗ ಸೇಲ್ ಡೀಡ್‌ನಲ್ಲೇ ಸ್ಪಷ್ಟವಾಗಿ ಜಮೀನಿನ ಬೆಲೆ 2.40 ಕೋಟಿ ರೂ.ಎಂದು ನಮೂದಿಸಲಾಗಿದೆ. ವಸ್ತುಸ್ಥಿತಿ ಹೀಗಿದ್ದಾಗಲೂ ರಾಯಸಂದ್ರದ 8 ಎಕರೆ ಸೇರಿದಂತೆ ಒಟ್ಟು 13 ಎಕರೆ ಜಮೀನಿನ ಬೆಲೆ ಕೇವಲ 1 ಕೋಟಿ ರೂಪಾಯಿ ಎಂದು ಲೋಕಾಯುಕ್ತರಿಗೆ ನಾರಾಯಣಸ್ವಾಮಿ ಸುಳ್ಳು ಮಾಹಿತಿ ನೀಡಿದ್ದಾನೆ.

ಇದು ಕಾನೂನಿನ ಪ್ರಕಾರ ಅಪರಾಧವಾಗಿದೆ.

ಸೈಟು ಕಳ್ಳಿ ವಿಜಯಕುಮಾರಿ

ಸಚಿವರ ಪತ್ನಿ ವಿಜಯಕುಮಾರಿ ಅದೆಂತಾ ಚಾಲಾಕಿ ಹೆಂಗಸೆಂದರೆ ತನ್ನ ಹೆಸರಿನಲ್ಲಿರುವ ಇನ್ನಿತರ ಆಸ್ತಿಗಳ ಬಗ್ಗೆ ಲೋಕಾಯುಕ್ತರಿಗೆ ಪೂರ್ತಿ ಮಾಹಿತಿ ಕೊಟ್ಟೇ ಇಲ್ಲ.


ಬನ್ನೇರುಘಟ್ಟ ಪಂಚಾಯ್ತಿ ವ್ಯಾಪ್ತಿಯ ಮುನಿಮಾರಯ್ಯನ ದೊಡ್ಡಿ ಲೇಔಟ್‌ನಲ್ಲಿ ವಿಜಯಕುಮಾರಿಗೆ ಮೂರು ಸೈಟುಗಳಿವೆ. ಸರ್ವೆ ನಂಬರ್ 16/ಪಿ ಯಲ್ಲಿ ಸೈಟ್ ನಂಬರ್ 17, 30, 31ರ ಸೈಟುಗಳನ್ನು ಈಕೆ 2005 ರ ಮಾರ್ಚ್ 24 ರಂದು ಖರೀದಿಸಿದ್ದಾಳೆ. ಅಂದಹಾಗೆ ಈ ಸರ್ವೆ ನಂಬರ್ 16/ಪಿ ಸಹ ಸರ್ಕಾರಿ ಗೋಮಾಳವಾಗಿದ್ದು ಇದನ್ನು ಸಹ ಸಚಿವ ನಾರಾಯಣಸ್ವಾಮಿ ಮತ್ತವನ ಭೂಗಳ್ಳ ಭಂಟರೇ ನುಂಗಿ ನೀರು ಕುಡಿದಿದ್ದಾರೆ. ಲೋಕಾಯುಕ್ತರಿಗೆ ತನ್ನ ಆಸ್ತಿ ವಿವರ ನೀಡುವಾಗ ನಾರಾಯಣಸ್ವಾಮಿ ಈ ಅಕ್ರಮ ಸೈಟುಗಳ ಮಾಲೀಕತ್ವದ ಬಗ್ಗೆ ಒಂದಕ್ಷರವನ್ನೂ ತಿಳಿಸಿಲ್ಲ. ಹೆಸರಿಗೆ ಸಮಾಜ ಕಲ್ಯಾಣ ಸಚಿವನಾದರೂ ಸ್ವಂತ ಕುಟುಂಬದ ಕಲ್ಯಾಣವನ್ನೇ ಫುಲ್‌ಟೈಂ ಮಾಡಿಕೊಂಡಿರುವ ನಾರಾಯಣಸ್ವಾಮಿ ಲೋಕಾಯುಕ್ತ ಸಂಸ್ಥೆಗೆ ಸುಳ್ಳು ಮಾಹಿತಿ ನೀಡಿದ್ದಾನೆ.

ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಇಲ್ಲಿ ಪ್ರಕಟಿಸಲಾಗಿದೆ.

ಬಿಜೆಪಿ ಪಕ್ಷವು ಭ್ರಷ್ಟ ಭೂಗಳ್ಳ ನಾರಾಯಣ ಸ್ವಾಮಿಯನ್ನು ಸಚಿವ ಸ್ಥಾನದಿಂದ ಕಿತ್ತೆಸೆಯಲಿ.

ಕರ್ನಾಟಕ ಲೋಕಾಯುಕ್ತ ಸಂಸ್ಥೆ ನಾರಾಯಣಸ್ವಾಮಿ ನೀಡಿರುವ ಸುಳ್ಳು ಮಾಹಿತಿಗಳ ಬಗ್ಗೆ ತನಿಖೆ ನಡೆಸಲಿ.


• ಪಾರ್ವತೀಶ



6. ದಿನಾಂಕ 31ನೇ ಮಾರ್ಚ್ 2011...ರಂದು ಇರತಕ್ಕ ಸ್ಥಿರ ಆಸ್ತಿಗಳು

(ಅ) ಕೃಷಿ ಭೂಮಿಗಳು (i) ಸರ್ವೆ ಸಂಖ್ಯೆ ಮತ್ತು ಸ್ಥಳ (ii) ವಿಸ್ತೀರ್ಣ (iii) ಭೂಮಿ ಖುಷ್ಕಿ, ತರಿ ಅಥವಾ ತೋಟವೇ? (iv) ಆಸ್ತಿ ಪಿತ್ರಾರ್ಜಿತವೇ? ಅವಿಭಕ್ತವೇ ಅಥವಾ ಪ್ರತ್ಯೇಕವಾದದ್ದೇ? (v) ಅಲ್ಲವಾದಲ್ಲಿ ಅರ್ಜನೆಯ ಮೂಲವನ್ನು ತಿಳಿಸಿ (vi) ಅರ್ಜನೆಯ ಮೌಲ್ಯ ಮತ್ತು ದಿನಾಂಕ (vii) ಅದು ...	—	(1) ಗೊಲ್ಲಹಳ್ಳಿ 17, 16, 2, 3, 7/1 - 3 ಎಕರೆ (2) ತೋಗೂರು (3) - 2 ಎಕರೆ (3) ರಾಯಸಂದ್ರ ಸ.ನಂ. 91/130 - 8 ಎಕರೆ ಸ್ವಂತ 1 ಕೋಟಿ [illegible]	—	—	

ಲೋಕಾಯುಕ್ತರಿಗೆ ಆಸ್ತಿ ಬೆಲೆ 1 ಕೋಟಿ ಎಂದು ತಿಳಿಸಿರುವುದು



-11-

9. Whereas the Vendors hereby releases all their right, title, claim, ownership whatsoever over the scheduled detailed property in favour of Purchaser and the Purchaser can have hold, enjoy, possess the same as absolute owner thereof for ever. The Vendors have this day delivered the original/copies of all the available documents/revenue records pertaining to the Schedule detailed property to the Purchaser.

10. The Vendors have this day placed the Purchaser in Vacant Possession of the Schedule Property.

The Market Value of the Schedule Property is Rs. 2,40,00,000/- (Rupees Two Crores Forty Lakhs only).

...12/-

2.40 ಕೋಟಿಗೆ ಭೂ ಖರೀದಿಸಿರುವ ದಾಖಲೆ



ಅಮೆರಿಕನ್ ಸುಂದರಿಯನ್ನು ಕೊಂದನೇ ಪವನ್?



ಸಾಫ್ಟ್‌ವೇರ್ ಜಗತ್ತಿನ ಐಷಾರಾಮಿ ಲೋಕದಲ್ಲಿ ದುರಂತಗಳು ಹೆಚ್ಚುತ್ತಲೇ ಇವೆ. ಫೇಸ್‌ಬುಕ್‌ನಲ್ಲಿ ಪರಿಚಿತಳಾದ ಫೇಸ್‌ಲೆಸ್ ಹುಡುಗಿಯ ಮೋಹದ ಬಲೆಗೆ ಬಿದ್ದ ಯುವ ಟೆಕ್ಕಿಯೊಬ್ಬ ಆತ್ಮಹತ್ಯೆಗೆ ಶರಣಾದ ಸುದ್ದಿಯೊಂದು ತೀರಾ ಇತ್ತೀಚೆಗೆ ಬಂದಿತ್ತು. ಇದೀಗ ಅಂಥದೇ ಮತ್ತೊಂದು ಸುದ್ದಿ ಹೊರಬಿದ್ದಿದೆ. ಜೂನ್ 19ರಂದು ಅಮೆರಿಕದಲ್ಲಿ ನೆಲೆಸಿದ್ದ ಬೆಂಗಳೂರು ಮೂಲದ ಪವನ್‌ಕುಮಾರ್ ಎಂಬ 26 ವರ್ಷದ ಯುವ ಟೆಕ್ಕಿಯೊಬ್ಬ ದುರಂತ ಸಾವನ್ನು ಕಂಡಿದ್ದಾನೆ. ಪತ್ರಿಕೆಗಳು ಹಾಗೂ ಟಿವಿ ಚಾನೆಲ್‌ಗಳಿಗೆ ಇದು ಟಿಆರ್‌ಪಿ ಹೆಚ್ಚಿಸುವ ಮತ್ತೊಂದು ಸುದ್ದಿ ತುಣುಕಾಗಿ ಪ್ರಚಾರ ಪಡೆದುಕೊಂಡಿದೆ.

ಪವನ್‌ನ ಸಾವು ಒಂದು ಆತ್ಮಹತ್ಯೆಯೆಂದು ಅಮೆರಿಕ ಪೊಲೀಸರು ಹೇಳುತ್ತಿದ್ದರೆ, ಆ ನತದೃಷ್ಟ ಟೆಕ್ಕಿಯ ದುಃಖತಪ್ತ ತಾಯಿ ತಂದೆಗಳು ಹೇಳುವುದೇ ಬೇರೆ. "ನನ್ನ ಮಗ ಅಂಥವನಲ್ಲ, ಯಾರೋ ಆತನನ್ನು ಕೊಲೆ ಮಾಡಿ ಸತ್ಯವನ್ನು ಮುಚ್ಚಿಹಾಕಲು ಆತ್ಮಹತ್ಯೆಯ ಕಟ್ಟುಕತೆ ಕಟ್ಟಿದ್ದಾರೆ" ಎಂದು ಆವೇಶಭರಿತರಾಗಿ ದೂಷಿಸುತ್ತಿದ್ದಾರೆ. ಹಾಗಾದರೆ ಸತ್ಯಾಂಶ ಏನಿರಬಹುದು?

ಪವನ್ ಮೂಲತಃ ಪಾವಗಡ ತಾಲೋಕಿನ ಒಂದು ಕೃಷಿಕ ಕುಟುಂಬದಿಂದ ಬಂದವನು. ಆತನ ತಂದೆ ಅಂಜಯ್ಯ ಸಮಾಜ ಕಲ್ಯಾಣ ಇಲಾಖೆಯಲ್ಲಿ ಒಂದು ಸಣ್ಣ ನೌಕರಿಯಲ್ಲಿದ್ದರು. ಕೆಲ ವೈಯಕ್ತಿಕ ಕಾರಣಗಳಿಂದಾಗಿ ತಂದೆ ಕೆಲಸ ಬಿಟ್ಟ ನಂತರ ಕುಟುಂಬ ಆರ್ಥಿಕ ಸಂಕಷ್ಟಗಳನ್ನೆದುರಿಸಬೇಕಾಯ್ತು. ಆಗ ಪವನ್ 7ನೇ ತರಗತಿಯಲ್ಲಿ ಓದುತ್ತಿದ್ದ. ಮನೆಯ ಸಮಸ್ಯೆಗಳಿಗೆ ಸ್ಪಂದಿಸಿದ ಪವನ್ ಶಾಲೆ ಮುಗಿದನಂತರ ಪಾವಗಡದ ಹೋಟೆಲೊಂದರಲ್ಲಿ ಕೆಲಸ ಮಾಡಲು ಪ್ರಾರಂಭಿಸಿದ. ಕಷ್ಟಗಳನ್ನು ಎದುರಿಸುವ ಅನುಭವ ಬಾಲ್ಯದಿಂದಲೇ ಆತನಿಗೆ ಗೊತ್ತಿತ್ತು.

ಹೀಗೆ ಕಷ್ಟದಲ್ಲೇ ವಿದ್ಯಾಭ್ಯಾಸ ಮಾಡಿದ ಪವನ್ ಎಸ್ಸೆಸ್ಸೆಲ್ಸಿ, ಪಿಯುಸಿ ಎರಡರಲ್ಲೂ ಡಿಸ್ಟಿಂಕ್ಷನ್ ಪಡೆದಿದ್ದ. ಮುಂದೆ ಸಿವಿಲ್ ಸರ್ವೀಸ್‌ಗೆ ಹೋಗುವ ಹಂಬಲ ಆತನದಾಗಿತ್ತು. ಆದರೆ ಈ ಕಾಲಘಟ್ಟದ ಬಹುಪಾಲು ಪೋಷಕರು ಬಯಸುವುದು ತಮ್ಮ ಮಕ್ಕಳು ಐಟಿ-ಬಿಟಿ ಫೀಲ್ಡ್‌ಗೆ ಹೋಗಲಿ ಎಂಬುದೇ ತಾನೆ? ಹಾಗೆ ಪೋಷಕರ ಒತ್ತಡಕ್ಕೆ ಮಣಿದ ಪವನ್ ನಗರದ ಸಪ್ತಗಿರಿ ಕಾಲೇಜು ಸೇರಿ ಐಟಿ ಇಂಜಿನಿಯರ್ ಆದ. ಈತನ ಅಕ್ಯಾಡೆಮಿಕ್ ಕೆರಿಯರ್ ಬಹಳ ಬ್ರೈಟ್ ಆಗಿದ್ದಿದ್ದರಿಂದ ಈತ ಓದು ಮುಗಿಸುತ್ತಿದ್ದಂತೆ ಐಟಿ ಫೀಲ್ಡ್‌ನಲ್ಲಿ ಖ್ಯಾತಿ ಹೊಂದಿರುವ ಕಾಗ್ನಿಜೆಂಟ್ ಟೆಕ್ನಾಲಜೀಸ್ ಕಂಪನಿಯಲ್ಲಿ 2007ರ ಡಿಸೆಂಬರ್‌ನಲ್ಲೇ ಉದ್ಯೋಗ ದೊರೆಯಿತು. ಕೈತುಂಬಾ ಸಂಬಳ. ಪಾವಗಡದ ಅಂಜಯ್ಯ ದಂಪತಿಗಳು ನಮ್ಮ ಕಷ್ಟಕಾಲ ತೀರಿತು ಎಂದೇ ಭಾವಿಸಿದ್ದರು. ಆದರೆ ಅಷ್ಟರಲ್ಲಿ ವಿಧಿ ಅವರ ಬದುಕಿನಲ್ಲಿ ಮತ್ತೊಂದು ಬಗೆಯ ಆಟ ಆಡಿಬಿಟ್ಟಿದೆ.

ಅದು ನಡೆದಿದ್ದು ಹೀಗೆ. ಕಳೆದ ಮೂರು ವರ್ಷಗಳಿಂದ ಕಾಗ್ನಿಜೆಂಟ್‌ನ ಬೆಂಗಳೂರು ಕಚೇರಿಯಲ್ಲಿ ಕೆಲಸ ಮಾಡುತ್ತಾ ನೆಮ್ಮದಿಯಿಂದಿದ್ದ ಪವನ್‌ಗೆ ಒಂದು ಪ್ರಾಜೆಕ್ಟ್‌ನ ಕೆಲಸದ ಮೇಲೆ ಕಳೆದ ಫೆಬ್ರವರಿಯಲ್ಲಿ ಅಮೆರಿಕಕ್ಕೆ ವರ್ಗವಾಗಿತ್ತು. ಹೀಗೆ ಅಮೆರಿಕಕ್ಕೆ ಹಾರಿಹೋದ ಪವನ್ ಕುಟುಂಬದವರ ಜೊತೆ ನಿರಂತರ ಸಂಪರ್ಕದಲ್ಲಿದ್ದ. ಜೂನ್ 15 ರಂದು ತನ್ನ ಅಕ್ಕ ಗುಣಶೀಲಳೊಂದಿಗೆ ಫೋನ್ ಮಾಡಿದ ಪವನ್ ಜುಲೈ ಮೊದಲನೇ ವಾರ ಬೆಂಗಳೂರಿಗೆ ವಾಪಸ್ ಬಂದುಬಿಡುವುದಾಗಿ ತಿಳಿಸಿದ್ದ. ಕಾರು ಕೊಳ್ಳಲು ಹಣ ಉಳಿಸುತ್ತಿರುವುದಾಗಿಯೂ ತಿಳಿಸಿದ್ದ.

ಹೀಗೆ ಇಡೀ ಕುಟುಂಬ ಪವನ್‌ನ ಆಗಮನದ ನಿರೀಕ್ಷೆಯಲ್ಲಿತ್ತು. ಆದರೆ ವಿಧಿಯಾಟವೇ ಬೇರೆಯಾಗಿತ್ತು. ಇದಾದ ನಾಲ್ಕೈದು ದಿನಗಳಲ್ಲೇ ಅಮೆರಿಕದಲ್ಲೇ ಪವನ್ ಆತ್ಮಹತ್ಯೆ ಮಾಡಿಕೊಂಡನೆಂಬ ಸುದ್ದಿ ಬರಸಿಡಿಲಿನಂತೆ ಬಂದೆರಗಿದೆ. ಅವರ ಕಷ್ಟ ಅಷ್ಟಕ್ಕೇ ಮುಗಿಯುತ್ತಿಲ್ಲ. ತಮ್ಮ ಒಬ್ಬನೇ ಮುದ್ದಿನ ಮಗ ಸತ್ತು ಇಲ್ಲಿಗೆ ವಾರಗಳು ಕಳೆದಿದ್ದರೂ ಮಗನ ಶವವನ್ನಾದರೂ ನೋಡಲಾಗದ ದೌರ್ಭಾಗ್ಯ ಅವರದು. ಯಾಕೆಂದರೆ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಹೇಳಲಾಗಿರುವ ಈ ಯುವ ಟೆಕ್ಕಿಯ ಮೇಲೆ ಡ್ಯಾನಿಲೆ ಮೆಹಲ್ಮನ್ ಎಂಬ ಅಮೆರಿಕನ್ ಮಹಿಳೆಯೊಬ್ಬಳನ್ನು ಕೊಂದಿರುವ ಆರೋಪವಿದೆ. ಆದ್ದರಿಂದ ಅಮೆರಿಕದ ಸರ್ಕಾರಿ ಆಸ್ಪತ್ರೆಯೊಂದರ ಶವಾಗಾರದಲ್ಲಿರುವ ಹೆಪ್ಪುಗಟ್ಟುತ್ತಿರುವ ಪವನ್‌ನ ಶವಕ್ಕೆ ಅಲ್ಲಿನ ಪೊಲೀಸರಿಂದ ಇನ್ನೂ ಮುಕ್ತಿ ಸಿಕ್ಕಿಲ್ಲ.

ಇತ್ತ ಮಗನ ಶವದ ನಿರೀಕ್ಷೆಯಲ್ಲಿರುವ ಅಂಜಯ್ಯ ದಂಪತಿಗಳು ತಮ್ಮ ಮಗ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂಬುದನ್ನು ಸಾರಾಸಗಟಾಗಿ ನಿರಾಕರಿಸಿದ್ದಾರೆ. ತಮ್ಮ ಮಗ ಕೊಲೆ ಮಾಡುವುದಂತೂ ಸಾಧ್ಯವೇ ಇಲ್ಲವೆಂಬುದು ಅವರ ಖಚಿತ ಅಭಿಪ್ರಾಯ. ಅವರ ಪ್ರಕಾರ ಪವನ್ ಕಾರು ಕೊಳ್ಳಲೆಂದು ಉಳಿತಾಯ ಮಾಡಿದ್ದ ಹಣವನ್ನು ಲಪಟಾಯಿಸಲೆಂದು ಯಾರೋ ದುಷ್ಕರ್ಮಿಗಳು ಆತನನ್ನು ಕೊಲೆ ಮಾಡಿ ನಂತರ ಆತ್ಮಹತ್ಯೆಯೆಂಬಂತೆ ಬಿಂಬಿಸುತ್ತಿದ್ದಾರೆ ಎಂಬುದು ಅವರ ಆರೋಪ. ಹಾಗಾಗಿ ಸತ್ಯಾಂಶ ತಿಳಿಯಲು ಸೂಕ್ತ ತನಿಖೆಯಾಗಲಿ ಎಂದೂ ಆಗ್ರಹಪಡಿಸಿದ್ದಾರೆ.

ಹೀಗೆ ಪವನ್‌ನ ಆತ್ಮಹತ್ಯೆ ಪ್ರಕರಣ ಮತ್ತಷ್ಟು ಕಗ್ಗಂಟಾಗಿದೆ. ಈ ಇಬ್ಬರ ದಾರುಣ ಸಾವಿನ ಹಿಂದೆ ಡೇಟಿಂಗ್ ಎಂಬ ಪಾಶ್ಚಿಮಾತ್ಯ ಸಂಸ್ಕೃತಿಯೂ ಹೆಣೆದುಕೊಂಡಿದೆ. ಹಾಗಾಗಿ ಈ ಪ್ರಕರಣದ ಸತ್ಯಾಸತ್ಯತೆಯನ್ನು ಅರಿಯಲು ಈ ಘಟನೆಯ ಸುತ್ತಮುತ್ತಲ ವಾಸ್ತವಿಕ ಚಿತ್ರಣವನ್ನು ಪಡೆದುಕೊಳ್ಳುವುದು ಅತ್ಯಗತ್ಯ.

ಡೇಟಿಂಗ್ ಎಂಬುದು ಅಮೆರಿಕನ್ ಸಂಸ್ಕೃತಿಯ ಒಂದು ಭಾಗವೇ ಆಗಿ ಹೋಗಿದೆ. ಹದಿಹರೆಯದ ಮಕ್ಕಳು ಬಾಯ್‌ಫ್ರೆಂಡ್, ಗರ್ಲ್‌ಫ್ರೆಂಡ್, ಡೇಟಿಂಗ್ ಎಂದು ಸ್ವೇಚ್ಛೆಯಿಂದ ಸುತ್ತಾಡುವುದಕ್ಕೆ ಅವರ ಪೋಷಕರು ಮೂಕಸಾಕ್ಷಿಗಳಾಗುಳಿದಿದ್ದಾರೆ. ಕೊಲೆಯಾದ ಡೇನಿಯಲ್ ಎಂಬ ಸುಂದರ ಯುವತಿಯೂ ಸಹಾ ಅಂಥಾ ಸಂಸ್ಕೃತಿಯ ಉತ್ಪನ್ನವೇ ಆಗಿದ್ದಳು. ಫಿಲಡೆಲ್ಫಿಯಾದ ಶಾಲೆಯೊಂದರಲ್ಲಿ ಟೀಚರ್ ಆಗಿದ್ದ 26 ವರ್ಷ ವಯಸ್ಸಿನ ಡೇನಿಯಲ್‌ಳಿಗೆ 4 ವರ್ಷದ ಮಗನಿದ್ದಾನೆ. ಈ ಮಗುವಿಗೆ ಕಾರಣಕರ್ತನಾಗಿದ್ದ ಆಕೆಯ ಬಾಯ್‌ಫ್ರೆಂಡ್‌ನಿಂದ ಆಕೆ ಸದ್ಯ ದೂರವಾಗಿದ್ದಳು. ನಂತರ ಆಕೆ ಆನ್‌ಲೈನ್ ಡೇಟಿಂಗ್ ಸೈಟ್‌ಗಳ ಮೂಲಕ ಹೊಸ ಬಾಯ್‌ಫ್ರೆಂಡ್‌ಗಳನ್ನು ಅರಿಸಿಕೊಳ್ಳುತ್ತಿದ್ದಳು.

ಡೇನಿಯಲ್‌ಳ ಬಂಧುಗಳು ಹೇಳಿರುವ ಪ್ರಕಾರ ಇಂಥಾ ಆನ್‌ಲೈನ್ ಡೇಟಿಂಗ್ ಮೂಲಕ ಆಕೆಗೆ ಪವನ್‌ನ ಪರಿಚಯವಾಗಿತ್ತು, ಅದೇ ಅವರಿಬ್ಬರ ಬದುಕು ದುರಂತ ಅಂತ್ಯ ಕಾಣಲು ಕಾರಣವಾಯಿತು. ಡೇನಿಯಲ್ ಕೊಲೆಯ



ಸುತ್ತಮುತ್ತಣ ಚಿತ್ರಣ ಈ ಅಂಶವನ್ನು ದೃಢಪಡಿಸುತ್ತದೆ.

ಪ್ರವಾಸಿಗಳ ಅಚ್ಚುಮೆಚ್ಚಿನ ಡೆವೇಯ್ ಬೀಚ್‌ನಲ್ಲಿರುವ ಅಟ್ಲಾಂಟಿಕ್ ಓಷನ್ ಎಂಬ ರೆಸಾರ್ಟ್‌ನ ರೂಮೊಂದರಲ್ಲಿ ಜೂನ್ 18ರ ಬೆಳಿಗ್ಗೆ 10.45ರ ವೇಳೆಗೆ ಡೇನಿಯಲ್‌ಳ ಶವ ಪತ್ತೆಯಾಯಿತು. ದೇಹವು ಹತ್ತಾರು ಕಡೆ ಚಾಕುವಿನಿಂದ ಇರಿದ ಗಾಯಗಳಿದ್ದು ರಕ್ತಸಿಕ್ತ ಸ್ಥಿತಿಯಲ್ಲಿತ್ತು. ಶವವನ್ನು ಮೊದಲು ನೋಡಿದ ರೂಮ್ ಕ್ಲೀನ್ ಕೆಲಸದಾಕೆಯೇ ಪೊಲೀಸರಿಗೆ ದೂರು ಕೊಟ್ಟಿದ್ದಳು. ಈ ಕೊಲೆಯ ಸುದ್ದಿ ಇಡೀ ಡೆಲಾವೇರ್ ರಾಜ್ಯದಾದ್ಯಂತ ತೀವ್ರ ಸಂಚಲನವನ್ನುಂಟು ಮಾಡಿತ್ತು, ಯಾಕೆಂದರೆ ಡೆವೇಯ್ ಬೀಚ್‌ನ ಇತಿಹಾಸದಲ್ಲಿ ನಡೆದ ಪ್ರಪ್ರಥಮ ಕೊಲೆ ಇದಾಗಿತ್ತು.

ಕೂಡಲೇ ಸ್ಥಳಕ್ಕೆ ಧಾವಿಸಿ ತನಿಖೆ ಕೈಗೊಂಡ ಪೊಲೀಸರು ಕೊಲೆಯಾದ ಹಿಂದಿನ ರಾತ್ರಿ ಡೇನಿಯಲ್ ಜೊತೆಗೆ ಯುವಕನೊಬ್ಬ ಅದೇ ರೂಮಿನಲ್ಲಿ ತಂಗಿದ್ದ ಎಂಬ ಸಂಗತಿಯನ್ನು ಕಂಡುಕೊಂಡರು. ಅಂದಿನ ರಾತ್ರಿ ಸುಮಾರು 9 ರ ವೇಳೆಗೆ ಅಲ್ಲೇ ಸಮೀಪದಲ್ಲಿದ್ದ ಬಾರ್‌ನಲ್ಲಿ ಪವನ್ ಮತ್ತು ಡೇನಿಯಲ್ ತಮ್ಮ ಜೊತೆ ಡ್ರಿಂಕ್ಸ್‌ನಲ್ಲಿ ಕಂಪನಿ ನೀಡಿದ್ದರು ಎಂದು ಮತ್ತೊಂದು ಪ್ರವಾಸಿ ದಂಪತಿಗಳು ಸಾಕ್ಷ್ಯ ನುಡಿದಿದ್ದಾರೆ. ಆ ಸಂದರ್ಭದಲ್ಲಿ ಅವರು ಗಮನಿಸಿದ ಕೆಲವು ಅಂಶಗಳು ಕುತೂಹಲಕರವಾಗಿದ್ದವು. "ಜೊತೆಗಿರುವ ಯುವಕ ನಿನ್ನ ಬಾಯ್‌ಫ್ರೆಂಡಾ?" ಎಂದು ಕೇಳಿದ ಪ್ರಶ್ನೆಗೆ "ಇಲ್ಲಾ, ನನಗೆ ಆತನ ಮೇಲೆ ಅಂಥಾ ಆಸಕ್ತಿಯಿಲ್ಲ" ಎಂದು ಡೇನಿಯಲ್ ಉತ್ತರಿಸಿದ್ದಳು. "ಮತ್ತೆ ಡೇಟಿಂಗ್‌ಗಾಗಿ ಬಂದಿದ್ದೀರಾ?" ಎಂದು ಕೇಳಿದರೆ "ಅಂಥದ್ದೇನಿಲ್ಲ, ನನಗೆ ಬೆಲೆಬಾಳುವ ಗಿಫ್ಟ್‌ಗಳನ್ನು ಕೊಡಿಸುವುದೆಂದರೆ ಆತನಿಗೆ ಬಹಳ ಇಷ್ಟ, ಅದಕ್ಕೆ ಜೊತೆಯಲ್ಲಿ ಸುತ್ತಾಡುತ್ತಿದ್ದೇನೆ" ಎಂದ ಡೇನಿಯಲ್ ಆತ ಕೊಡಿಸಿದ ನೆಕ್‌ಲೇಸ್, ಬ್ರೇಸ್‌ಲೆಟ್ ಮುಂತಾದ ವಸ್ತುಗಳನ್ನು ಅವರಿಗೆ ತೋರಿಸಿದಳೆಂದು ಆ ದಂಪತಿಗಳು ತಿಳಿಸಿದ್ದಾರೆ. ಅಂದಹಾಗೆ 2 ಲಕ್ಷಕ್ಕೂ ಹೆಚ್ಚು ಸಂಬಳ ಪಡೆಯುತ್ತಿದ್ದ ಪವನ್ ಮನೆಗೆ ಕಳಿಸುತ್ತಿದ್ದದ್ದು ಕೇವಲ 10 ಸಾವಿರ ಮಾತ್ರ.

ಮಾರನೇ ದಿನ ಬೆಳಿಗ್ಗೆ 7 ರ ಸಮಯದಲ್ಲಿ ಹತ್ತಿರದ ಮಾಲ್‌ಗೆ ಬಂದ ಪವನ್, ತನ್ನ ಕಾರು ರಸ್ತೆಯಲ್ಲಿ ಕೆಟ್ಟುನಿಂತಿದೆ, ಆದ್ದರಿಂದ ಯಾವುದಾದರೂ ಟ್ಯಾಕ್ಸಿಯವರ ಫೋನ್ ನಂಬರ್ ಕೊಡಿ ಎಂದು ಕೇಳಿದ್ದಾಗಿ ಆ ಮಾಲ್‌ನ ಸಿಬ್ಬಂದಿ ತಿಳಿಸಿದ್ದಾರೆ. ಹಾಗೆ ಬಾಡಿಗೆ ಟ್ಯಾಕ್ಸಿಯಲ್ಲಿ ಪ್ರಯಾಣಿಸುವಾಗ ಆತ ಬಹಳ ಆತಂಕದಲ್ಲಿದ್ದ ಹಾಗ… ಪ್ರತಿ ಎರಡು ಮೂರು ನಿಮಿಷಕ್ಕೊಮ್ಮೆ "ಇನ್ನೂ ಎಷ… ಹೊತ್ತು ಬೇಕು?" ಎಂದು ಪ್ರಶ್ನಿಸುತ್ತಿದ್ದ ಎಂದು ಅಲೆನ… ಎಂಬ ಟ್ಯಾಕ್ಸಿ ಡ್ರೈವರ್‌ನ ಹೇಳಿಕೆ.

ಹೀಗೆ ಡೆವೇಯ್ ಬೀಚ್‌ನಿಂದ ದೂರದ ಬೆಲ್ಲವಿ… ಎಂಬ ಪಟ್ಟಣಕ್ಕೆ ಬಂದ ಪವನ್ ಜೂನ್ 18ರ ರಾ… ಲಾಡ್ಜ್ ಒಂದರಲ್ಲಿ ಮರುದಿನ ಖಾಲಿ ಮಾಡುವುದಾ… ಹೇಳಿ ರೂಮ್ ಪಡೆದುಕೊಂಡಿದ್ದಾನೆ. ಆದ… ಮಧ್ಯಾಹ್ನವಾದರೂ ಆತ ರೂಮ್ ಖಾಲಿ ಮಾಡದ… ಹೋದಾಗ ಆ ಬಗ್ಗೆ ವಿಚಾರಿಸಲೆಂದು ಹೋಟೆಲ್… ಕೆಲಸಗಾರನೊಬ್ಬ ಆ ರೂಮಿಗೆ ಬಂದಿದ್ದಾನೆ. ಆದರೆ ರೂಮ… ಒಳಗಡೆಯಿಂದ ಲಾಕ್ ಆಗಿದ್ದು ಯಾವುದೇ ಪ್ರತಿಕ್ರಿಯೆ… ಬಾರದೇ ಇದ್ದಾಗ ಆತಂಕಗೊಂಡ ಲಾಡ್ಜ್‌ನವರ… ಪೊಲೀಸರಿಗೆ ದೂರು ಕೊಟ್ಟಿದ್ದಾರೆ. ಪೊಲೀಸರು ಬಾಗಿಲ… ಹೊಡೆದು ಒಳಪ್ರವೇಶಿಸುವ ವೇಳೆಗಾಗಲೇ ಪವನ್… ಪ್ರಾಣಪಕ್ಷಿ ಹಾರಿಹೋಗಿತ್ತು. ಪ್ರಾಥಮಿಕ ಪರೀಕ್ಷೆ ನಡೆಸಿ… ವೈದ್ಯರು ಅತಿಯಾದ ಡ್ರಗ್ಸ್ ಸೇವನೆಯಿಂದಾಗಿ ಸಾ… ಸಂಭವಿಸಿರಬಹುದು ಎಂದು ವರದಿ ನೀಡಿದ್ದಾರ… ಪೋಸ್ಟ್‌ಮಾರ್ಟಂ ವರದಿ ಬರಲು ಇನ್… ಒಂದು ವಾರ ಬೇಕಾಗಬಹುದು. ಆ ನಂತ… ಮತ್ತಷ್ಟು ಖಚಿತವಾದ ವರದಿ ಲಭ್ಯವಾಗು… ಸಾಧ್ಯತೆಯಿದೆ. ಪೊಲೀಸರು ಇದನ್ನೊಂದ… ಆತ್ಮಹತ್ಯೆಯ ಪ್ರಕರಣವೆಂದು ತೀರ್ಮಾನಿ… ಕೇಸು ದಾಖಲಿಸಿದ್ದಾರೆ.

ಇತ್ತ ಡೇನಿಯಲ್ ಕೊಲೆಯಾದ 18… ಸಂಜೆಯೇ ಸ್ಥಳೀಯ ಪೊಲೀಸರ… ಪವನ್‌ಕುಮಾರ್ ಈ ಕೊಲೆಯ… ಆರೋಪಿಯೆಂದು ಘೋಷಿಸಿ ಮಾಲ್ ಒಂದ… ಸಿಸಿ ಕ್ಯಾಮರಾದಲ್ಲಿ ಸೆರೆಹಿಡಿಯಲಾಗಿದ್ದ ಆತ… ಫೋಟೋಗಳನ್ನು ಬಿಡುಗಡೆ ಮಾಡಿದ್ದರು… ಅಮೆರಿಕನ್ ಸ್ಥಳೀಯ ನ್ಯಾಯಾಲಯ ಪವನ… ಬಂಧನಕ್ಕೆ ವಾರಂಟ್ ಹೊರಡಿಸಿತ್ತು. ಮರುದಿ… ಅಂದರೆ ಜೂನ್ 19ರಂದು ಬೆಳಿಗ್ಗೆ ಈ ಸುದ್ದಿ ಪತ್ರಿಕೆಗಳಲ… ಪ್ರಕಟವಾಗಿತ್ತು. ಇಂಥಾ ಸಂದಿಗ್ಧ ಸನ್ನಿವೇಶದ… ತಪ್ಪಿಸಿಕೊಳ್ಳಲು ಅನ್ಯಮಾರ್ಗ ತಿಳಿಯದೆ ಆತ ಆತ್ಮಹ… ಮಾಡಿಕೊಂಡಿದ್ದಾನೆ ಎಂದು ನಂಬಲು ಒಂದಷ… ಆಧಾರಗಳಿವೆ. ಆದರೆ ಆತ ಸಾಯುವ ಮುನ್ನ ಸೂಸೈಡ… ನೋಟ್ ಬರೆದಿದ್ದ ಎಂದು ಹೇಳಿರುವ ಪೊಲೀಸ… ಅದರಲ್ಲೇನಿತ್ತು ಎಂದು ಒಮ್ಮೆಯಾದರೂ ಪ್ರಸ್ತಾಪಿಸಿಲ್ಲ… ರುವುದು ಕೆಲವು ಅನುಮಾನಗಳಿಗೆ ಎಡಿಮಾಕೊಡುತ್ತ… ಅದೇನೇ ಇದ್ದರೂ ಅಮೆರಿಕದ ಡೇಟಿಂಗ್ ಸಂಸ್ಕೃತಿ … ಎರಡು ಜೀವಗಳನ್ನು ಬಲಿ ತೆಗೆದುಕೊಂಡಿದೆ ಎಂದ… ಯಾವುದೇ ಅನುಮಾನವಿಲ್ಲದೆ ಹೇಳಬಹುದು.

ಅಮೆರಿಕದಲ್ಲಿ "ಐ ಲವ್ ಯೂ ಸೋ ಮಚ್… ಅಂತ ಹುಡುಗನೋ ಹುಡುಗಿಯೋ ಹೇಳಿದರೆ ಅದ… ಮುಂದಿನ ಡೇಟಿಂಗ್‌ವರೆಗೂ ಉಳಿಯುತ್ತೆ ಎಂದ… ಖಚಿತವಾಗಿ ಹೇಳಲಾಗುವುದಿಲ್ಲ, ಅಲ್ಲಿ ಇವೆಲ್ಲಾ ಮಾಮೂ… ಅತ್ಯಂತ ಸಹಜವಾದ ನಡವಳಿಕೆಯಷ್ಟೆ. ಆದರೆ ಭಾರತ… ಅದರಲ್ಲೂ ಪಾವಗಡದಂಥಾ ಗ್ರಾಮೀಣ ಸಂಸ್ಕೃತಿಯ… ಬೆಳೆದ ಹುಡುಗನಿಗೆ ಇಂಥಾ ಸಂಸ್ಕೃತಿಯನ… ಜೀರ್ಣಿಸಿಕೊಳ್ಳುವುದು ಬಹುಶಃ ಅಷ್ಟು ಸುಲಭ… ಕೆಲಸವಾಗಿರಲಿಲ್ಲ. ಹೀಗಾಗಿ ಈ ಡೇಟಿಂಗ್ ಜಾಲಕ್ಕೆ ಬಿ… ತನ್ನ ಜೀವನವನ್ನೇ ಅಂತ್ಯಗೊಳಿಸಿಕೊಂಡಿದ್ದಾನೆ. ಆತನ ಬ… ಭಾರೀ ನಿರೀಕ್ಷೆಯಿಟ್ಟುಕೊಂಡಿದ್ದ ವೃದ್ಧ ತಂದೆತಾಯಿಗಳ… ಕಣ್ಣೀರನ್ನಷ್ಟೆ ಉಳಿಸಿಹೋಗಿದ್ದಾನೆ. ಹಾಗೆಯೆ ಕೊಲೆಯಾ… ಡೇನಿಯಲ್‌ಳ 4 ವರ್ಷದ ಕೂಸು ಜೂನ್ 17 ರಂ… ಫಾದರ್ಸ್ ಡೇ ಆಚರಿಸಲು ತಂದೆಯ ಜೊತೆ ಹೋಗಿತ… ಮರುದಿನ ಅದು ತನ್ನ ತಾಯಿಯನ್ನು ಸೇರಿಕೊಳ್ಳಬೇಕಿತ… ಆದರೆ ಆ ಕೂಸಿನ ದುರಾದೃಷ್ಟ, ಅದು ಶಾಶ್ವತವಾ… ಅನಾಥವಾಗಿ ಹೋಗಿದೆ.

ಈ ಡೇನಿಯಲ್ ಸುಂದರಿ ಮಾತ್ರವಲ್ಲ, ಬಹ… ಪ್ರತಿಭಾವಂತೆಯೆಂದು ಆಕೆಯ ಬಂಧುಗಳು ಹೇಳಿದ್ದಾ… ಹಾಗೆಯೇ ಎಲ್ಲಾ ಪರೀಕ್ಷೆಗಳಲ್ಲೂ ಡಿಸ್ಟಿಂಕ್ಷನ್ ಪಡೆ… ಪಾಸಾಗಿದ್ದ ಪವನ್ ಜೀವನದ ಪರೀಕ್ಷೆಯಲ್ಲಿ ದಾರುಣವಾ… ಫೇಲಾಗಿದ್ದು ಒಂದು ದುರಂತವೇ ಸರಿ. ಪಾಶ್ಚಿಮಾತ್ಯರ… ಆರಾಧಿಸುತ್ತಿರುವ ನಮ್ಮ ಯುವ ಪೀಳಿಗೆ ಇಂಥಾ ದುರ… ಗಳನ್ನು ನೋಡಿಯಾದರೂ ಪಾಠ ಕಲಿಯುವಂತಾಗಲಿ…

• ದೊಡ್ಡಿಪಾಳ್ಯ ನರಸಿಂಹಮೂರ್ತಿ

ಕಂಪನಿಯ ಕೀಳುಮಟ್ಟದ ನಡವಳಿಕೆ

ಕಾಗ್ನಿಜೆಂಟ್ ಟೆಕ್ನಾಲಜೀಸ್ ಎಂದರೆ ಸಾಫ್ಟ್‌ವೇರ್ ಕ್ಷೇತ್ರದಲ್ಲಿ ಬಹಳ ದೊಡ್ಡ ಹೆಸರು. ಆ ಕಂಪನಿಯಲ್ಲಿ ಲಕ್ಷಾಂತರ ಟೆಕ್ಕಿಗಳು ಕೆಲಸ ಮಾಡುತ್ತಿದ್ದಾರೆ. ಇಂಥಾ ಕಂಪನಿ ತನ್ನ ಉದ್ಯೋಗಿಯೊಬ್ಬ ಹೀಗೆ ದುರಂತ ಸಾವಿಗೀಡಾದಾಗ ನಡೆದುಕೊಂಡ ರೀತಿ ಮಾತ್ರ ಅತ್ಯಂತ ಹೇಯವಾದುದು.

ಜೂನ್ 20ರಂದು ಪ್ರವೀಣ್ ಜೋಷಿ ಎಂಬ ಕಂಪನಿಯ ಅಧಿಕಾರಿ ಪವನ್ ಮನೆಗೆ ಫೋನ್ ಮಾಡಿ ನಿಮ್ಮ ಮಗ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂಬ ಸುದ್ದಿ ತಿಳಿಸಿದ. ಈ ಸುದ್ದಿಯನ್ನು ನಂಬದ ಪವನ್‌ನ ಅಕ್ಕ ಗುಣಶೀಲ ಯಾರೋ ಫೂಲ್ ಮಾಡ್ತಾ ಇರಬಹುದು ಎಂದು ಭಾವಿಸಿದಳು. ಫೋನ್ ಮಾಡಿದ್ದ ವ್ಯಕ್ತಿ ಮತ್ತೆ ಅದೇ ವಿಷಯವನ್ನು ಯಾಂತ್ರಿಕವಾಗಿ ದೃಢಪಡಿಸಿ ಫೋನ್ ಕಟ್ ಮಾಡಿಯೇಬಿಟ್ಟ. ಏನು ಎತ್ತ ಅಂತ ಕೇಳುತ್ತಿದ್ದ ಪ್ರಶ್ನೆಗಳನ್ನು ಕೇಳಿಸಿಕೊಳ್ಳುವ ಗೋಜಿಗೂ ಹೋಗಲಿಲ್ಲ.

Cognizant Technology Solutions

ಗಾಬರಿಗೊಂಡ ಕುಟುಂಬದವರು ಕಾಗ್ನಿಜೆಂಟ್ ಕಚೇರಿಗೆ ಹೋದರು. ಅಲ್ಲಿ ಶಂಕರ್ ಎಂಬ ಮತ್ತೊಬ್ಬ ಆಸಾಮಿ ತಾವು ಏನೂ ಮಾಡಲಾಗುವುದಿಲ್ಲ, ಡೆಡ್‌ಬಾಡಿ ತರಲಿಕ್ಕೆ ಫ್ಲೈಟ್‌ಗೆ ಬಹಳ ಖರ್ಚಾಗುತ್ತೆ, ಆದ್ದರಿಂದ ವಿ ಆರ್ ಹೆಲ್ಪ್‌ಲೆಸ್ ಎಂದುಬಿಟ್ಟರು. ಯಾವ ಕಾರಣಕ್ಕೂ ಮೀಡಿಯಾಗೆ ಹೋಗಬಾರದೆಂದು ಎಚ್ಚರಿಕೆಯನ್ನಷ್ಟೇ ಕೊಟ್ಟು ಕಳಿಸಿದ. ಬೇರೆ ದಾರಿ ಕಾಣದೆ ಮನೆಯವರು ಮಾಧ್ಯಮದ ಮುಂದೆ ತಮ್ಮಗೋಳು ತೋಡಿಕೊಂಡರು. ಹೇಗೋ ಮಾಡಿ ವಿದೇಶಾಂಗ ಸಚಿವಾಲಯಕ್ಕೂ ದೂರು ಸಲ್ಲಿಸಿ ತಮ್ಮ ಮಗನ ಶವವನ್ನು ತರಿಸುವಂತೆ ಅಲವತ್ತುಕೊಂಡರು.


ಇದೆಲ್ಲಾ ಆದನಂತರ ಕಾಗ್ನಿಜೆಂಟ್ ಕಂಪನಿಯವರು ಪ್ಲೇಟ್ ಚೇಂಜ್ ಮಾಡಿದರು. ಅಮೆರಿಕ ಅಧಿಕಾರಿಗಳ ಜೊತೆ ನಿರಂತರ ಸಂಪರ್ಕದಲ್ಲಿದ್ದೇವೆ, ನಮ್ಮ ಕಡೆಯಿಂದ ಸಾಧ್ಯವಿರುವ ಎಲ್ಲ ಪ್ರಯತ್ನ ಮಾಡುತ್ತಿದ್ದೇವೆ ಎನ್ನುತ್ತಾ ಮರ್ಯಾದೆ ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ.

ತಮ್ಮ ಮಗನನ್ನು ಕಳೆದುಕೊಂಡ ವೃದ್ಧ ತಂದೆತಾಯಿಗಳ ಜೊತೆ ಹೀಗೆ ಅಮಾನವೀಯವಾಗಿ ನಡೆದುಕೊಂಡ ಅಧಿಕಾರಿಗಳ ಹುದ್ದೆ ಏನು ಗೊತ್ತೆ? ಎಚ್‌ಆರ್ ಆಫೀಸರ್ ಅರ್ಥಾತ್ ಮಾನವ ಸಂಪನ್ಮೂಲ ಅಧಿಕಾರಿ. ತಮ್ಮ ಸಿಬ್ಬಂದಿಯೊಬ್ಬನ ಶವವನ್ನು ವಾಪಸ್ ತರಿಸಲು ಇಷ್ಟೊಂದು ಬೇಜವಾಬ್ದಾರಿ ತೋರಿದ ಇವರಿಂದ ಮಾನವ ಸಂಪನ್ಮೂಲ ಉದ್ಧಾರವಾದಂತೆಯೆ!!

ಮೀಡಿಯಾ-ವಕೀಲರ ನಡುವೆ ಸಾಮರಸ್ಯ ಉಳಿಯಲಿ

ಸುವರ್ಣ ಟೀವಿ ಚಾನಲ್‌ನ ಮುಖ್ಯಸ್ಥ ಹಾಗೂ ಕನ್ನಡ ದಿನಪತ್ರಿಕೆಯ ಸಂಪಾದಕ ವಿಶ್ವೇಶ್ವರ ಭಟ್ ಮೊನ್ನೆ ...ನ್ 27 ರಂದು ಒಂದಿಡೀ ದಿನ ನೂರಾರು ವಕೀಲರ ...ರು ಇದ್ದು ಬಂದಿದ್ದಾರೆ. ಬೆಂಗಳೂರು ವಿವಿಯ ...ಟ್‌ಮೆಂಬರ್ ಆಗಿದ್ದ ರಂಗನಾಥ್ ಹಾಕಿರುವ ಮಾನನಷ್ಟ ...ಕದ್ದಮೆ ಒಂದಕ್ಕೆ ಸಂಬಂಧಿಸಿದಂತೆ ಭಟ್ಟರ ವಿರುದ್ಧ ...ಗಳೂರಿನ ಮ್ಯಾಜಿಸ್ಟ್ರೇಟ್ ಕೋರ್ಟ್‌ನಿಂದ ವಾರೆಂಟ್ ...ಯಾಗಿತ್ತು. ಹಾಗಾಗಿ ವಿಭಟ್ ಅಂದು ಕೋರ್ಟ್‌ಗೆ ...ಮ್ಮ ಹಾಜರಾಗುವುದು ಅನಿವಾರ್ಯ ವಾಗಿತ್ತು. ಈ ...ಣದಿಂದ ಮೊನ್ನೆ ಕೋರ್ಟ್‌ಗೆ ಬಂದ ವಿಶ್ವೇಶ್ವರ ...ರಿಗೆ ವಕೀಲರ ಸಮುದಾಯದೊಂದಿಗೆ ...ವಾರ್ಯವಾಗಿ ಮುಖಾಮುಖಿಯಾಗಬೇಕಾಗಿ ಬಂತು.

ಈಗ್ಗೆ ನಾಲ್ಕು ತಿಂಗಳ ಹಿಂದೆ ನಡೆದಿದ್ದ ...ಡಿಯಾ-ಪೊಲೀಸ್ ಹಾಗೂ ವಕೀಲರ ಜಟಾಪಟಿಯಲ್ಲಿ ...ಮವಾಗಿ ಮೀಡಿಯಾ ಹಾಗೂ ವಕೀಲ ಸಮುದಾಯದ ...ವಿನ ವೈಮನಸ್ಸು ಬೆಳೆದು ನಿಂತಿದೆ. ಅನೇಕ ವಕೀಲರಿಗೆ ...ರಣವಾಗಿಯೇ ಕೆಲವು ಮಾಧ್ಯಮಗಳ ಬಗ್ಗೆ ಬೇಸರ ...ಟಾಗಿ, ಸಿಟ್ಟು ತರಿಸಿರುವುದು ನಿಜ. ಬಹಳ ಮುಖ್ಯವಾಗಿ ...ಮ ಬೆಂಗಳೂರು ಪೊಲೀಸರು ವಕೀಲರ ವಿರುದ್ಧ ...ದ ಕೆಟ್ಟ ದೌರ್ಜನ್ಯವು ಖಂಡನಾರ್ಹವಾಗಿತ್ತು. ಆದರೆ ...ರ್ಣ ಹಾಗೂ ಪಬ್ಲಿಕ್ ಟಿವಿ ಚಾನಲ್‌ಗಳು ಪೊಲೀಸರ ...ರ್ಜನ್ಯವನ್ನು ಮರೆಮಾಚಿ, ವಕೀಲರ ವಿರುದ್ಧ ಸತ್ಯಕ್ಕೆ



ದೂರವಾಗಿದ್ದ ಕೆಲವು ಅತಿರಂಜಕ ವರದಿಗಳನ್ನು ಪ್ರಸಾರ ಮಾಡಿ ಪರಿಸ್ಥಿತಿ ಇನ್ನಷ್ಟು ಕೆಡಲು ಕಾರಣವಾಗಿದ್ದವು. ಅದಕ್ಕೂ ಮುನ್ನ ಗಣಿ ಹಗರಣದ ಜನಾರ್ದನ ರೆಡ್ಡಿಯನ್ನು ಕೋರ್ಟ್‌ಗೆ ಕರೆ ತಂದಾಗ ಮಾಧ್ಯಮದವರ ಮೇಲೆ ಕೆಲವು ಯುವ ವಕೀಲರು ದುಡುಕಿನಿಂದ ಕೈ ಮಾಡಿದರೆಂಬ ಸಂಗತಿಯೇನು ಸಮರ್ಥನೀಯವಾಗಿರಲಿಲ್ಲ. ಆದರೂ ಆ ಘಟನೆಗೆ ಸಮಸ್ತ ವಕೀಲ ಸಮುದಾಯವನ್ನೇ ಹೊಣೆ ಮಾಡುವ ಜರೂರತ್ತು ಈ ಮೀಡಿಯಾ ಚಾನಲ್‌ಗಳಿಗೆ ಬೇಕಿರಲಿಲ್ಲ.

ಈ ತರದ ದುರದೃಷ್ಟಕರ ಬೆಳವಣಿಗೆಗಳಿಗೆ ಪ್ರಧಾನ ಕಾರಣರಾಗಿದ್ದ ಪೊಲೀಸರ ಪಾತ್ರದ ವಿಚಾರವು ಬದಿಗೆ ಸರಿದು ಕೊನೆಗದು ಮೀಡಿಯಾ V/s ವಕೀಲರೆಂಬ ರೂಪ ತಾಳಿತು. ಪರಸ್ಪರರ ವಿರುದ್ಧ ಪ್ರತಿಭಟನೆ, ಮೆರವಣಿಗೆಗಳೂ ಆಗಿವೆ. ಈಗಲೂ ಆ ಕಹಿ ಭಾವನೆ ಅನೇಕರಲ್ಲಿ ಉಳಿದೇ ಇದೆ.

ರಾಜ್ಯ ಹೈಕೋರ್ಟ್ ಆ ಪ್ರಕರಣ ಕುರಿತಂತೆ ಸಮಗ್ರ ತನಿಖೆ ಹಾಗೂ ವಿಚಾರಣೆಗೆ ಈಗ ಕ್ರಮ ತೆಗೆದುಕೊಳ್ಳುತ್ತಿದೆ.

ಈ ಸಂಕೀರ್ಣ ಸಮಯದಲ್ಲಿ ವಿಶ್ವೇಶ್ವರ ಭಟ್ ಕೇಸ್ ಒಂದಕ್ಕೆ ಸಂಬಂಧಿಸಿದಂತೆ ಕೋರ್ಟ್‌ಗೆ ಹಾಜರಾದಾಗ ನೂರಾರು ವಕೀಲರ ಎದುರು ಹಾದುಹೋಗಿ ಬರುವಾಗ ಅಲ್ಲಿ ಏನಾಗುವುದೋ ಎಂಬ ಸಣ್ಣ ಆತಂಕ ಪೊಲೀಸರೂ ಸೇರಿದಂತೆ ಕೆಲವರಲ್ಲಿದ್ದದು ನಿಜ.

ಆದರೆ ಅಂತಹ ಅಹಿತಕರ ಘಟನೆಗಳೇನೂ ನಡೆದಿಲ್ಲ.

ವಿಭಟ್‌ರಿಗೆ ವಾರೆಂಟ್ ಜಾರಿಯಾಗಿದ್ದ ಕಾರಣ ಕೋರ್ಟ್ ಅವರನ್ನು ಮೂರುವರೆ ಗಂಟೆಗಳ ಕಾಲ ಹಲಸೂರು ಗೇಟ್ ಪೊಲೀಸರ ವಶಕ್ಕೆ ನೀಡಿ ನಂತರ ನಿಯಮಿತವಾಗಿ ಕೋರ್ಟ್‌ಗೆ ಹಾಜರಾಗದಿದ್ದ ಕಾರಣಕ್ಕೆ ಕೊಂಚ ಫೈನ್ ಹಾಕಿ ಜಾಮೀನು ನೀಡಿ ಕಳುಹಿಸಿದೆ.

ಬೆಳಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ಕೋರ್ಟ್‌ನಲ್ಲಿದ್ದ ವಿಭಟ್‌ರನ್ನು ಕೆಲ ವಕೀಲರು ದೂಷಿಸಿ, ಕಿಚಾಯಿಸಿದರಾದರೂ ಯಾರೂ ಸಂಯಮ ಕಳೆದುಕೊಳ್ಳಲಿಲ್ಲ. ಅಂದು ವಿಭಟ್‌ರ ಜೊತೆಗಿದ್ದವರ ಸಂಖ್ಯೆಗೆ ಹೋಲಿಸಿದರೆ ಅಲ್ಲಿ ಸೇರಿದ್ದ ವಕೀಲರ ಸಂಖ್ಯೆಯೇ ದೊಡ್ಡದಾಗಿದ್ದರೂ ಸಹ, ಕೆಲವು ವಕೀಲೇತರ ವ್ಯಕ್ತಿಗಳು ಪ್ರಚೋದಿಸಲು ಯತ್ನಿಸಿದರೂ ಸಹ ಒಟ್ಟಾರೆ ವಕೀಲರ ಸಮುದಾಯ ಹೊಣೆಗಾರಿಕೆಯಿಂದಲೂ, ಸಂಯಮ ಹಾಗೂ ಘನತೆಯಿಂದಲೂ ವರ್ತಿಸಿದೆ.

ವಕೀಲರಾಗಲಿ ಅಥವಾ ಮೀಡಿಯಾದವರಾಗಲಿ ಪರಸ್ಪರ ಎದುರುಗೊಂಡಾಗ ಸಾಮರಸ್ಯದಿಂದ ವರ್ತಿಸುವ ವಾತಾವರಣ ಬೇಗನೆ ಮೂಡಲಿ.

ವಕೀಲರಿಗೆ ಅವರದ್ದೇ ಆದ ವೃತ್ತಿಧರ್ಮವಿದೆ, ಹಾಗೆಯೇ ಮಾಧ್ಯಮದವರಿಗೂ ಅವರದ್ದೇ ಆದ ವೃತ್ತಿ ಧರ್ಮವಿದೆ. ಇವೆರಡೂ ಸಮುದಾಯಗಳಿಗೆ ಅವರದ್ದೇ ಆದ ಹೊಣೆಗಾರಿಕೆ ಹಾಗೂ ಚೌಕಟ್ಟುಗಳೂ ಇವೆ.

ಈ ಸಮುದಾಯಗಳ ನಡುವಿನ ಬೇಸರ, ಅಸಹನೆಗಳು, ಬೇಗನೆ ಕರಗಿ ಹೋಗಲಿ.

-ಲಂಕೇಶ್ ಬಳಗ

▶4 ಹೆಣ ಬಿದ್ದ ಕತೆ

...ಟೋ ಚಾಲಕರು, ಟ್ಯಾಕ್ಸಿಯವರೆಲ್ಲ ಈ ಬಗ್ಗೆ ಆಶ್ರಮದ ...ಕ್ಯುರಿಟಿಯವರಿಗೆ ತಿಳಿಸಿದ್ದಾರೆ. ಸೆಕ್ಯೂರಿಟಿ ಸಿಬ್ಬಂದಿ ಮತ್ತು ...ವ್ಯವಸ್ಥಾಪಕರು ತಕ್ಷಣವೇ ಬಂದು ನೋಡಿದ್ದಾರೆ. ಅದೇನು ... ಹಾಕಿದರೋ ಕೆರೆಯ ಸುತ್ತ ನೆರೆದಿದ್ದ ಜನರನ್ನುದ್ದೇಶಿಸಿ, ...ದಲೇ ನಿರ್ಧರಿಸಿ ಬಂದಿದ್ದವರಂತೆ; 'ಈಕೆಗೂ ನಮಗೂ ...ಬಂಧವಿಲ್ಲ, ಈಕೆ ಆಶ್ರಮದವಳಲ್ಲ, ಈಕೆ ಯಾರೋ ...ಗೆ ಗೊತ್ತೇ ಇಲ್ಲ' ಎಂದು ಜಾಗ ಖಾಲಿ ಮಾಡಿಬಿಟ್ಟರು. ... ಹಾಗೊಮ್ಮೆ ಆಶ್ರಮದವಳಲ್ಲದೇ ಹೋಗಿದ್ದರೂ ...ಬಿದ್ದದ್ದು ಆಶ್ರಮದ ಆವರಣದಲ್ಲಾದ್ದರಿಂದ ಬಿದ್ದ ಹೆಣದ ... ಕನಿಷ್ಠ ಕಾಳಜಿಯನ್ನಾದರೂ ತೋರಬೇಕಿತ್ತು. ...ಲೀಸರಿಗೆ ಮಾಹಿತಿಯನ್ನಾದರೂ ಕೊಡಬೇಕಿತ್ತು. ...ವ್ಯಾವುದನ್ನೂ ಮಾಡದೆ ಹೆಣ ನೋಡುತ್ತಿದ್ದಂತೆಯೇ ... ಖಾಲಿ ಮಾಡಿದ ಆಶ್ರಮದ ಸಿಬ್ಬಂದಿಯ ...ರ್ತನೆಯೇ ವಿಚಿತ್ರವಾಗಿತ್ತು. ಅಲ್ಲಿಗೆ ಇದು ...ಶಂಕರನ ಆಶ್ರಮದ ಪಾಪದ ಫಲವೆಂದೇ ...ರಿಸಿದ ಜನ ಪೊಲೀಸರಿಗೆ ಫೋನ್ ...ಡಿದ್ದಾರೆ. ಈ ಪೈಕಿ ಕುಮಾರ್ ಎಂಬ ಟ್ಯಾಕ್ಸಿ ...ಕ ನೇರವಾಗಿ ತಲಘಟ್ಟಪುರ ಪೊಲೀಸ್ ಠಾಣೆಗೆ ...ಮ ಲಿಖಿತ ದೂರು ಕೊಟ್ಟಿದ್ದಾನೆ.

...ಉಲ್ಟಾ ಹೊಡೆದ ಪೊಲೀಸ್


...ಸ್ಥಳಕ್ಕೆ ಬಂದ ತಲಘಟ್ಟಪುರ ಠಾಣೆಯ ಎಸ್.ಐ. ...ಕುಮಾರ್ ವರ್ತನೆ ಅದೆಷ್ಟು ...ಶ್ಚರ್ಯಾಸ್ಪದವಾಗಿತ್ತೆಂದರೆ ಪ್ರಶ್ನಿಸಿದ ಜನಕ್ಕೆ 'ಯಾರ್ರೀ ...ದ್ದು ಇದು ಆಶ್ರಮದ ಹೆಂಗಸು ಅಂತ? ...ಕೆ ಸುಳ್ಳು ಹೇಳ್ತೀರ? ಆಶ್ರಮದ ಹೆಂಗಸಾಗಿದ್ರೆ ...ವ್ಯಾಕೆ ಸುಮ್ಮನಿರ್ತಾ ಇದ್ರು. ನೀವೆಲ್ಲ ಸೇರ್ಕೊಂಡು ...ಕೀಯ ಮಾಡ್ತಾ ಇದ್ದೀರ? ಹಾಗಿದ್ರೆ ನೀವೇ ...ಲೀಸ್ ಠಾಣೆಗೆ ಬಂದು ರೈಟಿಂಗ್‌ನಲ್ಲಿ ಕೊಡಿ.....' ...ಮು ದಬಾಯಿಸಿಬಿಟ್ಟರು.

... ಏಕಾಏಕಿ ಜನರನ್ನೇ ದಬಾಯಿಸಿದ ಎಸ್.ಐ. ...ಕುಮಾರ್ ವರ್ತನೆ ಕಂಡ ಜನಕ್ಕೆ ಏನೋ ...ಮವಟ್ಟಾಗಿದೆಯೆಂಬುದು ಗ್ಯಾರಂಟಿಯಾಗಿತ್ತು. ತಕ್ಷಣವೇ ...ಪರ ರೈತ ಹೋರಾಟದ ಸಮಿತಿಯ ಪದಾಧಿಕಾರಿಗಳು ... ಧಾವಿಸಿ ಮಾಹಿತಿ ಕಲೆ ಹಾಕಿದ್ದಾರೆ. ಪೊಲೀಸ್ ...ಗೆ ಬಂದು ಇದು ರವಿಶಂಕರ್ ಆಶ್ರಮಕ್ಕೆ ಸೇರಿದ ...ವೆಂದೂ, ಈ ಬಗ್ಗೆ ಕೂಲಂಕಷ ತನಿಖೆ ನಡೆಸಬೇಕೆಂದೂ ...ತ ಮನವಿ ಸಲ್ಲಿಸಿದ್ದಾರೆ. ಇದಾಗಿ ವಾರ ಕಳೆದರೂ ...ಘಟ್ಟಪುರ ಪೊಲೀಸರಾಗಲಿ, ರಾಮನಗರದ ...ಲೀಸರಾಗಲಿ ರವಿಶಂಕರನ ಆಶ್ರಮದತ್ತ ಪತ್ತೆಯೇ ಇಲ್ಲ! ... ತಲಘಟ್ಟಪುರ ಪೊಲೀಸರು ನ್ಯಾಯಾಲಯಕ್ಕೆ ಸಲ್ಲಿಸಿದ ...ಸ್ವಾಭಾವಿಕ ಸಾವಿನ ಎಫ್‌ಐಆರ್ (ಯುಡಿಆರ್) ಪ್ರಕಾರ ...ಸುಮಾರು 45 ವರ್ಷದ ಮೃತ ಹೆಂಗಸು ಜೂನ್ 17 ... ಹಿಂದೆ ಯಾವುದೋ ಕಾರಣಕ್ಕೆ ಯಾವುದೋ ...ಳಿಯಲ್ಲಿ ಉದಿಪಾಳ್ಯದ ಕೆರೆಗೆ ಬಿದ್ದು ಮೃತಪಟ್ಟಿದ್ದಾಳೆ. ... ಆದರೆ ಯಾವ ಕಾರಣಕ್ಕೆ ಬಿದ್ದಳೆಂಬ ಬಗ್ಗೆ ಈತನಕ ...ನಿಖೆಯನ್ನೇ ಆರಂಭಿಸಿಲ್ಲ. ಆ ಕಾಲದಿಂದಲೂ ...ಘಟ್ಟಪುರ ಪೊಲೀಸರಾಗಲಿ, ರಾಮನಗರದ ...ಎಸ್‌ಪಿಯಾಗಲಿ ರವಿಶಂಕರ್ ಆಶ್ರಮವೆಂದರೇನೇ ...ದು ಕೊಟ್ಟವರ ಮೇಲೆಯೇ ತಿರುಗಿಬೀಳುತ್ತಾರೆ. ಈಗ ...ಘಟ್ಟಪುರಕ್ಕೆ ಎಸ್.ಐ. ಆಗಿರುವ ಕುಮಾರ್ ಸಣ್ಣಪುಟ್ಟ ...ಯಕ್ಕೂ ಡಿವೈಎಸ್‌ಪಿ ರಾಮಚಂದ್ರಪ್ಪನವರ ಅಣತಿಯನ್ನೇ ...ಲಂಬಿಸುತ್ತಾರೆ. ಡಿವೈಎಸ್‌ಪಿ ರಾಮಚಂದ್ರಪ್ಪ ಒಂದೆಡೆ

ಬಿಜೆಪಿ ಪುಢಾರಿ ರುದ್ರೇಶನನ್ನೂ, ಗೃಹಮಂತ್ರಿ ಅಶೋಕ್ ಬಂಟ ಕಗ್ಗಲಿಪುರದ ಶಿವಕುಮಾರ್‌ನನ್ನೂ ಒಟ್ಟೊಟ್ಟಿಗೆ ಸಂಭಾಳಿಸಬೇಕು. ರವಿಶಂಕರ್ ಗುರೂಜಿಯ ಒಂದೇ ಒಂದು ಫೋನ್ ಕರೆಗೆ ಗೃಹಮಂತ್ರಿ ಅಶೋಕ್‌ರೇ ಓಡಿಬರುತ್ತಾರೆ. ಬಿಜೆಪಿ ರಾಷ್ಟ್ರನಾಯಕ ಅನಂತ್‌ಕುಮಾರ್ ಮೊದಲಾಗಿ ಆರೆಸ್ಸೆಸ್ ವರಿಷ್ಠರಾದ ಜಯದೇವ, ಮಂಗೇಶ್ ಭೇಂಡೆ, ನರಹರಿ, ರವೀಂದ್ರ, ರಾಮಣ್ಣ ಮುಂತಾದವರೆಲ್ಲರೂ ಹೊತ್ತಿಲ್ಲದ ಹೊತ್ತಲ್ಲಿ ರವಿಶಂಕರ್ ಗುರೂಜಿಯ ಸನ್ನಿಧಿಯಲ್ಲಿರುತ್ತಾರೆ.

ಡ್ರಗ್ ಆ್ಯಡಿಕ್ಟ್?

ಸದ್ಯ ಅಧಿಕಾರಸ್ಥ ಬಿಜೆಪಿಯ ಮಟ್ಟಿಗೆ ರವಿಶಂಕರ್ ಗುರೂಜಿಯೇ ರಾಜಪುರೋಹಿತನಾಗಿರುವಾಗ, ಆತನ



ನಮೂನೆ ಸಂಖ್ಯೆ 142

ಪೊಲೀಸ್ ಎಫ್‌ಐಆರ್

ಆಶ್ರಮ ಹೆಂಗಸೊಬ್ಬಳ ಸಾವಿನ ಮರ್ಮ ಕೆದಕುವ ಛಾತಿಯಾದರೂ ಯಾವ ಪೊಲೀಸ್ ಅಧಿಕಾರಿಗಿದ್ದೀತು?

ಆರ್ಟ್ ಆಫ್ ಲೀವಿಂಗ್ ಅಡ್ಡೆಯ ಆಟೋ ಮತ್ತು ಟ್ಯಾಕ್ಸಿ ಚಾಲಕರೇ ಹೇಳುವಂತೆ ಸತ್ತ ಆ ಮಹಿಳೆ ಕಳೆದೊಂದು ವಾರದಿಂದ ರವಿಶಂಕರನ ಆಶ್ರಮದಲ್ಲೇ ಓಡಾಡಿಕೊಂಡಿದ್ದಳು. ಮೂಲತಃ ಆಕೆ ಕೇರಳದವಳೆಂದೇ ಹೇಳಿಕೊಂಡಿದ್ದಳು. ಬಹುಶಃ ಆಕೆ ಆರ್ಟ್ ಆಫ್ ಲೀವಿಂಗ್ ವತಿಯಿಂದ ನಡೆಯುವ ಬೇಸಿಕ್ ಕೋರ್ಸಿಗೆ ದಾಖಲಾಗಿದ್ದಳು. ಆಶ್ರಮವಾಸಿಗೆಂದೇ ಇರುವ ಅಪರ್ಣಾ ಗೆಸ್ಟ್‌ಹೌಸಿನಲ್ಲಿ ಆಕೆಗೊಂದು ರೂಮನ್ನು ಕೊಡಲಾಗಿತ್ತು. ಬಿಡುವಾದಾಗಲೆಲ್ಲ ಆಕೆ ಆಶ್ರಮದ ಪಾಕಶಾಲೆಗೆ ಬಂದು ಅಡುಗೆಗೆ ನೆರವಾಗುತ್ತಿದ್ದಳು. ಆಶ್ರಮದ ಹೊರಭಾಗದಲ್ಲಿರುವ ಅಂಗಡಿಗಳಿಗೂ ಆಗಾಗ ಬರುತ್ತಿದ್ದಳು. ಇಲ್ಲಿನ ಆಟೋಗಳಲ್ಲಿ ಅನೇಕ ಬಾರಿ ಓಡಾಡಿಯೂ ಇದ್ದಳು. ಹಾಗೊಮ್ಮೆ ಇವಳೇ ನಡುರಾತ್ರಿ ಎದ್ದು ಕೆರೆಗೆ ಬಂದಿದ್ದೇ ಆಗಿದ್ದರೆ ಹೆಜ್ಜೆಹೆಜ್ಜೆಗೂ ಇರುವ ಸೆಕ್ಯೂರಿಟಿ ಗಾರ್ಡುಗಳ ಕಣ್ಣಿಗೆ ಬೀಳಬೇಕಿತ್ತು. ಎಲ್ಲೆಂದರಲ್ಲಿ ಇಟ್ಟಿರುವ ಸಿಸಿ ಟೀವಿಗಳಲ್ಲಾದರೂ ಆಕೆ ಹೊರಬೀಳುವ ದೃಶ್ಯವಿರಲೇಬೇಕಿತ್ತು.

ರವಿಶಂಕರ್ ಆಶ್ರಮದ ಸೆಕ್ಯೂರಿಟಿ ಅದೆಷ್ಟು ಬಿಗಿಯೆಂದರೆ ಐಡೆಂಟಿಟಿ ಕಾರ್ಡ್ ಇಲ್ಲದೆ ಯಾರೂ ಒಳಬರುವಂತಿಲ್ಲ. ಇನ್ನು ಇಲ್ಲಿನ ತರಹೇವಾರಿ ಕೋರ್ಸ್‌ಗಳಿಗೆ ಯಾರೇ ಹೊರಗಿನವರು ಬಂದು ಸೇರಬೇಕೆಂದರೂ ಕನಿಷ್ಠ ನಾಲ್ಕು ಸಾವಿರದಿಂದ 15 ಸಾವಿರದವರೆಗೆ ಶುಲ್ಕ ಕಟ್ಟಿಯೇ ಸೇರಬೇಕು. ಇಂಥ ಪ್ರತಿಯೊಬ್ಬರ ಹೆಸರು, ವಿಳಾಸ, ಉದ್ಯೋಗ ಎಲ್ಲವನ್ನೂ ಪ್ರತ್ಯೇಕ ರಿಜಿಸ್ಟರ್‌ನಲ್ಲಿ ದಾಖಲಿಸಲಾಗುತ್ತದೆ. ಅಂಥಾದ್ದೇನು ನಡೆದಿಲ್ಲವೆಂದಿದ್ದರೆ ಆಕೆಯ ವಿವರಗಳನ್ನಾಗಲಿ, ಪೂರ್ವಾಪರವನ್ನಾಗಲಿ ಪೊಲೀಸರಿಗೆ ತಿಳಿಸಲು ರವಿಶಂಕರ್ ಹಿಂಜರಿಯಲೇಬೇಕಿಲ್ಲ.

ಇಲ್ಲಿ ಪೊಲೀಸರೂ ಏನನ್ನೋ ಮುಚ್ಚಿಡುತ್ತಿದ್ದಾರೆ, ಆರ್ಟ್ ಆಫ್ ಲೀವಿಂಗ್ ಆಶ್ರಮದವರೂ ಬಾಯಿಬಿಡುತ್ತಿಲ್ಲ, ಏನಿದರ ಮರ್ಮ? ಹೆಣ ಬಿದ್ದ ರೀತಿ, ಹೆಂಗಸಿನ ಸ್ಥಿತಿಗತಿ ಮತ್ತು ರವಿಶಂಕರ್ ಆಶ್ರಮದ ನಿಗೂಢ ಎಲ್ಲವನ್ನೂ ಲೆಕ್ಕ ಹಾಕುವುದಾದರೆ ಸತ್ತ ಹೆಂಗಸಿನ ಹಿಂದೆ ಯಾವುದೋ ರಹಸ್ಯವಿದ್ದೇ ಇದೆ. ಇಲ್ಲಿಗೆ ಆರು ತಿಂಗಳ ಹಿಂದೆ ರವಿಶಂಕರ್ ಆಶ್ರಮಕ್ಕೆ ಸೇರಿದ ಸೌದಾಮಿನಿ ಅಪಾರ್ಟ್‌ಮೆಂಟ್‌ನಲ್ಲಿ ಹೆಂಗಸೊಬ್ಬಳು ಆತ್ಮಹತ್ಯೆ ಮಾಡಿಕೊಂಡ ಬಗ್ಗೆ ಸ್ಥಳೀಯರೇ ಹೇಳುತ್ತಾರೆ. ಅದಾದನಂತರ ಆಶ್ರಮಕ್ಕೆ ಆನೆಗಳು ನುಗ್ಗಿ ವ್ಯಕ್ತಿಯೊಬ್ಬನನ್ನು ತುಳಿದು ಕೊಂದಿವೆ. ಈ ಎರಡೂ ಸಾವುಗಳ ಬಗ್ಗೆ ತಲಘಟ್ಟಪುರ ಪೊಲೀಸರು ಪತ್ರಿಕೆಗಳಿಗೆ ಸುದ್ದಿಯನ್ನೇ ಕೊಟ್ಟಿಲ್ಲ. ಈಗ ಕೆರೆಯಲ್ಲಿ ಸಿಕ್ಕ ಹೆಣದ ಬಗ್ಗೆಯೂ ಯಾವೊಬ್ಬ ಪೊಲೀಸರೂ ಬಾಯಿ ಬಿಡುತ್ತಿಲ್ಲ.

ಇದರರ್ಥ ರವಿಶಂಕರ್ ಆಶ್ರಮದಲ್ಲಿ ಸಂಭವಿಸುವ ಯಾವೊಂದು ದುರಂತವನ್ನೂ ಪೊಲೀಸರು ಹೊರಬಿಡುವುದಿಲ್ಲ. ಹಾಗಂತ ಆಶ್ರಮದಲ್ಲಿ ಎಲ್ಲವೂ ನೆಟ್ಟಗಿದೆ ಯೆಂದಾಗಲಿ, ಆಧ್ಯಾತ್ಮವೊಂದೇ ಇಲ್ಲಿನ ಕೇಂದ್ರವೆಂದಾಗಲಿ ಅಲ್ಲ. ರವಿಶಂಕರ್ ನಡೆಸುವ ಆಯುರ್ವೇದಿಕ್ ಮೆಡಿಕಲ್ ಕಾಲೇಜಿನ ನಾರ್ತ್ ಇಂಡಿಯನ್ ವಿದ್ಯಾರ್ಥಿಗಳ ಪೈಕಿ ಬಹುತೇಕರು ಡ್ರಗ್ ಆ್ಯಡಿಕ್ಟ್‌ಗಳು. ಮುನ್ನೂರಕ್ಕೂ ಅಧಿಕ ಸೆಕ್ಯೂರಿಟಿ ಗಾರ್ಡ್‌ಗಳ ಪೈಕಿ ಬಹುಪಾಲು ಬಿಹಾರ ಮೂಲದ ಕ್ರಿಮಿನಲ್‌ಗಳು. ಇನ್ನು ಆಶ್ರಮದ ವಿವಿಧ ಗೆಸ್ಟ್‌ಹೌಸ್‌ಗಳಲ್ಲಿ ಠಿಕಾಣಿ ಹೂಡಿರುವ ಹಿಂದಿ ವಾಲಾಗಳು, ವಿದೇಶಿ ಭಕ್ತರು ಮತ್ತು ವಿವಿಧ ಆರ್ಟ್ ಆಫ್ ಕೋರ್ಸುಗಳಿಗೆಂದು ಜಮೆಯಾಗುವವರಲ್ಲಿ ಶ್ರೀಮಂತರು, ಕಾರ್ಪೊರೇಟ್ ಉದ್ಯೋಗಿಗಳು, ಕಾಲ್‌ಸೆಂಟರ್ ಪಡ್ಡೆಗಳೇ ಹೆಚ್ಚು. ಹೊತ್ತಲ್ಲದ ಹೊತ್ತಲ್ಲಿ ಈ ಮಂದಿ ಅಜುಬಾಜಿನ ಆಟೋ ಚಾಲಕರಿಗೋ, ಟ್ಯಾಕ್ಸಿ ಯುವರಿಗೋ ಗಾಂಜಾ, ಹೆರಾಯಿನ್‌ಗಾಗಿ ಪೀಡಿಸುತ್ತಿರುತ್ತಾರೆ. ಇನ್ನೂ ಕೆಲವರು ಕಗ್ಗಲಿಪುರದ ಮೆಡಿಕಲ್ ಸ್ಟೋರ್‌ಗಳಲ್ಲಿ ಮಾದಕ ಇಂಜೆಕ್ಷನ್ನು ಗಳನ್ನು ಕೊಂಡು ನಡುರಸ್ತೆಯಲ್ಲೇ ಚುಚ್ಚಿಕೊಳ್ಳುತ್ತಾರೆ.

ಸತ್ತಿದ್ದು ಹೇಗೆ?

ರವಿಶಂಕರ್ ಆಶ್ರಮದಲ್ಲಿ ಧರ್ಮ, ದೇವರು, ಆಧ್ಯಾತ್ಮ ವೈರಾಗ್ಯಕ್ಕಿಂತಲೂ ದುಡ್ಡೇ ಮುಖ್ಯ. ಪ್ರತಿಯೊಂದಕ್ಕೂ ಇಲ್ಲಿ ಕಾಸು ಬಿಚ್ಚಬೇಕು. ಹೀಗೆ ಬೇಕಾಬಿಟ್ಟಿ ಶುಲ್ಕ ಕಟ್ಟಿ ಬಂದ ಕಾಶ್ಮೀರಿ, ಬಿಹಾರಿ, ಮಿಜೋರಾಮ್, ನಾಗಾಲ್ಯಾಂಡ್, ಗುಜರಾತಿ ಕೋರ್ಸುದಾರರಿಗೆ ಆಶ್ರಮದ ಕ್ಯಾಂಪಸ್ಸೇ ಸ್ವರ್ಗದಂತಿದೆ. ವಿಶಾಲಾಕ್ಷಿ ಮಂಟಪದ ಮೆಟ್ಟಿಲುಗಳ ಮೇಲೇ ಯುವಕ-ಯುವತಿಯರು ಕೂತು ಬಹಿರಂಗವಾಗಿ ಚಕ್ಕಂದಕ್ಕಿಳಿಯುತ್ತಾರೆ. ರಾತ್ರಿ ಮೂರರವರೆಗೂ ಹಾಡು, ಕುಣಿದು, ಕುಪ್ಪಳಿಸುತ್ತಾರೆ.

ಈಗ ಹೆಣವಾದ ಹೆಂಗುಸು ಬಹುಶಃ ಬದುಕಿನ



ಗುರೂಜಿಯ ಮಸಾಜ್ ಸೆಂಟರ್

ಜಂಜಾಟಕ್ಕೆ ಸಿಲುಕಿಯೇ ಆತ್ಮಶಾಂತಿಗೆಂದು ಆಶ್ರಮಕ್ಕೆ ಬಂದಿದ್ದಾಳೆ. ಜೂನ್ 16 ರ ಶನಿವಾರ ರಾತ್ರಿ ವಿಪರೀತ ಡ್ರಗ್ ಸೇವಿಸಿರಬೇಕು. ಹಾಗೇ ಡ್ರಗ್ ಸೇವಿಸಿದವಳು ನಡುರಾತ್ರಿ ಕತ್ತಲಲ್ಲಿ ಮಿಕ್ಕೆಲ್ಲರ ಹಾಗೆ ವಾಯುವಿಹಾರಕ್ಕೋ ಜಾಲಿ ರೌಂಡಿಗೋ ಬಂದಿದ್ದಾಳೆ. ಆ ಕತ್ತಲಲ್ಲಿ ಆಕೆಯನ್ನು ಬಿಹಾರಿ ಸೆಕ್ಯೂರಿಟಿಯವರು ಪೀಡಿಸಿರಲೂಬಹುದು. ಕಾಮುಕ ಸೆಕ್ಯೂರಿಟಿಯವರಿಂದ ಬಚಾವಾಗಲು ಹೋಗಿ ಕೆರೆಗೆ ಬಿದ್ದಳೋ ಅಥವಾ ಆಕೆಯ ದುಪಟ್ಟಾದಿಂದಲೇ ಯಾರಾದರೂ ಉಸಿರುಗಟ್ಟಿಸಿದರೋ ಯಾವ ಸಾಧ್ಯತೆಯನ್ನೂ ತಳ್ಳಿ ಹಾಕುವಂತಿಲ್ಲ.

ಒಂದು ವೇಳೆ ಅತಿಯಾದ ಡ್ರಗ್ ಸೇವನೆಯಿಂದ ತನ್ನ ಕೋಣೆಯಲ್ಲೇ ಆಕೆ ಪ್ರಾಣ ಬಿಟ್ಟಿರಬೇಕು. ಹಾಗೇ ಸತ್ತವಳಿಂದ ಎಲ್ಲಿ ಆಶ್ರಮದ ಹುಳುಕು ಬಯಲಾಗುತ್ತೋ ಎಂದು ರವಿಶಂಕರನೇ ನಿಂತು ಸೆಕ್ಯೂರಿಟಿಯವರ ಮೂಲಕ ಕೆರೆಗೆ ಹಾಕಿಸಿರಲಿಕ್ಕೂ ಸಾಕೆಂಬುದು ಸ್ಥಳೀಯರ ಲೆಕ್ಕಾಚಾರ. ಇಲ್ಲದಿದ್ದರೆ ಆಶ್ರಮಕ್ಕೆ ಬಂದವಳ ಹೆಣವನ್ನು ಕೆರೆಯಲ್ಲಿ ಕಂಡ ಮೇಲೂ ಈಕೆ ಯಾರೋ ಗೊತ್ತಿಲ್ಲ ಎಂದು ಆಶ್ರಮದ ಸಿಬ್ಬಂದಿ ಯಾಕೆ ಜಾಗ ಖಾಲಿ ಮಾಡುತ್ತಾರೆ? ತಮ್ಮದೇ ಆವರಣದ ಕೆರೆಯಲ್ಲಿದ್ದ ಹೆಣದ ಬಗ್ಗೆ ಏಕೆ ಪೊಲೀಸರಿಗೆ ಮಾಹಿತಿ ಕೊಡಲಿಲ್ಲ? ಆಶ್ರಮದ ಸಿಸಿ ಟೀವಿಗಳನ್ನಾಗಲಿ, ದಾಖಲೆಗಳನ್ನಾಗಲಿ ಏಕೆ ಪೊಲೀಸರಿಗೊಪ್ಪಿಸುತ್ತಿಲ್ಲ. ಎಲ್ಲಕ್ಕೂ ಮಿಗಿಲಾಗಿ ಪೊಲೀಸರು ಕಾಟಾಚಾರಕ್ಕೂ ಏಕೆ ಆಶ್ರಮದವರನ್ನು ಪ್ರಶ್ನಿಸುತ್ತಿಲ್ಲ?

ಅಲ್ಲಿಗೆ ಹೆಂಗಸಿನ ಶವಕ್ಕೂ ರವಿಶಂಕರ್ ಆಶ್ರಮದ ಪಾಪಕ್ಕೂ ಒಂದಲ್ಲ ಒಂದು ನಂಟಿದ್ದೇ ಇದೆ. ಆಕೆಯ ಹೆಣ ಇವತ್ತಿಗೂ ಮೈಸೂರು ರಸ್ತೆಯ ರಾಜರಾಜೇಶ್ವರಿ ಮೆಡಿಕಲ್ ಕಾಲೇಜಿನಲ್ಲಿ ಅನಾಥವಾಗಿ ಬಿದ್ದಿದೆ. ಪೊಲೀಸರು ಯಃಕಶ್ಚಿತ್ ಪತ್ರಿಕಾ ಹೇಳಿಕೆಯನ್ನೂ ಕೊಟ್ಟಿಲ್ಲ. ಆಕೆಯ ಪೂರ್ವಾಪರ ಕೆದಕಲು ಯಾವ ಪ್ರಯತ್ನವನ್ನೂ ಮಾಡಿಲ್ಲ. ಬಹುಶಃ ಇಡೀ ಪ್ರಕರಣವನ್ನು ಮುಚ್ಚಿಹಾಕುವಲ್ಲೇ ಪೊಲೀಸರಿಗೆ ಆಸಕ್ತಿಯಿರುವಂತಿದೆ.

ಆರ್ಟ್ ಆಫ್ ಲೀವಿಂಗ್ ಆವರಣದಲ್ಲಿ ಹೆಣ ಬಿದ್ದರೂ ಸುದ್ದಿಯಿಲ್ಲ, ಪೊಲೀಸರಿಗದು ಮುಖ್ಯವಲ್ಲವೆಂದರೆ ರವಿಶಂಕರ್ ಗುರೂಜಿಯ ಪ್ರಭಾವ ಇನ್ನೆಷ್ಟಿರಬೇಡ? ಈ ಬಗ್ಗೆ ತನಿಖೆ ಮಾಡುವವರ್‍ಯಾರು? ಬದಲು ರವಿಶಂಕರನ ಪಾಪಕೂಪ ಕುರಿತಂತೆ ಸಣ್ಣದೊಂದು ತನಿಖೆ ಕೂಡ ಪೊಲೀಸರಿಂದ ಸಾಧ್ಯವಿಲ್ಲವೆ? ಅಪರಿಚಿತ ಹೆಂಗಸೊಬ್ಬಳ ಜೀವಕ್ಕೆ ಯಾವ ಬೆಲೆಯೂ ಇಲ್ಲವೆ?

-ರಾ. ಸೋಮನಾಥ್

ರಂಜನೆ | ಬೋಧನೆ | ಪ್ರತಿಭಟನೆ ಲಂಕೇಶ್

ರಿಯಾಲಿಟಿ ಶೋನಲ್ಲಿ ರಿಯಲ್ ಶಾಕ್!



ಎರಡು ಲವ್‌ಸ್ಟೋರಿ...! ಮೂರು ಮರ್ಡರ್!!

ಅದು ತಮಿಳಿನ ರಿಯಾಲಿಟಿ ಶೋ.

ನಿರೂಪಕಿಯಾಗಿ ನಿರ್ಮಲಾ ಪೆರಿಯಾ ಸಾಮಿ ಜೀ-ತಮಿಳು ಚಾನೆಲ್‌ಗಾಗಿ ನಡೆಸುವ 'ಸೊಲ್ವತೆಲ್ಲಮ್ ಉನ್‌ಮೈ' ಎಂಬ ಕಾರ್ಯಕ್ರಮದ ಶೂಟಿಂಗ್ ಆದಾಗಿತ್ತು ಅದೊಂಥರಾ ಫ್ಯಾಮಿಲಿ ಕೌನ್ಸಲಿಂಗ್ ರೀತಿಯ ಪ್ರೋಗ್ರಾಮ್. ಅಂದರೆ ಸಮಸ್ಯೆಗಳಿರುವ ಕುಟುಂಬಗಳನ್ನು ಕರೆಯಿಸಿ ಸಾಂತ್ವನ ಮಾಡಿ, ಪರಿಹಾರ ಸೂಚಿಸುತ್ತಲೇ ಚಾನೆಲಿನ ಟಿಆರ್‌ಪಿ ಹೆಚ್ಚಿಸಿಕೊಳ್ಳುವ ಉದ್ದೇಶದ್ದು. ಮೇ 15ರ ಆ ಎಪಿಸೋಡ್‌ನಲ್ಲಿ ಎಂ.ಕುಚ್ಚಪಾಳಯನ್ ಹಳ್ಳಿಯ ಅಪ್ರಾಪ್ತ ಪ್ರೇಮಿಗಳ ಕಥಾನಕ ನೋಡುಗರನ್ನು ರಂಜಿಸುವುದಿತ್ತು (!).

ಎಂ.ಭಾರ್ಗವಿ ಹೆಸರಿನ ಹುಡುಗಿ ಅದೇ ಊರಿನ ಸತೀಶ್ ಎಂಬಾತನನ್ನು ಪ್ರೀತಿಸಿ, ಮನೆ ಬಿಟ್ಟು ಬಂದು ಮದುವೆ ಮಾಡಿಸುವಂತೆ ನಿರೂಪಕಿ ನಿರ್ಮಲಾಗೆ ದುಂಬಾಲು ಬಿದ್ದಿದ್ದಳು. ಅಸಲಿ ಸಮಸ್ಯೆಯಿದ್ದದ್ದು ಭಾರ್ಗವಿ ವಯಸ್ಸಿನಲ್ಲಿ, 17 ವರ್ಷದ ಆಕೆ ಅಪ್ರಾಪ್ತೆಯಾಗಿದ್ದು ಮದುವೆ ಮಾಡಿಸುವುದು ಕಾನೂನು ದೃಷ್ಟಿಯಲ್ಲಿ ಅಪರಾಧವಾಗುತ್ತದೆ. ಆದ್ದರಿಂದ ಅವರಿಬ್ಬರ ತಂದೆತಾಯಂದಿರನ್ನೂ ಕಾರ್ಯಕ್ರಮಕ್ಕೆ ಕರೆಯಿಸಿ ಸಾರ್ವಜನಿಕವಾಗಿ ಎಲ್ಲರನ್ನೂ ಸಂತೈಸುವ ಎಲ್ಲ ರೀತಿಯ ಟೆಕ್ನಿಕಲ್ ತಯಾರಿಗಳು ನಡೆದಿದ್ದವು.


ಒಂದಷ್ಟು ರೋಚಕ ಡೈಲಾಗ್‌ಗಳ ಮೂಲಕ ಓಪನಿಂಗ್ ಪಡೆದ ರಿಯಾಲಿಟಿ ಶೋನಲ್ಲಿ ಕ್ರಮೇಣ ಹೆತ್ತವರ ಆಕ್ರೋಶ, ಪ್ರೇಮಿಗಳ ಹಂಬಲ, ನಿರೂಪಕಿಯ ಸಾಮಾಜಿಕ ಕಳಕಳಿ ಹೀಗೆ ರಂಜನೀಯ ಆಯಾಮಗಳೆಲ್ಲ ನುಸುಳುತ್ತ ಕಾರ್ಯಕ್ರಮದ ರಂಗನ್ನು ಹೆಚ್ಚಿಸುತ್ತಲೇ ಸಾಗಿದ್ದವು. ಭಾರ್ಗವಿಯ ತಂದೆ ಮುರುಗನ್ ಮತ್ತು ತಾಯಿ ರಾಜೇಶ್ವರಿ ಪ್ರೇಮಿಗಳನ್ನು ಖಂಡತುಂಡವಾಗಿ ವಿರೋಧಿಸುತ್ತಿದ್ದರೆ, ಸತೀಶನ ಅಪ್ಪ ಕುಮಾರ್ ಮತ್ತು ಅಮ್ಮ ಸರೋಜ ತಟಸ್ಥರಾಗಿ ಉಳಿದಿದ್ದರು.

ಹಾಗೂ ಹೀಗೂ ಸುಮಾರು ಒಂದು ತಾಸಿನ ಸಂವಾದ, ವಾಗ್ವಾದ ಕಂಡ ಕಾರ್ಯಕ್ರಮಕ್ಕೆ ಮಂಗಳ ಹಾಡುವ ಸಮಯ ಬಂದಿತ್ತು. ಸದ್ಯಕ್ಕೆ ಓದಿನ ಕಡೆ ಗಮನಕೊಡುವಂತೆ ಭಾರ್ಗವಿಗೆ ಬುದ್ಧಿ ಹೇಳಿದ ನಿರೂಪಕಿ ನಿರ್ಮಲಾ ಅವಳಪ್ಪ ಅಮ್ಮನಿಗೆ ಮಗಳು ಪ್ರೋತ್ಸಾಹಿಸಬೇಕೆಂದೂ, ಪ್ರೇಮಿಗಳನ್ನು ಒಂದುಗೂಡಿಸಬೇಕೆಂದೂ ಮನವಿ ಮಾಡಿಕೊಂಡಳು. ಓದು ಮುಗಿದು ಸ್ವತಂತ್ರ ಬದುಕು ರೂಪಿಸಿಕೊಳ್ಳುವವರೆಗೆ ಭಾರ್ಗವಿ ಹೆತ್ತವರ ಮನೆಯಲ್ಲೇ ಇರಬೇಕೆನ್ನುವ ಅಭಿಪ್ರಾಯ ನಿರ್ಮಲಾ ಬಾಯಿಯಿಂದ ಹೊರಬೀಳುತ್ತಿದ್ದಂತೆ ಜೋರಾಗಿ ಕಿರುಚಿದ ಭಾರ್ಗವಿ "ನಾನು ಮನೆಗೆ ಹೋಗುವುದೇ ಇಲ್ಲ, ಹೋದರೆ ನನ್ನಪ್ಪ ನನ್ನನ್ನು ಕೊಂದುಬಿಡುತ್ತಾನೆ. ಆತ ಮಹಾನ್ ಕೊಲೆಗಡುಕ" ಎಂದು ಅಬ್ಬರಿಸಿದಳು.

ಖುದ್ದು ನಿರೂಪಕಿಯನ್ನೂ ಒಳಗೊಂಡಂತೆ ಅಲ್ಲಿದ್ದ ಎಲ್ಲರಿಗೂ ಭಾರ್ಗವಿಯ ಪ್ರತಿಕ್ರಿಯೆ ಭಾರೀ ಶಾಕ್ ನೀಡಿತು.



ಪ್ರೇಮಿ ಸತೀಶನೊಂದಿಗೆ ಸತ್ಯ ಬಿಚ್ಚಿಟ್ಟ ಭಾರ್ಗವಿ....



ಕೊಲೆಗಡುಕ ತಂದೆ ಮುರುಗನ್ ಪತ್ನಿ ಜೊತೆ...



ಮೂರು ಹೆಣಗಳನ್ನು ಹೂತಿಟ್ಟಿದ್ದ ಸ್ಥಳ...

ಹತಾಶೆಗೆ ಬಿದ್ದ ಹುಡುಗಿ ಅಸಂಬದ್ಧವಾಗಿ ಮಾತನಾಡುತ್ತಿದ್ದಾಳೆಂದುಕೊಂಡ ನಿರ್ಮಲಾ ಆಕೆಯನ್ನು ಸಮಾಧಾನಿಸಲು ಮುಂದಾದಾಗ "ಇಲ್ಲ ಮೇಡಂ, ನನ್ನಪ್ಪ ನಿಜಕ್ಕೂ ಕೊಲೆಗಡುಕ. ಆತ ಒಂದಲ್ಲ ಮೂರು ಕೊಲೆ ಮಾಡಿದ್ದಾನೆ, ಅದೂ ತನ್ನ ಸ್ವಂತ ಸ್ನೇಹಿತ ಮತ್ತವನ ಮಗಳು ಹಾಗು ಅಳಿಯನನ್ನು ಕೊಂದು ನಮ್ಮ ಮನೆಯ ಮುಂದೆಯೇ ಹೂತುಹಾಕಿದ್ದಾನೆ. ಅಷ್ಟೇ ಅಲ್ಲ, ಹೆತ್ತ ಮಗಳು ಎಂಬುದನ್ನೂ ಮರೆತು ನನ್ನನ್ನೂ ಲೈಂಗಿಕವಾಗಿ ಬಳಸಿಕೊಳ್ಳಲು ನೋಡಿದ ಕ್ರೂರಿ ಆತ. ನನ್ನಲ್ಲಿಗೆ ಕಳುಹಿಸಿದರೆ ಆತ ಖಂಡಿತ ನನ್ನನ್ನು ಕೊಂದುಬಿಡುತ್ತಾನೆ" ಎಂದಳು.

ಆಕೆ ಹೇಳಿದ್ದ ಎಲ್ಲರಿಗೂ ಶಾಕ್ ನೀಡಿತು. ಆದರೂ ಭಾರ್ಗವಿ ಅಸಂಬದ್ಧವಾಗಿ ಮಾತನಾಡುತ್ತಿದ್ದಾಳೆ ಎಂದು ಅಲ್ಲಿದ್ದ ಯಾರಿಗೂ ಅನ್ನಿಸಲಿಲ್ಲ.

ಅನಿರೀಕ್ಷಿತವಾಗಿ ಆ ರಿಯಾಲಿಟಿ ಶೋಗೆ ಒಂದು ಟರ್ನಿಂಗ್ ಪಾಯಿಂಟ್ ಸಿಕ್ಕಿತು. ತನ್ನ ಮಗಳು ಹೀಗೆ ಹೇಳುತ್ತಿದ್ದಂತೆ ಕೋಪಿಸಿಕೊಂಡ ತಂದೆ ಮುರುಗನ್ "ಆಕೆ ಹೇಳುತ್ತಿರುವುದೆಲ್ಲ ಶುದ್ಧ ಸುಳ್ಳು. ಆಕೆಯ ಪ್ರೇಮವನ್ನು ಎಲ್ಲಿ ನಾನು ತಿರಸ್ಕರಿಸಿಬಿಡುತ್ತೇನೋ ಎಂಬ ಭಯದಲ್ಲಿ ಹೀಗೆಲ್ಲ ಆರೋಪಿಸುತ್ತಿದ್ದಾಳೆ" ಎಂದು ತೊದಲಲು ಶುರು ಮಾಡಿದ. ಭಾರ್ಗವಿಯ ಅಮ್ಮ ರಾಜೇಶ್ವರಿಯೂ "ನನ್ನ ಗಂಡ ಅಂಥವನಲ್ಲ, ನಮ್ಮ ಮಗಳು ಸುಳ್ಳು ಹೇಳುತ್ತಿದ್ದಾಳೆ" ಎಂತಲೇ ವಾದಕ್ಕೆ ನಿಂತಳು.

ಅಷ್ಟೂ ಹೊತ್ತು ಮಗಳ ಪ್ರೇಮ ಮತ್ತಾಕೆಯ ಪ್ರೇಮಿಯನ್ನು ಬಲವಾಗಿ ವಿರೋಧಿಸುತ್ತಿದ್ದ ಮುರುಗನ್ "ನಮ್ಮ ಮಗಳೇ ನಮ್ಮನ್ನು ಹೀಗೆ ಅನುಮಾನಿಸುವುದಾದರೆ ನಾವು ಆಕೆಯ ವಿರುದ್ಧ ಸಾಧಿಸುವುದೇನು" ಎಂಬ ಪ್ಲೇಟ್ ಬದಲಾಯಿಸಿದನಲ್ಲದೆ, ಮಗಳ ಪ್ರೇಮಿ ಸುರೇಶನ ಬೆನ್ನು ಸವರಿ, ಅವರಿಬ್ಬರ ಕೈಕುಲುಕಿ ಕಾರ್ಯಕ್ರಮದಿಂದಲೇ ಹೊರನಡೆದ. ಹೋಗುವ ಮುನ್ನ ಚಾನೆಲ್‌ನವರ ಹಾಗೂ ನಿರೂಪಕಿಯ ಬಳಿ ಈ ಕಾರ್ಯಕ್ರಮವನ್ನು ಪ್ರಸಾರ ಮಾಡದಂತೆ ಕೇಳಿಕೊಳ್ಳುವುದನ್ನು ಮರೆಯಲಿಲ್ಲ.

ಆದರೆ ಚಾನೆಲ್‌ನವರು ಸುಮ್ಮನಾಗಲಿಲ್ಲ, ಭಾರ್ಗವಿಯನ್ನು ಮತ್ತಷ್ಟು ಪ್ರಶ್ನೆಗಳಿಗೆ ಗುರಿ ಮಾಡಿದರು. ಆಗ ಅವರ ಮುಂದೆ ಒಂದು ದಾರುಣ ಕತೆಯೇ ತೆರೆದುಕೊಳ್ಳಲಾರಂಭಿಸಿತು.

ಭಾರ್ಗವಿಯ ಅಪ್ಪ ಮುರುಗನ್ ಓರ್ವ ವಿಕೃತ ಕಾಮಿ. ಆತನ ಈ ಕಾಮುಕ ಬುದ್ಧಿ ಅದೆಷ್ಟು ಹದ್ದುಮೀರಿತ್ತೆಂದರೆ ಆತ ತನ್ನ ಸ್ವಂತ ಮಗಳನ್ನೇ ತನ್ನ ಕಾಮ ತೃಷೆಗೆ ಬಳಸಿಕೊಳ್ಳಲು ಮುಂದಾಗಿದ್ದ. ಆರಂಭದಲ್ಲಿ ಅಪ್ಪನ ಈ ವರ್ತನೆಯನ್ನು ತಿರಸ್ಕರಿಸುತ್ತಾ, ನಿರ್ಲಕ್ಷಿಸುತ್ತಾ ಬಂದಿದ್ದ ಭಾರ್ಗವಿಗೆ ಕ್ರಮೇಣ ಆತನ ದುರುದ್ದೇಶ ಸ್ಪಷ್ಟವಾಗಿ ಅರ್ಥವಾಗಿತ್ತು. ಈ ಬಗ್ಗೆ ಆಕೆ ತನ್ನ ತಾಯಿ ರಾಜೇಶ್ವರಿ ಬಳಿ ಹೇಳಿಕೊಂಡಾಗ ತಾಯಿ "ಇದನ್ನೆಲ್ಲ ಹೊರಗಡೆ ಯಾರಿಗೂ ಹೇಳಬೇಡ" ಎಂದಷ್ಟೇ ಹೇಳಿ ಸುಮ್ಮನಾದಳೇ ವಿನಃ ಗಂಡನನ್ನು ವಿರೋಧಿಸಿ ಮಗಳನ್ನು ರಕ್ಷಿಸಿಕೊಳ್ಳುವ ಸಾಹಸಕ್ಕೆ ತಾಯಿ ಮುಂದಾಗಿರಲಿಲ್ಲ. ಅಪ್ಪನ ಅನಾಗರಿಕ ವರ್ತನೆ, ಅಮ್ಮನ ಅಸಹಾಯಕ ಸಮ್ಮತಿ ಇವೆಲ್ಲವೂ ಭಾರ್ಗವಿಯಲ್ಲಿ ಆಕ್ರೋಶ ಮಡುಗಟ್ಟುವಂತೆ ಮಾಡಿದವು. ಸುಮಾರು ಒಂದು ವರ್ಷದ ಹಿಂದೆ ಮುರುಗನ್ ಮಗಳನ್ನು ಲೈಂಗಿಕ ತೃಷೆಗೆ ಬಳಸಿಕೊಳ್ಳಲು ಮುಂದಾದಾಗ ರೋಸಿ ಹೋದ ಭಾರ್ಗವಿ ಆತನೊಂದಿಗೆ ಜೋರು ಜಗಳಕ್ಕೆ ಇಳಿದಳು. ಇನ್ನೇನು ರಂಪ ಬೀದಿಗೆ ಬೀಳುತ್ತದೆ ಎನ್ನುವಾಗ ಮಧ್ಯ ಪ್ರವೇಶಿಸಿದ ಅಮ್ಮ ಮಗಳನ್ನೇ ಬೈದು ಸುಮ್ಮನಾಗಿಸಿದಳು.

ಜಗಳ ಮುಗಿದು ಮುರುಗನ್ ಮನೆಯಿಂದ ಹೊರನಡೆದ ನಂತರ ಅಳುವ ಮಗಳ ಬಳಿ ಬಂದ ರಾಜೇಶ್ವರಿ "ನಿನ್ನಪ್ಪ ತುಂಬಾ ಕೋಪಿಷ್ಟ ಮಗಳೇ. ಅವನನ್ನು ಎದುರು ಹಾಕಿಕೊಳ್ಳಬೇಡ. ಇಲ್ಲಿಗೆ ಮೂರು ವರ್ಷದ ಹಿಂದೆ ಇದೇ ಜಾಗದಲ್ಲಿ ಆತನ ಸ್ನೇಹಿತ ಶೇಖರ್, ಅವನ ಮಗಳು ಲಾವಣ್ಯ ಹಾಗೂ ಅವಳ ಗಂಡ ಸಿಲಂಬರಸನ್ ಮೂವರನ್ನೂ ನಿನ್ನಪ್ಪ ಕೊಂದು ಹಾಕಿದ. ಯಾರಿಗೂ ಅನುಮಾನವೇ ಬರದಂತೆ ಅವರೆಲ್ಲರ ಶವಗಳನ್ನು ಮನೆಯ ಮುಂದೆ ಹೂತು ಹಾಕಿದ. ನಿನ್ನ ದುರ್ದೈವ, ದಯವಿಟ್ಟು ಆತ ಹೇಳಿದಂತೆ ಮಾಡು. ಇಲ್ಲದಿದ್ದರೆ ನಿನ್ನನ್ನೂ ಕೊಲ್ಲಲು ಆತ ಹಿಂಜರಿಯುವುದಿಲ್ಲ" ಎಂದು ಅಳುತ್ತಲೇ ಕೊಲೆ ರಹಸ್ಯವನ್ನು ತಾಯಿ ಭಾರ್ಗವಿಯ ಮುಂದೆ ಬಿಚ್ಚಿಟ್ಟಳು.

ತಾನು ಕಣ್ಣಾರೆ ಕಾಣದಿದ್ದರೂ ತಾಯಿಯಿಂದ ಕೇಳಿ ತಿಳಿದ ಮೂರು ಕೊಲೆಗಳ ರಹಸ್ಯವನ್ನು ಭಾರ್ಗವಿ ಚಾಚೂತಪ್ಪದೇ ಬಿಚ್ಚಿಟ್ಟ ಕೂಡಲೇ ಚಾನೆಲ್‌ನವರು ಕೊಲೆಯಾದ ಶೇಖರ್ ವಾಸಿಸುತ್ತಿದ್ದ ನಲ್ಲೂರ್ ಪಿಳ್ಳೈ ಎಂಬಲ್ಲಿಗೆ ವರದಿಗಾರರನ್ನು ಕಳುಹಿಸಿದರು. ಭಾರ್ಗವಿ ಹೇಳಿದಂತೆ ನಾಲ್ಕು ವರ್ಷಗಳ ಹಿಂದೆ ಆ ಊರಿನಿಂದ ಶೇಖರ್ ಮತ್ತು ಅವನ ಮಗಳು ಲಾವಣ್ಯ ಕಣ್ಮರೆಯಾಗಿದ್ದು ಸಾಬೀತಾಯಿತು. ಭಾರ್ಗವಿ ಹೇಳಿದ್ದಕ್ಕೂ, ತಮ್ಮ ವರದಿಗಾರರ ತನಿಖೆಗೂ ತಾಳೆಯಾಗಿದ್ದೇ ತಡ, ಅಂದು ಚಿತ್ರೀಕರಿಸಿಕೊಂಡಿದ್ದ 'ಸೊಲ್ವತೆಲ್ಲಮ್ ಉನ್‌ಮೈ' ಕಾರ್ಯಕ್ರಮದ ಎಪಿಸೋಡ್‌ಅನ್ನು ಚಾನೆಲ್‌ನಲ್ಲಿ ಬಿತ್ತರಿಸಿದರು.

ಪ್ರೇಮ ಸಂಧಾನವನ್ನು ಪ್ರಾರಂಭಿಸಿದ ಕಾರ್ಯಕ್ರಮ ಅಚಾನಕ್ಕಾಗಿ ನಾಲ್ಕು ವರ್ಷಗಳ ಹಿಂದಿನ ಮೂರು ಮರ್ಡರ್ ಮಿಸ್ಟರಿಯ ಸುಳಿವು ನೀಡಿದ್ದು ವಿಪರೀತ ಸಂಚಲನವನ್ನೇ ಉಂಟುಮಾಡಿತು. ಆ ಕಾರ್ಯಕ್ರಮವನ್ನು ವೀಕ್ಷಿಸಿದ ಶೇಖರ್‌ನ ಹೆಂಡತಿ ಜೀವಾ ತನ್ನ ಗಂಡ ಮತ್ತು ಮಗಳು ನಾಲ್ಕು ವರ್ಷಗಳಿಂದ ಕಾಣೆಯಾಗಿದ್ದಾರೆಂದೂ, ಅವರು ಕೊಲೆಯಾಗಿದ್ದಾರೆಂದು ಹುಡುಗಿಯೊಬ್ಬಳು ಟಿವಿಯಲ್ಲಿ ಹೇಳಿದ್ದಾಳೆಂದೂ ಕಂಪ್ಲೇಂಟ್ ಕೊಟ್ಟಳು.

ಇಂತಹುದ್ದೊಂದು ಸೆನ್ಸೇಷನಲ್ ಸುದ್ದಿ ಬಿತ್ತರವಾಗಿದ್ದೆ ತಡ, ಸ್ಥಳೀಯ ಪೊಲೀಸರು ತಕ್ಷಣವೇ ಕಾರ್ಯಪ್ರವೃತ್ತರಾಗಿ ಭಾರ್ಗವಿಯನ್ನು ಸಂಪರ್ಕಿಸಿ ಆಕೆ ತೋರಿಸಿದ ಜಾಗವನ್ನು ಅಗೆದಾಗ ಅಲ್ಲಿ ಮುರುಗನ್ ಹೂತಿಟ್ಟಿದ್ದ ಮೂರು ಮನುಷ್ಯರ ಅಸ್ಥಿಪಂಜರಗಳು ಸಿಕ್ಕವು!

ಮುಂದಿನದೆಲ್ಲ ಪಕ್ಕಾ ಪೊಲೀಸ್ ಪ್ರೊಸೀಜರ್. ಅಲ್ಲಿ ದೊರೆತ ಅಸ್ಥಿಗಳನ್ನು ಪರೀಕ್ಷೆಗೊಳಪಡಿಸಿದಾಗ ಅವು ಶೇಖರ್, ಲಾವಣ್ಯ ಮತ್ತು ಸಿಲಂಬರಸ್‌ರ ಕಳೇಬರಹವೇ ಎಂಬುದು ಖಾತ್ರಿಯಾಯಿತು. ಕೊಲೆಗಡುಕ ಮುರುಗನ್‌ಗಾಗಿ ತಲಾಷ್ ಪ್ರಾರಂಭಿಸಿದರು. ಆದರೆ ತನ್ನ ಮಗಳೇ ಸತ್ತ ಸತ್ಯಕ್ಕೆ ಜೀವ ತುಂಬಿದ ಕಾರ್ಯಕ್ರಮ ಟಿವಿಯಲ್ಲಿ ಬಿತ್ತರವಾಗುತ್ತಿದ್ದಂತೆ ಮುರುಗನ್ ತನ್ನ ಹೆಂಡತಿ ಸಮೇತ ನಾಪತ್ತೆಯಾದ. ಅವನ ಮೊಬೈಲ್‌ಗೆ ಕರೆ ಮಾಡಿದರೆ ರಿಂಗ್‌ಟೋನ್ ಕೇಳಿಬರುತ್ತಿತ್ತೇ ವಿನಃ ಯಾರೂ ರಿಸೀವ್ ಮಾಡುತ್ತಿರಲಿಲ್ಲ.

ಆಗ ಪೊಲೀಸರು ಒಂದು ಟ್ರಿಕ್ಕಿ ಕಾರ್ಯಾಚರಣೆ ನಡೆಸಲು ಮುಂದಾದರು. ಜೀ-ತಮಿಳು ಚಾನೆಲ್ ಕಚೇರಿಯಿಂದ ಮುರುಗನ್ ಮೊಬೈಲ್‌ಗೆ ಫೋನ್ ಮಾಡಿದ ಪೊಲೀಸರು "ನಾವು ಟಿವಿಯವರು. ನಿಮ್ಮ ಮಗಳು ಹೇಳುತ್ತಿರುವುದು ಸುಳ್ಳು ಎಂಬುದು ಗೊತ್ತಾಗಿದೆ. ನಿಮ್ಮನ್ನು ಬಚಾವ್ ಮಾಡಲು ಮತ್ತೊಂದು ಹೊಸ ಕಾರ್ಯಕ್ರಮ ಮಾಡುತ್ತಿದ್ದೇವೆ. ನೀವು ಇರುವಲ್ಲಿಗೇ ಬಂದು ನಿಮ್ಮ ಸಂದರ್ಶನ ನಡೆಸುತ್ತೇವೆ" ಎಂದು ನಂಬಿಸಿದರು. ತಮ್ಮ ವಾಹನಕ್ಕೆ press ಸ್ಟಿಕ್ಕರ್ ಅಂಟಿಸಿಕೊಂಡು, ಹೆಗಲ ಮೇಲೆ ಕ್ಯಾಮೆರಾ ಹೊತ್ತುಕೊಂಡು ಮುರುಗನ್ ಹೇಳಿದ ವಿಳಾಸಕ್ಕೆ ಹೋದ ಪೊಲೀಸರು ಗಂಡಹೆಂಡತಿ ಇಬ್ಬರನ್ನೂ ಅರೆಸ್ಟ್ ಮಾಡಿ ಜೈಲಿಗೆ ಗದುಮಿದರು. ಮೂರು ಕೊಲೆಗಳ ನೇರ ಆರೋಪ ಮುರುಗನ್ ಮೇಲಿದ್ದರೆ ಆ ಕೊಲೆಗಳನ್ನು ರಹಸ್ಯವಾಗಿಟ್ಟಿದ್ದ ಆರೋಪವನ್ನು ಹೆಂಡತಿ ರಾಜೇಶ್ವರಿಯ ಮೇಲೆ ಹೊರಿಸಲಾಗಿದೆ. ಕುಡಲೂರು ಸೆಂಟ್ರಲ್ ಜೈಲಿನ ಪೊಲೀಸರ ವಶಕ್ಕೆ ತಪ್ಪೊಪ್ಪಿಕೊಂಡ ಮುರುಗನ್ ಮೂರೂ ಕೊಲೆಗಳ ಉದ್ದೇಶ ಮತ್ತು ಸಂಚುಗಳನ್ನು ಇಂಚಿಂಚಾಗಿ ಬಾಯ್ಬಿಟ್ಟ.

ಅದು 2008ರಲ್ಲಿ ನಡೆದ ಹತ್ಯಾಕಾಂಡ. ಮುರುಗನ್ ವಾಸಿಸುತ್ತಿದ್ದ ಹಳ್ಳಿಯ ಊರಿನ ಪಕ್ಕದ ಊರಾದ ನಲ್ಲೂರ್ ಪಿಳ್ಳೈನಲ್ಲಿ ಶೇಖರ್‌ನ ವಾಸ. ಅಸಲಿಗೆ ಶೇಖರ್ ಮುರುಗನ್‌ಗೆ ಸ್ನೇಹಿತ ಮಾತ್ರವಲ್ಲ, ಆತ ನಡೆಸುತ್ತಿದ್ದ ಸೋಫಾಸೆಟ್ ವ್ಯವಹಾರದ ಗಿರಾಕಿಯೂ ಆಗಿದ್ದ. ಒಂದಷ್ಟು ಮಾಲು ಖರೀದಿಗೆಂದು ಶೇಖರ್ ಮುರುಗನ್‌ಗೆ ಐವತ್ತು ಸಾವಿರ ಹಣವನ್ನೂ ಮುಂಗಡ ನೀಡಿದ್ದ.

ಶೇಖರ್‌ಗೆ ಲಾವಣ್ಯ ಎಂಬ ಮಗಳಿದ್ದಳು. ಆಕೆ ಇದೇ ಮುರುಗನ್ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಸಿಲಂಬರಸನ್‌ನನ್ನು ಪ್ರೇಮಿಸುತ್ತಿದ್ದಳು. ಇಬ್ಬರದೂ ಬೇರೆಬೇರೆ ಜಾತಿಯಾದ್ದರಿಂದ ಪ್ರೇಮ ಫಲಿಸುವ ಯಾವ ಲಕ್ಷಣಗಳೂ ಇರಲಿಲ್ಲ. ಈ ನಡುವೆ ಪಕ್ಕಾ ಕಾಮುಕ ಮುರುಗನ್‌ನ ಕಣ್ಣು ಲಾವಣ್ಯಳ ಸೌಂದರ್ಯದ ಮೇಲೆ ಬಿತ್ತು. ಹೇಗಾದರು ಮಾಡಿ ಸ್ನೇಹಿತನ ಮಗಳನ್ನು ಬಳಸಿಕೊಳ್ಳಲೇಬೇಕು ಎನ್ನುವ ಆಲೋಚನೆಯಲ್ಲಿದ್ದ ಮುರುಗನ್‌ಗೆ ಸಿಲಂಬರಸನ್ ಮತ್ತು ಲಾವಣ್ಯಳ ಪ್ರೇಮ ಪ್ರಕರಣವು ಒಂದು ನೆಪವಾಯಿತು.

ಹೇಗಿದ್ದರೂ ಸಿಲಂಬರಸನ್ ತನ್ನ ನೌಕರ, ತನ್ನ ಮಾತು ಕೇಳುತ್ತಾನೆ ಎಂದು ಸ್ಕೆಚ್‌ಹಾಕಿದ ಮುರುಗನ್ ಅವರ ಪ್ರೀತಿಗೆ ಪ್ರೋತ್ಸಾಹ ನೀಡುವ ನಾಟಕವಾಡಿದ. ಗೌಪ್ಯವಾಗಿ ಸಿಲಂಬರಸನ್ ಮತ್ತು ಲಾವಣ್ಯರ ಮದುವೆ ಮಾಡಿಸಿ ತನ್ನ ಮನೆಯಲ್ಲೇ ಅವರಿಬ್ಬರನ್ನೂ ಇರಿಸಿಕೊಂಡ.

ತನ್ನ ಸ್ನೇಹಿತನೇ ತನ್ನ ಮಗಳನ್ನು ಬೇರೆ ಜಾತಿ ಹುಡುಗನೊಂದಿಗೆ ಮದುವೆ ಮಾಡಿಸಿ ತನ್ನ ಮನೆಯಲ್ಲಿ ಇರಿಸಿಕೊಂಡಿರುವುದು ತಿಳಿಯುತ್ತಲೆ ಕೋಪಗೊಂಡ ಶೇಖರ್ ಮುರುಗನ್ ಜೊತೆಗೆ ಜಗಳಕ್ಕೆ ನಿಂತ. ತಾನು ಈ ಮೊದಲು ವ್ಯವಹಾರದ ಸಲುವಾಗಿ ಕೊಟ್ಟಿದ್ದ ಐವತ್ತು ಸಾವಿರ ಹಣವನ್ನು ವಾಪಸ್ಸು ಕೊಡುವಂತೆ ಧಮಕಿಯನ್ನೂ ಹಾಕಿದ. ಈ ಮುರುಗನ್ ಕೇವಲ ಕಾಮುಕ ಮಾತ್ರವಲ್ಲ ಧನದಾಹಿಯೂ ಹೌದು. ಹಣಕ್ಕಾಗಿ, ಮಗಳ ವಿಷಯವಾಗಿ ಶೇಖರ್ ತಗಾದೆ ತೆಗೆದಾಗ ಅವನನ್ನು ಖತಂ ಮಾಡಲು ಮುರುಗನ್ ಸ್ಕೆಚ್ ಹಾಕಿದ ಮತ್ತು ಅದಕ್ಕಾಗಿ ಬಳಸಿಕೊಂಡದ್ದು ತನ್ನ ನೌಕರ ಸಿಲಂಬರಸ್‌ನನ್ನು. ಅದೊಂದು ರಾತ್ರಿ "ಎಲ್ಲಾ ಸಮಸ್ಯೆಗಳನ್ನು ಸರಿಪಡಿಸೋಣ, ನಿನ್ನ ಹಣವನ್ನೂ ವಾಪಸ್ ಕೊಡುತ್ತೇನೆ" ಎಂದು ಉಪಾಯವಾಗಿ ಶೇಖರ್‌ನನ್ನು ತನ್ನ ಮನೆಗೆ ಕರೆಸಿಕೊಂಡ ಮುರುಗನ್ ಸಿಲಂಬರಸನ್ ಜೊತೆ ಮುರುಗನ್ ಮತ್ತು ಸಿಲಂಬರಸನ್ ಚಿಕ್ಕದೊಂದು ಪಾನಗೋಷ್ಠಿಯನ್ನು ಮಾಡಿದರು. ಶೇಖರ್‌ನ ಡ್ರಿಂಕ್ಸ್‌ಗೆ ಮಂಪರಿನ ಔಷಧಿ ಬೆರೆಸಿ ಆತ ಪ್ರಜ್ಞೆ ತಪ್ಪಿದ ನಂತರ ಆತನ ಕತ್ತು ಹಿಸುಕಿ ಅವನನ್ನು ಕೊಲೆ ಮಾಡಿದರು. ನಂತರ ಮನೆ ಮುಂದುಗಡೆಯೇ ಹೆಣವನ್ನು ಹೂತುಹಾಕಿದರು.

ಲಾವಣ್ಯಳ ಮೇಲೆ ಕಣ್ಣು ಹಾಕಿಯೇ ಪ್ರೇಮ ವಿವಾಹದ ನಾಟಕವಾಡಿದ್ದ ಮುರುಗನ್ ಆಕೆಯನ್ನು ತನ್ನ ಕಾಮತೃಷೆಗೆ ಬಳಸಿಕೊಳ್ಳಲು ಬಲೆ ಬೀಸುತ್ತಲೇ ಇದ್ದ. ಲಾವಣ್ಯ ಈ ಪ್ರಯತ್ನಗಳನ್ನೆಲ್ಲ ವಿರೋಧಿಸುತ್ತಲೇ ಇದ್ದಳು. ಇದು ಮುರುಗನ್ ಕೋಪಕ್ಕೂ ಕಾರಣವಾಯಿತು. ಇದ್ದಕ್ಕಿದ್ದಂತೆ ತನ್ನ ತಂದೆ ಕಣ್ಮರೆಯಾದ ಬಗ್ಗೆ ಲಾವಣ್ಯಳಿಗೆ ಮುರುಗನ್ ಮೇಲೆ ಅನುಮಾನ ಇತ್ತು. ಅದನ್ನು ಆಕೆ ಸಿಲಂಬರಸನ್ ಬಳಿ ಹೇಳಿಕೊಂಡಳು. ಅವನ ಮೂಲಕ ಅದು ಮುರುಗನ್‌ಗೂ ತಲುಪಿತು. ಈಕೆಯಂತೂ ತನಗೆ ದಕ್ಕುತ್ತಿಲ್ಲ, ಹಾಗೆ ಬಿಟ್ಟರೆ ಕೊಲೆ ರಹಸ್ಯವನ್ನು ಬಯಲಿಗೆಳೆದುಬಿಡುತ್ತಾಳೆ, ಹಾಗಾಗಿ ಅವಳನ್ನೂ ಮುಗಿಸಿಬಿಡುವುದೇ ಸರಿ ಎಂಬ ನಿರ್ಧಾರಕ್ಕೆ ಬಂದ ಮುರುಗನ್. ಹಿಂದಿನ ಕೊಲೆ ರಹಸ್ಯದ ಭಯವನ್ನೇ ಸಿಲಂಬರಸನ್‌ನಲ್ಲಿ ಹುಟ್ಟುಹಾಕಿ ಆತನ ಸಹಾಯದಿಂದಲೇ ಲಾವಣ್ಯಳನ್ನೂ ಕೊಲೆ ಮಾಡಿ ಆಕೆಯನ್ನೂ ಮನೆಯ ಮುಂದೆಯೇ ಹೂತು ಹಾಕಿದ.

ಸಾಕ್ಷಿಗಳನ್ನು ಉಳಿಸಿದರೆ ಯಾವತ್ತಿಗೂ ಅಪಾಯ ಎಂಬುದು ಪಕ್ಕಾ ಕ್ರಿಮಿನಲ್ ಮುರುಗನ್‌ಗೆ ತಿಳಿದಿತ್ತು. ಹಾಗಾಗಿ ಎರಡೂ ಕೊಲೆಯಲ್ಲಿ ಭಾಗಿಯಾಗಿದ್ದ ಮತ್ತು ಸತ್ತವರೊಂದಿಗೆ ಸಂಬಂಧ ಹೊಂದಿದ್ದ ಸಿಲಂಬರಸ್‌ನನ್ನೂ ಸಾಯಿಸಲು ಪ್ಲ್ಯಾನ್ ಮಾಡಿದ. ಕೆಲಸವಿದೆಯೆಂದು ಆತನನ್ನು ಕಬ್ಬಿನ ಗದ್ದೆಗೆ ಕರೆದೊಯ್ದು ಆತನ ಕತ್ತು ಹಿಸುಕಿ ಅವನನ್ನೂ ಕೊಂದ ನಂತರ ಆತನ ಹೆಣವನ್ನು ಮತ್ತದೇ ತನ್ನ ಫೇವರಿಟ್ ಸ್ಪಾಟ್‌ನಲ್ಲಿ ಹೂತುಹಾಕಿ ಕೈತೊಳೆದುಕೊಂಡ.

ಹೀಗೆ ಒಂದೇ ತಿಂಗಳ ಅಂತರದಲ್ಲಿ ಮೂರು ಕೊಲೆ ಮಾಡಿದ್ದರೂ ವಿಷಯ ಲೀಕ್ ಆಗದಂತೆ ನೋಡಿಕೊಂಡಿದ್ದರಿಂದ ನಾಲ್ಕು ವರ್ಷ ಕಳೆದರೂ ವಿಷಯ ಯಾರಿಗೂ ತಿಳಿಯದೆ ಭೂಗತವಾಗಿತ್ತು. ಬಹುಶಃ ಮಗಳು ಭಾರ್ಗವಿ ರಿಯಾಲಿಟಿ ಶೋನಲ್ಲಿ ರಹಸ್ಯವನ್ನು ಹೇಳದೇ ಇದ್ದಿದ್ದರೆ ಮುರುಗನ್‌ನ ಹತ್ಯಾಕಾಂಡ ಬೆಳಕಿಗೆ ಬರುತ್ತಿರಲೇ ಇರಲಿಲ್ಲವೇನೋ.

ಅಂತೂಇಂತೂ ಕಾಮುಕ ಕಮ್ ಕೊಲೆಗಡುಕ ತಂದೆಯನ್ನು ಜೈಲಿಗಟ್ಟಿದ ಭಾರ್ಗವಿಯ ಬದುಕು ಹಸನಾಗುವ ಹಂತದಲ್ಲಿದೆ. ಪಿಯುಸಿಯಲ್ಲಿ ಡಿಸ್ಟಿಂಕ್ಷನ್ ಪಡೆದಿರುವ ಭಾರ್ಗವಿಯನ್ನು ಇಂಜಿನಿಯರಿಂಗ್ ಸೇರಿಸಿ ಓದಿಸಲು ಆಕೆಯ ಪ್ರೇಮಿ ಸತೀಶ್‌ನ ತಂದೆ ಕುಮಾರ್ ಕಾಲೇಜ್‌ನ ಸೀಟು ಹುಡುಕಾಟದಲ್ಲಿದ್ದಾರೆ. ಅಪ್ಪನ ಕಾಮತೃಷೆಗೆ ಬಲಿಯಾಗಬೇಕಿದ್ದ ಮೊಗ್ಗು ತನ್ನ ದಿಟ್ಟತನದಿಂದಾಗಿ ಮತ್ತೊಬ್ಬರ ಅಂಗಳದಲ್ಲಿ ಹೂವಾಗಿ ಅರಳುತ್ತಿರುವುದೇ ದುರಂತ ಕಥಾನಕದ ಸುಖಾಂತ್ಯ.

-ಗಿರೀಶ್ ತಾಳಿಕಟ್ಟೆ

.ಇ.ಎಂ.ಎಲ್: ಹೊಸ ಸಾರಥಿಯ ಹಳೇ ಹಗರಣ


ಈಗ ಮೆಟ್ರೋ ಹಗರಣ!

ಟೆಟ್ರಾ ಟ್ರಕ್ ಖರೀದಿ ಹಗರಣದ ಕಪ್ಪುಮಸಿಯಿನ್ನು ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್ ಯಾನೆ ಬಿ.ಇ.ಎಂ.ಎಲ್ ಮುಖದ ಮೇಲೆ ಹಸಿಯಾಗೇ ಇದೆ. ಬರೋಬ್ಬರಿ 632 ಕೋಟಿಗಳ, ...ಸೇನೆಯ ಖರೀದಿಯ ವಂಚನೆಯ ಕಳಂಕ ಸದ್ಯಕ್ಕೆ ತೊಲಗುವಂತದ್ದಲ್ಲ. ಹರಾಜಾಗುತ್ತಿರುವ ...ನವನ್ನು ಉಳಿಸಿಕೊಳ್ಳುವ ಉದ್ದೇಶಕ್ಕೆ ಅಂತಲ್ಲದಿದ್ದರೂ ಕಳೆದು ಹೋಗುತ್ತಿರುವ ಜನರ ವಿಶ್ವಾಸವನ್ನು ...ಸಿಕೊಳ್ಳಬೇಕಾದ ಅನಿವಾರ್ಯಕ್ಕಾಗಿ ಸರ್ಕಾರ ಈ ಹಗರಣದ ಪ್ರಮುಖ ರೂವಾರಿ ಮತ್ತು ...ಇ.ಎಂ.ಎಲ್‌ನ ಮ್ಯಾನೇಜಿಂಗ್ ಡೈರೆಕ್ಟರ್ ವಿ.ಆರ್.ಎಸ್ ನಟರಾಜ್‌ನನ್ನು ವಜಾಗೊಳಿಸಿ ಆ ಸ್ಥಾನಕ್ಕೆ ...ದ್ವಾರಕನಾಥ್ ಎಂಬಾತನನ್ನು ತಂದು ಕೂರಿಸಿದೆ. ಇದರಿಂದ ಭಾರೀ ಬದಲಾವಣೆಯನ್ನೇನೂ ...ಕ್ಷಿಸುವಂತಿಲ್ಲ. ಏಕೆಂದರೆ ದ್ವಾರಕನಾಥ್ ಚರಿತ್ರೆಯೂ ಹತ್ತಾರು ಹಗರಣಗಳಿಂದಲೇ ಭರ್ತಿಯಾಗಿ ...ದೆ.

ಅಂತಹದ್ದೇ ಒಂದು ಈ ಮೆಟ್ರೋ ಹಗರಣ!

ಬೆಂಗಳೂರಿಗೆ ನಮ್ಮ ಮೆಟ್ರೋ ಕಾಲಿಡುತ್ತಿದ್ದಂತೆ ಅದರ ಉಸ್ತುವಾರಿಗೆಂದು ಹುಟ್ಟಿಕೊಂಡದ್ದು ...ಎಂ.ಆರ್.ಸಿ.ಎಲ್ ಎನ್ನುವ ಮತ್ತೊಂದು ಸಾರ್ವಜನಿಕ ಸಂಸ್ಥೆ. ಯೋಜನೆಯು ಅನುಷ್ಠಾನಕ್ಕೆ ...ವ ಹೊತ್ತಿಗೆ ಸಿಟಿಯಲ್ಲಿ ಓಡಿಸಲು ರೈಲು ಮತ್ತೊಂದಷ್ಟು ಬೋಗಿಗಳು ಬೇಕಾಗಿತ್ತಲ್ಲ, ಅದನ್ನು ...ರ್ಮಿಸಿಕೊಡಲು ಇದೇ ಬಿ.ಎಂ.ಆರ್.ಸಿ.ಎಲ್ 2008ರಲ್ಲಿ ಟೆಂಡರ್ ಆಹ್ವಾನಿಸಿತ್ತು. ಆಗ ಬಿ.ಇ.ಎಂ.ಎಲ್‌ನ ...ರೆಕ್ಟರ್ (ಮೆಟ್ರೋ ಮತ್ತು ರೇಲ್ ವ್ಯವಹಾರ) ಆಗಿದ್ದ ಪಿ.ದ್ವಾರಕನಾಥ್ ಮುಂದಾಳತ್ವದಲ್ಲೇ ...ಲ್ ಕೂಡಾ 150 ಕೋಚ್‌ಗಳ ತಯಾರಿಗೆ ತಗುಲಬಹುದಾದ ತನ್ನ ದರಪಟ್ಟಿಯ ಟೆಂಡರ್ ...ತ್ತು. ಇದಕ್ಕೆ ಆಗಿನ ಕಳಂಕಿತ ಎಂ.ಡಿ ನಟರಾಜನ್ ಮತ್ತು ಫೈನಾನ್ಸ್ ವಿಭಾಗದ ಡೈರೆಕ್ಟರ್ ...ಪಿಚ್ಚಯ್ಯ ಸಾಥ್ ನೀಡಿದ್ದರು.

ಅಸಲಿ ಸಂಗತಿ ಇರೋದೆ ಇಲ್ಲಿ. ಬಿ.ಇ.ಎಂ.ಎಲ್‌ಗೆ ಸ್ವತಃ ಮೆಟ್ರೋ ಬೋಗಿಗಳನ್ನು ನಿರ್ಮಿಸಿಕೊಡುವ ...ಮರ್ಥ್ಯ ಇದೆಯೋ ಇಲ್ಲವೋ ಗೊತ್ತಿಲ್ಲ, ಆದರೆ ಮಿತ್ಸುಬಿಷಿ ಕಾರ್ಪೊರೇಷನ್, ರೋಟೆಮ್ ಮತ್ತು ಮೆಲ್ಕೋ ಎನ್ನುವ ವಿದೇಶಿ ಕಂಪನಿಯೊಟ್ಟಿಗೆ ಪಾಲುದಾರಿಕೆಯಲ್ಲಿ ಆ ಟೆಂಡರ್ ಸಲ್ಲಿಸಿತ್ತು.



ಪಿ. ದ್ವಾರಕನಾಥ್

ಟೆಂಡರ್‌ನಲ್ಲಿ ಬಿ.ಇ.ಎಂ.ಎಲ್ ನಮೂದಿಸಿದ್ದು 1832.53 ಕೋಟಿ ರೂಪಾಯಿ. ಇದು ಬೇರೆ ಕಂಪನಿಗಳಿಗೆ ಹೋಲಿಸಿದರೆ ತುಂಬಾ ಕಡಿಮೆ ಬಜೆಟ್ಟಾಗಿತ್ತು ಮತ್ತು ಸ್ಥಳೀಯ ಸಂಸ್ಥೆಯೆಂಬ ಆದ್ಯತೆಯಿಂದಾಗಿ ಮೆಟ್ರೋ ಟೆಂಡರ್ ನಿರಾಯಾಸವಾಗಿ ಬೆಮೆಲ್ ಪಾಲಾಗಿತ್ತು. ಆ ಟೆಂಡರ್‌ನ ತನ್ನ ಒಟ್ಟು ದರದಲ್ಲಿ ತನ್ನ ಪಾಲೆಷ್ಟು, ಉಳಿದ ವಿದೇಶಿ ಕಂಪನಿಗಳ ಪಾಲೆಷ್ಟು ಎಂಬುದನ್ನೂ ಬಿ.ಇ.ಎಂ.ಎಲ್ ಸ್ಪಷ್ಟವಾಗಿ ನಮೂದಿಸಿದೆ. ಅದರಂತೆ ಬೆಮೆಲ್‌ಗೆ ಸಲ್ಲಬೇಕಾದ್ದು ಕೇವಲ 24.5% ಮಾತ್ರ ಅಂದರೆ 409.76 ...ಟಿ. ಇನ್ನುಳಿದ 75.5% (1262.75ಕೋಟಿ) ನಷ್ಟು ಹಣ ಹೋಗುತ್ತಿದ್ದುದ್ದು ವಿದೇಶಿ ಕಂಪನಿಗೆ. ...ಯ ಸಂಸ್ಥೆಯಾಗಿದ್ದುಕೊಂಡೂ, ತನ್ನ ಹೆಸರಿನಲ್ಲಿ ಟೆಂಡರ್ ಸಲ್ಲಿಸಿಯೂ ಬೆಮೆಲ್‌ನ ಅಷ್ಟು ...ಮೆ ಪಾಲುದಾರಿಕೆಯನ್ನು ಗಮನಿಸಿದರೆ ವಿದೇಶಿ ಕಂಪನಿಗಳು ಇಲ್ಲಿನ ಟೆಂಡರ್ ಗಿಟ್ಟಿಸಿಕೊಳ್ಳಲು ...ಮೆಲ್‌ನ ಹೆಸರು ಬಳಸಿಕೊಂಡಿರೋದು ಖಾತ್ರಿಯಾಗುತ್ತದೆ. ಒಟ್ಟಿನಲ್ಲಿ ಎಂ.ಎನ್.ಸಿ ಕಂಪನಿಗೆ ...ಏಜೆಂಟ್‌ನಂತೆ ಕೆಲಸ ಮಾಡಿತ್ತು. ಅಲ್ಲಿಗೆ ಈ ವ್ಯವಹಾರದ ಹಿಂದಿದ್ದ ಪಿ.ದ್ವಾರಕನಾಥ್‌ನ ...ಮು ಬೆಮೆಲ್ ಘನತೆಯನ್ನು 'ಮಧ್ಯವರ್ತಿ'ಯ ಮಟ್ಟಕ್ಕೆ ಇಳಿಸಿಬಿಟ್ಟಿದ್ದರು. ವಿದೇಶಿ ಕಂಪನಿಗಳಿಗೆ ...ಡರ್ ಮಾಡಿಕೊಡಲೇ ನಡೆಸಿರುವ ಈ ವ್ಯವಹಾರದಲ್ಲಿ ಭಾರೀ ಗೋಲ್‌ಮಾಲ್ ನಡೆದಿರುವ ...ಸನೆ ಬಡಿದಿತ್ತಾದರು ಅದು ಖಾತ್ರಿಯಾಗುವ ಆಧಾರಗಳು ಸಿಕ್ಕಿರಲಿಲ್ಲ.

ಈ ಮೆಗಾ ಡೀಲಿಂಗ್ ಇಷ್ಟಕ್ಕೇ ಮುಗಿಯುವುದಿಲ್ಲ. ಬಿ.ಎಂ.ಆರ್.ಸಿ.ಎಲ್ ಸಂಸ್ಥೆ ಕಡಿಮೆ ...ಡರ್ ಸಲ್ಲಿಸಿದ್ದ ಬೆಮೆಲ್ ಮತ್ತದರ ಪಾಲುದಾರ ಸಂಸ್ಥೆಗಳಿಗೆ ಕಾಮಗಾರಿ ನೀಡುವುದು ಗ್ಯಾರಂಟಿ ...ವಂತಾದ ಮೇಲೆ ಎರಡೂ ಸಾರ್ವಜನಿಕ ಸಂಸ್ಥೆಯ ಅಧಿಕಾರಿ ಮಟ್ಟದ ಒಂದು ಮೀಟಿಂಗ್ ...ದಿತ್ತು, ಅದು ಪಕ್ಕಾ ಚೌಕಾಸಿಯ ಮೀಟಿಂಗ್. ನಮ್ಮ ಮೆಟ್ರೋ ಯೋಜನೆ ಈಗಿನ್ನೂ ...ಷ್ಠಾನಗೊಳ್ಳುತ್ತಿದ್ದು ತಾವು ನಮೂದಿಸಿರುವ ಬೆಲೆಯಲ್ಲೇ ಮತ್ತಷ್ಟು ಕಡಿಮೆ ಮಾಡಿಕೊಳ್ಳುವಂತೆ ...ಎಂ.ಆರ್.ಸಿ.ಎಲ್ ಮನವಿ ಮಾಡಿಕೊಂಡಿತ್ತು. ಕಿಂಚಿತ್ತೂ ಕೊಸರಾಡದೆ ಬೆಮೆಲ್ ಚೌಕಾಶಿಗೆ ...ಕೊಂಡದ್ದು ದೊಡ್ಡ ಆಶ್ಚರ್ಯವೇ ಸರಿ. ಏಕೆಂದರೆ ಟೆಂಡರ್‌ನಲ್ಲಿ ನಮೂದಿಸಿದ್ದು ವೆರಿ ಮಿನಿಮಮ್ ...ಡಕ್ಷನ್ ಕಾಸ್ಟ್, ಅದರಲ್ಲಿ ಸ್ವಲ್ಪವೇ ಸ್ವಲ್ಪ ಕಡಿಮೆ ಮಾಡಿದರೂ ಬೆಮೆಲ್ ಅಂಡ್ ಟೀಮಿಗೆ ...ೀ ನಷ್ಟವಾಗುತ್ತದೆಂಬ ಸತ್ಯ ಯಃಕಶ್ಚಿತ್ ನೌಕರನಿಗೂ ತಿಳಿಯುವ ಸಂಗತಿ. ಅಂತದ್ದರಲ್ಲಿ ಬೆಮೆಲ್‌ನ ...ಕಾರಿಗಳು ಬರೋಬ್ಬರಿ 160.01 ಕೋಟಿ ರೂಪಾಯಿ ಕಡಿಮೆ ಮಾಡಿಕೊಳ್ಳಲು ಒಪ್ಪಿಗೆ ...ಚಿಸಿದ್ದರು. ಇದರಿಂದ ಇವತ್ತಿನ ಮಾರ್ಕೆಟ್ ದರದಲ್ಲಿ ಒಂದು ಬೋಗಿಗೆ ನಿರ್ಮಿಸಲು ಏನಿಲ್ಲವೆಂದರೂ ...ರಿಂದ 80 ಲಕ್ಷ ಲಾಸ್ ಬೆಮೆಲ್ ಅರ್ಥಾತ್ ದೇಶದ ಹೆಗಲೇರಲಿದೆ. ಈ ಕುರಿತು ಬಿ.ಇ.ಎಂ.ಎಲ್‌ನ ...ಷ್ಟು ಷೇರುದಾರರು ಆಕ್ಷೇಪಣೆ ವ್ಯಕ್ತಪಡಿಸಿದ್ದರೂ ಗೊಂದಲವನ್ನು ನಿವಾರಿಸುವ ಪ್ರಯತ್ನಕ್ಕೆ ಅಧಿಕಾರಿಗಳು ...ಂದಾಗಿರಲಿಲ್ಲ.

ಅದನ್ನು ಬಿಸಿನೆಸ್ ಟ್ರ್ಯಾಕ್ಟಿಕ್ ಎಂದು ತಳ್ಳಿಹಾಕಿಬಿಡಬಹುದಿತ್ತೇನೋ, ಆದರೆ ಒಳಗಿಂದೊಳಗೇ ...ದಾರಿಕೆಯ ಪರ್ಸೆಂಟೇಜ್ ಪ್ರಮಾಣವನ್ನೂ ಅಡ್ಜಸ್ಟ್ ಮಾಡಿಕೊಂಡಿರುವುದೇ ನಡೆದಿರುವ ...ವಹಾರದ ಸುಳಿವು ನೀಡಿದೆ. ಟೆಂಡರ್‌ನ ಮೊತ್ತ ಹೆಚ್ಚಾಗಲಿ ಅಥವಾ ಕಡಿಮೆಯಾಗಲಿ ಪಾಲುದಾರರಿಗೆ ...ಾಯವಾಗುವ ರೂಪಾಯಿ ಮೊತ್ತದಲ್ಲಿ ಏರುಪೇರಾಗುತ್ತದೆಯೇ ಹೊರತು ಶೇಕಡಾ ಹೂಡಿಕೆ ...ಹಂಚಿಕೆಗಳಲ್ಲಿ ಅಲ್ಲ. ಅಂದರೆ ಈ ಮೊದಲೆ ತಿಳಿಸಿದಂತೆ ಬೆಮೆಲ್‌ನ 24.5% ಮತ್ತು ವಿದೇಶಿ ...ನಿಯ 75.5% ಹಾಗೇ ಉಳಿಯಬೇಕಿತ್ತು. ಆದರೆ ಹೀಗೆ ಮಾಡಿದರೆ ಲಾಭದ ಆಸೆಯಲ್ಲೇ ...ಹಾರ ಕುದುರಿಸಿಕೊಂಡಿದ್ದ ವಿದೇಶಿ ಕಂಪನಿಗಳಿಗೂ ಭಾರೀ ಲಾಸ್ ಆಗುತ್ತಿತ್ತು. ಅದಕ್ಕೆಂದೆ ...ಡಿ. ನಟರಾಜನ್ ಮತ್ತು ಡೈರೆಕ್ಟರ್‌ಗಳಾದ ಪಿ.ದ್ವಾರಕನಾಥ್, ಎಂ. ಪಿಚ್ಚಯ್ಯ ಅವರೊಂದಿಗೆ ...ರ್‌ಗಿಳಿದ ಕಂಪನಿಗಳು ಒಳಗಿಂದೊಳಗೇ ಈ ಪರ್ಸೆಂಟೇಜ್ ಸ್ವಲ್ಪ ಬದಲಾವಣೆ ಮಾಡಿಕೊಂಡಿದ್ದವು. ...ಸ ಪಾಲುದಾರಿಕೆಯ ಪ್ರಕಾರ ವಿದೇಶಿ ಕಂಪನಿಗಳಿಗೆ ಒಟ್ಟು ಮೊತ್ತದಲ್ಲಿ 80.96% ...ಾಯವಾಗಲಿದ್ದರೆ ಬೆಮೆಲ್ ಪಾಲಿಗೆ ದಕ್ಕಲಿರುವುದು ಕೇವಲ 19.04% ಮಾತ್ರ.

ಈ ಬದಲಾವಣೆಯಿಂದಾಗಿ ಒಟ್ಟು ಮೊತ್ತದಲ್ಲಿ 160 ಕೋಟಿ ಕಡಿಮೆಯಾದರು ವಿದೇಶಿ ...ಪನಿಗಳಿಗೆ ಹೋಗುತ್ತಿದ್ದದ್ದು ರೂ.1354.07 ಕೋಟಿ. ಹಳೆಯ ಪಾಲುದಾರಿಕೆಯಂತೆ ...ಾಯವಾಗಬೇಕಿದ್ದ 1262.75 ಕೋಟಿಗಿಂತ 91.32 ಕೋಟಿ ಹೆಚ್ಚು ಲಾಭವಾಗಲಿದೆ. ಇನ್ನು ...ಇ.ಎಂ.ಎಲ್‌ಗೆ ದಕ್ಕಲಿರುವುದು ಕೇವಲ 318.44 ಕೋಟಿ ಮಾತ್ರ (ಮೊದಲು 409.76 ...ಟಿ). ಆದಾಯ ಇಳಿಕೆ ಕಂಡರೂ ವಿದೇಶಿ ಕಂಪನಿಗಳ ಲಾಭ ಹೆಚ್ಚಾಗುವಂತೆ ಚಮತ್ಕಾರ ...ದೆಯೆಂದರೆ ಬೆಮೆಲ್ ಅಧಿಕಾರಿಗಳು ಅದಿನ್ನೆಂತ ಸರ್ಕಸ್ ಮಾಡಿರಲಿಕ್ಕಿಲ್ಲ. ಈ ಕಷ್ಟಕ್ಕೆ ಸರಿಯಾದ ...ಫಲವೂ ಅವರಿಗೆ ದಕ್ಕಿದೆ. ಈಗಿನ ನೂತನ ಮ್ಯಾನೇಜಿಂಗ್ ಡೈರೆಕ್ಟರ್ ಪಿ.ದ್ವಾರಕನಾಥ್, ಅವತ್ತಿನ ...ಡಿ ನಟರಾಜನ್ ಮತ್ತು ಫೈನಾನ್ಸ್ ಡೈರೆಕ್ಟರ್ ಪಿಚ್ಚಯ್ಯ ಟೀಮು ಇದಕ್ಕೆಂದು ವಿದೇಶಿ ಕಂಪನಿಯೊಂದಿಗೆ ...ದುರಿಸಿಕೊಂಡದ್ದು ಬರೋಬ್ಬರಿ 40 ಕೋಟಿಯ ಡೀಲು! ಇಲ್ಲದಿದ್ದರೆ ಸುಖಾಸುಮ್ಮನೆ ದೇಶದ ...ಕ್ಕೆ 91.32 ಕೋಟಿ ನಷ್ಟ ಮಾಡಿ ವಿದೇಶಿಗರ ಮಡಿಲು ತುಂಬಿಸಲು ಯಾರು ತಾನೆ ರಿಸ್ಕ್ ...ಕೊಂಡಾರು?

ಈ ಕುರಿತು ರಕ್ಷಣಾ ಸಚಿವ ಎ.ಕೆ ಆ್ಯಂಟನಿ ಮತ್ತು ರಾಷ್ಟ್ರಪತಿ ಪ್ರತಿಭಾ ಸಿಂಗ್ ಪಾಟೀಲ್‌ಗೂ ...ನಾಸ್ವಾಮಿ ಎಂಬ ಅಡ್ವೊಕೇಟ್ ದೂರು ನೀಡಿ ಸಿಬಿಐ ತನಿಖೆಗೆ ಮನವಿ ಮಾಡಿದ್ದಾರೆ.

ಈ ರೇವಣ್ಣನಿಗೆ ಇಂಗ್ಲಿಷ್ ಬರದೆ ಇರದ್ಕೆ ಮುಖ್ಯಮಂತ್ರಿ ಆಗ್ಲಿಲ್ಲ ಕಣ್ರಿ


ವೈದ್ಯಕೀಯ ನೇಮಕಾತಿ ಅಕ್ರಮದಲ್ಲಿ ಅಪರಾಧ ಸಾಬೀತಾಗಿ ಮಂತ್ರಿಗಿರಿ ಕಳೆದುಕೊಂಡು ಮನೆಯಲ್ಲಿದ್ದ ರಾಮಚಂದ್ರಗೌಡನೆಂಬ ಅನರ್ಘ್ಯ ರತ್ನವನ್ನು ಮಾರಿಕೊಂಡ ಮತದಾರರು ಮತ್ತೆ ಎಮ್ಮೆಲ್ಸಿ ಮಾಡಿದರಲ್ಲಾ, ಇದನ್ನೇ ಕರ್ನಾಟಕದ ಮತದಾರನ ತೀರ್ಪೆಂದು ಭಾವಿಸಿರುವ ರಾ.ಚಂಗೌಡ ಹಾಲಿ ಖಾಲಿ ಇರುವ ಮುಖ್ಯಮಂತ್ರಿ ಚೇರಿಗಾಗಿ ನಾನು ಸ್ಪರ್ಧೆಯಲ್ಲಿದ್ದೇನೆ ಎಂದನಂತಲ್ಲಾ, ಇದನ್ನ ಕೇಳಿಸಿಕೊಂಡ ಜನ ಈ ಶತಮಾನದ ಜೋಕೆಂಬಂತೆ ನಕ್ಕರೆ, ಮೈಸೂರಿನ ಕಡೆ ಮೋಸಹೋದ ಹುಡುಗರೆಲ್ಲಾ ಸೇರಿ "ನಾವು ಕೆಲಸಕ್ಕಾಗಿ ರಾಮಚಂದ್ರಗೌಡನ ಏಜೆಂಟರಿಗೆ ಕೊಟ್ಟ ಲಂಚದ ಹಣ ಇನ್ನೂ ವಾಪಸು ಬಂದಿಲ್ಲ" ಎಂದು ದೂರಿದಂತರಲ್ಲಾ. ಈತ ಮುಖ್ಯಮಂತ್ರಿಯಾದ ನಂತರವಾದರೂ ತಮ್ಮ ಹಣ ಸಂದಾಯ ಮಾಡಬಹುದೆಂದು ನಿರೀಕ್ಷಿಸಿ, ರಾಮಚಂದ್ರಗೌಡ ವಿಧಾನಸೌಧದ ಎದುರು ನಿಂತು ಪ್ರಮಾಣವಚನ ಸ್ವೀಕರಿಸುವಂತೆ ಆ ಯುವಕರೆಲ್ಲಾ ಚಾಮುಂಡೇಶ್ವರಿಯನ್ನು ಬೇಡಿಕೊಂಡವಂತಲ್ಲಾ, ಥೂತ್ತೇರಿ!!

ಥೂತ್ತೇರಿ

-ಯಾಹೂ

******

ನಮ್ಮ ಹಳೆ ಸಿನಿಮಾ ತಾಯಿ ಪಾಪಮ್ಮನಂತೆ ಕಾಣುವ ಕುಂಕುಮಧಾರಿ ರಾಮಚಂದ್ರಗೌಡನಂಥವನೇ ಮುಖ್ಯಮಂತ್ರಿಯಾಗುತ್ತೇನೆ ಎಂದಮೇಲೆ ಇನ್ನು ಬಿಜೆಪಿಯ ಬಫೂನ್‌ಗಳು ಸುಮ್ಮನಿರಲು ಸಾಧ್ಯವೇ ಎಂದು ಯೋಚಿಸುತ್ತಿರುವ ಹೊತ್ತಲ್ಲೇ, ಸಂಬಂಧಿಕರೆಲ್ಲಾ ಸತ್ತ ಮೇಲೆ ಕಾಣಿಸಿಕೊಳ್ಳುವ ಅಸುರನಂತೆ ಕಾಣುವ ಈಶ್ವರಪ್ಪ "ನನಗೆ ಶಾಸಕರ ಬೆಂಬಲವಿದೆ. ಆದರೂ ನಾನು ಮುಖ್ಯಮಂತ್ರಿ ಪದವಿಯ ಆಕಾಂಕ್ಷಿಯಲ್ಲ" ಎಂದುಬಿಟ್ಟರಂತಲ್ಲ, ಇನ್ನು ಬಿ.ಜೆ.ಪಿಯಲ್ಲಿನ ಭೂಗತ ಗುಳ್ಳೆನರಿಯೊಂದು, ಮುಖ್ಯಮಂತ್ರಿ ಕುರ್ಚಿಯ ಬಳಿಗೆ ಆಗಾಗ್ಗೆ ಬಂದು ಮುಟ್ಟಿ ನೋಡಿ ಹೋಗುವುದನ್ನು ಕಂಡ ಯಡ್ಡಿ ಕಡೆಯವರು ಒಂದು ಕತೆಯನ್ನೆ ಹೇಳಿದಂತರಲ್ಲಾ.



ಗುಳ್ಳೆನರಿಯೊಂದಕ್ಕೆ ಹುಲಿಯೊಡನೆ ಗುದಿಮುರಿಯಾಗುವ ಮನಸ್ಸಾಯ್ತಂತೆ. ಆಗಾಗ ಬಂದು ಹುಲಿಮರಿಗಳನ್ನ ವಿಚಾರಿಸಿಕೊಂಡು ಹೋಗುತ್ತಿತ್ತಂತೆ. ಹೋಗುವ ಮುನ್ನ ನಿಮ್ಮ ತಾಯಿ ಇದ್ದರೆ ಬಿಡುತ್ತಿರಲಿಲ್ಲ ಎಂದು ಹೇಳಿ ಹೋಗುತ್ತಿತ್ತಂತೆ. ಹೀಗೇ ಕಾಲಾಹಾಕಿ ಕಣ್ಮರೆಯಾಯ್ತಂತೆ. ಹಾಗೆ ಜನಾಭಿಪ್ರಾಯದಿಂದ ಮುಖ್ಯಮಂತ್ರಿ ಕುರ್ಚಿ ಹಿಡಿಯಲಾಗದ ಗುಳ್ಳೆನರಿ, ಆಗಾಗ್ಗೆ ಬಿ.ಜೆ.ಪಿ ಬಚ್ಚಾಗಳ ಬಳಿ ಕಾಣಿಸಿಕೊಂಡು, ಮುಂದಿನ ಮುಖ್ಯಮಂತ್ರಿ ನಾನೆ ಎಂದು ಇನ್ನೇನು ಸೀನುವಂತೆ ಮುಖಮಾಡಿಕೊಂಡು ಹೋಗುತ್ತ ಮುಖ್ಯಮಂತ್ರಿ ಕುರ್ಚಿ ದಿಕ್ಕಿಗೆ ಮನೆಬಾಗಿಲನ್ನ ಬದಲಾಯಿಸುವ ವಾಸ್ತು ಕೆಲಸಕ್ಕೆ ತೊಡಗಿದೆಯಂತಲ್ಲಾ, ಥೂತ್ತೇರಿ!!

******

ಕನ್ನಡ ಮತ್ತು ಇಂಗ್ಲಿಷ್ ಮೀಡಿಯಂಗಳ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಹೋದಲ್ಲೆಲ್ಲಾ ಅದರ ಬಗ್ಗೆ ಮಾತನಾಡುತ್ತಿರುವ ಎಚ್.ಡಿ.ರೇವಣ್ಣನವರನ್ನ ಮಾತನಾಡಿಸಿದರೆ ಹೇಗೆ ಅನಿಸಿತಲ್ಲಾ, ಕೂಡಲೇ ಫೋನ್ ಮಾಡಲಾಗಿ ರಿಂಗಾಯ್ತು.

ರಿಂಗ್ ಟೋನ್: "ನಮ್ಮ ಸಂಸಾರ ಆನಂದ ಸಾಗರ, ಪ್ರೀತಿಯೆಂಬ ದೈವವೇ ನಮಗಾಧಾರ, ಆ ದೈವತಂದ ವರದಿಂದ ಬಾಳೆಬಂಗಾರ, ನಮ್ಮ... ಸಂ...

"ಹಲೋ ಯಾರ್ರಿ?"

"ನಾನು ಸಾರ್, ಯಾಹೂ ಅಂತ ಪತ್ರಕರ್ತ."

"ಯಾಕ್ ಫೋನ್ ಮಾಡಿದ್ರಿ ಹೇಳಿ."

"ಏನಿಲ್ಲ ಸಾರ್, ಇತ್ತೀಚೆಗೆ ಮಕ್ಕಳಿಗೆ ಒಂದನೇ ಕ್ಲಾಸಿಂದ್ಲೆ ಇಂಗ್ಲಿಷ್ ಕಲುಸಬೇಕು ಅಂತ ಚರ್ಚೆ ನೆಡೀತಾ ಅದೆ. ಇದರ ಬಗ್ಗೆ ನೀವೇನೇಳ್ತಿರಿ?"

"ಅದಕ್ಕೆ ನಾನು ಸಪೋಟು ಮಾಡ್ತಿನಿ ಕಂಡ್ರಿ, ನಮಿಗ್ಯಲ್ಲ ಸಣ್ಣುಡಗರಿಂದ್ಲೆ ಇಂಗ್ಲಿಸ್ ಕಲಿಸಿದ್ರೆ ನಾನಿವತ್ತು ಮಾತಾಡಕ್ಕೆ ಕಷ್ಟಪಡಬೇಕಾಗಿರಲಿಲ್ಲ."

"ಕುಮಾರಸ್ವಾಮಿ ಕನ್ನಡ ಮಾತಾಡಕ್ಕೆ ಕಷ್ಟಪಡ್ತಾರಲ್ಲ ಸಾರ್?"

"ನಮ್ಮ ಕನ್ನಡ ಮಾತಾಡಕ್ಕೆ ಯಾಕ್ರಿ ಕಷ್ಟಪಡಬೇಕು. ಸಣ್ಣದರಿಂದ ಕಲ್ತಿರದಿಲ್ವೆ ಅಂಗೆ ಇಂಗ್ಲಿಸ್‌ನೂ ಕಲ್ತಿದ್ರೆ ಚನ್ನಾಗಿರ್ತದೆ."

"ದೇವೇಗೌಡ್ರು ಇಂಗ್ಲಿಷ್ ಸೊಗಸಾಗಿ ಮಾತಾಡ್ತಾರಲ್ಲ, ಹೆಂಗೆ ಸಾರ್?"

"ನಮ್ಮಪ್ಪಾರ ವಿಸಿಯ ಬುಡು. ಅವ್ರುರು ಆ ಕಾಲ್ದಿಂದ ಡೆಕ್ಕನ್‌ರೀಲು ಅನ್ನೊ ಪೇಪರ್ ತರಿಸಿಗಂಡು ಒಂದಕ್ಷರನೂ ಬುಡದಂಗೆ ಓದಿಓದಿ ಕಲ್ತಗಂಡ್ರು."

"ನೀವು ಅಂಗೆ ಕಲ್ತಗಬೇಕಾಗಿತ್ತು."

"ನಾವ್ಯಂಗ್ರಿ ಕಲಿಯಕ್ಕಾಯ್ತದೆ. ಪ್ರತಿ ಪದಕ್ಕು ಡಿಕ್ಷನರಿ ತಗಂಡು ನೋಡ್ತ ಹೋಗಕ್ಕಾಯ್ತದಾ? ಟೈಮೆಸ್ಟು ವೇಸ್ಟಾಯ್ತದೆ? ಅದ್ಕೆ ನಾವಂತು ಇಂಗ್ಲಿಸ್ ಕಲೀಲಿಲ್ಲ, ಮಕ್ಕಳಿಗಾರ ಕಲ್ಸಿ ಅಂತ ಹೇಳದು."

"ಈಗ ಹಾಲಿ ಇರೊ ಮೇಷ್ಟ್ರು ಕೈಲಿ ಆಯ್ತದ ಸಾ?"

"ಆಗಲಿಲ್ಲ ಅಂದ್ರೆ ತರಿಸಬೇಕು ಕಂಡ್ರಿ. ಇವತ್ತು ದನಗಳಿಗೆ ಮೇವಿಲ್ಲ ಅಂದ್ರೆ ತರಿಸಿಗಳದಿಲವೆ. ಹಿಂಡಿ, ಬೂಸಾ ಏನು ಬೇಕು ಯಲ್ಲಾನು ಹೊರಗಡೆಯಿಂದ ತರಿಸಿಗಳಲ್ವ"

"ಇಂತದೊಂದು ಐಡಿಯಾನೆ ಸರಕಾರಕ್ಕೆ ಹೊಳದಿಲವಲ್ಲ ಸಾರ್."

"ಗೊತ್ತಿಲ್ದಿಯಿರದ ಕೇಳಬೇಕು ಕಂಡ್ರಿ. ಇವತ್ತು ಇಂಗಲಂಡು, ಅಮ್ಮೆರಿಕದಲ್ಲಿರೊ ನಿರುದ್ಯೋಗಿ ಜನ ಕರದು ಊಟ ಹಾಕಿದ್ರೆ ಸಾಕು ಇಂಗ್ಲಿಸ್ ಕಲಿಸಿಬಿಟ್ಟು ಹೋಯ್ತರೆ.?"

"ಅವ್ರುರೋದೇಟಿಗೆ ಮರತೋದ್ರೆ ಏನು ಮಾಡದು ಸಾರ್?"

"ಅದ್ಕೆ ಕಂಡ್ರಿ ನಾನು ಹೇಳದು. ಸಣ್ಣುಡಗರಿಂದ್ಲೆ ಕಲಿಸಿ ಅಂತ. ಸಣ್ಣುಡುಗರಲ್ಲಿ ಕಲ್ತ ಬಾಸೆ ಸಾಯಗಂಟ ಹೋಗದಿಲ್ಲ."

"ನಿಜ ಸಾರ್. ನಾನು ಸಣ್ಣುಡುರಾದಾಗ ಕಲ್ತ ಬೋಗುಳ ಇನ್ನು ಗೆಪ್ತಿ ಅವೆ. ನೀವೇ ಹೇಳಿದಂಗೆ ಸಣ್ಣುಡಗರಲ್ಲಿ ಕಲ್ತ ಭಾಷೆ ಸಾಯಗಂಟ ಹೋಗದಿಲ್ಲ. ಅನ್ನದಾದ್ರೆ ಸಣ್ಣುಡಗರಿಗೆ ನಮ್ಮ ಮಾತೃ ಭಾಷೆಣೆ ಮರೆಮಾಡಿದ್ರೆ ಭಾಷೆ ಉಳಿತದ ಸಾರ್?"

"ನೋಡ್ರಿ, ಇಂಗ್ಲೀಸ್ನಂಗೆ ಕಲುಸ್ತಿವೊ ಅಂಗೆ ಕನ್ನಡನೂ ಕಲುಸಬೇಕು. ಆ ತರ ನನಿಗೆ ಇಂಗ್ಲಿಸ್ ಕಲಿಸಿದ್ರೆ ನಮ್ಮಪ್ಪ ಪ್ರಧಾನಿಯಾದಾಗ ನಾನು ಇಂಗ್ಲಿಸ್ ಅರ್ಥಮಾಡಿಕತಿದ್ದೆ. ಅತ್ತಗೆ ಹಿಂದಿಗೂ ಬತ್ತಿರಲಿಲ್ಲ, ಇಂಗ್ಲಿಸ್ ಮದ್ಲೆ ಬತ್ತಿರಲಿಲ್ಲ. ಅಂಗಾಗಿ ಡೆಲ್ಲಿಲಿ ಸುಮ್ಮನೆ ಪ್ಯಕರನಂಗೆ ಇರಬೇಕಾಯ್ತು.?

"ಇನ್ನೊಂದು ಭಾಷೆ ಬರಲ್ಲವಲ್ಲ ಅಂತ ಯಾವತ್ತೂ ಕೀಳರಿಮೆ ಅನುಭವಿಸಬಾರದು ಸಾರ್. ನಮ್ಮ ಮಾತೃಭಾಷೆ ಚೆನ್ನಾಗಿ ಬಂದ್ರೆ ಸಾಕು. ಮಾತೃ ಭಾಷೆನೆ ಸರಿಯಾಗಿ ಬರದಿದ್ರೆ ಯಾವ ಕೀಳರಿಮೆನೂ ಇಲ್ಲ. ಆದ್ರೆ ಇಂಗ್ಲಿಸ್ ಬರಲ್ಲ ಅಂತ ಯಾಕೆ ಕೊರಗಬೇಕು. ಆ ಹಿಂದಿ ಜನಕ್ಕೆ ಹಿಂದಿ ಬುಟ್ರೆ ಇನ್ಯಾವ ಭಾಷೆ ಬತ್ತದೆ ಸಾ? ಆದ್ರೂ ಯಂಗವ್ರರೆ ನೋಡಿ."

"ನ್ಯಾನೂ ಅಂಗೆ ಇದ್ದೆ ಕಂಡ್ರಿ. ಮಂತ್ರಿಯಾದಾಗ್ಲೂ ನನಗೆ ಅಂಗನಿಸಿರಲಿಲ್ಲ ನಮ್ಮಪ್ಪ ಪ್ರಧಾನಿಯಾದಾಗ ಥೂ ಇಂಗ್ಲಿಸ್ ಕಲಿಬೇಕಾಗಿತ್ತು ಅನ್ನುಸ್ತು ಕಂಡ್ರಿ."

"ಇನ್ನದರಗತ್ಯ ಇಲ್ಲ ಅಲವೆ?"

"ಥೂ, ನನಗಿಲ್ಲ ಕಂಡ್ರಿ. ನಮ್ಮುಡ್ರಿಗೆ ಬೇಕಲವೇನ್ರೀ."

"ಇಂಗ್ಲಿಸು ಯಲ್ಲಾರಿಗೂ ಯಾಕೆ ಬೇಕು ಸಾರ್?"

"ಅದು ಒಪ್ಪೊ ಮಾತೆಯ. ಆದ್ರೆ ಜನ ತಿಳಕಬೇಕಲ್ಲ"

"ನೀವೇ ತಿಳಕಂಡಿಲ್ಲ, ಇನ್ನ ಜನಗಳ್ಳಂಗೆ ತಿಳಕಂಡರೂ?"

"ಜನಗಳಿಗೆ ಹೇಳಕ್ಕೆ ಅಲವೇನ್ರಿ ನಾವಿರದು. ನಾವು ತಿಳಕಂಡಿದ್ದಿವಿ, ಬುಟ್ಟಿದ್ದೀವಿ ಅನ್ನದು ಬೇರೆ ಮಾತುರಿ."

"ನೋಡಿ ಸಾರ್, ಸಣ್ಣುಡಗರಿಂದ್ಲೆ ಇಂಗ್ಲಿಸ್ ಕಲಿಸಿದ್ರೆ ನಮ್ಮ ಭಾಷೆಲಿರೊ ಬನಿ, ಸೊಗಡು, ಗಾದೆ, ಜಾನಪದ ಇವ್ರುನ್ನೆಲ್ಲ ಕಳಕತ್ತವೆ. ಈಗಾಗ್ಲೆ ಕಳಕತ್ತ ಇದ್ದಿವಿ. ಇವ್ರುರಿಗೆ ಸಿಗೊ ಇಂಗ್ಲಿಸ್ ಅಂತದೆಯಾ. ಒಟ್ಟಿನಲ್ಲಿ ಇಂಗ್ಲಿಸು ಯಾಕೆ ಬೇಕು ಎಷ್ಟು ಬೇಕು ಮತ್ತೆ ಯಾರಿಗೆ ಬೇಕು ಅನ್ನದು ಮದ್ಲು ಇತ್ಯರ್ಥ ಆಗಬೇಕು."

"ಇತ್ಯರ್ಥ ಏನಾಗಬೇಕ್ರಿ. ಯಲ್ಲಾ ಸಣ್ಣುಡ್ರಿಗೂ ಇಂಗ್ಲಿಸ್ ಬೇಕು ಅಂತ ನಾನು ಹೇಳಿಲ್ವೆ. ನಾನು ಅನುಭವಿಸಿದ ಪಾಡು ಬ್ಯಾಡಿ ಅಂತ್ಲೆ ಇವತ್ತು ಹೇಳದು."

"ನಿಮಗೆ ಇಂಗ್ಲಿಸ್ ಬಂದಿದ್ರೆ ಮುಖ್ಯಮಂತ್ರಿ ಆಯಿತ್ತಿದ್ರಾ ಸಾರ್?"

"ಅದರಲ್ಲೇನು ಅನುಮಾನ? ಕುಮಾರನಿಗೇ ಕರದು ಹೇಳ್ತಿದ್ದೆ ನಾನು ಯಳ್ಡರ್ ಬ್ರದರು, ಯೂ ಕೀಪ್ ಕೊಯಿಟ್. ಐ ಆಮ್ ಚೀಫ್ ಮಿನಿಸ್ಟ್ರು ಅಂತ ಅವತ್ತೆ ಹೇಳ್ತಿದ್ದೆ."

"ಹೋಗ್ಲಿ ಈಗೇನಾರ ಕಲ್ತಿದ್ದಿರ ಸಾರ್?"

"ಈಗ ಬೇಕಾಗಿಲ್ಲ ಕಂಡ್ರಿ ನನಿಗೆ. ಈಗಾಗಿರೊ ಅನುಭವನೆ ಸಾಕು. ಮುಖ್ಯಮಂತ್ರಿಗಿರಿ ನಿಭಾಯಿಸ್ತಿನಿ."

"ನಿಜ ಸಾರ್, ಈಗಿನ ಕರ್ನಾಟಕದ ಪರಿಸ್ಥಿತಿಲಿ, ಕುಮಾರಸ್ವಾಮಿ ಟ್ಯಾಲೆಂಟ್ ಇದ್ರೆ ಸಾಕು, ಇಂಗ್ಲಿಸು ಬ್ಯಾಡ. ಯಾವಳು ಬ್ಯಾಡ."

"ನಿಜ ಹೇಳಬೇಕು ಅಂದ್ರೆ, ನಾನು ರಾಜಕೀಯಕ್ಕೆ ಬರದು ನಮ್ಮನೇಲಿ ಯಾರಿಗೂ ಇಷ್ಟ ಇರಲಿಲ್ಲ ಕಂಡ್ರಿ. ನಮ್ಮಪ್ಪನೂ ಬ್ಯಾಡ ಅಂದಿದ್ದು, ನಾನು ಚನ್ನಾಗಿ ಓದಿ ಇಂಗ್ಲಿಸಲ್ಲಿ ಮಾತಾಡಂಗಿದ್ದಿದ್ರೆ ಅವ್ರರಂಗಂತಿದ್ರಾ" ಅದ್ಕೆ ನಾನೇನೇಳ್ತಿನಪ್ಪಾ ಅಂದ್ರೆ, ಅವ್ರುನ್ಯಾವನು ಮಾಡಿದ್ರೊ ಇಂಗ್ಲಿಸ್ ಕಲ್ತಗಳಿ ಅಂತವ."

"ನೀವು ನಿರ್ವಹಿಸಿದ ಖಾತೆಗೂ ಇಂಗ್ಲಿಸ್ ಬೇಕಿರಲಿಲ್ಲ ಅಲವೆ."

"ಬೇಕಿತ್ತೋ ಏನೊ. ಪಿಡಬ್ಲುಡಿ ಖಾತೆ ವಿಷಯದಲ್ಲಿ ನಮ್ಮಪ್ಪಾರೆ ಯಲ್ಲಾ ತೀರಮಾನ ತಗತಿದ್ರು. ಇನ್ನು ಕೆ.ಎಂ.ಎಫ್‌ನಲ್ಲಿರೋದೆಲ್ಲ ದನ್ನ, ಯಮ್ಮೆ ಕಟ್ಟಿರೋರು. ಅಲ್ಲಿ ಮಿಲ್ಕ ಅಂದ್ರೆ ಸಾಕಾಗಿತ್ತು."

ಥೂತ್ತೇರಿ!!!?


ಮೂರನೇ ಬಿಜೆಪಿ ಮುಖ್ಯಮಂತ್ರಿ ಯಾರು?

ಮುಖ್ಯಮಂತ್ರಿ ಸದಾನಂದ ಗೌಡ ಒಂದೆರಡು ದಿನಗಳಲ್ಲಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವ ಸಾಧ್ಯತೆ ದಟ್ಟವಾಗಿ ಕಂಡುಬರುತ್ತಿದೆ. ಅಂದರೆ, ಭಾರತೀಯ ಜನತಾ ಪಕ್ಷದಲ್ಲಿ ನಾಯಕತ್ವಕ್ಕಾಗಿ ನಡೆಯುತ್ತಿರುವ ಒಳಜಗಳ ತಾರಕಕ್ಕೆ ತಲುಪಿದೆ ಎಂದರ್ಥ. ಹೀಗಾಗಿ ಮುಂಬರುವ ದಿನಗಳಲ್ಲಿ ಕರ್ನಾಟಕ ರಾಜ್ಯದ ಜನತೆಗೆ ಬಿಜೆಪಿಯ ಮೂರನೆಯ ಮುಖ್ಯಮಂತ್ರಿಯನ್ನು ಕಾಣುವ ಸದವಕಾಶ ಒದಗಿಬರಲಿದೆ ಎಂಬ ಮಾತು ವಿಧಾನಸೌಧದ ಕಾರಿಡಾರ್‌ಗಳಲ್ಲಿ ಮತ್ತು ಬಿಜೆಪಿ ವಲಯದಲ್ಲಿ ಕೇಳಿಬರುತ್ತಿದೆ.

ಸದಾನಂದ ಗೌಡರನ್ನು ಮುಖ್ಯಮಂತ್ರಿ ಸ್ಥಾನದಿಂದ ಇಳಿಸಬೇಕಾದ ಅನಿವಾರ್ಯ ಪರಿಸ್ಥಿತಿ ಯಾಕೆ ಬಂದಿದೆ? ಚುನಾವಣೆ ಸದ್ಯದಲ್ಲೇ ಎದುರಾಗಲಿರುವ ಸಂದರ್ಭದಲ್ಲಿ ಹೊಸ ಮುಖ್ಯಮಂತ್ರಿಯ ಆಯ್ಕೆ ಯಾಕೆ ಬೇಕಾಗಿದೆ?

ಸದಾನಂದ ಗೌಡ ಭ್ರಷ್ಟರಲ್ಲ. ಅವರು ಕ್ಲೀನ್ ಇಮೇಜ್ ಹೊಂದಿದ್ದು ಯಡಿಯೂರಪ್ಪನವರಿಂದಾಗಿ ಪಕ್ಷಕ್ಕೆ ಆದ ಕಳಂಕವನ್ನು ತಕ್ಕಮಟ್ಟಿಗೆ ರಿಪೇರಿ ಮಾಡಿದ್ದಾರೆ. ಒಂದು ರೀತಿಯಲ್ಲಿ ಹೇಳುವುದಾದರೆ ಇವರು ತಮ್ಮ 10 ತಿಂಗಳ ಕಾಲ ಡ್ಯಾಮೇಜ್ ಕಂಟ್ರೋಲರ್ ಚೀಫ್ ಮಿನಿಸ್ಟರ್ ಆಗಿ ಕಾರ್ಯ ನಿರ್ವಹಿಸಿದ್ದಾರೆ. ಆದರೆ ಇನ್ನು ಒಂದು ವರ್ಷದಲ್ಲಿ ಚುನಾವಣೆಗಳು ಎದುರಾಗಲಿವೆ. ಸಾರ್ವತ್ರಿಕ ಅಸೆಂಬ್ಲಿ ಚುನಾವಣೆಯನ್ನು ಎದುರಿಸಬೇಕಾದರೆ ಖಂಡಿತವಾಗಿಯೂ ರಾಜಕೀಯವಾಗಿ ಪ್ರಬಲ ಜಾತಿಗೆ ಸೇರಿದವರನ್ನೇ ಮುಖ್ಯಮಂತ್ರಿಯನ್ನಾಗಿಸುವುದು ಬಿಜೆಪಿ ಹೈಕಮಾಂಡ್‌ಗೆ ಅನಿವಾರ್ಯವಾಗಿದೆ. ಅಷ್ಟೇ ಅಲ್ಲ, ಮುಂದಿನ ಚುನಾವಣೆಯ ಖರ್ಚು, ವೆಚ್ಚಗಳನ್ನು ತೂಗಿಸಬಲ್ಲ ವ್ಯಾವಹಾರಿಕ ಜ್ಞಾನವೂ ಮುಖ್ಯಮಂತ್ರಿ ಹುದ್ದೆಯಲ್ಲಿರುವವರಿಗೆ ಬೇಕಾಗುತ್ತದೆ. ಅದೇರೀತಿ, ದೆಹಲಿ ನಾಯಕರ ವೆಚ್ಚಗಳನ್ನು ಭರಿಸಬಲ್ಲ ಶಕ್ತಿಯನ್ನು ಹೊಂದಿರಬೇಕಾಗುತ್ತದೆ. ಅದೆಲ್ಲ ಸದಾನಂದ ಗೌಡರಿಂದ ಸಾಧ್ಯವಿಲ್ಲ.





ಮುಖ್ಯಮಂತ್ರಿ ಸ್ಥಾನಕ್ಕೆ ಕುರುಬ, ಲಿಂಗಾಯತ ಮತ್ತು ಒಕ್ಕಲಿಗರ ನಡುವೆ ಸ್ಪರ್ಧೆ........

ಆದ್ದರಿಂದಲೇ ಅವರನ್ನು ಮುಖ್ಯಮಂತ್ರಿ ಕುರ್ಚಿಯಿಂದ ಕೆಳಗಿಳಿಸಿ, ಹೊಸಬನನ್ನು ಮುಖ್ಯಮಂತ್ರಿಯನ್ನಾಗಿ ಆಯ್ಕೆ ಮಾಡುವ ಪ್ರಕ್ರಿಯೆ ಪಕ್ಷದೊಳಗಡೆ ನಡೆಯುತ್ತಿದೆ.

ಕರ್ನಾಟಕ ರಾಜ್ಯದ ಉಸ್ತುವಾರಿಯನ್ನು ವಹಿಸಿಕೊಂಡಿರುವ ಬಿಜೆಪಿ ನಾಯಕ ಧರ್ಮೇಂದ್ರ ಪ್ರಧಾನ್ ಗುರುವಾರ ಅಂದರೆ ಜೂ. 28 ರಂದು ಬೆಂಗಳೂರಿಗೆ ಬರುವ ಕಾರ್ಯಕ್ರಮವಿತ್ತು. ಅಂದೇ ಯಡಿಯೂರಪ್ಪ ಬಣದ ಸುಮಾರು ಎಂಟು ಶಾಸಕರು ಧರ್ಮೇಂದ್ರ ಪ್ರಧಾನ್ ಅವರಿಗೆ ತಮ್ಮ ರಾಜೀನಾಮೆಯನ್ನು ಸಲ್ಲಿಸುವ ಒಂದು ತಂತ್ರವನ್ನು ಹೆಣೆಯಲಾಗಿತ್ತು. ಹೀಗೆ ಎಂಟು ಮಂದಿ ರಾಜಿನಾಮೆ ಕೊಟ್ಟ ನಂತರ ಮುಖ್ಯಮಂತ್ರಿ ಸದಾನಂದ ಗೌಡರ ಕೈಯಲ್ಲಿರುವ ಖಾತೆಗಳ ಸಂಖ್ಯೆ 22ರಿಂದ 30ಕ್ಕೇರುತ್ತದೆ. ಆ ನೆಪವನ್ನೇ ಮುಂದಿಟ್ಟು ಸಂಪುಟ ಪುನರ್ ರಚನೆಗೆ ಅಥವಾ ಶಾಸಕಾಂಗ ಸಭೆಗೆ ಒತ್ತಾಯಿಸುವುದು ಯಡ್ಡಿ ಬಣದವರ ಪ್ಲಾನ್ ಆಗಿತ್ತು.

ಆದರೆ ದಿನದಿಂದ ದಿನಕ್ಕೆ ವಿಷಮಗೊಳ್ಳುತ್ತಿರುವ ರಾಜ್ಯ ಬಿಜೆಪಿ ಪರಿಸ್ಥಿತಿಯನ್ನು ಅರಿತುಕೊಂಡ ಧರ್ಮೇಂದ್ರ ಪ್ರಧಾನ ತನ್ನ ಬೆಂಗಳೂರು ಭೇಟಿಯನ್ನು ಕೊನೆಕ್ಷಣದಲ್ಲಿ ರದ್ದುಪಡಿಸಿದರು. ಅಲ್ಲಿಗೆ ಯಡ್ಡಿ ಬಣದ ತೆರೆಮರೆಯ ತಂತ್ರಗಳೆಲ್ಲವೂ ಹಿನ್ನಡೆ ಅನುಭವಿಸಿದವು. ಈ ಮಧ್ಯೆ ಗುರುವಾರ ಮಧ್ಯಾಹ್ನ ಒಂದೂವರೆ ಗಂಟೆಗೆ ದಿಢೀರನೆ ಸದಾನಂದ ಗೌಡರು ದೆಹಲಿಗೆ ಹೋಗಿ ಪಕ್ಷದ ವರಿಷ್ಠರನ್ನು ಭೇಟಿಯಾಗುತ್ತಿರುವುದು ರಾಜಕೀಯ ವಲಯದಲ್ಲಿ ಹೊಸ ಉತ್ಸಾಹ ಮತ್ತು ಕುತೂಹಲವನ್ನು ಸೃಷ್ಟಿಸಿದೆ.

ಸದಾನಂದ ಗೌಡರನ್ನು ಅತ್ಯಂತ ಹತ್ತಿರದಿಂದ ಬಲ್ಲವರು ಹೇಳುವ ಪ್ರಕಾರ, ಗೌಡರು ದೆಹಲಿಯಲ್ಲಿ ಪಕ್ಷದ ವರಿಷ್ಠರನ್ನು ಭೇಟಿಯಾಗಿ ಅವರಿಗೆ ತಮ್ಮ ರಾಜೀನಾಮೆ ಪತ್ರವನ್ನು ನೀಡಲಿದ್ದಾರಂತೆ. "ನೀವೇ ನನ್ನನ್ನು ಮುಖ್ಯಮಂತ್ರಿಯಾಗಲು ಅವಕಾಶ ಮಾಡಿಕೊಟ್ಟಿದ್ದು. ಈಗ ರಾಜ್ಯದಲ್ಲಿ ಪಕ್ಷವನ್ನು ನಡೆಸಿಕೊಂಡು ಹೋಗಲು ಕಷ್ಟವಾಗುತ್ತಿದೆ. ಶಾಸಕರು, ಮಂತ್ರಿಗಳು ಸಹಕರಿಸುತ್ತಿಲ್ಲ, ಒಂದೋ ಎಲ್ಲರೂ ಸಹಕರಿಸುವಂತೆ ನೀವು ವಾತಾವರಣವನ್ನು ಸೃಷ್ಟಿಸಿಕೊಡಬೇಕು. ಇಲ್ಲದಿದ್ದರೆ ಇಂತಹ ವಾತಾವರಣದಲ್ಲಿ ಕೆಲಸ ಮಾಡಲು ನನಗೆ ಕಷ್ಟವಾಗುತ್ತಿರುವುದರಿಂದ ನಾನು ರಾಜೀನಾಮೆ ಸಲ್ಲಿಸುತ್ತೇನೆ" ಎಂದು ಹೇಳಿ ಚೆಂಡನ್ನು ಹೈಕಮಾಂಡ್ ಅಂಗಳಕ್ಕೆ ಗೌಡರು ದೂಡಲಿದ್ದಾರೆ.

ಹೀಗೆ ಒಮ್ಮೆಲೇ ರಾಜೀನಾಮೆ ನೀಡುವ ಮಾತನ್ನು ಗೌಡರು ಹೇಳಬೇಕಾಗಿರುವುದಕ್ಕೂ ಒಂದು ಕಾರಣವಿದೆ. ಅದೇನೆಂದರೆ, ಮೊನ್ನೆ ಮೊನ್ನೆತನಕ ಎಲ್ಲ ಭಿನ್ನಮತೀಯರ ವಿರುದ್ಧ ಗೌಡರಿಗೆ ಹೆಗಲು ಕೊಟ್ಟು ದುಡಿಯುತ್ತಿದ್ದ ಪಕ್ಷದ ರಾಜ್ಯಾಧ್ಯಕ್ಷ ಈಶ್ವರಪ್ಪ ಕೂಡ ಈಗ "ನಾನೂ ಮುಖ್ಯಮಂತ್ರಿ ಆಕಾಂಕ್ಷಿ" ಎಂದು ಹೇಳಿರುವುದು. ಈ ಬೆಳವಣಿಗೆ ಗೌಡರ ಎದೆಯಲ್ಲಿ ಢವಢವ ಹುಟ್ಟಿಸಿದೆ.

ಕಳೆದ 10 ತಿಂಗಳ ಅವಧಿಯಲ್ಲಿ ಬಂಡಾಯ ನಾಯಕ ಯಡಿಯೂರಪ್ಪ ಗೌಡರ ಪದಚ್ಯುತಿಗೆ ತಂತ್ರಗಾರಿಕೆ ಹೆಣೆದಾಗಲೆಲ್ಲ ಗೌಡರ ಜೊತೆಗೆ ಗಟ್ಟಿಯಾಗಿ ನಿಂತುಕೊಂಡವರೆಂದರೆ ಈ ಈಶ್ವರಪ್ಪ ಒಬ್ಬರೇ. ಆದರೆ ಯಾವಾಗ ಈಶ್ವರಪ್ಪ ಕೂಡ ತಾನೂ ಸಿ.ಎಂ. ಕುರ್ಚಿ ಆಕಾಂಕ್ಷಿ ಎಂದು ಹೇಳಿದರೋ ಆಗ ಪಕ್ಷದ ಹೈಕಮಾಂಡ್ ನಾಯಕತ್ವ ಬದಲಾವಣೆಗೆ ಮುಂದಾಗಿದೆ ಎಂದು ಸದಾನಂದ ಗೌಡರಿಗೆ ಸ್ಪಷ್ಟವಾಯಿತು.

ಈಗ ಬಿಜೆಪಿಯಲ್ಲಿ ಎಂತಹ ಬಿರುಕುಗಳಿವೆ ಎಂದರೆ ಮೊನ್ನೆ ಬಿಜೆಪಿ ಸರ್ಕಾರ ಅಧಿಕಾರದಲ್ಲಿ ನಾಲ್ಕು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಅದರ ಸಂಭ್ರಮವನ್ನು ಹಂಚಿಕೊಳ್ಳಲು ಸದಾನಂದ ಗೌಡರು ಪಕ್ಷದ ಎಲ್ಲಾ ಶಾಸಕರನ್ನು ತಮ್ಮ ಮನೆಗೆ ಊಟಕ್ಕೆ ಕರೆದಿದ್ದರು. ಆದರೆ ಅವರ ಆಹ್ವಾನಕ್ಕೆ ಓಗೊಟ್ಟು ಅವರ ಮನೆಗೆ ಶಾಸಕರ ಸಂಖ್ಯೆ 10-12 ಮಾತ್ರ. ಅಂದರೆ ಗೌಡರ ಮಂತ್ರಿಮಂಡಲದ ಸದಸ್ಯರೇ ಅವರ ಭೋಜನಕೂಟಕ್ಕೆ ಬಹಿಷ್ಕಾರ ಹಾಕಿದ್ದರು.

ಯಾವಾಗ ಶಾಸಕರು ತಾನು ಕರೆದ ಭೋಜನಕೂಟಕ್ಕೆ ಗೈರುಹಾಜರಾದರೋ ಆಗಲೇ ಸದಾನಂದ ಗೌಡರಿಗೆ ದೆಹಲಿಯಲ್ಲಿ ಕ್ಷಿಪ್ರವಾದ ರಾಜಕೀಯ ಬೆಳವಣಿಗೆ ನಡೆಯುತ್ತಿದೆ ಎಂಬ ಸೂಚನೆ ದೊರೆತಂತಾಯಿತು. ಆ ಕಾರಣಕ್ಕಾಗಿಯೇ ಮರುದಿನ ಬಿಜೆಪಿ ಸರ್ಕಾರದ ನಾಲ್ಕು ವರ್ಷಗಳ ಸಾಧನೆಯ ಕಿರುಹೊತ್ತಿಗೆಯನ್ನು ಹೊರತಂದು ದೆಹಲಿಗೆ ಹೋಗುವ ತೀರ್ಮಾನಕ್ಕೆ ಬಂದರು.

ಈಗ ಪ್ರಶ್ನೆಯಿರುವುದು ಸದಾನಂದ ಗೌಡರ ನಂತರ ಕರ್ನಾಟಕದ ಮುಂದಿನ ಮುಖ್ಯಮಂತ್ರಿಯಾಗಿ ಯಾರು ಆಯ್ಕೆಯಾಗುತ್ತಾರೆ ಎಂಬುದು. ಗೌಡರು ಮುಖ್ಯಮಂತ್ರಿ ಗದ್ದುಗೆಯನ್ನು ಏರಿದ ದಿನದಿಂದಲೇ ಅವರನ್ನು ಕೆಳಗಿಳಿಸುವ ಸಾಹಸಕ್ಕೆ ಕೈಹಾಕಿದ ಯಡಿಯೂರಪ್ಪ ಗೌಡರ ಬದಲಿಗೆ ಜಗದೀಶ್ ಶೆಟ್ಟರನ್ನು ಮುಖ್ಯಮಂತ್ರಿ ಮಾಡಿ ಎಂದು ಹೈಕಮಾಂಡ್‌ನ್ನು ಒತ್ತಾಯಿಸುತ್ತಲೇ ಇದ್ದಾರೆ. ಅಂದು ಜಗದೀಶ್ ಶೆಟ್ಟರ್ ವಿರುದ್ಧ ಸದಾನಂದ ಗೌಡರನ್ನು ಮುಖ್ಯಮಂತ್ರಿಯನ್ನಾಗಿ ಮಾಡಲೇಬೇಕೆಂದು ಹಠ ಹಿಡಿದು ಕುಳಿತುಕೊಂಡಿದ್ದು ಕೂಡ ಇದೇ ಯಡಿಯೂರಪ್ಪ, ಇವತ್ತು ಯಡಿಯೂರಪ್ಪನಲ್ಲಿ ಶೆಟ್ಟರ್ ಬಗ್ಗೆ ಅಂತಹ ಪ್ರೀತಿ ಏನೂ ಇಲ್ಲ, ಆದರೆ ಒಬ್ಬ ಲಿಂಗಾಯತ ಸಮುದಾಯದ ವ್ಯಕ್ತಿ ಮುಖ್ಯಮಂತ್ರಿ ಆಗುವುದನ್ನು ತಾನು ತಪ್ಪಿಸಿದೆ ಎಂಬ ಅಪಕೀರ್ತಿ ಅಂಟಕೂಡದೆಂಬ ಏಕೈಕ ಉದ್ದೇಶದಿಂದ ಈ ಬಾರಿ ಯಡಿಯೂರಪ್ಪನವರು ಜಗದೀಶ್ ಶೆಟ್ಟರ ಹೆಸರನ್ನು ಮುಖ್ಯಮಂತ್ರಿ ಸ್ಥಾನಕ್ಕೆ ಸೂಚಿಸುತ್ತಿದ್ದಾರೆ.

ಈ ಮಧ್ಯೆ ಯಡಿಯೂರಪ್ಪನವರ ಜಿಲ್ಲೆಯವರೇ ಆದ ಮತ್ತು ಒಂದು ಕಾಲದಲ್ಲಿ ಅವರ ಖಾಸಾ ದೋಸ್ತ್ ಎನಿಸಿಕೊಂಡಿದ್ದ ಈಶ್ವರಪ್ಪನವರು ಇತ್ತೀಚೆಗೆ ಗುಟ್ಟಾಗಿ ಯಡ್ಡಿ ಜೊತೆ ಮಾತುಕತೆ ನಡೆಸಿದ್ದಾರೆ. ಆ ಮಾತುಕತೆಯ ಬಳಿಕವೇ ಈಶ್ವರಪ್ಪ ಮೊದಲ ಬಾರಿಗೆ "ನಾನೂ ಸಿ.ಎಂ ಆಕಾಂಕ್ಷಿ" ಎಂದು ಹೇಳಿರುವುದು. ಈಶ್ವರಪ್ಪನವರ ಈ ಹೇಳಿಕೆಯ ನಂತರ ಬಿಜೆಪಿ ಶಾಸಕರೆಲ್ಲರೂ ಗೊಂದಲಕ್ಕೀಡಾಗಿದ್ದಾರೆ. ಆದರೆ ಪಕ್ಷದ ಹಿರಿಯ ಶಾಸಕರೊಬ್ಬರು ಹೇಳುವ ಪ್ರಕಾರ "ಈಶ್ವರಪ್ಪನವರನ್ನು ಮುಖ್ಯಮಂತ್ರಿ ಸ್ಥಾನದಲ್ಲಿ ಯಡಿಯೂರಪ್ಪನವರು ಕುಳ್ಳಿರಿಸಿದರೆ ಮುಂದಿನ ಚುನಾವಣೆಯಲ್ಲಿ ಲಿಂಗಾಯತರ ಮತ್ತು ಕುರುಬ ಸಮಾಜದವರು ಹೋಲ್‌ಸೇಲಾಗಿ ಬಿಜೆಪಿಗೆ ಮತ ಹಾಕುವುದು ಗ್ಯಾರಂಟಿ. ಹೀಗಾಗಿ ಈಶ್ವರಪ್ಪನವರನ್ನು ಮುಖ್ಯಮಂತ್ರಿ ಮಾಡುವುದು ಸೂಕ್ತ ರಾಜಕೀಯ ನಿರ್ಧಾರವಾಗುತ್ತದೆ."

ಮುಂದಿನ ಚುನಾವಣೆಯವರೆಗೆ ಈಶ್ವರಪ್ಪನವರೇ ಮುಖ್ಯಮಂತ್ರಿಯಾಗಿ ಮುಂದುವರಿಯಲಿ - ಚುನಾವಣೆ ಘೋಷಣೆಯಾದಾಗ ಯಡಿಯೂರಪ್ಪನವರ ನೇತೃತ್ವದಲ್ಲಿ ಪಕ್ಷ ಜನರಲ್ಲಿಗೆ ಹೋಗಲಿ: ಇಂತಹ ಒಂದು ಒಳಒಪ್ಪಂದ ಯಡ್ಡಿ ಮತ್ತು ಈಶ್ವರಪ್ಪರವರ ನಡುವೆ ಆಗಿದೆ ಎಂಬ ಮಾತು ಕೇಳಿಬರುತ್ತಿದೆ.

ಈ ಮಧ್ಯೆ ಒಕ್ಕಲಿಗ ಜಾತಿಗೆ ಸೇರಿರುವ 80ರ ಹರೆಯದ ರಾಮಚಂದ್ರ ಗೌಡರು ವಿಧಾನ ಪರಿಷತ್ ಸದಸ್ಯರಾಗಿ ಅಧಿಕಾರ ಸ್ವೀಕಾರ ಮಾಡಿದ ನಂತರ, "ನಾನು ಈ ಬಾರಿ ಮಂತ್ರಿಯಾಗುವುದಿಲ್ಲ, ಅವಕಾಶ ಸಿಕ್ಕಿದರೆ ಎಲ್ಲರ ಸಹಕಾರದೊಂದಿಗೆ ಮುಖ್ಯಮಂತ್ರಿ ಸ್ಥಾನವನ್ನು ಅಲಂಕರಿಸಲು ಸಿದ್ಧ" ಎಂದು ಹೇಳುವ ಮುಖಾಂತರ ಸಮಸ್ಯೆಯನ್ನು ಇನ್ನಷ್ಟು ಜಟಿಲಗೊಳಿಸಿದ್ದಾರೆ. ಅಂದರೆ ಮುಖ್ಯಮಂತ್ರಿ ಸ್ಥಾನಕ್ಕಾಗಿ ರಾಜಕೀಯವಾಗಿ ಅತ್ಯಂತ ಪ್ರಭಾವೀ ಲಿಂಗಾಯತ, ಒಕ್ಕಲಿಗ ಮತ್ತು ಕುರುಬ ಜನಾಂಗಗಳ ಒಬ್ಬೊಬ್ಬ ವ್ಯಕ್ತಿಗಳು ಮುಖ್ಯಮಂತ್ರಿ ಸ್ಥಾನದ ಸ್ಪರ್ಧೆಯಲ್ಲಿ ಇದ್ದಾರೆ.

ಇವೆಲ್ಲದರ ನಡುವೆ ಪಕ್ಷೇತರ ಶಾಸಕರು ಬಾಲಚಂದ್ರ ಜಾರಕಿಹೊಳಿ ನೇತೃತ್ವದಲ್ಲಿ ತಮ್ಮದೇ ಆದ ರಾಜಕೀಯ ತಂತ್ರಗಾರಿಕೆಯನ್ನು ಹೆಣೆದು ಪಕ್ಷದ ವರಿಷ್ಠರನ್ನು ಆಗಾಗ ಭೇಟಿ ಮಾಡುತ್ತಿದ್ದಾರೆ. ಅವರ ನಿಲುವು ಇಷ್ಟೆ. ಯಾವುದೇ ಕಾರಣಕ್ಕಾಗಿ ಸದಾನಂದ ಗೌಡರನ್ನು ಮುಖ್ಯಮಂತ್ರಿ ಸ್ಥಾನದಿಂದ ಪದಚ್ಯುತಗೊಳಿಸಬಾರದು. "ಹಾಗೇನಾದರೂ ಮಾಡಿ ನೀವು ಹೊಸ ಮುಖ್ಯಮಂತ್ರಿಯನ್ನು ಆ ಸ್ಥಾನದಲ್ಲಿ ಕುಳ್ಳಿರಿಸಲು ಹೊರಟರೆ ನಾವು ರಾಜೀನಾಮೆ ನೀಡುತ್ತೇವೆ. ಹೊಸ ಮುಖ್ಯಮಂತ್ರಿ ಆಯ್ಕೆ ಮಾಡುವ ಬದಲು ನೇರವಾಗಿ ಚುನಾವಣೆಗೇ ಹೋಗಿ ಜನಾರ್ದನ ಪ್ರಭುಗಳ ಬಳಿ ಮತಯಾಚನೆ ಮಾಡೋಣ" ಎಂದು ಅವರೆಲ್ಲ ಹೇಳಿದ್ದಾರೆ.



ಎದ್ದೇಳು ಸದಾನಂದಾSSS

ಅವರ ಈ ನಿಲುವಿಗೆ ಕಾರಣವೂ ಇದೆ. ಅದೇನೆಂದರೆ ಯಡಿಯೂರಪ್ಪ ಬಣದ ಯಾವುದಾದರೊಬ್ಬ ವ್ಯಕ್ತಿ ಮುಖ್ಯಮಂತ್ರಿ ಸ್ಥಾನವನ್ನು ಅಲಂಕರಿಸಿದ್ದೇ ಆದಲ್ಲಿ ಖಂಡಿತವಾಗಿಯೂ ಜಾರಕಿಹೊಳಿ ಮತ್ತು ಅವರ ತಂಡಕ್ಕೆ ಸಚಿವ ಸ್ಥಾನ ಸಿಗುವುದಿಲ್ಲ ಎಂಬುದು ಅವರಿಗೆ ಅರಿವಾಗಿದೆ. ಈ ಕಾರಣಕ್ಕಾಗಿ ಮತ್ತೊಬ್ಬ ಮುಖ್ಯಮಂತ್ರಿ ಬೇಡ, ನೇರ ಚುನಾವಣೆಗೆ ಹೋಗೋಣ ಎಂಬುದು ಅವರ ವಾದ.

ಹೀಗೆ ಚುನಾವಣಾ ವರ್ಷವಾದ ಈ ಕಾಲಘಟ್ಟದಲ್ಲಿ ರಾಜ್ಯ ಆಡಳಿತಾರೂಢ ಪಕ್ಷವಾದ ಬಿಜೆಪಿಯಲ್ಲಿ ದಿನಕ್ಕೊಂದು ರಾಜಕೀಯ ಬೆಳವಣಿಗೆಗಳು ನಡೆಯುತ್ತಲೇ ಇವೆ. ಮುಖ್ಯವಾಗಿ ಸದಾನಂದ ಗೌಡರು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕಾರ ಮಾಡಿದ ನಂತರ ಯಡ್ಡಿ ಬಣದ ಮಂತ್ರಿಗಳು ಮತ್ತು ಶಾಸಕರು ಅವರಿಗೆ ಸಹಕರಿಸುತ್ತಿಲ್ಲ ಎಂಬುದು ಜಗಜ್ಜಾಹೀರಾಗಿರುವ ವಿಷಯ. ಹೀಗಾಗಿ ಒಂದು ವೇಳೆ ಯಡ್ಡಿ ಬಣದ ಶಾಸಕರು ರಾಜೀನಾಮೆ ಸಲ್ಲಿಸಿ ಪಕ್ಷ ಬಿಟ್ಟು ಹೊರಹೋದರೆ ಸರ್ಕಾರ ಬೀಳಬಾರದು ಹಾಗೂ ತನ್ನ ಮುಖ್ಯಮಂತ್ರಿ ಸ್ಥಾನಕ್ಕೆ ಯಾವುದೇ ಚ್ಯುತಿ ಬರಬಾರದು ಎಂಬ ಕಾರಣಕ್ಕೆ ಸದಾನಂದ ಗೌಡರು ಜನತಾ ದಳದ ದೇವೇಗೌಡರು ಮತ್ತು ಕುಮಾರಸ್ವಾಮಿಯವರ ಸ್ನೇಹವನ್ನು ಸಂಪಾದಿಸಿದ್ದರು.

"ಯಡ್ಡಿ ಬಣ ರಾಜೀನಾಮೆ ನೀಡಿದರೆ ನಿಮಗೆ ನಮ್ಮ ಪಕ್ಷ ಸಂಪೂರ್ಣ ಬೆಂಬಲ ನೀಡುತ್ತದೆ" ಎಂದು ದೇವೇಗೌಡರು ಹೇಳಿದ ಮಾತಿನ ಆಧಾರದಲ್ಲಿ ಸದಾನಂದ ಗೌಡರು ರಾಜಕೀಯ ನಡೆಸುತ್ತಿದ್ದರು. ಆದರೆ ಯಾವಾಗ ಬಿಜೆಪಿ ಗೌಡರು ಮತ್ತು ದಳದ ಗೌಡರು ಒಂದಾದರೋ ಅದರ ಅಪಾಯವನ್ನು ಅರಿತ ಯಡಿಯೂರಪ್ಪ ತಮ್ಮ ರಾಜಕೀಯ ತಂತ್ರಗಾರಿಕೆಯನ್ನು ಬದಲಿಸಿಬಿಟ್ಟರು. "ನಾನು ಯಾವ ಕಾರಣಕ್ಕೂ ಪಕ್ಷ ಬಿಡುವುದಿಲ್ಲ, ದೆಹಲಿ ವರಿಷ್ಠರು ಹೇಳಿದ ರೀತಿಯಲ್ಲೇ ಹೊಸ ಸ್ಥಾನಮಾನಕ್ಕಾಗಿ ಕಾಯುತ್ತಿರುತ್ತೇನೆ" ಎಂದು ಹೇಳಿ ಸದಾನಂದ ಗೌಡರನ್ನು ಕಟ್ಟಿಹಾಕಿದರು. ಈ ಕಾರಣದಿಂದಲೇ ಪಕ್ಷ ಬಿಡುವ ಬದಲು ಪಕ್ಷದಲ್ಲಿದ್ದೇ ತಮ್ಮ ಹಿಂಬಾಲಕರ ಮುಖಾಂತರ ಭಿನ್ನಮತೀಯ ಚಟುವಟಿಕೆಯನ್ನು ಹುಟ್ಟುಹಾಕಿ ಶಾಸಕಾಂಗ ಪಕ್ಷದ ಸಭೆಯನ್ನು ಕರೆಯಿರಿ ಎಂದು ಹೊಸ ತಂತ್ರಗಾರಿಕೆಯನ್ನು ಆರಂಭಿಸಿದ್ದರು.

ಒಂದು ವೇಳೆ ಸದಾನಂದ ಗೌಡರ ಪದಚ್ಯುತಿ ಆದರೆ ಅದು ಖಂಡಿತವಾಗಿಯೂ ಯಡಿಯೂರಪ್ಪನವರು ಮೇಲುಗೈ ಸಾಧಿಸಿದಂತಾಗುತ್ತದೆ. ಅದರಿಂದಾಗಿ ಪರೋಕ್ಷವಾಗಿ ಬಿಜೆಪಿಯ ಹೈಕಮಾಂಡಿಗೆ ಮುಖಭಂಗವಾಗುತ್ತದೆ. ಇಂತಹ ಕ್ಲಿಷ್ಟ ಪರಿಸ್ಥಿತಿಯಲ್ಲಿ ದೆಹಲಿ ನಾಯಕರು ಮತ್ತೆ ಯಡಿಯೂರಪ್ಪನವರ ಕೈ ಬಲಪಡಿಸುತ್ತಾರೋ? ಅಥವಾ ಸದಾನಂದ ಗೌಡರನ್ನೇ ಮುಂದುವರೆಸಿ ತಮ್ಮ ಬಿಗಿಮುಷ್ಠಿಯಲ್ಲೇ ಕರ್ನಾಟಕವನ್ನು ಹಿಡಿದಿಟ್ಟುಕೊಳ್ಳುತ್ತಾರೋ? ಅಥವಾ ವಿಧಾನ ಸಭೆಯನ್ನು ವಿಸರ್ಜಿಸಿ ಚುನಾವಣೆ ಘೋಷಿಸುವ ಮುಖಾಂತರ ಎಲ್ಲಾ ಶಾಸಕರಿಗೆ ಅಗ್ನಿಪರೀಕ್ಷೆಯನ್ನು ಒಡ್ಡುತ್ತಾರೋ? ಎಂಬುದನ್ನು ನೋಡಬೇಕಾಗಿದೆ. ಆದರೆ ಸದ್ಯದ ಪರಿಸ್ಥಿತಿಯನ್ನು ಅವಲೋಕಿಸಿದರೆ ಯಡ್ಡಿ ಬಣ ದಿನದಿಂದ ದಿನಕ್ಕೆ ಚುರುಕಾಗುತ್ತಿದ್ದು ಅಧಿಕಾರದ ಗದ್ದುಗೆಯನ್ನು ಮತ್ತೆ ಪಡೆಯುವತ್ತ ನಿಧಾನವಾಗಿ ಸಾಗುತ್ತಿರುವುದು ಸ್ಪಷ್ಟವಾಗಿ ಕಾಣಿಸುತ್ತಿದೆ.

● ಶೆಣೈ

ಹೊಸದೊಂದು ಕಚ್ಚಾಟ!

ರಾಜ್ಯ ಬಿಜೆಪಿಯ ಎಲ್ಲಾ ಜಂಜಾಟದ ಬಗ್ಗೆ ವಿವರಣೆ ನೀಡಲೆಂದು ಸದಾನಂದ ಗೌಡರು ಗುರುವಾರ ಸಂಜೆ 4 ಗಂಟೆಗೆ ಪತ್ರಿಕಾಗೋಷ್ಠಿ ಕರೆದಿದ್ದರು. ಆದರೆ ದೆಹಲಿಯಿಂದ ಬುಲಾವ್ ಬಂದ ಹಿನ್ನೆಲೆಯಲ್ಲಿ ಆತುರಾತುರವಾಗಿ ಮಧ್ಯಾಹ್ನ 12.30ಕ್ಕೆ ಪ್ರೆಸ್‌ಮೀಟ್ ಮುಗಿಸಿ ಸೀದಾ ಏರ್‌ಪೋರ್ಟ್‌ಗೆ ಧಾವಿಸಿದರು.

ಆದರೆ ಸದಾನಂದರ ದುರಾದೃಷ್ಟ ಈಶ್ವರಪ್ಪನ ರೂಪದಲ್ಲಿ ಆಗಲೇ ಏರ್‌ಪೋರ್ಟ್‌ನಲ್ಲಿ ಕಾಯುತ್ತಿತ್ತು. ಈಶ್ವರಪ್ಪ ಅದೇನು ಮಸಲತ್ತು ಮಾಡಿದನೋ ಏನೋ ದೇವರೇ ಬಲ್ಲ, ದೆಹಲಿಯ ಹೈಕಮಾಂಡ್‌ನವರು ಸದಾನಂದರನ್ನು 'ನೀವು ದೆಹಲಿಗೆ ಬರುವುದು ಬೇಡ, ಈಶ್ವರಪ್ಪ ಒಬ್ಬರೇ ಬರಲಿ' ಎಂದುಬಿಡಬೇಕೆ? ಸಾಲದ್ದಕ್ಕೆ ಈಶ್ವರಪ್ಪ ಗುರಾಯಿಸಿದ್ದು ಕೂಡ ಸದಾನಂದರ ಹೊಟ್ಟೆ ಸಂಕಟವನ್ನು ಹೆಚ್ಚಿಸಿತು. ಹಸನ್ಮುಖಿ ಸದಾನಂದ ತಿರುಗಿ ಬಿದ್ದೇಬಿಟ್ಟರು. ಏರ್‌ಪೋರ್ಟ್‌ನ ಲಾಂಜ್‌ನಲ್ಲಿ ಇವರಿಬ್ಬರ ನಡುವೆ ಭಾರೀ ಜಗಳವೇ ನಡೆದುಹೋಯಿತು. ಅವರ ಅನುಯಾಯಿಗಳ ಮಧ್ಯ ಪ್ರವೇಶದಿಂದ ಮಾರಾಮಾರಿ ತಪ್ಪಿಹೋಯಿತೆಂದು ಪ್ರತ್ಯಕ್ಷದರ್ಶಿಗಳು ಹೇಳುತ್ತಿದ್ದಾರೆ.

ಏನೇ ಆಗಲಿ, ಏರ್‌ಪೋರ್ಟ್‌ನ ಸಿಸಿ ಕ್ಯಾಮೆರಾಗಳಲ್ಲಿ ಅಡಗಿ ಕೂತಿರುವ ಇವರಿಬ್ಬರ ಜಗಳದ ವಿಡಿಯೋ ಕ್ಲಿಪ್ಪಿಂಗ್ಸ್‌ಗಳು ನಮ್ಮ ಟಿವಿ ಚಾನೆಲ್‌ಗಳಿಗೆ ಲಭ್ಯವಾಗಿದ್ದರೆ ಇನ್ನು ಮೂರು ದಿನ ರಾಜ್ಯದ ಜನರಿಗೆ ಬಿಟ್ಟಿ ಮನರಂಜನೆಯಾದರೂ ಸಿಗುತ್ತಿತ್ತು, ಏನಂತೀರಿ?

ಮಹಿಳಾ ಸಾಧಕಿ ಮೇರಿ ಕೋಮ್

ಸ್ಪರ್ಧಾಂಶದ ಕುರಿತು ಖಾತ್ರಿ ನೀಡಲಾರೆ. ಆದರೆ ನನ್ನ ತಯಾರಿಯ ಬಗ್ಗೆ ಖಾತ್ರಿಯಿದೆ."

ಲಂಡನ್ ಒಲಂಪಿಕ್ಸ್‌ಗೆ ತಯಾರಿ ನಡೆಸುತ್ತಿರುವ ಭಾರತದ ಮಹಿಳಾ ಮೇರಿ ಕೋಮ್‌ಳ ಭರವಸೆಯ ಮಾತುಗಳಿವು. ಇನ್ನು ಕೆಲವೇ ... ಆರಂಭವಾಗಲಿರುವ ಒಲಂಪಿಕ್ಸ್‌ನಲ್ಲಿ ಭಾರತೀಯರು ಚಿನ್ನದ ಪದಕದ ನಿರೀಕ್ಷೆ ಇಟ್ಟಿರುವುದು ಇದೇ ಮೇರಿ ಕೋಮ್ ಮೇಲೆ. ಈಗಾಗಲೇ ... ಬಾರಿ ವಿಶ್ವ ಬಾಕ್ಸಿಂಗ್ ಚಾಂಪಿಯನ್ ಆಗಿರುವ ಮೇರಿ ಕೋಮ್ ಸವಾಲುಗಳನ್ನು ಎದುರಿಸಲು ಸಜ್ಜಾಗಿದ್ದಾರೆ.

...ದ ಪದಕ ಗೆಲ್ಲಲೇಬೇಕೆಂಬ ಹಠಕ್ಕೆ ಬಿದ್ದಿರುವ ಮೇರಿ ಒಲಂಪಿಕ್ಸ್‌ನಲ್ಲಿ ಎದುರಾಗಬಹುದಾದ ಸ್ಪರ್ಧಿಗಳನ್ನು ಮಣಿಸಲು ಭರ್ಜರಿ ಕಸರತ್ತು ...ರೆ. ಮೇರಿಗೆ ಮೊದಲ ಸವಾಲಿರುವುದೇ ತೂಕದ ವಿಷಯದಲ್ಲಿ. ...ವರೆಗೂ ಮೇರಿ ಗೆದ್ದಿರುವ ಎಲ್ಲಾ ಐದು ವಿಶ್ವ ಚಾಂಪಿಯನ್‌ಶಿಪ್‌ಗಳು ...ತ್ತು 48 ಕೆ.ಜಿ ವಿಭಾಗದಲ್ಲಿ. ಆದರೆ ಒಲಂಪಿಕ್ಸ್‌ನಲ್ಲಿ 48 ಕೆ.ಜಿ ...ವೇ ಇಲ್ಲ. ಅಲ್ಲಿ ಆರಂಭವೇ 51 ಕೆ.ಜಿ ವಿಭಾಗದಿಂದ. ಹಾಗಾಗಿ ಹೆಚ್ಚುವರಿ 3 ಕೆ.ಜಿಯ ವ್ಯತಿರಿಕ್ತ ಸಂದರ್ಭದಲ್ಲಿ ಸೆಣಸಬೇಕಾಗುತ್ತದೆ. ...ದಿನ 48 ಕೆ.ಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ಬಾಕ್ಸರ್‌ಗೆ ಇದ್ದಕ್ಕಿದ್ದಂತೆ ...ತೂಕದಲ್ಲಿ ಲಯ ಕಂಡುಕೊಳ್ಳುವುದು ಸುಲಭದ ಮಾತಲ್ಲ.

ಆದರೆ ಕೋಮ್‌ಳ ಕೋಚ್ ಚಾರ್ಲ್ಸ್ ಅಟ್ಕಿನ್ಸನ್ ಪ್ರಕಾರ ಮೇರಿ ...ತ್ತಿರುವ ಆಸಕ್ತಿಯನ್ನು ಗಮನಿಸಿದರೆ ಹೆಚ್ಚುವರಿ ತೂಕದಲ್ಲೂ ಪದಕ ...ದು ಗ್ಯಾರಂಟಿಯಂತೆ.

...ಗಾಗಲೇ ಎ.ಐ.ಬಿ.ಎ ನ ರ‍್ಯಾಂಕಿಂಗ್ ಪ್ರಕಾರ ಮೂರನೇ ಸ್ಥಾನದಲ್ಲಿರುವ ...ತನಗೆ ಎದುರಾಗುವ ತನಗಿಂತ ಹೆಚ್ಚು ಶ್ರೇಯಾಂಕದಲ್ಲಿರುವ ಚೀನಾದ ...ನ್ ರೇನ್ ಮತ್ತು ಬ್ರಿಟನ್‌ನ ನಿಕೋಲ್ ಆ್ಯಡಮ್ಸ್ ವಿರುದ್ಧ ಗೆಲ್ಲಲು ... ತರಬೇತಿ ರೂಪಿಸಿಕೊಂಡಿದ್ದು 51 ಕೆ.ಜಿಯ ಮೂವರು ಪುರುಷ ...ಗಳೊಂದಿಗೆ ಪ್ರಾಕ್ಟಿಸ್ ಮಾಡುತ್ತಿದ್ದಾಳೆ. ಅದರಲ್ಲಿ ಮೊದಲನೆಯವನನ್ನು



...ಗಿಂತ ಜಾಸ್ತಿ ಎತ್ತರವಿರುವ ಪ್ರಥಮ ಪ್ರತಿಸ್ಪರ್ಧಿ ನಿಕೋಲ ಆ್ಯಡಮ್ಸ್‌ಗೆ ... ಆಯ್ದುಕೊಳ್ಳಲಾಗಿದೆ. ಇನ್ನು ಎರಡನೆಯ ಬಾಕ್ಸರ್‌ನನ್ನು ಹೆಚ್ಚು ...ಲ್ಲಿ ಆಕ್ರಮಣ ಮಾಡುವ ಕ್ಯಾಂಕಾನ್ ರೇನ್‌ಳನ್ನು ಗಮನದಲ್ಲಿಟ್ಟುಕೊಂಡು ...ಂತೆಯೇ ಆಡುವ ವ್ಯಕ್ತಿಯನ್ನು ಸೆಲೆಕ್ಟ್ ಮಾಡಲಾಗಿದೆ. ಇನ್ನು ತನಗಿಂತ ...ಪ್ಪ ಪ್ರತಿಸ್ಪರ್ಧಿಯೊಂದಿಗೆ ಬಾಕ್ಸಿಂಗ್ ಮಾಡಲು ಅನುವಾಗುವಂತೆ ...ನೇ ಪುರುಷ ಬಾಕ್ಸರ್‌ನನ್ನು ಆರಿಸಲಾಗಿದೆ. ಹೀಗೆ ತನ್ನ ಪ್ರತಿಸ್ಪರ್ಧಿಗಳನ್ನು ...ದಲ್ಲಿಟ್ಟುಕೊಂಡು ಪುರುಷ ಬಾಕ್ಸರ್‌ಗಳೊಂದಿಗೆ ಪ್ರಾಕ್ಟಿಸ್ ನಡೆಸುತ್ತಿರುವ ... ಭಾರತದ ಕನವರಿಕೆಯನ್ನು ನಿಜ ಮಾಡುವ ಧಾವಂತದಲ್ಲಿದ್ದಾಳೆ.

...ೇರಿ ತಯಾರಿ ಇಷ್ಟಕ್ಕೇ ನಿಲ್ಲುವುದಿಲ್ಲ. ಒಲಂಪಿಕ್ಸ್‌ನಲ್ಲಿ ತನಗೆ ...ರಾಗಬಹುದಾದ ಎಲ್ಲಾ ಪ್ರತಿಸ್ಪರ್ಧಿಗಳ ಆಟದ ವೀಡಿಯೋ ...ರಣಗಳನ್ನು ಸಂಗ್ರಹಿಸಿ ಅವರು ಹೇಗೆ ಅಟ್ಯಾಕ್ ಮಾಡುತ್ತಾರೆ, ...ಗಳೇನು, ಯಾವ ರೀತಿ ಡಿಫೆಂಡ್ ಮಾಡಿಕೊಳ್ಳುವರೆ ಎಂಬುದನ್ನೆಲ್ಲ ...ಕೊಳ್ಳುತ್ತಿದ್ದಾಳೆ. ಹೀಗೆ ಕೋಟ್ಯಂತರ ಮನಸುಗಳ ಅಪೇಕ್ಷೆಯನ್ನು ನಿಜ ...ಲು ಹಗಲಿರುಳು ಶ್ರಮ ಹಾಕುತ್ತಿರುವ ಮೇರಿ ಜೀವನವೂ ಕ್ರೀಡಾ ...ಯಷ್ಟೆ ಅದ್ಭುತವಾಗಿದೆ. ಮಣಿಪುರದ ಹೊಲಗದ್ದೆಗಳ ಬದಿಯಿಂದ ...ನ್ ಒಲಂಪಿಕ್ಸ್‌ವರೆಗಿನ ಆಕೆಯ ಅವುಡುಗಚ್ಚಿದ ಹಾದಿ ನಿಜಕ್ಕೂ ಅಚ್ಚರಿ ...ಸುವಂತದ್ದು, ಅಷ್ಟೇ ಸ್ಫೂರ್ತಿದಾಯಕವಾದದ್ದು.

...ಕ್ಸಿಂಗ್ ಅಪ್ಪಟ ಪುರುಷ ಪ್ರಧಾನ ಕ್ರೀಡೆ. ಇಲ್ಲಿ ದೈಹಿಕ ಸಾಮರ್ಥ್ಯವೇ ...ಲ ಅಂಶ. ಈ ನಿಟ್ಟಿನಲ್ಲಿ ಅಬಲೆಯೆಂಬ ಸಾಮಾಜಿಕ ವರ್ಗೀಕರಣಕ್ಕೆ ...ದ ಮಹಿಳೆಯರು ಬಾಕ್ಸಿಂಗ್ ಆಯ್ದುಕೊಳ್ಳುವುದು ಅದರಲ್ಲೂ ...ದಂತಹ ದೇಶದಲ್ಲಿ ದುಸ್ಸಾಧ್ಯವೇ ಸರಿ. ಇದೇ ಕಾರಣಕ್ಕೆ ಮೇರಿ ...ವಕ್ಕೆ ಮುನ್ನ ಭಾರತೀಯ ಮಹಿಳಾ ಬಾಕ್ಸರ್ ಸ್ಥಾನ ಶೂನ್ಯವಾಗಿತ್ತು. ...ಗಿ ಮೇರಿ ಬಾಕ್ಸಿಂಗನ್ನು ಆಯ್ದುಕೊಂಡದ್ದಾಗಲಿ, ಕಲಿಯುವ ಬದ್ಧತೆಯನ್ನು ...ಕೊಂಡದ್ದಾಗಲಿ, ವ್ಯತಿರಿಕ್ತ ಸವಾಲುಗಳನ್ನು ಮೆಟ್ಟಿನಿಂತದ್ದಾಗಲಿ ಎಲ್ಲವೂ ... ಸಾಧನೆಗಳಂತೆಯೇ ಕಾಣಿಸುತ್ತವೆ. ಆದ್ದರಿಂದ ಆಕೆಯನ್ನು ಸತತ ...ವಿಶ್ವ ಬಾಕ್ಸಿಂಗ್ ಚಾಂಪಿಯನ್... ಗೆದ್ದ ಪ್ರಪಂಚದ ಮೊದಲ ... ಬಾಕ್ಸರ್ ಎನ್ನುವುದಕ್ಕಿಂತ ಭಾರತದ ಮೊದಲ ಯಶಸ್ವಿ ಮಹಿಳಾ ... ಎನ್ನುವುದೇ ಹೆಮ್ಮೆಯ ವಿಷಯ.

...ಗಡಿ ಪ್ರಾಂತ್ಯ ಒಂದರಂತಿರುವ ಮಣಿಪುರದ ಕೊಂಗತ್ಸೆ ಎಂಬ ...ಹಳ್ಳಿಯ ಜನಾಗ್ರೆ ಟೊಂಪಾ ಕೋಮ್ ಮತ್ತು ಮಾಂಗ್ಟೆ ಅಖಿಮ್ ... ದಂಪತಿಯ ಮೊದಲ ಮಗಳಾಗಿ ಕಣ್ಣುಬಿಟ್ಟಾಗ ದಟ್ಟ ದಾರಿದ್ರ್ಯದ ... ಹೊತ್ತಿದ್ದೂ ಇರಲಿಲ್ಲ. ಬೇರೆಯವರ ಹೊಲಗಳಲ್ಲಿ ಕೂಲಿ ಕೆಲಸ ... ಬದುಕು ಸಾಗಿಸುವ ಅಪ್ಪ ಅಮ್ಮನಿಂದ ಉತ್ತಮ ಭವಿಷ್ಯವನ್ನೇನು ...ಸಲಾಗಿರಲಿಲ್ಲ. ಸಾಲದೆಂಬಂತೆ ಮೇರಿ ನಂತರದಲ್ಲಿ ಮತ್ತೆ ಮೂರು ... ಹಿರಿ ಮಗಳಾದ ಮೇರಿ ಅಪ್ಪ ಅಮ್ಮನ ಸಹಾಯಕ್ಕೆ ಹೊಲ-ಗದ್ದೆಗಳಲ್ಲಿ ...ಮಾಡುವುದರ ಜೊತೆ ಮನೆಯಲ್ಲಿ ಇಬ್ಬರು ತಂಗಿ ಮತ್ತೊಬ್ಬ ತಮ್ಮನನ್ನು

ನೋಡಿಕೊಳ್ಳುವ ಜವಾಬ್ದಾರಿಯನ್ನೂ ಹೊರಬೇಕಿತ್ತು. ಒಟ್ಟಿನಲ್ಲಿ ಹುಡುಗಿಯೊಬ್ಬಳನ್ನು ಹೆಂಗಸನ್ನಾಗಿಸಿ, ತಾಯಿಯನ್ನಾಗಿಸಿ, ಅಜ್ಜಿಯನ್ನಾಗಿಸಿ ಕೊನೆಗೊಂದು ದಿನ ಹೆಸರೇ ಇಲ್ಲದಂತೆ ಮರೆಯಾಗಿಸಲು ಬೇಕಾದ ಸಕಲ ಮಿತಿಗಳೂ ಆಕೆಯ ಜೀವನದಲ್ಲಿದ್ದವು. ಇವುಗಳ ಜೊತೆಗೆ ಕ್ರೀಡೆಯೆಡೆಗಿನ ಆಸಕ್ತಿ ಮತ್ತು ಏನಾದರು ಆಗಲಿ ಕ್ರೀಡಾಪಟು ಆಗಲೇಬೇಕೆಂಬ ಛಲಗಳೂ ಇದ್ದವು. ಇತರರಿಂದ ಆಕೆಯನ್ನು ಪ್ರತ್ಯೇಕಿಸಿ ಸಾಧಕಿಯನ್ನಾಗಿಸಿರುವುದು ಅದೇ ಆಸಕ್ತಿ ಮತ್ತು ಛಲಗಳು.

ಶ್ರಮದಾಯಕ ಜೀವನ, ಗುಡ್ಡಗಾಡುಗಳ ಅಲೆದಾಟ, ಸ್ವಚ್ಛ ನಿಸರ್ಗದ ಒಡನಾಟಗಳಿಂದಾಗಿ ದೈಹಿಕವಾಗಿ ಸದೃಢವಾಗಿದ್ದ ಮೇರಿ ರನ್ನಿಂಗ್, ಜಂಪಿಂಗ್ ಇತ್ಯಾದಿ ಸ್ಪರ್ಧೆಗಳಲ್ಲಿ ತುಂಬಾ ಚುರುಕಾಗಿ ತೊಡಗಿಸಿಕೊಳ್ಳುತ್ತಿದ್ದಳೇ ವಿನಾ ಬಾಕ್ಸಿಂಗ್‌ನಂತಹ ಕ್ರೀಡೆಯಲ್ಲೂ ತಾನು ಸಾಧಿಸಿ ತೋರಬಹುದೆನ್ನುವ ಅಂದಾಜು ಖುದ್ದು ಆಕೆಗೇ ಇರಲಿಲ್ಲ. ಅದಕ್ಕೆ ಮುನ್ನುಡಿ ಬರೆದದ್ದು 1998ರ ಏಷಿಯನ್ ಗೇಮ್ಸ್. ಆ ಪಂದ್ಯಾವಳಿಯಲ್ಲಿ ಮಣಿಪುರ ರಾಜ್ಯದವರೇ ಆದ ಡಿಂಕೋ ಸಿಂಗ್ ಚಿನ್ನದ ಪದಕ ಗೆದ್ದದ್ದು, ಅಪಾರ ಪ್ರಶಂಸೆ ಗಳಿಸಿದ್ದು ಆಕೆಯಲ್ಲಿ ಬಾಕ್ಸಿಂಗನ್ನು ಕೊಂಚ ಸೀರಿಯಸ್ಸಾಗಿ ನೋಡಲು ಪ್ರೇರೇಪಿಸಿತು. ತಾನೂ ಬಾಕ್ಸಿಂಗ್‌ನಲ್ಲಿ ಅದ್ಭುತ ಸಾಧನೆ ಮಾಡಬೇಕೆಂದು ಆಕೆ ನಿರ್ಧರಿಸಿದ್ದೇ ಆಗ.

ಆದರೆ ಬಾಕ್ಸಿಂಗ್ ಕಲಿಕೆ ಅಷ್ಟು ಸುಲಭವಾಗಿರಲಿಲ್ಲ. ಕಷ್ಟದ ನಡುವೆಯೇ ಮಕ್ಕಳನ್ನು ಓದಿಸುವಷ್ಟು ಪ್ರಜ್ಞೆ ಅವಳಪ್ಪ ಅಮ್ಮನಿಗಿತ್ತೇ ಹೊರತು ಕ್ರೀಡೆಯನ್ನು ಪ್ರೋತ್ಸಾಹಿಸುವ ಸ್ಥಿತಿಯಲ್ಲಿ ಅವರಿರಲಿಲ್ಲ. ಇನ್ನು ಬಾಕ್ಸಿಂಗ್ ಎಂದರಂತು ಹುಡುಗಿಯರಿಗೆ ಅಲ್ಲವೇ ಅಲ್ಲವೆನ್ನುವ ಅಭಿಪ್ರಾಯ ಮೇರಿ ಕೋಮ್‌ಳ ಅಪ್ಪನದಾಗಿತ್ತು. ಕುಟುಂಬದ ಈ ಮನಸ್ಥಿತಿಗೆ ಒಂದು ಉತ್ತಮ ಉದಾಹರಣೆ ಇದೆ. ಮುಂದೆ ಮೇರಿ ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಿ ಪದಕ ಗೆದ್ದಾಗ ಅವಳ ಫೋಟೋ ಸಹಿತ ವರದಿಯೊಂದು ದಿನಪತ್ರಿಕೆಯಲ್ಲಿ ಅಚ್ಚಾಗಿತ್ತು. ಪತ್ರಿಕೆಯಲ್ಲಿ ಮಗಳ ಫೋಟೋ ನೋಡಿ ಖುಷಿಪಡುವ ಬದಲು ಬಾಕ್ಸಿಂಗ್ ಆಡಿದ್ದಕ್ಕಾಗಿ ಮೇರಿಯನ್ನು ಅವರಪ್ಪ ಹಿಗ್ಗಾಮುಗ್ಗಾ ಬೈದಿದ್ದರಂತೆ. ಇದು ಆಕೆ ಸಾಧನೆಗೆ ಇಳಿದ ಮೇಲಿನ ಘಟನೆ. ಅಂತಹದ್ದರಲ್ಲಿ ಆರಂಭದಲ್ಲೇ ಅವರಿಂದ



ಪ್ರೋತ್ಸಾಹವನ್ನು ನಿರೀಕ್ಷಿಸುವುದು ಕಷ್ಟದ ಮಾತಾಗಿತ್ತು. ಹಾಗಾಗಿ ತಾನೇ ಬಾಕ್ಸಿಂಗ್ ತರಬೇತುದಾರರನ್ನು ಹುಡುಕಿ ಕಲಿಯಲು ನಿರ್ಧರಿಸಿದಳು. ಆ ಸಮಯದಲ್ಲಿ ನೆಟ್ಟಗೊಂದು ಸ್ಪೋರ್ಟ್ಸ್ ಕಿಟ್ ಕೊಳ್ಳಲೂ ಆಕೆಯಲ್ಲಿ ಹಣವಿರಲಿಲ್ಲ.

ಇಬೋಮ್ಚಾ ಸಿಂಗ್ ಎನ್ನುವ ಬಾಕ್ಸಿಂಗ್ ಕೋಚ್‌ನ ಬಳಿ ಕಲಿಯಲು ಸೇರಿದ್ದಳಾದರು ಆತನಿಗೆ ಮೇರಿಯ ಬಗ್ಗೆ ವಿಶೇಷ ಭರವಸೆಯೇನು ಇರಲಿಲ್ಲ. ಆದರೆ ತರಬೇತಿಗೆ ಸೇರಿಕೊಂಡ ಕೆಲವೇ ದಿನಗಳಲ್ಲಿ ಆಕೆಯ ಏಕಾಗ್ರತೆಯ, ಕಲಿಕೆಯ ವೇಗವನ್ನು ಕಂಡ ಇಬೋಮ್ಚಾ ಸಿಂಗ್ ಮುಂದೊಂದು ದಿನ ಮೇರಿ ದೊಡ್ಡ ಸಾಧನೆ ಮಾಡೇ ತೀರುತ್ತಾಳೆ ಎಂಬ ನಿರ್ಧಾರಕ್ಕೆ ಬಂದು ಹೆಚ್ಚಿನ ಆಸ್ಥೆವಹಿಸಿ ಆಕೆಗೆ ಕಲಿಸಿದ್ದು ಮಾತ್ರವಲ್ಲದೆ ತಂದೆತಾಯಿಗಳನ್ನೂ ಆಕೆಗೆ ಪ್ರೋತ್ಸಾಹ ನೀಡುವಂತೆ ಮನವೊಲಿಸಿದ್ದರು. ಗ್ರೇಟ್ ಬಾಕ್ಸರ್ ಮಹಮದ್ ಅಲಿಯವರ ಸ್ಫೂರ್ತಿ, ಸಾಧಿಸಲೇಬೇಕೆಂಬ ಛಲ ಆಕೆಯನ್ನು ಕ್ಷಿಪ್ರಗತಿಯಲ್ಲಿ ಮಹಿಳಾ ಬಾಕ್ಸರ್‌ಳನ್ನಾಗಿ ಪರಿವರ್ತಿಸಿದವು. ತನ್ನ ಹದಿನೆಂಟನೇ ವಯಸಿನಲ್ಲೆ ಅಂದರೆ ಬಾಕ್ಸಿಂಗ್ ಕಲಿಯಲು ಆರಂಭಿಸಿದ ಒಂದು ವರ್ಷದಲ್ಲೆ ಅಮೆರಿಕದ ಪೆನ್ಸಿಲ್ವೇನಿಯಾದಲ್ಲಿ ನಡೆದ ವಿಶ್ವ ಮಹಿಳಾ ಬಾಕ್ಸಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಭಾರತವನ್ನು ಪ್ರತಿನಿಧಿಸುವಷ್ಟು ಬೆಳೆದಿದ್ದಳು. ತನ್ನ ಕ್ರೀಡಾ ಜೀವನದ ಮೊದಲ ಅಂತಾರಾಷ್ಟ್ರೀಯ ಮಟ್ಟದ ಆ ಪಂದ್ಯದ 46 ಕೆ.ಜಿ. ವಿಭಾಗದಲ್ಲಿ ಬೆಳ್ಳಿಯ ಪದಕ ಗೆದ್ದು ತನ್ನ ಸಾಧನೆಯ ಅಧ್ಯಾಯಕ್ಕೆ ಮುನ್ನುಡಿ ಬರೆದಳು. ನಂತರದ ವರ್ಷ ಟರ್ಕಿಯಲ್ಲಿ ಆಯೋಜನೆಗೊಂಡಿದ್ದ ಟೂರ್ನಿಯಲ್ಲಿ ಬಂಗಾರದ ಪದಕ ಗೆಲ್ಲುವ ಮೂಲಕ ತನ್ನ ಗೆಲುವಿನ ಅಭಿಯಾನವನ್ನು ಮುಂದುವರೆಸಿದಳು.

ಮೇರಿಯ ಗೆಲುವಿನ ಹಾದಿಯಲ್ಲೂ ಸಾಕಷ್ಟು ಅಡೆತಡೆಗಳು ಬಂದವು. ತೀರಾ ಇತ್ತೀಚೆಗೆ ಮಂಗೋಲಿಯಾದಲ್ಲಿ ನಡೆದ 2012ರ ಏಷಿಯನ್ ಚಾಂಪಿಯನ್‌ಶಿಪ್‌ಗೆ ಪಟಿಯಾಲದಲ್ಲಿ ತಯಾರಿ ನಡೆಸುತ್ತಿದ್ದ ಸಮಯ. ಮೇರಿಯ ಗಮನವೆಲ್ಲವೂ 2010ರ ಏಷ್ಯಾ ಚಾಂಪಿಯನ್‌ಶಿಪ್‌ನಲ್ಲಿ ತನ್ನನ್ನು ಸೋಲಿಸಿದ್ದ ಕ್ಯಾಂಕಾನ್ ರೇನ್‌ಳನ್ನು ಸೋಲಿಸುವುದರಲ್ಲೇ ಕೇಂದ್ರಿತವಾಗಿತ್ತು. ಅದಕ್ಕೆ ಬೇಕಾದ ತಯಾರಿಯಲ್ಲಿಯೂ ಆಕೆ ತಲ್ಲೀನಳಾಗಿದ್ದಳು. ದುರದೃಷ್ಟವಶಾತ್ ಅದೇ ಹೊತ್ತಿಗೆ



ಆಕೆಯ ಅವಳಿ ಮಕ್ಕಳಲ್ಲಿ ನೈನೈ ಎಂಬ ಮಗುವಿಗೆ ಹೃದ್ರೋಗ ಕಾಣಿಸಿಕೊಂಡು ಆಸ್ಪತ್ರೆಗೆ ದಾಖಲಿಸಬೇಕಾಗಿತ್ತು. ಒಂದೆಡೆ ತಾಯಿಯ ಜವಾಬ್ದಾರಿ, ಮತ್ತೊಂದೆಡೆ ಕ್ರೀಡೆಯ ಅನಿವಾರ್ಯತೆ. ಆದರೆ ಮೇರಿ ಯಾವುದಕ್ಕೂ ಮೋಸ ಮಾಡಲಿಲ್ಲ. ಹಗಲೆಲ್ಲ ಪಟಿಯಾಲದಲ್ಲಿ ಪ್ರಾಕ್ಟೀಸ್ ಪೂರೈಸಿ ಸಂಜೆಯಾಗುತ್ತಿದ್ದಂತೆ ಚಂಡೀಗಢದ ಆಸ್ಪತ್ರೆಗೆ ಹೋಗಿ ಮಗುವಿನೊಟ್ಟಿಗೆ ಸಮಯ ಕಳೆದುಬರುತ್ತಿದ್ದಳು. ಈ ವಿಷಯದಲ್ಲಿ ಆಕೆಯ ಪತಿ ಓಂಕೋಲಾರ್ ಕೋಮ್ ಮೇರಿಗೆ ಅದ್ಭುತವಾದ ಮನೋಸ್ಥೈರ್ಯ ನೀಡಿ ಸಹಕರಿಸಿದರು. ಆಕೆ ಬಲು ನಿರೀಕ್ಷೆಯಲ್ಲಿದ್ದ ಸೋಲಿನ ಸೇಡು ತೀರಿಸಿಕೊಂಡು ದೇಶಕ್ಕೆ ಕೀರ್ತಿ ತರಬೇಕಾದ ದಿನದಂದೇ ಇಲ್ಲಿ ಮಗುವಿಗೆ ಆಪರೇಷನ್ ನಿಶ್ಚಿತವಾಗಿತ್ತು. ನಿಜಕ್ಕೂ ಆಕೆಯ ಸಾಮರ್ಥ್ಯಕ್ಕಿಟ್ಟಿದ್ದ ಗರಿಷ್ಠ ಪರೀಕ್ಷೆ ಅದು. ಮೇರಿಯ ಬದ್ಧತೆ ಅದೆಂತಹದ್ದೆಂದರೆ ಸಂದಿಗ್ಧ ಪರಿಸ್ಥಿತಿಯಲ್ಲು ಏಕಾಗ್ರತೆ ಸಾಧಿಸಿ ಫೈನಲ್‌ನಲ್ಲಿ ತನ್ನನ್ನು ಕಳೆದ ಸಾರಿ ಸೋಲಿಸಿದ್ದ ಕ್ಯಾಂಕಾನಾಳನ್ನು ಸೋಲಿಸಿ ದೇಶಕ್ಕೆ ಮತ್ತೊಂದು ಗೌರವವನ್ನು ದೊರಕಿಸಿಟ್ಟಿದ್ದಳು. At the same time, ಆಕೆಯ ಮಗನ ಶಸ್ತ್ರಚಿಕಿತ್ಸೆಯೂ ಯಶಸ್ವಿಯಾಗಿ ಮುಗಿದಿತ್ತು.

ಸಾಮಾನ್ಯವಾಗಿ ಮಹಿಳೆಯರು ತಾಯಿಯಾದ ನಂತರ ತಮ್ಮ ಉತ್ಸಾಹವನ್ನು ಅದರಲ್ಲೂ ಕ್ರೀಡೆಯಲ್ಲಿ ಕಳೆದುಕೊಂಡು ಬಿಡುತ್ತಾರೆ ಎಂಬ ಮಾತಿದೆ. ಆದರೆ ಮೇರಿ 2007ರಲ್ಲಿ ಅವಳಿ ಮಕ್ಕಳಿಗೆ ಜನ್ಮ ನೀಡಿ ಎರಡು ವರ್ಷಗಳ ಚೊಚ್ಚಲ ತಾಯ್ತನವನ್ನು ಮುಗಿಸಿ ಬರುತ್ತಿದ್ದಂತೆಯೇ 2008ರಲ್ಲಿ ಚೀನಾದಲ್ಲಿ ನಡೆದ ಮಹಿಳಾ ಬಾಕ್ಸಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಗೆದ್ದು ಅಚ್ಚರಿ ಮೂಡಿಸಿದ್ದಳು. ಅವತ್ತಿನ ಆಕೆಯ ಸಾಧನೆಯನ್ನು ಖುದ್ದು ಇಂಟರ್‌ನ್ಯಾಷನಲ್ ಬಾಕ್ಸಿಂಗ್ ಅಸೋಸಿಯೇಷನ್ (ಎ.ಐ.ಬಿಎ) ಸಂಸ್ಥೆಯೇ ಕೊಂಡಾಡಿ ಆಕೆಯನ್ನು 'ಮ್ಯಾಗ್ನಿಫಿಸೆಂಟ್ ಮೇರಿ' ಎಂದೇ ಕರೆದಿತ್ತು.

ಸಾಮಾನ್ಯ ಕೂಲಿಗಳ ಮಗಳಾಗಿ, ಸಾವಿರ ಕಷ್ಟಗಳನ್ನು ಎದುರಿಸಿ ಬೆಳೆದ ಹುಡುಗಿ ಕೆಲವೇ ವರ್ಷಗಳಲ್ಲಿ ಭಾರತದ ಪತಾಕೆಯನ್ನೆ ಹಾರಿಸುವಷ್ಟರಮಟ್ಟಿಗೆ ಬೆಳೆದು ನಿಲ್ಲುತ್ತಾಳೆಂದರೆ ಅದು ಸಾಮಾನ್ಯ ವಿಷಯವಲ್ಲ. ಅದಕ್ಕೋಸ್ಕರವೇ 2003ರಲ್ಲಿ ಅರ್ಜುನ ಪ್ರಶಸ್ತಿ, 2005ರಲ್ಲಿ ಪದ್ಮಶ್ರೀ, 2009ರಲ್ಲಿ ರಾಜೀವ್ ಗಾಂಧಿ ಖೇಲ್‌ರತ್ನಗಳಂತಹ ಮಹೋನ್ನತ ಗೌರವಗಳೇ ಆಕೆಯನ್ನು ಅರಸಿ ಬಂದಿವೆ. ಅಂಜುಬುರುಕಿಯಂತೆ ಆಸೆ, ಆಸಕ್ತಿಗಳನ್ನು ಅದುಮಿಟ್ಟುಕೊಂಡಿದ್ದರೆ ದೇಶದ ಹೆಸರು ಬೆಳಗುವುದಿರಲಿ ಹೆತ್ತವರ ಕಷ್ಟವನ್ನೂ ನೀಗಿಸಲಾಗದ ಮಾಮೂಲಿ ಮಣಿಪುರಿ ಹುಡುಗಿಯಂತೆ ಕಾಡಿನಲ್ಲೆಲ್ಲೋ ಕಳೆದುಹೋಗಿರುತ್ತಿದ್ದಳು. ಆಕೆಯ ಬದುಕು, ಸಾಧನೆ, ಬದ್ಧತೆಗಳು ಹತ್ತಾರು ಪ್ರತಿಭೆಗಳಿಗೆ ಸ್ಫೂರ್ತಿಯಾಗುವುದಾದರೆ ಅದಕ್ಕಿಂತ ಮತ್ತೇನು ಬೇಕು.......


ಕೋಟಿ ಮನಸುಗಳ ಹಾರೈಕೆಯಂತೆ ಮೇರಿ ಕೋಮ್ ಲಂಡನ್ ಒಲಂಪಿಕ್‌ನಲ್ಲಿ ಚಿನ್ನದ ಪದಕ ಗೆದ್ದು ಬರಲಿ. ಆ ಮೂಲಕ ಒಲಂಪಿಕ್‌ನಲ್ಲಿ ಚಿನ್ನದ ಪದಕ ಗೆದ್ದ ಮೊದಲ ಭಾರತೀಯ ಮಹಿಳಾ ಬಾಕ್ಸರ್ ... ...

– ಗಿರೀಶ್ ತಾಳೀಕಟ್ಟೆ



ಖ್ಯಾತಿ ಜೊತೆಗೆ ಕಾಳಜಿಯೂ ಇದೆ


ಪ್ರತಿಭೆಗೆ ವೇದಿಕೆ ಸಿಕ್ಕು ಸಾಧನೆ ಸಾಧ್ಯವಾದರೆ ಕೀರ್ತಿ, ಪ್ರಶಂಸೆಗಳಲ್ಲೇ ಕಳೆದುಹೋಗುವ ವ್ಯವಸ್ಥೆಯ ನಡುವೆ ಮೇರಿ ಕೋಮ್ ಪ್ರತ್ಯೇಕವಾಗಿ ನಿಲ್ಲುತ್ತಾಳೆ. ಸರಿಯಾದ ಪ್ರೋತ್ಸಾಹವಿಲ್ಲದೆ ಅದೆಷ್ಟೋ ಪ್ರತಿಭೆಗಳು ಬೆಳಕಿಗೇ ಬಾರದೆ ಆಸಕ್ತಿಗಳನ್ನು ಸಾಯಿಸಿಕೊಂಡು ಬದುಕುತ್ತಿರುವ ದುಸ್ಥಿತಿ ಮೇರಿಗೆ ತಿಳಿಯದ ಸಂಗತಿಯೇನು ಅಲ್ಲ. ಸ್ವಲ್ಪೇ ಸ್ವಲ್ಪ ಧೃತಿಗೆಟ್ಟಿದ್ದರು ಅಂತಹ ಸಾಲಿಗೆ ತಾನೂ ಸಹ ಸೇರಲಿದ್ದೆ ಎಂಬ ಅರಿವೂ ಮೇರಿಗಿದೆ. ಅದಕ್ಕೆಂದೇ 2006ರಲ್ಲಿ ಮೇರಿ ರೀಜನಲ್ ಬಾಕ್ಸಿಂಗ್ ಫೌಂಡೇಷನ್ ಎನ್ನುವ ಟ್ರಸ್ಟ್ ಸ್ಥಾಪಿಸಿ ಯುವಜನತೆಯಲ್ಲಿನ ಬಾಕ್ಸಿಂಗ್ ಪ್ರತಿಭೆಯನ್ನು ಪ್ರೋತ್ಸಾಹಿಸಲು ಮುಂದಾಗಿದ್ದಾರೆ. ಮುಖ್ಯವಾಗಿ ಗ್ರಾಮೀಣ ಮತ್ತು ಅಶಕ್ತ ಯುವಜನರಲ್ಲಿ ಬಾಕ್ಸಿಂಗ್ ಕೌಶಲ್ಯಗಳಿದ್ದರೆ ಅಂತವರಿಗೆ ವಸತಿ ಸಮೇತ ಟ್ರೈನಿಂಗ್ ನೀಡಿ ದೇಶಕ್ಕೆ ಸಮರ್ಪಿಸುವುದು ಈ ಟ್ರಸ್ಟ್‌ನ ಮುಖ್ಯ ಉದ್ದೇಶ. ಇಲ್ಲಿ ತರಬೇತಿ ಪಡೆದ ಸಾಕಷ್ಟು ಬಾಕ್ಸರ್‌ಗಳು ಈಗಾಗಲೆ ರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಗಮನಾರ್ಹ ಸಾಧನೆ ತೋರಿ ಭವಿಷ್ಯದ ಭರವಸೆಗಳಾಗಿದ್ದಾರೆ. ಸದ್ಯ ಅಲ್ಲಿ 37 ಬಾಕ್ಸರ್‌ಗಳು ತರಬೇತಿ ಪಡೆಯುತ್ತಿದ್ದು 16 ಮಹಿಳೆಯರು, 21 ಪುರುಷರು ಮೇರಿಯ ಮಾರ್ಗದರ್ಶನದಲ್ಲಿ ಟ್ರೈನಿಂಗ್ ಪಡೆಯುತ್ತಿದ್ದಾರೆ.



ಹಳಿಯಾಳ ಶಾಸಕನಾಗಲು ದೇಶಪಾಂಡೆ ದಶಾವತಾರ ಪ್ರದರ್ಶನ!

ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ-ಜೋಯಿಡಾ ವಿಧಾನಸಭಾ ಕ್ಷೇತ್ರ ಭೌಗೋಳಿಕವಾಗಷ್ಟೇ ಅಲ್ಲ ಸಾಮಾಜಿಕ-ರಾಜಕೀಯವಾಗೂ ವಿಶಿಷ್ಟ ಪ್ರದೇಶ! ಹಳಿಯಾಳದಂಥ ಅಪ್ಪಟ ಬಯಲುಸೀಮೆ, ದಾಂಡೇಲಿ-ಜೋಯಿಡಾದಂಥ ಹಚ್ಚ ಹಸಿರಿನ ಮಲೆನಾಡು ಒಳಗೊಂಡಿರುವ ಈ ಗಡಿನಾಡಲ್ಲಿ ಗೌಳಿ-ಸಿದ್ಧಿ-ಕುಣಬಿಗಳಂಥ ಬುಡಕಟ್ಟು ಮಂದಿ ವಾಸವಾಗಿದ್ದಾರೆ. ಬರ-ಬಡತನ-ಪ್ರಗತಿಹೀನತೆಯ ಹಳಿಯಾಳ ಒಂದೆಡೆಯಾದರೆ, ಮತ್ತೊಂದೆಡೆ ಶಿಲಾಯುಗದ ಪಳಿಯುಳಿಕೆಯಂತೆ ನಿಂತಿದೆ ಗುಡ್ಡಗಾಡು ಜೋಯಿಡಾ! ರಾಮಕೃಷ್ಣ ಹೆಗಡೆ, ಆರ್.ವಿ. ದೇಶಪಾಂಡೆಯಂಥ 'ಅಲ್ಪ' ಸಂಖ್ಯಾತರು ಬಹುಸಂಖ್ಯಾತ ಮರಾಠರು-ಬುಡಕಟ್ಟು ಮಂದಿಯ ಮೇಲೆ ನಿರಂತರ ಸವಾರಿ ಮಾಡುತ್ತ ದೇಶ-ರಾಜ್ಯಮಟ್ಟದಲ್ಲಿ ಮಿಂಚಿದರು. ಹಾಗಂತ ಈ ದಗಲುಬಾಜಿ ದಿಗ್ಗಜರಿಂದ ಕ್ಷೇತ್ರಕ್ಕೆ ಬಿಲ್ಲಿ ಪ್ರಯೋಜನವೂ ಆಗಲಿಲ್ಲ....

ತವರು ಕ್ಷೇತ್ರ ಶಿರಸಿ ಮೀಸಲು ಕ್ಷೇತ್ರವಾದಾಗ ಹೆಗಡೆಜೀ ಹಳಿಯಾಳಕ್ಕೆ ವಲಸೆ ಹೋಗಿ ಗೆದ್ದಿದ್ದರು. ಆ ಬಳಿಕ ಮಂತ್ರಿಯೂ ಆಗಿ ಮೆರೆದರು. ಇದೇ ಹೆಗಡೆಯ ಪಟ್ಟದ ಶಿಷ್ಯನಂತಿದ್ದ ಆರ್.ವಿ. ದೇಶಪಾಂಡೆ ಎಂಬ ಧಡಪ್ ಶಾಹಿ ಬರೋಬ್ಬರಿ ಇಪ್ಪತ್ತೈದು ವರ್ಷ ಈ ಕ್ಷೇತ್ರವನ್ನು ಪಕ್ಕಾ ಪಾಳೆಗಾರನಂತೆ ಆಳಿದರು. ತನ್ನಲ್ಲಿರುವ ಕೊಪ್ಪರಿಗಟ್ಟಲೆ ಕಪ್ಪು ಕಾಸಿಂದಲೇ ಇವತ್ತು ಕಾಂಗ್ರೆಸ್‌ನ ಮುಂಚೂಣಿ ನಾಯಕರಲ್ಲೊಬ್ಬನಾಗಿರುವ ಈ ದಳದ ಮೂಲನಿವಾಸಿ ಹೆಗಡೆಜೀಯಿಂದ ಧರಂಸಿಂಗ್ ತನಕದ ಸರ್ಕಾರದಲ್ಲಿ 'ಕಾಯಂ' ಮಂತ್ರಿ ಆಗಿದ್ದರು. ಇಂಥ ದೇಶಪಾಂಡೆ ಅಪಾರ ಅಧಿಕಾರವಿದ್ದಾಗಲೂ ಹಳಿಯಾಳ ಕ್ಷೇತ್ರದ ರೈತರ, ಕಾರ್ಮಿಕರ, ಅಸಹಾಯಕರ ಬಗ್ಗೆ ಒಂಚೂರೂ ಚಿಂತಿಸಲಿಲ್ಲ, ಹಳಿಯಾಳ ಕ್ಷೇತ್ರವೆಂದರೆ ಎಮ್ಮೆಲ್ಲೆ ಆಗಲು ಇರುವ ಒಂದು ಭೂಪ್ರದೇಶವಾಗಿತ್ತು 'ದೋಷ'ಪಾಂಡೆ ಪಾಲಿಗೆ.




ಕಾಲುಶತಮಾನದ ದೇಶಪಾಂಡೆ ದರ್ಬಾರು ಹಳಿಯಾಳದಲ್ಲಿ ಯಾವ ಥರ ಇತ್ತೆಂದರೆ, ಆತನ ಪುಂಡ ಪಟಾಲಂ ದೂರದಲ್ಲಿ ಕಂಡರೂ ಸಾಕು, ಜನಸಾಮಾನ್ಯ ನಿಂತಲ್ಲೇ ಬಚ್ಚಿಟ್ಟುಕೊಂಡು ಥರಗುಟ್ಟುತ್ತಿದ್ದ! ದೇಶಪಾಂಡೆ ಗ್ಯಾಂಗಿನ ಅನ್ಯಾಯ-ಅವ್ಯವಹಾರ-ಅವಾಂತರದ ಬಗ್ಗೆ ಸಣ್ಣ ಸೊಲ್ಲೆತ್ತಿದರೂ ಸಾಮ-ಭೇದ-ದಂಡ ಪ್ರಯೋಗ ಖಾತ್ರಿಯಾಗಿತ್ತು. ಆಗ ದೇಶಪಾಂಡೆಯ ಧನದಾಹ-ದೌರ್ಜನ್ಯ- ದಾದಾಗಿರಿ ದಂಡಿಗೆ ದಂಡನಾಯಕರಾಗಿದ್ದವರು ಇಬ್ಬರು. ಒಬ್ಬ ಈಗ ಎಮ್ಮೆಲ್ಸಿ ಆಗಿರುವ ಶ್ರೀಕಾಂತ ಘೋಟನೇಕರ್; ಇನ್ನೊಬ್ಬ ಹಿಂದೆ ದೇಶಪಾಂಡೆಯೇ ಅರ್ಹರು-ಸಮರ್ಥರನ್ನೆಲ್ಲ ಮೂಲೆಗುಂಪು ಮಾಡಿ ಎಮ್ಮೆಲ್ಸಿ ಮಾಡಿದ್ದ ವಿ.ಡಿ. ಹೆಗಡೆ! ಈ ವಿ.ಡಿ. ಹೆಗಡೆ ಮತ್ಯಾರೂ ಅಲ್ಲ; ಈಗ ಹಳಿಯಾಳ-ಜೋಯಿಡಾದ ಶಾಸಕನಾಗಿರುವ ಸುನಿಲ್ ಹೆಗಡೆಯ ಅಪ್ಪ; ದೇಶಪಾಂಡೆಯ ಫ್ಯೂಡಲ್ ಪಾಲಿಟಿಕ್ಸ್‌ನ ಗುರುವರ್ಯ!!

ದೇಶಪಾಂಡೆ ಶಾಸಕನಾಗಿ-ಮಂತ್ರಿಯಾಗಿ ಹಳಿಯಾಳ-ಮುಂಡಗೋಡ ಮತ್ತು ಜೋಯಿಡಾದಲ್ಲಿ ಕಾಲುಶತಮಾನ ಮಾಡಿದ ಪಾತಕದ ದೊಡ್ಡ ಪಾಲು ಶಾಸಕ ಸುನಿಲ್ ಮತ್ತವನ ಅಪ್ಪ ಮಾಜಿ ವಿಧಾನ ಪರಿಷತ್ ಸದಸ್ಯ ವಿ.ಡಿ. ಹೆಗಡೆಗೆ ಸಲ್ಲಲೇಬೇಕು! ಆರ್ಥಿಕವಾಗಿ ದಿವಾಳಿ ಎದ್ದುಹೋಗಿದ್ದ ವಿ.ಡಿ. ಹೆಗಡೆ ಪುಂಡಾಟ ಅದ್ಯಾವ ಮಟ್ಟದಲ್ಲಿತ್ತೆಂದರೆ, ಸಾಲ ಕೊಟ್ಟವರು ಕೇಳಲು ಬಂದರೆ ತನ್ನ ಅವಲಕ್ಕಿ ಮಿಲ್‌ನಲ್ಲಿ ಹಾಕಿ ಹೊಡೆಸುತ್ತಿದ್ದ. ಇಂಥ ವಿ.ಡಿ. ಹೆಗಡೆ ದೇಶಪಾಂಡೆ ದಯೆಯಿಂದ ಸಾಲ-ಸೂಲ ತೀರಿಸಿಕೊಂಡು ಅಂದೇ ಮೈನ್ಸ್ ಬಿಸಿನೆಸ್ ಶುರು ಹಚ್ಚಿಕೊಂಡಿದ್ದ. ಮೈಸೂರು ಮಿನರಲ್ಸ್‌ನ ಕಬ್ಬಿಣದ ಅದಿರು ಸಾಗಾಟಗಾರನಾಗಿ ಭರ್ಜರಿ ದುಡ್ಡು ಮಾಡಿಕೊಂಡಿದ್ದರು ಸುನಿಲ್-ವಿ.ಡಿ. ಹೆಗಡೆ!

ಆರ್ಥಿಕವಾಗಿ ಸಬಲನಾದ ವೀಡಿ ರಾಜಕೀಯ ಮಹತ್ವಾಕಾಂಕ್ಷೆಗೂ ಬಿದ್ದರು. ತನ್ನ ಶಿಷ್ಯ ದೇಶಪಾಂಡೆ ರಾಜ್ಯಮಟ್ಟದಲ್ಲಿ ಕಳಾಯಿಸುತ್ತಿರುವಾಗ ಹಳಿಯಾಳದಲ್ಲಾದರೂ ತಾನು ಸಾಮ್ರಾಜ್ಯ ಕಟ್ಟದಿದ್ದರೆ ಹೇಗೆಂಬ ದುರಾಸೆ ಆತನಿಗೆ ಕಾಡತೊಡಗಿತ್ತು. ದೇಶಪಾಂಡೆಗೆ ಒಂದು ಹಂತದಲ್ಲಿ ಬ್ಲ್ಯಾಕ್‌ಮೇಲ್ ಮಾಡಿಯೇ ಆತ ಸ್ಥಳೀಯ ಸಂಸ್ಥೆಗಳಿಂದ ವಿಧಾನಪರಿಷತ್‌ಗೆ ಸ್ಪರ್ಧಿಸಲು ದಳದ ಟಿಕೆಟ್ ಪಡೆದುಕೊಂಡಿದ್ದ. ದೇಶಪಾಂಡೆಯ ಜಾತಿ (ಕೊಂಕಣಿ) ಬಂಧುವೂ ಆದ ವೀಡಿ ಹಳಿಯಾಳ ಕ್ಷೇತ್ರಕ್ಕೆ ಅನಧಿಕೃತ ಎಮ್ಮೆಲ್ಲೆ ಅಂತಾಗಿ ಹೋದ. ಬೃಹತ್ ಕೈಗಾರಿಕಾ ಮಂತ್ರಿಯಾಗಿ ದೇಶ-ವಿದೇಶದ ದೊಡ್ಡ-ದೊಡ್ಡ ಕೈಗಾರಿಕೋದ್ಯಮಿಗಳ ಜೊತೆ ಲೇವಾದೇವಿಗೆ ಬಿದ್ದಿದ್ದ ದೇಶಪಾಂಡೆಗೆ ಹಳಿಯಾಳ ಮರೆತೇಹೋಗಿತ್ತು. ಇಂಥ ಸಂದರ್ಭದ ಸದುಪಯೋಗ ಪಡೆದ ವೀಡಿ ತನ್ನ ಏಕೈಕ ವಂಶೋದ್ಧಾರಕ ಸುನಿಲ್ ಹೆಗಡೆಗೆ ಹಳಿಯಾಳ ಮುನ್ಸಿಪಾಲಿಟಿ ಅಧ್ಯಕ್ಷ-ಅರ್ಬನ್ ಬ್ಯಾಂಕ್ ಪ್ರೆಸಿಡೆಂಟ್ ಇತ್ಯಾದಿ ಅಧಿಕಾರ ಪೀಠಕ್ಕೇರಿಸಿಕೊಂಡುಬಿಟ್ಟ.

ಇಷ್ಟಾದರೂ ದೇಶಪಾಂಡೆ ಮತ್ತು ವೀಡಿ ನಡುವಿನ ಸಖ್ಯ ಮಾತ್ರ ಹದಗೆಡುತ್ತಲೇ ಹೋಯ್ತು. ವೀಡಿ ತನ್ನ ಮಗನನ್ನು ತನಗೆ ಸಮಾನಾಂತರವಾಗಿ ಬೆಳೆಸುತ್ತಿದ್ದಾನೆಂಬ ಆಕ್ರೋಶ ದೇಶಪಾಂಡೆಯಲ್ಲಿ ಮೊಳೆಯಿತು. ಇದರೊಂದಿಗೇ ಈ ಎರಡೂ ಕೊಂಕಣಿ ಮಾಂಡಲೀಕ ಫ್ಯಾಮಿಲಿ ನಡುವಿನ 'ತಕ್ಕಡಿ ವ್ಯವಹಾರ' ಏರುಪೇರಾಯ್ತು. ಕೊಡು-ಕೊಳ್ಳುವ ದಂಧೆ ಜಗಳವೂ ಆಯ್ತು. ಆಗ ಬಲಾಢ್ಯ ದೇಶಪಾಂಡೆಗೆ ವೀಡಿ ತಿರುಗಿಬಿದ್ದರು. ತನ್ನನ್ನು ಜನ ನಂಬುವುದಿಲ್ಲ ಎಂಬುದಾತನಿಗೆ ಗೊತ್ತಿತ್ತು. ಹಾಗಾಗಿ ಮಗ ಸುನಿಲ್‌ನನ್ನು ಪರ್ಯಾಯ ನಾಯಕನಾಗಿ ಹಳಿಯಾಳ ಜನರ ಮುಂದೆ ನಿಲ್ಲಿಸಲು ಆತ ಸ್ಕೆಚ್ ಹಾಕಿಕೊಂಡ. ದೇಶಪಾಂಡೆಯ ಪ್ರತಿ ಅಸೆಂಬ್ಲಿ ಇಲೆಕ್ಷನ್‌ನಲ್ಲೂ ಆತನ 'ಸೇನಾಧಿಪತಿ'ಯಾಗುತ್ತಿದ್ದ ಸುನಿಲ್‌ಗೆ ಇಡೀ ಕ್ಷೇತ್ರದ ನಾಡಿಮಿಡಿತ ಅರ್ಥವಾಗಿತ್ತು. ಕಳೆದ 2008 ರ ಇಲೆಕ್ಷನ್ ಹೊತ್ತಲ್ಲಿ ದೇಶಪಾಂಡೆಯನ್ನು ಬಿಟ್ಟು ವೀಡಿ ಮತ್ತವನ ಮಗ ಜೆಡಿಎಸ್‌ಗೆ ನೆಗೆದು ರಾಜಕೀಯ ಅಸ್ತಿತ್ವಕ್ಕಾಗಿ 'ಆಟ' ಆರಂಭಿಸಿದರು.



ಸುನಿಲ್ ಹೆಗಡೆ

ದಳದಲ್ಲಿದ್ದ ಪಿ.ಜಿ.ಆರ್. ಸಿಂಧ್ಯಾನಂಥವರನ್ನು ಹಿಡಕೊಂಡು ದಳದ ಧೀರನಾದ ಸುನಿಲ್. ಸಿಂಧ್ಯಾಗೆ ಸ್ಥಳೀಯ ಬಹುಸಂಖ್ಯಾತ ಮರಾಠರ ಮೇಲಿದ್ದ ಪ್ರಭಾವ ಬಳಸಿಕೊಂಡು ದೇಶಪಾಂಡೆ ಹಣಿಯಲು ಸುನಿಲ್ ಸೂತ್ರ ಒಂದನ್ನು ಸಿದ್ಧ ಮಾಡಿಕೊಂಡ. ಅದೇ ಹೊತ್ತಿಗೆ ಹಳಿಯಾಳ ಕ್ಷೇತ್ರದ ಜನರಿಗೆ ದೇಶಪಾಂಡೆ ಎಂಬ ನಾಲಾಯಕ್ ಶಾಸಕನ ಸೋಗಲಾಡಿತನ ಕಂಡು ಬೇಜಾರು ಬಂದಿತ್ತು. ಹಳಿಯಾಳದ ರೈತರ ಬಹುದಿನದ-ಅನಿವಾರ್ಯ ಬೇಡಿಕೆಯಾದ ಸಕ್ಕರೆ ಕಾರ್ಖಾನೆ-ನೀರಾವರಿ ಯೋಜನೆ, ದಾಂಡೇಲಿ ಕಾರ್ಮಿಕರ ಸಮಸ್ಯೆಗಳನ್ನೆಲ್ಲ ದೇಶಪಾಂಡೆ ಬುದ್ಧಿಪೂರ್ವಕವಾಗೇ ಕಡೆಗಣಿಸುತ್ತ ಬಂದಿದ್ದರು. ಇದನ್ನೆಲ್ಲ ಸುನಿಲ್ ಮತ್ತವನ ಚಾಲಾಕಿ ತಂದೆ ವೀಡಿ ಎದುರಾಳಿ ದೇಶಪಾಂಡೆಯ ಹೆಡೆಮುರಿ ಕಟ್ಟಲು ಸಮರ್ಥವಾಗಿ ಬಳಸಿಕೊಂಡರು. ಹೊತ್ತಿಗೆ ಕ್ಷೇತ್ರ ಪುನರ್ವಿಂಗಡಣೆಯಿಂದ ಹಳಿಯ[...] ಕ್ಷೇತ್ರದಲ್ಲಿದ್ದ ಮುಂಡಗೋಡು ತಪ್ಪಿ ಅತೀ ಹಿಂದು[...] ಜೋಯಿಡಾ ಸೇರಿಕೊಂಡಿತ್ತು. ಅಲ್ಲಿ ಕಾರವಾ[...] ಅಸ್ನೋಟಿಕರ್ ಫ್ಯಾಮಿಲಿಯ ಪ್ರಭಾವ ಜಾಸ್ತಿ [...] ಬಿಜೆಪಿಯಲ್ಲಿ 'ಸಿಜರಿನ್ ಸಚಿವ'ನಾಗಿರುವ ಆನ[...] ಅಸ್ನೋಟಿಕರ್ ಆಗ ದೇಶಪಾಂಡೆಗೆ ಒಳಗೊಳಗೇ [...] ಇಟ್ಟಿದ್ದ. ಇದೆಲ್ಲದರಿಂದ ಸುನಿಲ್ ರೊಟ್ಟಿ [...] ತುಪ್ಪಕ್ಕೆ ಬಿದ್ದಿತ್ತು.

ಸತತ ಮಂತ್ರಿ-ಶಾಸಕನಾಗಿ ಭೂಮಿ ಬಿಟ್ಟು [...] ಡುತ್ತಿದ್ದ ದೇಶಪಾಂಡೆಯ ಗರ್ವಭಂಗವಾಗಿ [...] ವಾಸ್ತವಲೋಕಕ್ಕೆ ಬಂದಿದ್ದೇ ಕಳೆದ ಅಸೆಂಬ್ಲಿ ಇಲೆಕ್ಷನ್ [...] 'ಚಿಲ್ಟು' ಸುನಿಲ್ ಎದುರು ಸೋತಾಗ! ಆಗಾತ [...] ಪರಂಪರಾಗತ ದರ್ಪ-ದೌರ್ಜನ್ಯ-ದುರಹಂಕಾರವನ್ನು [...] ಪೂರ್ವಕವಾಗಿ ಮರೆಮಾಚುತ್ತ 'ಹೊಸ ದೇಶಪಾಂಡೆ'ಯ[...] ಹಳಿಯಾಳ-ಜೋಯಿಡಾದಲ್ಲಿ ಅಂಡಲೆಯಲಾರಂಭಿ[...] ಇದಕ್ಕೆ ತದ್ವಿರುದ್ಧವಾಗಿ ಶಾಸಕ ಸುನಿಲ್ ಹಳಿ ತ[...] ದುಡ್ಡು ಮಾಡುವುದು, ಕ್ಷುಲ್ಲಕ ರಾಜಕಾರಣ ಮಾಡೋ[...] ಮತ್ತು ಜನರ ಮರುಳು ಮಾಡಲು ಗಿಮಿಕ್ ಮಾಡ[...] ಹುಚ್ಚಾಟಕ್ಕೆ ಬಿದ್ದಿದ್ದ. ತತ್ಪರಿಣಾಮವಾಗಿ ಶಾಸಕ ಸುನಿ[...] ಹೆಗಡೆಯ ಜೆಡಿಎಸ್ ಜಿಪಂ-ತಾಪಂ ಇಲೆಕ್ಷನ್‌ನಲ್ಲಿ ಮ[...] ಮುಕ್ಕಿತು. ಇದರಿಂದ ಕಂಗಾಲಾದ ಸುನಿಲ್ ಡ್ಯಾಮೇ[...] ಕಂಟ್ರೋಲ್‌ಗೆ ಹಳಿಯಾಳ ನೀರಾವರಿ ಯೋಜನೆ[...] ಮತ್ತು ಜೋಯಿಡಾದ ಶತ-ಶತಮಾನದ ಸಮ[...] ನೀಗುವುದಕ್ಕಾಗಿ ಮತ್ತು ಜಲವಿದ್ಯುತ್ ಯೋಜನೆಯಿ[...] ನಿರಾಶ್ರಿತರಾಗಿರುವ ಜೋಯಿಡಾದವರ ಉದ್ಧಾರಕ[...] ಸುನಿಲ್ ಪಾದಯಾತ್ರೆ ಹಮ್ಮಿಕೊಂಡ. ಎರಡೆರಡು [...] ಪಾದಯಾತ್ರೆ ಮಾಡಿ ಜನರ ಸಿಂಪಥಿ ಪಡೆದ. ಬ[...] ಕುಮ್ಮಿ ಕರೆಸಿ ದೊಡ್ಡದೊಂದು ಸಮಾವೇಶ ಮ[...] ಗುಳ್ಳೆಗಳೆದ್ದ ತನ್ನ ಕಾಲು ಜನರಿಗೆ ತೋರಿಸಿ, ಆ ಗುಳ್ಳೆಗ[...] ಸಾರ್ವಜನಿಕರೆದುರೇ ಹೆಂಡತಿಯಿಂದ ಇಲಾ[...] ಮಾಡಿಸಿಕೊಂಡು ಸ್ಟಂಟ್ ಮಾಡಿದ.

ಅಷ್ಟೊತ್ತಿಗಾಗಲೇ ಬಿಜೆಪಿ ಸರ[...] ನಿಟ್ಟುಸಿರು ಬಿಡಲಾರಂಭಿಸಿತ[...] ಅಕಸ್ಮಾತ್ ಇಲೆಕ್ಷನ್ ಬಂದ[...] ಸುನಿಲನಿಗೇ ಲಾಭವಾದೀತೆಂ[...] ದೇಶಪಾಂಡೆ ಗಡಿಬಿಡಿಗೆ ಬಿದ್ದ[...] ಆತನೂ ಗೌಳಿ-ಸಿದ್ಧಿಗಳಂಥ ಗುಡ್ಡಗಾ[...] ಜನರ ಸಮಸ್ಯೆ ಎತ್ತಿಕೊಂಡು ಶ[...] ಶುರುಹಚ್ಚಿಕೊಂಡುಬಿಟ್ಟರು. ಸುನಿ[...] ವಿರುದ್ಧ ದೇಶಪಾಂಡೆ ಬಂಟ[...] ಮುರಕೊಂಡು ಬಿದ್ದರು. ದೇಶಪಾಂಡೆ[...] ಬಲಗೈ ಬಂಟ-ಎಮ್ಮೆ[...] ಘೋಟನೇಕರ್ ಸಾಹೇಬರಂತ[...] ದಿನ-ದಿನವೂ ಸುನಿಲ್‌ನ ಅರ್ಬ[...] ಬ್ಯಾಂಕ್ ಭಾನ್ಗಡಿ, ದಂಧೆ ದೋಖಾ, ಯಡ್ಡಿ ಮುಂ[...] ಕುಮ್ಮಿಯ ರುಂಡ ಮಾರ್ಫಿಂಗ್ ಮಾಡಿ ಕ್ಯಾಲೆಂಡ[...] ಹಂಚಿದ್ದು ಮುಂತಾದ ಘಟನೆಗಳನ್ನೆಲ್ಲ ಎತ್ತಿ ತೋರು[...] 'ಹೇತ್ಲಾಂಡಿ ಎಮ್ಮೆಲ್ಲೆ' ಎಂದು ಬಿಂಬಿಸತೊಡಗಿದರು.

ಈಗಂತೂ ಹಳಿಯಾಳ-ಜೋಯಿಡಾ ಅಂ[...] ದೇಶಪಾಂಡೆ V/s ಸುನಿಲ್ ಹೆಗಡೆಯ ಜಿದ್ದಾಜಿದ್ದಿ[...] ಅಖಾಡದಂತಾಗಿ ಹೋಗಿದೆ. ಕ್ಷೇತ್ರದ ರಾಜಕಾರ[...] ದಿನಕ್ಕೊಂದು ಆಯಾಮ ಪಡೆದುಕೊಳ್ಳುತ್ತ ರಂಗುರಂಗ[...] ಬಿಟ್ಟಿದೆ. ಸಮಬಲ-ಸಮ ಕುತಂತ್ರದ ಮದ್ದಾನೆ[...]


ದೇಶಪಾಂಡೆ ಟೀಮ್!

ಬರುವ ಅಸೆಂಬ್ಲಿ ಇಲೆಕ್ಷನ್‌ನಲ್ಲಿ ಉತ್ತರ ಕನ್ನಡದ ಆರು ಅಸೆಂಬ್ಲಿ ಕ್ಷೇತ್ರದಲ್ಲಿ ಐದರಲ್ಲಿ ಗೆದ್ದು ಕಾಂಗ್ರೆಸ್ 'ಡಾನ್' ಆಗಬೇಕೆಂಬ ಹಿಕಮತ್ತು ದೇಶಪಾಂಡೆ ನಡೆಸಿದ್ದಾರೆ. ಜಿಲ್ಲೆಯ ಕಾಂಗ್ರೆಸ್‌ನಲ್ಲಿ ಮ್ಯಾಗ್ಗಿ ಪಡೆ ಅನಾಥವಾಗಿರುವುದು ದೇಶಪಾಂಡೆಗೆ ಅನುಕೂಲಕರವಾಗಿದೆ. ಮ್ಯಾಗ್ಗಿ ತನ್ನನ್ನು ನಂಬಿದ ಹಿಂಬಾಲಕರನ್ನು ನಡುನೀರಲ್ಲಿ ಬಿಟ್ಟು ರಾಜ್ಯಪಾಲಿಯಾಗಿ ಹೋದ ತರುವಾಯ ಜಿಲ್ಲಾ ಕಾಂಗ್ರೆಸ್‌ನಲ್ಲಿ ದೇಶಪಾಂಡೆಯ ಒಕ್ಕೈ ಎಂಬಂತಾಗಿದೆ. ಆತ ಆರೂ ಕ್ಷೇತ್ರಗಳಲ್ಲಿ ತನ್ನ ನಂಬಿಗಸ್ಥರಿಗೆ ಕಾಂಗ್ರೆಸ್ ಟಿಕೆಟ್ ಕೊಡಿಸಲು ಬಿರುಸಿನ ಲಾಬಿ ಬೆಂಗಳೂರು-ದಿಲ್ಲಿ ಮಟ್ಟದಲ್ಲಿ ಈಗಾಗಲೇ ಆರಂಭಿಸಿರುವ ಸುದ್ದಿಗಳಿವೆ.

ಆ ಪ್ರಕಾರ ಶಿರಸಿ ಒಂದು ಬಿಟ್ಟು ಉಳಿದೆಡೆ ಕಾಂಗ್ರೆಸ್ ಗೆಲ್ಲಬೇಕೆಂಬುದು ದೇಶಪಾಂಡೆಯ ಇಚ್ಛೆ. ಶಿರಸಿಯಲ್ಲಿ ತನ್ನ ಬಿಜೆಪಿ ಮಿತ್ರ ಕಾಗೇರಿ ಮಾಣಿಯೇ ಗೆಲ್ಲಬೇಕೆಂಬುದು ದೇಶಪಾಂಡೆಯ ತಂತ್ರ. ಹಿಂದೆ ದೇಶಪಾಂಡೆ ಮಂತ್ರಿಯಾಗಿದ್ದಾಗ ಕಾಗೇರಿ ಆತನಿಗೆ ದೋಸ್ತನಾಗಿದ್ದ. ಈಗಲೂ ಈ ಅನೈತಿಕ ಮೈತ್ರಿ ಹಾಗೇ ಮುಂದುವರೆದಿದೆ. ಹಾಗಾಗಿ ಶಿರಸಿಯಲ್ಲಿ 'ಬಂ'ರ ಭಾಮೈದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಭೀಮಣ್ಣ ನಾಯ್ಕ ಎಂಬ ದುರ್ಬಲನಿಗೆ ಕಾಂಗ್ರೆಸ್ ಟಿಕೆಟ್ ಕೊಡಿಸುವ ಸ್ಕೆಚ್ ದೇಶಪಾಂಡೆ ಹಾಕಿದ್ದಾರೆ. ಆದರೆ ಟಿಎಸ್ಎಸ್ ಎಂಬ ಘಟ್ಟದ ಮೇಲಿನ ತೋಟಿಗ ಹೈಗರ ಜೀವನಾಡಿಯನ್ನು ದಿವಾಳಿ ಎಬ್ಬಿಸಿರುವ ಶಾಂತಾರಾಮ ಹೆಗಡೆ ಎಂಬ ಬಂಡಲ್ ಭೂಪ ದೇಶಪಾಂಡೆಗೆ ಗಂಟುಬಿದ್ದಿದ್ದಾನೆ. ದೇಶಪಾಂಡೆಯ ಹವ್ಯಕ ಬ್ರಾಹ್ಮಣ ಬೆಂಬಲಿಗನಾದ ಈ ಶಾಂತಣ್ಣನನ್ನು ಸಮಾಧಾನ ಮಾಡಲು ಆತ ತರತರದ ಆಮಿಷ ತೋರಿಸುತ್ತಿದ್ದಾನೆಂಬುದು ಕಾಂಗ್ರೆಸ್ ಕ್ಯಾಂಪಿನ ಗುಸು-ಗುಸು.

ಪಕ್ಕದ ಯಲ್ಲಾಪುರ-ಮುಂಡಗೋಡಲ್ಲಿ ತನ್ನ ಆಜ್ಞಾನುಧಾರಿ ಎಲ್.ಟಿ. ಪಾಟೀಲ್ ಎಂಬಾತನಿಗೆ ಟಿಕೆಟ್ ಕೊಟ್ಟು ಕಳೆದ ಬಾರಿ ಸಣ್ಣ ಅಂತರದಲ್ಲಿ ಸೋತ ಕಳ್ಳ ಕಬ್ಬಿಣದ ಅದಿರು ಉದ್ಯಮಿ ಶಿವರಾಮ ಹೆಬ್ಬಾರ್‌ಗೆ ಬುದ್ಧಿ ಕಲಿಸಲು ದೇಶಪಾಂಡೆ ಪ್ಲಾನ್ ಹಾಕಿದ್ದಾರೆ. ಈ ಶಿವರಾಮ ಹೆಬ್ಬಾರ್ ಮ್ಯಾಗ್ಗಿ ಬಂಟನೆಂಬುದೇ ದೇಶಪಾಂಡೆ ಕಣ್ಣುರಿಗೆ ಕಾರಣ. ಕಾರವಾರದ ಸೈಲ್ ಮೇಲೆ ದೇಶಪಾಂಡೆಗೆ ಪ್ರೀತಿ; ಆದರೆ ಬಿಜೆಪಿಯ ಮಂತ್ರಿ ಆನಂದ್ ಅಸ್ನೋಟಿಕರ್ ಅಂದರೆ ಆಸೆ. ಸಿಬಿಐ ರಿಪೋರ್ಟ್ ಪ್ರಕಾರ ತನಿಖೆ ನಡೆದರೆ ಸೈಲ್ ಜೈಲಿಗೆ ಬೀಳುತ್ತಾನೆಂಬುದು ದೇಶಪಾಂಡೆ ಲೆಕ್ಕಾಚಾರ. ಆಗ ಆತನ ಎದುರಾಳಿ ಆನಂದ್ ಅಸ್ನೋಟಿಕರ್‌ಗೆ ಅನಿವಾರ್ಯವಾಗಿ ಟಿಕೆಟ್ ಕೊಡಬೇಕಾಗುತ್ತದೆ. ಈ ಅಸ್ನೋಟಿಕರ್ ಈಗ ಮ್ಯಾಗ್ಗಿ ಮತ್ತು ದಿಲ್ಲಿ ಕಾಂಗ್ರೆಸ್‌ನ ಪವರ್ ಬ್ರೋಕರ್‌ಗಳೊಂದಿಗೆ ನಿಕಟ ನಂಟು ಹೊಂದಿರುವುದು ಬಹಿರಂಗ ರಹಸ್ಯ. ಆತನೂ ಕಾಂಗ್ರೆಸ್‌ಗೆ ಬರಲು ಹವಣಿಸುತ್ತಿದ್ದಾನೆ. ಆನಂದ್ ಕಾರವಾರದಲ್ಲಿ ಕಾಂಗ್ರೆಸ್ ಕ್ಯಾಂಡಿಡೇಟಾದರೆ ಆತನ ಫ್ಯಾಮಿಲಿ ಪ್ರಭಾವ ಇರುವ ಜೋಯಿಡಾದಲ್ಲಿ ತನಗೆ ಅನುಕೂಲವಾಗುತ್ತದೆಂಬುದು ದೇಶಪಾಂಡೆಗೆ ಪಕ್ಕಾ ಆಗಿದೆ. ತಾ[...] ಗೆಲ್ಲಲು ದೇಶಪಾಂಡೆ ಏನು ಮಾಡಲಿಕ್ಕೂ ಹೇಸುವುದಿಲ್ಲ.

ಕುಮಟಾದಲ್ಲಿ ಜೆಡಿಎಸ್ ಶಾಸಕನಾಗಿರುವ ದಿನಕರ್‌ಶೆಟ್ಟಿ ಎಂಬ ತ[...] ಪುರಾನಾ ಗುಲಾಮನಿಗೇ ಟಿಕೆಟ್ ಕೊಡುವ ನಿರ್ಧಾರಕ್ಕೆ ದೇಶಪಾಂ[...] ಬಂದಿದ್ದಾರಂತೆ. ಆದರೆ ಯಲ್ಲಾಪುರದಲ್ಲಿ ಬ್ರಾಹ್ಮಣ ಶಿವರಾಮ ಹೆಬ್ಬಾರ್[...] ಟಿಕೆಟ್ ತಪ್ಪಿಸಿದರೆ ಕುಮಟಾದಲ್ಲಿ ಆ ಜಾತಿಗೆ ಅವಕಾಶ ಕೊಡಲೇಬೇಕಾಗುತ್ತ[...] ಆಗ ದೇಶಪಾಂಡೆ ಡಾ. ಜಿ.ಜಿ. ಹೆಗಡೆ ಎಂಬ 'ಸಿಜರಿನ್' ಖ್ಯಾತಿಯ ವೈ[...] ಮತ್ತು ಮರಳು ಕಳ್ಳ ಶಿವಾನಂದ ಹೆಗಡೆಗೆ ಟಿಕೆ[...] ಕೊಡಲು ಯೋಚಿಸಲಿದ್ದಾರೆ. ಈ ಶಿವಾನಂದ ಹೆ[...] ಎಂಬ ಶೋಕಿಲಾಲನಿಗೆ ಟಿಕೆಟ್ ಕೊಟ್ಟರೆ ಕಾಂಗ್ರೆ[...] ಗೋತಾ ಹೊಡೆಯುವುದು ಗ್ಯಾರಂಟಿ. ಈತ[...] ಸೈಲ್-ಚರಿತ್ರೆ ಬಲ್ಲವರ್ಯಾರೂ ಈತನಿಗೆ ಓ[...] ಕೊಡಲಾರರು. ಭಟ್ಕಳದಲ್ಲಿ ದೇಶಪಾಂಡೆಯ ಡಾ[...] ಹಾರ್ಸ್ [illegible] ನಾಯ್ಕ. ಶಾಸಕ ಜೆ.ಡಿ. ನಾ[...] ಮ್ಯಾಗ್ಗಿ ವಿರೋಧಿ ಎಂಬುದೊಂದೇ ದೇಶಪಾಂಡೆ[...] ಪ್ರಿಯವಾಗಿರುವ ಆತನ ಗುಣಧರ್ಮ. ಜನರ[...] ಕಂಡಾಗ ಹುಚ್ಚುಚ್ಚನಂತೆ ಎಗರಾಡುವ ಜೆಡಿ ದೇ[...]ಪಾಂಡೆ ಕಂಡಾಗ ಬಾಲ ಮುದುಡಿಕೊಂಡು ಕೂರುತ್ತಾನೆ. ಈತ ಈ ಬ[...] ಗೆಲ್ಲೋದು ಕಷ್ಟ ಎಂದು ದೇಶಪಾಂಡೆಗೆ ಕ್ಷೇತ್ರದಲ್ಲಿರುವ ಆತನ ಆಪ್ತ ತಾ[...] ಉದ್ಯಮಿ ವರದಿ ಒಪ್ಪಿಸಿರುವ ಬಗ್ಗೆ ಮಾತು ಹರಿದಾಡುತ್ತಿದೆ. ಹೀಗಾಗಿ ದೇಶಪಾಂ[...] ಕಣ್ಣು ಮಾಜಿ ಜಿಪಂ ಅಧ್ಯಕ್ಷ ದಾಮೋದರ್ ಗರ್ಡೀಕರ್ ಮೇಲೂ ಇ[...] ಮ್ಯಾಗ್ಗಿ ದಿಲ್ಲಿಯಲ್ಲಿ ದುರ್ಬಲರಾದರೆ ದೇಶಪಾಂಡೆ ಪಟಾಲಂಗೆ ಟಿಕೆಟ್ ಗ್ಯಾರಂ[...] ಇಲ್ಲದಿದ್ದರೆ ಯಲ್ಲಾಪುರದ ಹೆಬ್ಬಾರ್, ಶಿರಸಿಯ ರವೀಂದ್ರನಾಥ್ ನಾಯ್[...] ಕಾರವಾರದ ಅಸ್ನೋಟಿಕರ್ ಮ್ಯಾಗ್ಗಿ ಕೃಪೆಯಿಂದ ಟಿಕೆಟ್ ಗಿಟ್ಟಿಸುವ ಸಾಧ್ಯತೆಯ[...]



ಅಸ್ನೋಟಿಕರ್, ದಿನೇಶ್ ಶೆಟ್ಟಿ, ಜೆ.ಡಿ. ನಾಯ್ಕ್, ಸತೀಶ್ ಸೈಲ್

ದಲ್ಲಿ ಕ್ಷೇತ್ರ ಮಾತ್ರ ದಿಕ್ಕೆಟ್ಟುಹೋಗಿದೆ. ಅಸ್ತಿತ್ವ ಳ್ಳಬೇಕೆಂದರೆ ಈ ಬಾರಿ ಮತ್ತೆ ಶಾಸಕನಾಗಲೇ ಅನಿವಾರ್ಯತೆ ದೇಶಪಾಂಡೆಗೆ. ಹಾಗಾಗಿ ಹ-ಧಿಮಾಕು-ದೌಲತ್ತೆಲ್ಲ ಬಿಟ್ಟು ಆತ ಗಲ್ಲಿ-ಗಲ್ಲಿ ತ್ತಾರೆ. ಆತನ ಮಗ ಪ್ರಶಾಂತ ದೇಶಪಾಂಡೆ (ಕೇಂದ್ರ ಎನ್‌ಸಿಪಿಯ ಪ್ರಫುಲ್ ಪಟೇಲರ ಅಳಿಮಯ್ಯ) ಮತ್ತೆ ಎಮ್ಮೆಲ್ಲೆ ಮಾಡಲು ಕ್ಷೇತ್ರದಲ್ಲಿ ಅಧ್ವ ವರಾವ್ ದೇಶಪಾಂಡೆ ಹೆಸರಿನ ಟ್ರಸ್ಟ್ ಹೆಸರಿನಲ್ಲಿ ರಗೆ ಇಳಿದಿದ್ದಾನೆ. ದೇಶಪಾಂಡೆಯಂತೂ ಆರೋಗ್ಯ ಕ್ಯಾಂಪುಗಳು, ಶಾಲಾಮಕ್ಕಳಿಗೆ ಪಾಠಿ-ಪಟ್ಟಿ ಕೆಯಂಥ ಅಗ್ಗ ರಾಜಕಾರಣವನ್ನು ಹಳಿಯಾಳ-ಡಿಯಾದಲ್ಲಿ ನಡೆಸಿದ್ದಾರೆ.

ತ-ಕಂಡವರ ಮನೆ ಮದುವೆ-ಮುಂಜಿ ಸೋಬನ- ತಿಥಿಗೆಲ್ಲ ಕರೆಯಲಿ-ಕರೆಯದಿರಲಿ ಕಡ್ಡಾಯವಾಗಿ ಾಗಿ ಸಾಂತ್ವನ-ಸಹಕಾರ ಮಾಡುತ್ತಿದ್ದಾರೆ. ಡಾದ ದುರ್ಗಮ ಏರಿಯಾದಲ್ಲಿ ಬೆವರಿಳಿಸುತ್ತಿದ್ದಾರೆ. ಳದ ಸಂತೆಯಲ್ಲಿ ತರಕಾರಿ ಖರೀದಿಸುವ ನಾಟಕ ತ್ತಾರೆ. ತಳ್ಳುಗಾಡಿಯಲ್ಲಿನ ಮಿರ್ಚಿ ಭಜ್ಜಿ ಕೊಂಡು ಪಾಪದ ಜನರೆದುರೇ ತಿಂದು ತಾನು ನಪರ-ಮುಗ್ಧನೆಂದು ಪೋಸು ಕೊಡುತ್ತಿದ್ದಾರೆ. ತ್ವದ ಅಧಿಕಾರವಿದ್ದರೂ ಅಭಿವೃದ್ಧಿ ಕೆಲಸ ದ-ಮಾಡಲಾಗದ ಪೊಕ್ಕು ಎಮ್ಮೆಲ್ಲೆ ಸುನಿಲ್ ಎಂದು ತ್ತ ತಾನು ಕೇಂದ್ರ ಮಂತ್ರಿ-ರಾಜ್ಯದ ಮಂತ್ರಿಗಳ ುವ ದೋಸ್ತಿಯಿಂದ ಕ್ಷೇತ್ರದ ಉದ್ಧಾರಕ್ಕೆ ಹಲವು ನೆ ತಂದಿದ್ದೇನೆ; ತರುತ್ತಿದ್ದೇನೆ ಎಂದು ಬೊಬ್ಬೆ ಮುತ್ತಿದ್ದಾರೆ. ಇದನ್ನು ಕೇಳಿದ್ದೇ ತಡ, ಶಾಸಕ ಸುನಿಲ್ "ದೇಶಪಾಂಡೆ ಹಸೀ ಸುಳ್ಳು ಹೇಳುತ್ತಿದ್ದಾರೆ... ಮಂತ್ರಿಯಾದಾಗ ಏನೂ ಮಾಡದ ಐಪಾರಾಮಿ ದೇಶಪಾಂಡೆಯಿಂದ ಈಗೇನೂ ಕಿಸಿಯಲಿಕ್ಕಾಗ್ವದೆ... ನಾನು ತಂದ ಕೆಲಸ-ಕಾಮಗಾರಿ ತನ್ನದೆಂದು ದೇಶಪಾಂಡೆ ಸುಳ್ಳು ಹೇಳುತ್ತಿದ್ದಾರೆ..." ಎಂದೆಲ್ಲ ಹಾರಾಡುತ್ತಿದ್ದಾರೆ. ದೇಶಪಾಂಡೆ ಬಳಗದ ಘೋಟನೇಕರ್ ವಗೈರೆಗಳ ಜನ್ಮ ಜಾಲಾಡುತ್ತಿದ್ದಾರೆ.

ಒಟ್ಟಿನಲ್ಲಿ ಹಳಿಯಾಳದ ರಾಜಕಾರಣಕ್ಕೆ ಈಗಾಗಲೇ ಚುನಾವಣೆಯ ಖದರು ಬಂದುಬಿಟ್ಟಿದೆ. ಒಂದಂತೂ ಖರೆ. ದೇಶಪಾಂಡೆ ಪರಿಸ್ಥಿತಿ ಸುಧಾರಿಸಿದೆ; ಆತನ ಎದುರಾಳಿ ಸುನಿಲ್ ಹೆಗಡೆ ಆಗಿರುವ ಹಾನಿ ಸರಿತೂಗಿಸಿಕೊಳ್ಳಲು ಹೆಣಗುತ್ತಿದ್ದಾರೆ. ಈ ದುಡ್ಡಿನ ಕೊಂಕಣಿ ಕುಳಗಳ ದೋಸ್ತಿ-ದುಷ್ಮನಿ ಪಾಲಿಟಿಕ್ಸ್‌ನಲ್ಲಿ ಲಾಗಾಯ್ತಿನಿಂದಲೂ ಹಳಿಯಾಳ-ಜೋಯಿಡಾದಲ್ಲಿ ಬಿಜೆಪಿಗೆ ನೆಲೆ-ಬೆಲೆಯಿಲ್ಲ, ದೇಶಪಾಂಡೆಗಿದು ಮಾಡು-ಇಲ್ಲವೇ ಮಡಿ ಹೋರಾಟ. ಆತ ಕಾಂಗ್ರೆಸ್‌ನಲ್ಲಿ ಬದುಕಬೇಕೆಂದರೆ, ಕಡುವೈರಿ ಮ್ಯಾಗಿ ಬಣ ಪಳಗಿಸಿ ಜಿಲ್ಲಾ ಕಾಂಗ್ರೆಸ್ ಮೇಲೆ ಹಿಡಿತ ಸಾಧಿಸಬೇಕೆಂದರೆ ಮತ್ತು ದಿಲ್ಲಿ ಧಣಿಗಳ ಆಶ್ರಯವನ್ನು ಹಾಗೆ ಕಾಪಾಡಿಕೊಳ್ಳಬೇಕೆಂದರೆ ಈ ಸಲ ದೇಶಪಾಂಡೆ ಗೆಲ್ಲಲೇಬೇಕು. ಸಣ್ಣ ವಯಸ್ಸಿನ ಸುನಿಲ್‌ಗೆ ಸೋತರೆ ಆಗುವ ಹಾನಿಗಿಂತ ರಾಜಕೀಯ ಜೀವನದ ಸಂಧ್ಯಾ ಕಾಲದಲ್ಲಿರುವ ದೇಶಪಾಂಡೆಗೆ ಗೆಲ್ಲಲಾಗದಿದ್ದರೆ ಆಗುವ ಲುಕ್ಸಾನು ಅಪಾರ! ದೇಶಪಾಂಡೆಯ ಸೋಲು ಆತನ ಮಗ ಪ್ರಶಾಂತನ ರಾಜಕೀಯ ಭವಿಷ್ಯಕ್ಕೆ ಮಾರಕ ಆಗಬಲ್ಲದು. ಮಗನನ್ನು ಉತ್ತರ ಕನ್ನಡದ ಎಂಪಿ ಮಾಡುವ ಇರಾದೆಯಲ್ಲಿರುವ ದೇಶಪಾಂಡೆಗೆ ಹಳಿಯಾಳದಲ್ಲಾಗುವ ಸೋಲು-ಗೆಲುವು ಆತ ಕಾಲುಶತಮಾನದಲ್ಲಿ ಕಟ್ಟಿಕೊಂಡಿರುವ ರಾಜಕೀಯ ಸಾಮ್ರಾಜ್ಯದ ಅಳಿವು-ಉಳಿವನ್ನು ನಿರ್ಧರಿಸುವುದಂತೂ ಗ್ಯಾರಂಟಿ!


-ನಹುಷ

ಪ್ರಜಾಪ್ರಭುತ್ವವೂ ಶವವಾಗಿ ಗೋರಿಯಲ್ಲಿ ಮಲಗಿದೆ

ಒಂದು ಪತ್ರ

ತ್ರಿಕೆಯ ಜೂನ್ 27 ರ ಸಂಚಿಕೆಯಲ್ಲಿ 'ಅವತಾರ್ ಂದಿಗೆ ಸತ್ತ ಸತ್ಯಗಳು...' ಶೀರ್ಷಿಕೆಯೊಂದಿಗೆ ಾದ ನಿಮ್ಮ ಸಂಪಾದಕೀಯ ಲೇಖನ ಭಾರತದ ಭುತ್ವದ ನಿಜ ಸ್ವರೂಪವನ್ನು ಬಯಲು ಮಾಡಿದೆ. ಅವತಾರ್ ಸಿಂಗ್ ಕಾಶ್ಮೀರದಲ್ಲಿ ಕರ್ತವ್ಯನಿರತ ಗ ಆ "ಕರ್ತವ್ಯ"ದ ಭಾಗವಾಗಿಯೇ ನಡೆಸಿದ ಗಳನ್ನು ಇಷ್ಟು ವಿವರವಾಗಿ ನಿರೂಪಿಸಿರುವ ಕನ್ನಡದ ಪತ್ರಿಕೆ ನಿಮ್ಮದು.

ವತಾರ್ ಸಿಂಗ್ ನಡೆಸಿದ, ಮಾನವಹಕ್ಕು ಟಗಾರ ಜಲೀಲ್ ಅಂದ್ರಾಬಿಯ ಕೊಲೆ, ದದಲ್ಲಿ ಭಾರತದ ಪ್ರಭುತ್ವ ನಡೆಸಿರುವ ುು ಸರಣಿಯಲ್ಲಿ ಕೇವಲ ಒಂದು ಘಟನೆ ಆ ರಾಜ್ಯದಲ್ಲಿ ಸೈನಿಕರ ಗುಂಡೇಟಿನಿಂದ ಡಾದ ಗುರುತು ಚಹರೆಗಳಿಲ್ಲದ, ಉಗ್ರಗಾಮಿಗಳದ್ದು ಹೇಳಲಾದ 2156 ಶವಗಳು ಕಳೆದ ವರ್ಷ ಗಿದ್ದವು. ಅವುಗಳಲ್ಲಿ ಕನಿಷ್ಠ 574 ಶವಗಳು ಸ್ಥಳೀಯ ುಕ ಕಾಶ್ಮೀರಿ ಪ್ರಜೆಗಳದ್ದು ಎಂದು ಕಾಶ್ಮೀರದ ವಹಕ್ಕು ಆಯೋಗ ಅಂದಾಜು ಮಾಡಿದೆ. ಭಾರತ ಂಡದ ಪ್ರಜೆಗಳಲ್ಲಿ "ನಿರಾಶ್ರಿತರು", ಕ ನಿರ್ವಸಿತರು", "ಸರಿಯಾದ ಗಳನ್ನು ಹೊಂದಿಲ್ಲದವರು", ಕರು" ಮುಂತಾದ ಪ್ರಭೇದಗಳ ಬದುಕಿದ್ದಾರೋ ಸತ್ತಿದ್ದಾರೋ ಖಾತ್ರಿಯಾಗಿ ಗೊತ್ತಿಲ್ಲದ ತ್ತೆಯಾದವರು" ಎಂಬ ಒಂದು ಪ್ರಭೇದವನ್ನೂ ಪ್ರಭುತ್ವ ಈಗ ಪಿ. ಕಾಶ್ಮೀರ ಮತ್ತು ಈಶಾನ್ಯದ ಜ್ಯಗಳಲ್ಲಿ ಈಗ ಇಂತಹ ಸಾವಿರಾರು ತ್ತೆಯಾದ ಪ್ರಜೆಗಳು" ಇದ್ದಾರೆ (?). ಯಾದ ಪ್ರಜೆಗಳು ಮತ್ತು ಗುರುತು ಗಳಿಲ್ಲದ ಶವದ ಗೋರಿಗಳು-ಕಾಶ್ಮೀರ ಮತ್ತು ಇತರ ಈ ಚಿತ್ರದಲ್ಲಿ ಪ್ರಜಾಪ್ರಭುತ್ವ ಕೂಡ ನಾಪತ್ತೆಯಾಗಿದೆ ಶವವಾಗಿ ಗೋರಿಯಲ್ಲಿ ಮಲಗಿದೆ!



ವತಾರ್ ಸಿಂಗ್‌ನಿಂದ ಕೊಲೆಯಾದ ಜಲೀಲ್ ಮಾನವಹಕ್ಕು ಹೋರಾಟದಲ್ಲಿ ಹುತಾತ್ಮರಾಗಿದ್ದಾರೆ. ಗೆ ಮನಸ್ಸಿಗೆ ಧರ್ಷಿಸಲು ಪರವಾನಗಿ ಕೊಡುವ ರ ವಿಶೇಷ ಅಧಿಕಾರ ಕಾಯ್ದೆ"ಯ ವಿರುದ್ಧ ಕಳೆದ ವರ್ಷಗಳಿಂದ ಉಪವಾಸ ಸತ್ಯಾಗ್ರಹ ನಡೆಸುತ್ತಿರುವ ರದ ಮಾನವಹಕ್ಕು ಹೋರಾಟಗಾರ್ತಿ ಇರೋಮ್ ಅವರದ್ದು ಸಹ ಬಲಿದಾನವೇ. ಈ ಮಹಿಳೆ ಸ್ವಾತಂತ್ರ್ಯಕ್ಕಾಗಿ ಬಲಿದಾನ ನೀಡಿದ್ದಾಳೆ. , ಮಣಿಪುರ ಮುಂತಾದ "ಅಂಚಿನ ಪ್ರದೇಶ"ಗಳಲ್ಲಿ ನಡೆಸುವ ಪ್ರಭುತ್ವ ದೇಶದ "ಹೃದಯಭಾಗದಲ್ಲಿ" ಪ್ರಜೆಗಳ ಮಟ್ಟಿಗೆ ಮಾತ್ರ ಪ್ರಜಾಸತ್ತಾತ್ಮಕವಾಗಿ ಕೊಳ್ಳುತ್ತದೆ ಎಂದು ನಾವು ಭ್ರಮಿಸಕೂಡದು. ಸಂಪನ್ಮೂಲತದ ಅದಿರು ಸಮೃದ್ಧ ಜಾರ್ಖಂಡ್, ಗಢ, ಒರಿಸ್ಸಾ ಮುಂತಾದ ರಾಜ್ಯಗಳ ವಿಸ್ತಾರ ಭೂ...

ಬಲಾತ್ಕಾರದಿಂದ ಒಕ್ಕಲೆಬ್ಬಿಸುತ್ತಿದೆ. ಸ್ವಾತಂತ್ರ್ಯಾನಂತರ ಗಣಿಗಾರಿಕೆ, ಅಣೆಕಟ್ಟು, ಹೆದ್ದಾರಿ ನಿರ್ಮಾಣ, ಕೈಗಾರಿಕೆಗಳ ಸ್ಥಾಪನೆ ಮುಂತಾದ ಅಭಿವೃದ್ಧಿ ಯೋಜನೆಗಳಿಂದಾಗಿ ಒಂದು ಕನಿಷ್ಠ ಅಂದಾಜಿನ ಪ್ರಕಾರ 6 ಕೋಟಿ ಜನ ನಿರ್ಗತಿಕರಾಗಿದ್ದಾರೆ. ಜೊತೆಗೆ ಈ ಕಾಲಾವಧಿಯಲ್ಲಿ ಶ್ರೀಮಂತರು ಇನ್ನಷ್ಟು ಶ್ರೀಮಂತರಾದರೆ ಬಡವರು ಇನ್ನಷ್ಟು ಬಡವರಾದರು. ಆದರೆ ಈಗಲೂ ದೇಶದ ಪ್ರಭುತ್ವ, ಮಾಧ್ಯಮ, ಅಧಿಕಾರ ವ್ಯವಸ್ಥೆ, ರಾಜಕೀಯ ಪಕ್ಷಗಳು- ಎಲ್ಲವೂ ಈ ಮಾದರಿಯ ಅಭಿವೃದ್ಧಿಯನ್ನೇ ಪ್ರತಿಪಾದಿಸುತ್ತಿವೆ.

ಮಾನವಹಕ್ಕು ಹೋರಾಟಗಾರರು ಮಾತ್ರವಲ್ಲ ಈ ಬಗೆಯ ಅಭಿವೃದ್ಧಿಯನ್ನು ವಿರೋಧಿಸುವವರನ್ನೂ ಈಗ ದೇಶದ್ರೋಹಿಗಳು ಎಂಬಂತೆಯೇ ಚಿತ್ರಿಸಲಾಗುತ್ತಿದೆ. ಬಡವರ ಹೋರಾಟಗಳನ್ನು ಬಗ್ಗುಬಡಿಯುವುದು, ಸಾರ್ವಜನಿಕ ಆಸ್ತಿಪಾಸ್ತಿಯ ಜೊತೆ ಬಡವರ ಮನೆ ಅಡಿ ಜಾಗಗಳನ್ನು ಸಹ ಬಂಡವಾಳಶಾಹಿಗಳಿಗೆ ತೆರವು ಮಾಡಿಕೊಡುವುದು, ಮೊದಲೇ ಬಡವರಾಗಿರುವವರನ್ನು ನಿರ್ಗತಿಕರನ್ನಾಗಿಸುವುದು-ಒಟ್ಟಿನಲ್ಲಿ ಬಡವರ ಕಟ್ಟಕಡೆಯ ತುತ್ತು ಅನ್ನವನ್ನೂ ಕಸಿದು, ಶ್ರೀಮಂತರಿಗೆ ಭೋಜನಕೂಟ ಏರ್ಪಡಿಸುವುದು- ಪ್ರಭುತ್ವದ ಈ ವಿಕಟಮೇ ಜವಾನಿ ದೃಶ್ಯ ಈಗ ಎಲ್ಲೆಲ್ಲೋ ಕಾಣುತ್ತಿದೆ. ನಮ್ಮ "ಪ್ರಧಾನ ಧಾರೆಯ ಪತ್ರಿಕೆ"ಗಳು ಇವನ್ನೆಲ್ಲ ವಸ್ತುನಿಷ್ಠವಾಗಿ ವರದಿ ಮಾಡಬೇಕು ಎಂದು ನಿರೀಕ್ಷಿಸುವುದೇ ತಪ್ಪು, ಯಾಕೆಂದರೆ ಅವು ಕೂಡ ಈ ಭೋಜನಕೂಟದಲ್ಲಿ ಪಾಲುಗೊಂಡಿವೆ. ಹಾಗಾಗಿ ಪ್ರಭುತ್ವದ ಕ್ರೌರ್ಯ ಮತ್ತು ಹಗಲು ದರೋಡೆಗಳನ್ನು ನಿರ್ಭಯವಾಗಿ ವರದಿ ಮಾಡುತ್ತಿರುವ ನಿಮಗೆ ಅಭಿನಂದನೆಗಳು.

ಈ ಸಂದರ್ಭದಲ್ಲಿ ಜಾವೆದ್ ಇಕ್ಬಾಲ್ ಎಂಬ ಇಂಗ್ಲಿಷ್‌ನಲ್ಲಿ ಬರೆಯುವ ಪತ್ರಕರ್ತರೋರ್ವರನ್ನು ಪತ್ರಿಕೆಯ ಓದುಗರ ಗಮನಕ್ಕೆ ತರಲು ಬಯಸುತ್ತೇನೆ. ಜಾವೆದ್ ಛತ್ತೀಸ್‌ಗಢದಲ್ಲಿ ಪ್ರಭುತ್ವ ಮತ್ತು ಅವರನ್ನು ಎದುರು ಹಾಕಿಕೊಂಡಿರುವ ನಕ್ಸಲರ-ಎರಡೂ ಕಡೆಯವರ ಅಕೃತ್ಯಗಳನ್ನೂ ನಿರ್ಭಯವಾಗಿ ವರದಿ ಮಾಡುತ್ತಾರೆ. ಮುಂಬೈ ನಗರವನ್ನು ಶಾಂಘಾಯಿ ಮಾಡುವ ಭರದಲ್ಲಿ ಸರ್ಕಾರ ನಗರದ ಕೊಳಗೇರಿ ನಿವಾಸಿಗಳನ್ನು ಒಕ್ಕಲೆಬ್ಬಿಸುತ್ತಿರುವುದರ ಬಗ್ಗೆ ಜಾವೆದ್ ಒಂದು ಲೇಖನ ಮಾಲೆಯನ್ನೇ ಬರೆದಿದ್ದಾರೆ. ಛತ್ತೀಸ್‌ಗಢದ ಹಿರಿಯ ಪೊಲೀಸ್ ಅಧಿಕಾರಿಯೊಬ್ಬ ಅವರ ಕೈಕಾಲು ಬೆರಳುಗಳ ಉಗುರು ಕೀಳಿಸಿ ಅವರ ಬಾಯಿ ಮುಚ್ಚಿಸುವುದಾಗಿ ಬೆದರಿಕೆ ಹಾಕಿದ್ದರು. ಜಾವೆದ್ ಎಂತಹ ಪತ್ರಕರ್ತನೆಂದರೆ ಆ ಬೆದರಿಕೆಯನ್ನೂ ಮಾರನೆಯ ದಿನದ ಪತ್ರಿಕೆಯಲ್ಲಿ ವರದಿ ಮಾಡಿದ್ದರು!

ಅವರ ಬರಹಗಳು moonchasing.wordpress.com ನಲ್ಲಿ ಓದಸಿಗುತ್ತವೆ.

-ಜಿ. ರಾಜಶೇಖರ

ಹುಬ್ಬಳ್ಳಿ ಈದ್ಗಾ ಮೈದಾನ ವಿವಾದ ಇತ್ಯರ್ಥಗೊಂಡ ನಂತರ ಅವಳಿನಗರಗಳ ಜನತೆ ಇನ್ನು ಮುಂದೆ ತಾವು ನೆಮ್ಮದಿಯಿಂದಿರಬಹುದು ಎಂದು ಲೆಕ್ಕಹಾಕಿದ್ದರು. ಆದರೆ ಎಲ್ಲಿಯತನಕ ಅವಳಿ ನಗರಗಳಲ್ಲಿ ಮತೀಯ ಭಾವನೆಗಳನ್ನು ಕೆರಳಿಸಿ ರಾಜಕೀಯ ಲಾಭ ಪಡೆಯುವ ಸಂಘಪರಿವಾರದ ಚೆಡ್ಡಿಗಳು ಇರುತ್ತಾರೋ ಅಲ್ಲಿಯತನಕ ಈ ನತದೃಷ್ಟ ನಗರಗಳಿಗೆ ನೆಮ್ಮದಿ ಎಂಬುದು ಮರೀಚಿಕೆಯೇ ಆಗಿರುತ್ತದೆ. ಅದಕ್ಕೆ ಲೇಟೆಸ್ಟ್ ಉದಾಹರಣೆ ಮುಸಲ್ಮಾನರ ವಿರುದ್ಧ ದಲಿತರನ್ನು ಎತ್ತಿ ಕಟ್ಟಿ ಗಲಭೆ ಮಾಡಲು ಬಿಜೆಪಿಗಳು ಯತ್ನಿಸಿರುವುದು.

ಅಕ್ರಮ ಮಂದಿರಗಳು

ಹುಬ್ಬಳ್ಳಿ ಹಾಗೂ ಧಾರವಾಡದ ಬಹುತೇಕ ಹೊಸ ಹಾಗು ಹಳೆ ಬಡಾವಣೆಗಳಲ್ಲಿ ಆಟದ ಮೈದಾನಕ್ಕೂ, ಉದ್ಯಾನವನಕ್ಕೂ ಮೀಸಲಿರಿಸಿದ್ದ ಜಾಗಗಳಲ್ಲಿ ಅನಧಿಕೃತವಾಗಿ ದೇವಸ್ಥಾನಗಳು ತಲೆ ಎತ್ತಿವೆ. ಹಾಗೆಯೇ ರಸ್ತೆ ಫುಟ್‌ಪಾತ್



ಧಾರವಾಡ ದಲಿತರ ಗೋರಿಗಳ ಮೇಲೆ ಚೆಡ್ಡಿಗಳ ಚೆಲ್ಲಾಟ

ಮತ್ತು ಸರಕಾರಿ ಜಾಗಗಳಲ್ಲೂ ಮಂದಿರಗಳನ್ನು ಅಕ್ರಮವಾಗಿ ನಿರ್ಮಿಸಲಾಗಿದೆ.

ಇಂತಹ ಅಕ್ರಮ ದೇವಸ್ಥಾನ, ಮಂದಿರ ಇತ್ಯಾದಿಗಳನ್ನು ತೆರವುಗೊಳಿಸಬೇಕೆಂದು ಸುಪ್ರೀಂಕೋರ್ಟ್ ಬಹಳ ವರ್ಷಗಳ ಹಿಂದೆಯೇ ಆದೇಶ ನೀಡಿದೆ. ಆ ಆದೇಶವನ್ನು ಪಾಲಿಸಲು ಮುಂದಾದ ಜಿಲ್ಲಾಧಿಕಾರಿಗಳಿಗೇ ಹುಬ್ಬಳ್ಳಿ ಮತ್ತು ಧಾರವಾಡದ ಚೆಡ್ಡಿಗಳು ಧಮಕಿ ಹಾಕಿದ್ದೂ ಇದೆ. ಇತ್ತೀಚೆಗೆ ಹುಬ್ಬಳ್ಳಿಯ ಗೋಕುಲ ರೋಡ್ ಬಡಾವಣೆಯಲ್ಲಿದ್ದ ಇಂತಹ ಒಂದು ಅನಧಿಕೃತ ದೇವಸ್ಥಾನವನ್ನು ಜಿಲ್ಲಾಧಿಕಾರಿಗಳು ತೆರವುಗೊಳಿಸಿದ್ದರು. ಆದರೆ ಮರುದಿನವೇ ಅದೇ ಸ್ಥಳದಲ್ಲಿ ಮತ್ತೆ ಅಕ್ರಮವಾಗಿ ದೇವಸ್ಥಾನವನ್ನು ನಿರ್ಮಿಸಿದ ಚೆಡ್ಡಿಗಳು ತಮಗೆ ಈ ನಾಡಿನ ಕಾನೂನಿನ ಬಗ್ಗೆ ಕವಡೆಕಾಸಿನ ಕಿಮ್ಮತ್ತಿಲ್ಲ ಎಂಬುದನ್ನು ಸ್ಪಷ್ಟಪಡಿಸಿದ್ದರು.



ತಮಾಟಗಾರ

ಈಗ ರಾಜ್ಯದಲ್ಲಿ ತಮ್ಮ ಬಿಜೆಪಿ ಅಧಿಕಾರಕ್ಕೆ ಬಂದಿರುವುದರಿಂದ ಚೆಡ್ಡಿಗಳು ಲಂಗುಲಗಾಮಿಲ್ಲದೆ ದಬ್ಬಾಳಿಕೆ ನಡೆಸುತ್ತಿದ್ದಾರೆ. ದೇವಸ್ಥಾನದ ಹೆಸರಲ್ಲಿ ಸಾರ್ವಜನಿಕ ಜಾಗ ಕಬಳಿಕೆ, ಕೈಗಾರಿಕೆ ಹೆಸರಿನಲ್ಲಿ ರೈತರ ಭೂಮಿ ದೋಚುವಿಕೆ, ರಿಯಲ್ ಎಸ್ಟೇಟ್ ದಂಧೆ ನಡೆಸುತ್ತಿರುವ ಚೆಡ್ಡಿಗಳು ಯಾವ ಎಗ್ಗಿಲ್ಲದೇ ರಾಜ್ಯವನ್ನು ಮುಕ್ಕುತ್ತಿದ್ದಾರೆ. ಇದನ್ನು ಯಾರಾದರೂ ಪ್ರಶ್ನಿಸಿದರೆ ಅವರ ವಿರುದ್ಧ ಇತರರನ್ನು ಎತ್ತಿ ಕಟ್ಟುವ ಕಾಯಕ ಚೆಡ್ಡಿಗಳಿಗೆ ಕರಗತವಾಗಿದೆ. ಮೊನ್ನೆ ನಡೆದಿರುವುದೂ ಅದೇ.



ರಸೂಲ್ ನದಾಫ

ಏನಿದು ವಿವಾದ?

ಧಾರವಾಡದ ಹೊಸ ಯಲ್ಲಾಪೂರದಲ್ಲಿರುವ ಸರ್ವೆ ನಂ 76 ರಲ್ಲಿ 7 ಎಕರೆ 21 ಗುಂಟೆ ಭೂಮಿ ಇದೆ. 1988 ರಲ್ಲಿ ವಕ್ಫ್ ಬೋರ್ಡ್ ಈ ಜಾಗದಲ್ಲಿ ಸ್ಮಶಾನವನ್ನು ಸ್ಥಾಪಿಸಬೇಕೆಂದೂ, ಆ ಸ್ಮಶಾನದ ನಿರ್ವಹಣೆಯನ್ನು ಧಾರವಾಡದ ಅಂಜುಮಾನ್ ಸಂಸ್ಥೆ ನೋಡಿಕೊಳ್ಳಬೇಕೆಂದೂ ಇದನ್ನು ಅಂಜುಮಾನ್ ಸಂಸ್ಥೆಗೆ ಕೊಟ್ಟಿತ್ತು, ಇವಕ್ಕೆಲ್ಲ ದಾಖಲಾತಿಗಳಿವೆ. ಈ ಜಾಗ ಮುಸಲ್ಮಾನರ ಸಂಸ್ಥೆಗೆ ಸೇರಿದ್ದರೂ, ಇಲ್ಲಿ ಆ ಸಮುದಾಯದವರ ಶವಗಳನ್ನು ದಫನ್ ಮಾಡುತ್ತಿದ್ದರೂ, ದಲಿತರಿಗೂ ಮರಣ ಹೊಂದಿದ ತಮ್ಮ ಸಮುದಾಯದವರನ್ನು ಮಣ್ಣು ಮಾಡಲು ಒಂದಿಷ್ಟು ಜಾಗವನ್ನು ಬಿಟ್ಟುಕೊಡಲಾಗಿತ್ತು.

ಇತ್ತೀಚೆಗೆ ಈ ಸ್ಮಶಾನದ ಜಾಗ ಬಿಡಾಡಿ ದನಗಳ ಹಾಗೂ ಅನೈತಿಕ ಚಟುವಟಿಕೆಗಳ ತಾಣವಾಗಿ ಪರಿವರ್ತನೆಗೊಂಡಿತ್ತು, ಇದನ್ನು ತಡೆಯಲು ಧಾರವಾಡದ ಅಂಜುಮಾನ್ ಸಂಸ್ಥೆ ಒಂದು ಸಭೆ ಕರೆದು ಈ ಜಾಗವನ್ನು ರಕ್ಷಿಸಲು ಅದರ ಸುತ್ತ ಒಂದು ಗೋಡೆಯನ್ನು ನಿರ್ಮಿಸಬೇಕೆಂದು ನಿರ್ಧರಿಸಿತು. ಈ ಸಭೆಯಲ್ಲಿ ಸ್ಥಳೀಯ ದಲಿತರನ್ನು ವಿಶ್ವಾಸಕ್ಕೆ ತೆಗೆದುಕೊಂಡ ಅಂಜುಮಾನ್ ಸಂಸ್ಥೆ ಭೂಮಾಪನ ಇಲಾಖೆಯ ಮೂಲಕ ಭೂಮಿಯ ಸರ್ವೆ ನಡೆಸಿ, ದಲಿತರು ಬಳಕೆ ಮಾಡಿದ ಜಾಗೆಯಲ್ಲಿರುವ ಗೋರಿಗಳಿಗೆ ರಕ್ಷಣೆ ಒದಗಿಸಿ, ಅದಕ್ಕೂ ಪ್ರತ್ಯೇಕವಾದ ಗೋಡೆ ನಿರ್ಮಿಸಲು ನಿರ್ಧರಿಸಿತ್ತು, ಹೀಗೆ ಎಲ್ಲರ ಒಪ್ಪಿಗೆ ಪಡೆದ ನಂತರ ಗೋಡೆ ನಿರ್ಮಾಣಕ್ಕೆ ಬೇಕಾದ ಕಲ್ಲು, ಮರಳು, ಇಟ್ಟಿಗೆ ಇತ್ಯಾದಿಗಳನ್ನು ಸಂಗ್ರಹಿಸಲಾಯಿತು.

ಹೀಗೆ ಸೌಹಾರ್ದಯುತವಾಗಿಯೇ ಮುಸಲ್ಮಾನರು ಮತ್ತು ದಲಿತರು ಒಂದು ಭೂಮಿಯನ್ನು ಕುರಿತು ನಿರ್ಧಾರ ತೆಗೆದುಕೊಂಡದ್ದು ಚೆಡ್ಡಿಗಳಿಗೆ ಸಹಿಸಲಾಗಲಿಲ್ಲ, ಆಗ ಅವರು ಈ ಎರಡು ಸಮುದಾಯಗಳ ನಡುವೆ ಬಿರುಕನ್ನು ಮೂಡಿಸಿ ತಮ್ಮ ಬೇಳೆ ಬೇಯಿಸಿಕೊಳ್ಳಲು ಮುಂದಾದರು.

ದಲಿತರ ವಿಮೋಚನೆಗೆಂದೇ ರಾಜ್ಯಾದ್ಯಂತ ಹುಟ್ಟುಕೊಂಡಿದ್ದ ದಲಿತ ಸಂಘಟನೆಗಳು ಇಂದು ನೂರಾರು ಬಣಗಳಾಗಿವೆ. ಮಾತ್ರವಲ್ಲ ಹಲವಾರು ದಲಿತ ಗುಂಪುಗಳು ಬ್ಲಾಕ್‌ಮೇಲ್ ಮಾಡುವ, ಬೆದರಿಸಿ ಹಣ ಕೀಳುವ, ಅಕ್ರಮ ರಿಯಲ್ ಎಸ್ಟೇಟ್ ದಂಧೆಯಲ್ಲಿ ತೊಡಗಿವೆ. ಅವಳಿ ನಗರಗಳಲ್ಲೂ ನಾಯಿಕೊಡೆಗಳಂತೆ ಹುಟ್ಟಿಕೊಂಡಿರುವ ದಲಿತ ಸಂಘಟನೆಗಳು ನೈಜ ದಲಿತ ಕಾಳಜಿಯನ್ನು ಹೊಂದಿರದೆ ದಲಿತರಿಗೇ ಅನ್ಯಾಯವಾಗುವಂತೆ ಮಾಡುತ್ತಿರುವುದು ಎಲ್ಲರೂ ಬಲ್ಲ ಸಂಗತಿಯೇ.

ಅಂತಹ ದಲಿತ ಸಂಘಟನೆಗಳನ್ನು ಬಳಸಿಕೊಂಡೇ ಈ ಪ್ರದೇಶದಲ್ಲಿ ಚೆಡ್ಡಿಗಳು ಬಹಳಷ್ಟು ಆಟಗಳನ್ನು ಈ ಹಿಂದೆ ಆಡಿದ್ದಾರೆ ಮತ್ತು ಆ ಆಟಗಳ ರಾಜಕೀಯ ಲಾಭವನ್ನು ಬಿಜೆಪಿ ನಾಯಕ ಪ್ರಹ್ಲಾದ್ ಜೋಶಿ ಪಡೆದಿದ್ದಾನೆ.

ಈಗಲೂ ಅಂತಹ ಒಂದು ದಲಿತ ಸಂಘಟನೆಯನ್ನು ಮುಂದಿಟ್ಟುಕೊಂಡು ಪ್ರಹ್ಲಾದ್ ಜೋಶಿ ಕಾರ್ಯಪ್ರವೃತ್ತನಾದ. 'ದಲಿತರಿಗೆ ಸೇರಿದ ಈ ಜಾಗೆಯನ್ನು ಧಾರವಾಡದ ಅಂಜುಮಾನ್ ಸಂಸ್ಥೆಯ ಅಧ್ಯಕ್ಷ ಇಸ್ಮಾಯಿಲ್ ತಮಾಟಗಾರ ಹಾಗೂ ಆತನ ಬೆಂಬಲಿಗರು ಅತಿಕ್ರಮಣ ಮಾಡಿಕೊಂಡಿದ್ದಾರೆ. ಅಲ್ಲಿರುವ ದಲಿತರ ಸಮಾಧಿಗಳನ್ನು ಧ್ವಂಸಗೊಳಿಸಿದ್ದಾರೆ' ಎಂದೆಲ್ಲ ಜೋಶಿ ಮುಸಲ್ಮಾನರ ವಿರುದ್ಧ ದಲಿತರನ್ನು ಎತ್ತಿ ಕಟ್ಟಲು ದಲಿತ ಯುವಕರನ್ನು ಪ್ರಚೋದಿಸಿದ.

ಜೋಶಿಯ ಮಾತನ್ನು ನಂಬಿದ ದಲಿತ ಯುವಕರು ಅಂಜುಮಾನ್ ಸಂಸ್ಥೆಯ ವಿರುದ್ಧ ಕಿಡಿಕಾರಿದರು. ದಲಿತರ ಮೇಲೆ ದೌರ್ಜನ್ಯವೆಸಗಿದ್ದಾರೆ ಎಂದು ಅಂಜುಮಾನ್ ಸಂಸ್ಥೆಯ ಅಧ್ಯಕ್ಷ ತಮಾಟಗಾರ, ಕೋಮು ಸೌಹಾರ್ದ ವೇದಿಕೆಯ ರಸೂಲ್ ನದಾಫ ಹಾಗೂ ಆರು ಜನ ಇತರರ ವಿರುದ್ಧ ವಿದ್ಯಾಗಿರಿ ಪೊಲೀಸ್ ಠಾಣೆಗೆ ದೂರು ನೀಡಿದರು. ಆ ದೂರನ್ನು ಆಧರಿಸಿ ಪೊಲೀಸರು ರಸೂಲ ಮತ್ತು ನಧಾಫನನ್ನು ಬಂಧಿಸಿ ಜೈಲಿಗೆ ಅಟ್ಟಿದರು.


ಆದರೆ ಚೆಡ್ಡಿಗಳಿಂದ ಪ್ರಚೋದಿತರಾಗಿ ದಲಿತ ಯುವಕರು ಪೊಲೀಸರಿಗೆ ನೀಡಿದ ದೂರಿನಲ್ಲಿ ಎಳ್ಳಷ್ಟೂ ಸತ್ಯವಿಲ್ಲ ಎಂದು ಅಂಜುಮಾನ್ ಸಂಸ್ಥೆಯ ಅಧ್ಯಕ್ಷ ಇಸ್ಮಾಯಿಲ್ ತಮಾಟಗಾರ ಸಾಬೀತುಪಡಿಸಿದ್ದಾರೆ.

"ಈ ಭೂಮಿ ದಲಿತರಿಗೆ ಸೇರಿದ್ದು ಎಂಬುದಕ್ಕೆ ಯಾವದೇ ದಾಖಲೆಗಳಿಲ್ಲ, ಬದಲಾಗಿ ಇದು ನಮ್ಮ ಸಂಸ್ಥೆಗೆ ಸೇರಿದೆ ಎಂಬುದಕ್ಕೆ ದಾಖಲೆಗಳಿವೆ. ಹಲವಾರು ದಶಕಗಳಿಂದ ದಲಿತರು ಹಾಗು ಮುಸಲ್ಮಾನರು ಸೌಹಾರ್ದಯುತವಾಗಿ ಈ ಭೂಮಿಯನ್ನು ಬಳಕೆ ಮಾಡುತ್ತಾ ಬಂದಿದ್ದಾರೆ. ಈ ಕಾರಣಕ್ಕೇ ನಾವು ಈ ಭೂಮಿಯ ಒಂದು ಭಾಗವನ್ನು ದಲಿತರಿಗೆ ಸ್ವಇಚ್ಛೆಯಿಂದ ಬಿಟ್ಟು ಕೊಡಲು ನಿರ್ಧರಿಸಿದ್ದೆವು. ಆದರೆ ಇದನ್ನು ಸಹಿಸದ ಕೆಲವರು ಕಪೋಲಕಲ್ಪಿತ ಆರೋಪಗಳನ್ನು ಮಾಡಿ ಎರಡು ಸಮುದಾಯಗಳ ನಡುವೆ ಗಲಭೆ ಮಾಡಿಸಲು ರಾಜಕೀಯ ಷಡ್ಯಂತ್ರ ನಡೆಸಿದ್ದಾರೆ" ಎಂದು ಅಂಜುಮಾನ್ ಸಂಸ್ಥೆಯ ತಮಾಟಗಾರ ಹಾಗೂ ಪದಾಧಿಕಾರಿಗಳು ಹೇಳುವ ಮೂಲಕ ತಮ್ಮ ಹಿರಿತನವನ್ನು ಮೆರೆದಿದ್ದಾರೆ.

ಹಾಗೆ ಮಾಡುವ ಮೂಲಕ ಪ್ರಹ್ಲಾದ್ ಜೋಶಿಯ ಕೋಮುವಾದಿ ಮುಖಕ್ಕೆ ಚೆನ್ನಾಗಿಯೇ ಉಗಿದ್ದಾರೆ.

-ಹುಬ್ಬಳ್ಳಿಯಾಂವ

ಸಂವಿಧಾನದ ಆಶಯವನ್ನು ವಿರೋಧಿಸುತ್ತಿರುವ 'ಕುಸುಮ'



ಸ್ವಾತಂತ್ರ್ಯ ಚಳವಳಿಯು ಭಾರತಕ್ಕೆ ಸ್ವಾತಂತ್ರ್ಯ ದೊರಕಿಸಿ ಕೊಡುವ ಜೊತೆಗೆ ದೇಶದ ಹತ್ತು-ಹಲವು ಸಮಸ್ಯೆಗಳಿಗೆ ಪರಿಹಾರೋಪಾಯಗಳನ್ನು ಕಂಡುಕೊಳ್ಳುವ ಹೋರಾಟವೂ ಆಗಿತ್ತು. ಶಿಕ್ಷಣ ಸಾರ್ವತ್ರೀಕರಣವಾಗಬೇಕೆಂಬುದು ಸ್ವಾತಂತ್ರ್ಯ ಚಳವಳಿಯ ಭಾಗವಾಗಿ ಬೆಳೆದುಬಂದ ಬೇಡಿಕೆ. ತ್ಯಾಗ ಬಲಿದಾನಗಳ ಉತ್ಕರ್ಷ. ಇತಿಹಾಸದಲ್ಲಿ ಇದನ್ನು ಪುಷ್ಟೀಕರಿಸುವ ಅನೇಕ ಉದಾಹರಣೆಗಳು ನಮಗೆ ಸಿಗುತ್ತವೆ. ಮಹಾತ್ಮ ಜ್ಯೋತಿರಾವ್ ಫುಲೆಯವರು ಸುಮಾರು 130 ವರ್ಷಗಳ ಹಿಂದೆ ಭಾರತೀಯ ಶಿಕ್ಷಣ ಆಯೋಗಕ್ಕೆ (ಹಂಟರ್ ಆಯೋಗ) ಮನವಿಯೊಂದನ್ನು ಸಲ್ಲಿಸಿ ಸಾರ್ವತ್ರಿಕ ಶಿಕ್ಷಣಕ್ಕಾಗಿ ಒತ್ತಾಯಿಸಿದ್ದರು. ನಂತರ 1911 ರಲ್ಲಿ ಗೋಪಾಲಕೃಷ್ಣ ಗೋಖಲೆಯವರು ಇಂಪೀರಿಯಲ್ ಶಾಸನಸಭೆಯಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣ ಮಸೂದೆ ಯನ್ನು ಮಂಡಿಸಿದ್ದರು. ಈ ಮಸೂದೆಯನ್ನು ಬೆಂಬಲಿಸುವ ಬದಲು ಅಂದು ಆಳ್ವಿಕೆ ನಡೆಸುತ್ತಿದ್ದ ಅನೇಕ ರಾಜಮಹಾ ರಾಜರುಗಳು ಮತ್ತು ಭೂಮಾಲೀಕರು ಶಿಕ್ಷಣದ ಸಾರ್ವತ್ರೀಕರಣಕ್ಕೆ ಕಾಲ ಇನ್ನೂ ಪಕ್ವವಾಗಿಲ್ಲವೆಂಬ ವಾದವನ್ನು ಮುಂದಿಟ್ಟು ಮಸೂದೆಯು ತಿರಸ್ಕೃತವಾಗುವಂತೆ ಮಾಡಿದ್ದರು.

ಮತ್ತೊಂದು ಸ್ವಾರಸ್ಯಕರ ಸಂಗತಿ ಎಂದರೆ, ಬಿಹಾರ್‌ನ ಧರ್‌ಭಂಗದ ಮಹಾರಾಜರು ಎಲ್ಲಾ ಮಕ್ಕಳು ಶಾಲೆಗೆ ಹೋಗುವಂತಾದರೆ ತಮ್ಮ ಒಕ್ಕಲುತನದ ಕೆಲಸದ ಗತಿ ಏನಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿ ಎಲ್ಲಾ ರಾಜಕುಮಾರರ ಮತ್ತು ಭೂಮಾಲೀಕರ ಸಹಿ ಸಂಗ್ರಹಿಸಿದ್ದೂ ಉಂಟು.

ಇಂದಿನ ಸಂದರ್ಭಕ್ಕೆ ಹೋಲಿಸಿ ನೋಡಿದಾಗ ಅಂದು ಭೂಮಾಲೀಕರು ಮತ್ತು ರಾಜಮಹಾರಾಜರುಗಳು ಶಿಕ್ಷಣದ ಸಾರ್ವತ್ರೀಕರಣಕ್ಕೆ ಕಾಲ ಇನ್ನೂ ಪಕ್ವವಾಗಿಲ್ಲವೆಂದು ಹೇಳಿದ ಧಾಟಿಯಲ್ಲಿಯೇ ಇಂದು ಖಾಸಗಿ ಸಂಸ್ಥೆಗಳ 'ಕುಸುಮ' ಸಂಘದ ಸದಸ್ಯರುಗಳು ಶಿಕ್ಷಣ ಹಕ್ಕು ಕಾಯ್ದೆಯನ್ನು ಅನುಷ್ಠಾನಕ್ಕೆ ಕಾಲ ಕೂಡಿ ಬಂದಿಲ್ಲವೆಂದು ಹೇಳುತ್ತಿದ್ದಾರೆ. ಇತಿಹಾಸವು ಸದಾ ನಮ್ಮನ್ನು ಎಚ್ಚರಿಸುವ ಒಂದು ಸಂಗತಿ ಯೆಂದರೆ ಭಾರತದಲ್ಲಿ ಶಿಕ್ಷಣವನ್ನು ಸಾರ್ವತ್ರೀಕರಣ ಗೊಳಿಸುವ ಪ್ರಕ್ರಿಯೆಗೆ ಪುರೋಹಿತಶಾಹಿವರ್ಗವು ಎಂದಿಗೂ ಮನಃಪೂರ್ವಕವಾಗಿ ಬೆಂಬಲವನ್ನು ವ್ಯಕ್ತಪಡಿಸಿಲಿಲ್ಲವೆಂಬ ಅಂಶ ಈಗ ಕುಸುಮದಿಂದ ಮತ್ತೊಮ್ಮೆ ಅದು ಸಾಬೀತಾಗಿದೆ.

ಈ ಎಲ್ಲಾ ವಿರೋಧಗಳ ನಡುವೆಯೂ ಜನರ ಹೋರಾಟ ಮತ್ತು ಒತ್ತಾಯಗಳ ಫಲವಾಗಿ ಶಿಕ್ಷಣವನ್ನು ಸಂವಿಧಾನದಲ್ಲಿ ರಾಜ್ಯ ನಿರ್ದೇಶಕ ತತ್ವಗಳ ಪಟ್ಟಿಗೆ ಸೇರಿಸುವಂತಾಯಿತು. ಅದರಂತೆ, 14 ವರ್ಷ ವಯಸ್ಸಿನೊಳಗಿನ ಎಲ್ಲಾ ಮಕ್ಕಳಿಗೆ ಸಂವಿಧಾನ ಪ್ರಾರಂಭವಾದ ಹತ್ತು ವರ್ಷಗಳ ಒಳಗಾಗಿ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸಬೇಕೆಂಬ ಅವಕಾಶವು ಸಂವಿಧಾನದ ಪರಿಚ್ಛೇದ 45ರ ಭಾಗವಾಗಿ ನಿರ್ದೇಶಕ ತತ್ವಗಳ ಅಡಿಯಲ್ಲಿ ಸೇರ್ಪಡೆಯಾಯಿತು.

ಸ್ವಾತಂತ್ರ್ಯಾನಂತರ ಸಂವಿಧಾನದ ಆಶಯದಂತೆ ದೇಶದ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡುವ ಕಾರ್ಯ 1960ರ ವೇಳೆಗೆ ಮುಗಿದು ಹೋಗಬೇಕಿತ್ತು, ಸಂವಿಧಾನದಲ್ಲಿದ್ದ ಒಂದೇ ಒಂದು ಕಾಲಮಿತಿ ಕಾರ್ಯಕ್ರಮವೆಂದರೆ ಎಲ್ಲಾ ಮಕ್ಕಳಿಗೆ ಹತ್ತು ವರ್ಷದೊಳಗಾಗಿ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡುವ ಭರವಸೆ. ಆದರೆ 1960ರ ವೇಳೆಗೆ ಈ ಕಾರ್ಯವನ್ನು ಮುಗಿಸುವಲ್ಲಿ ಆಳುವ ವರ್ಗ ದಯನೀಯವಾಗಿ ಸೋತಿತು.

ಈ ಎಲ್ಲಾ ವೈಫಲ್ಯಗಳ ನಡುವೆಯೂ ದೇಶದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಅಭಿವೃದ್ಧಿಯಲ್ಲಿ ಮೂಲ ಶಿಕ್ಷಣದ ಮಹತ್ವವನ್ನು ಅರಿತಿದ್ದ ಆಳುವ ವರ್ಗವು ದೇಶದಲ್ಲಿನ ಶೈಕ್ಷಣಿಕ ವ್ಯವಸ್ಥೆಯನ್ನು ಸಮಗ್ರವಾಗಿ ಅಧ್ಯಯನ ನಡೆಸುವ ಬಗ್ಗೆ ತೀರ್ಮಾನಿಸಿತು. ಇದರ ಭಾಗವಾಗಿ ಕೇಂದ್ರ ಸರ್ಕಾರವು ಮೊಟ್ಟಮೊದಲ ಬಾರಿಗೆ ಶಾಲಾಶಿಕ್ಷಣ ಆಯೋಗವೊಂದನ್ನು ರಚಿಸಿ ಡಾ.ಎಸ್.ಕೊಠಾರಿಯವರನ್ನು ಆಯೋಗದ ಅಧ್ಯಕ್ಷರನ್ನಾಗಿ ನೇಮಿಸಿತು. ಶಿಕ್ಷಣ ಆಯೋಗವು ದೇಶದ ಶಿಕ್ಷಣ ವ್ಯವಸ್ಥೆಯನ್ನು ಅಧ್ಯಯನ ನಡೆಸುವ ಸಂದರ್ಭದಲ್ಲಿ ಹಲವು ಮಹತ್ವದ ಅಂಶಗಳನ್ನು ಗಮನಿಸಿತು.

ಆಯೋಗದ ದೃಷ್ಟಿಯಲ್ಲಿ ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯು ಸಮಾಜದಲ್ಲಿನ ಬೇರೆ ಬೇರೆ ಸಾಮಾಜಿಕ ವರ್ಗ ಮತ್ತು ಗುಂಪುಗಳನ್ನು ಒಟ್ಟು ಮಾಡುವುದರ ಮೂಲಕ ಸಮಾನತೆಯ ಆಧಾರದ ಮೇಲೆ ಎಲ್ಲರನ್ನೂ ಒಗ್ಗೂಡಿಸುವ ಸಮಾಜವನ್ನು ನಿರ್ಮಿಸುವ ಮಹತ್ವವಾದ ಕೆಲಸ ಮಾಡಬೇಕು ಎಂಬುದಾಗಿತ್ತು.

ಮುಂದುವರೆದ ಆಯೋಗವು, ಇಂದಿನ ಶೈಕ್ಷಣಿಕ ವ್ಯವಸ್ಥೆಯು ಇಂತಹ ಕೆಲಸಗಳನ್ನು ಮಾಡುವುದರ ಬದಲಾಗಿ ಸಮಾಜದಲ್ಲಿ ಪ್ರತ್ಯೇಕತೆಯನ್ನು ಮತ್ತಷ್ಟು ಜಾಸ್ತಿ ಮಾಡುವುದರ ಮೂಲಕ ಯಥಾಸ್ಥಿತಿಯನ್ನು ಮುಂದುವರಿಸುವುದರ ಜೊತೆಗೆ ವರ್ಗಭೇದಗಳನ್ನು ಹೆಚ್ಚಿಸುತ್ತಿರುವುದರ ಬಗ್ಗೆ ತೀವ್ರ ಆತಂಕವನ್ನು ವ್ಯಕ್ತಪಡಿಸಿತು.

ಈ ಸಂಬಂಧ ಆಯೋಗವು ಮತ್ತೊಂದು ಗಂಭೀರ ವಿಚಾರವನ್ನು ಪ್ರಸ್ತಾಪಿಸಿತು, "ಇಂತಹ ಶಿಕ್ಷಣ ವ್ಯವಸ್ಥೆಯು ಕೇವಲ ಬಡವರ್ಗದ ಮಕ್ಕಳಿಗೆ ಮಾತ್ರ ಕೆಡುಕಾಗಿರದೆ ಶ್ರೀಮಂತ ಮತ್ತು ಸವಲತ್ತುಗಳುಳ್ಳ ವರ್ಗದ ಮಕ್ಕಳಿಗೂ ಮಾರಕವಾಗುತ್ತದೆ. ಹೇಗೆಂದರೆ, ಮಕ್ಕಳನ್ನು ಪ್ರತ್ಯೇಕ ವರ್ಗಗಳಾಗಿ ಪ್ರತ್ಯೇಕ ಶಾಲೆಗಳಲ್ಲಿ ಕಲಿಯುವಂತೆ ಮಾಡುವುದರಿಂದ ಶ್ರೀಮಂತರ ಮತ್ತು ಸವಲತ್ತುಗಳುಳ್ಳ ವರ್ಗದ ಮಕ್ಕಳಿಗೆ ಬಡ ವರ್ಗದ ಮಕ್ಕಳ ಜೀವನದ ಅನುಭವ ಮತ್ತು ಅವರಿಗಿರುವ ಜೀವನಾಧಾರಿತ ಕೌಶಲಗಳ ಜ್ಞಾನದ ಹಂಚಿಕೆ ಸಿಗುವುದಿಲ್ಲ." ಹೀಗಾಗಿ, ಮೇಲ್ವರ್ಗದ ಮಕ್ಕಳಿಗೆ ವಾಸ್ತವಿಕವಾದ ಮತ್ತು ಜೀವನಕ್ಕೆ ಹತ್ತಿರವಾದ ವಿಚಾರಗಳ ಅನುಭವವೇ ಆಗದೇ ಏಕರೂಪದ ಅನಾರೋಗ್ಯಕರ ಬೆಳವಣಿಗೆಗಳಾಗುವ ಸಾಧ್ಯತೆಗಳೇ ಹೆಚ್ಚು. ಒಟ್ಟಾರೆ, ಭಾರತದ ಶೈಕ್ಷಣಿಕ ವ್ಯವಸ್ಥೆಯು ಅಸಮಾನತೆಯಿಂದ ಕೂಡಿದ್ದು ಅಸಮಾನತೆಯನ್ನು ಮತ್ತಷ್ಟು ಜಾಸ್ತಿಗೊಳಿಸುವುದರ ಮೂಲಕ ಶ್ರೇಣೀಕೃತ ಸಮಾಜವನ್ನು ಸೃಷ್ಟಿಸುತ್ತಿದೆಯೆಂಬ ಸಂದೇಶವನ್ನು ಆಯೋಗವು ಪ್ರತಿಪಾದಿಸಿತು.

ಇದಕ್ಕೆ ಪರಿಹಾರವಾಗಿ ಆಯೋಗವು ಈ ಎಲ್ಲಾ ನ್ಯೂನತೆಗಳನ್ನು ತೊಡೆದು ಹಾಕಿ ಸಮಾನತೆಯ ತಳಹದಿಯ ಮೇಲೆ ಬಲಿಷ್ಠ ಶೈಕ್ಷಣಿಕ ವ್ಯವಸ್ಥೆಯನ್ನು ರೂಪಿಸಿಕೊಳ್ಳಬೇಕಾದರೆ ನಾವು ಸಾರ್ವಜನಿಕ ಶಿಕ್ಷಣಕ್ಕಾಗಿ ಸಮಾನ ಶಾಲಾಶಿಕ್ಷಣ ವ್ಯವಸ್ಥೆಯತ್ತ ಹೆಜ್ಜೆಹಾಕಬೇಕೆಂಬ ಮಹತ್ವದ ಮತ್ತು ದೂರದೃಷ್ಟಿಯ ಶಿಫಾರಸ್ಸನ್ನು ಮಾಡಿತು. ಇಂತಹ ಸಮಾನ ಶಾಲಾಶಿಕ್ಷಣ ತಳಹದಿಯ ಮೇಲೆ ರೂಪುಗೊಳ್ಳುವ ಶೈಕ್ಷಣಿಕ ವ್ಯವಸ್ಥೆಯು ದೇಶದ ಅಭಿವೃದ್ಧಿಗೆ ಭದ್ರಬುನಾದಿ ಆಗುವುದಲ್ಲದೆ, ರಾಷ್ಟ್ರೀಯ ಭಾವೈಕ್ಯತೆಯನ್ನು ಹುಟ್ಟುಹಾಕುತ್ತದೆ ಎಂಬ ಅಂಶವನ್ನು ಸ್ಪಷ್ಟ ಮತ್ತು ನೇರನುಡಿಗಳಲ್ಲಿ ಪ್ರತಿಪಾದಿಸಿತು.

ಆಯೋಗವು, ಸಮಗ್ರ ಅಧ್ಯಯನದ ನಂತರ 4 ಸಂಪುಟಗಳಲ್ಲಿ ತನ್ನ ವರದಿಯನ್ನು ಸರ್ಕಾರಕ್ಕೆ ಮಂಡಿಸಿತು.

ಆಯೋಗದ ವರದಿಯ ಮೊದಲನೇ ಸಂಪುಟದ ಮೊದಲನೇ ವಾಕ್ಯವು "ದೇಶದ ಭವಿಷ್ಯವು ಆಕೆಯ ತರಗತಿಗಳಲ್ಲಿ ರೂಪಿತವಾಗುತ್ತದೆ" ಎಂದು ಪ್ರಾರಂಭವಾಗುತ್ತದೆ. ದೇಶದ ಅಭಿವೃದ್ಧಿಯಲ್ಲಿ ಶಿಕ್ಷಣದ ಮಹತ್ವವನ್ನು ಅರಿತುಕೊಳ್ಳಲು ಆಯೋಗದ ಈ ಒಂದು ವಾಕ್ಯ ಸಾಕೆನಿಸುತ್ತದೆ.

ವಿಪರ್ಯಾಸದ ಸಂಗತಿಯೆಂದರೆ ಭಾರತದಲ್ಲಿ ಆಳುವ ವರ್ಗವಾಗಲಿ, ಆರ್ಥಿಕವಾಗಿ ಸಬಲವಾಗಿರುವ ಶ್ರೀಮಂತ ವರ್ಗವಾಗಲಿ ಮತ್ತು ಆಡಳಿತದ ಚುಕ್ಕಾಣಿ ಹಿಡಿದಿರುವ ಅಧಿಕಾರಶಾಹಿಯಾಗಲಿ ಶಿಕ್ಷಣ ಆಯೋಗದ ಈ ಮಹತ್ವಪೂರ್ಣ ಶಿಫಾರಸ್ಸನ್ನು ಅರ್ಥೈಸಿಕೊಳ್ಳುವ ಗೋಜಿಗೆ ಹೋಗಲಿಲ್ಲ. ಅರ್ಥೈಸಿಕೊಂಡ ಪಟ್ಟಭದ್ರ ಹಿತಾಸಕ್ತಿಯುಳ್ಳ ಅಧಿಕಾರಶಾಹಿಯ ಒಂದು ಗುಂಪು ಸಮಾನ ಶಾಲಾ ಶಿಕ್ಷಣ ವ್ಯವಸ್ಥೆಯ ಹಿಂದಿರುವ ಸಮಾನತೆಯ ತತ್ವವನ್ನು ತಿಳಿದು ಶ್ರೇಣೀಕೃತ ಮತ್ತು ವರ್ಗಾಧಾರಿತ ವ್ಯವಸ್ಥೆಯಲ್ಲಿ ತಾವು ಅನುಭವಿಸುತ್ತಿರುವ ಸವಲತ್ತುಗಳಿಗೆ ಧಕ್ಕೆಯಾಗುವ ಇಂತಹ ಕ್ರಾಂತಿಕಾರಕ ಶಿಫಾರಸ್ಸನ್ನು ಅನುಷ್ಠಾನಗೊಳ್ಳಲು ಬಿಡುವುದಿಲ್ಲವೆಂಬ ಸಂಕಲ್ಪ ತೊಟ್ಟಿತ್ತು. ಹೀಗಾಗಿ, ರಾಜಕೀಯ ಅಧಿಕಾರದ ಚುಕ್ಕಾಣಿ ಹಿಡಿಯುವ ಜನಪ್ರತಿನಿಧಿಗಳಿಗೆ ಶಿಕ್ಷಣ ಆಯೋಗದ ಸಂವಿಧಾನಬದ್ಧ ಆಶಯವಾದ ಸಮಾನ ಶಾಲಾ ಶಿಕ್ಷಣ ವ್ಯವಸ್ಥೆಯ ಪರಿಕಲ್ಪನೆಯನ್ನು ಪರಿಚಯಿಸುವ ಕೆಲಸ ಮಾಡಲೇ ಇಲ್ಲ. ಇನ್ನೊಂದೆಡೆ, ಅಧಿಕಾರಶಾಹಿಗಳ ಹಿಡಿತದಿಂದ ಹೊರಬಂದು ದೇಶದ ಭವಿಷ್ಯದ ಬಗ್ಗೆ ತಮ್ಮ ಸ್ವಂತ ಅನುಭವದ ಹಿನ್ನಲೆಯಲ್ಲಿ ಚಿಂತಿಸುವ ಪ್ರಯತ್ನವನ್ನು ಆಳುವ ವರ್ಗದ ರಾಜಕಾರಣಿಗಳು ಮಾಡಲಿಲ್ಲ. ಹೀಗಾಗಿ, ಶಿಕ್ಷಣ ಆಯೋಗದ ಸಮಾನ ಶಾಲಾಶಿಕ್ಷಣ ವ್ಯವಸ್ಥೆಯು ಕನಸಾಗಿಯೇ ಉಳಿಯಿತು.

ಬದಲಾಗಿ ಆಳುವ ವರ್ಗ ಮತ್ತು ಅಧಿಕಾರಶಾಹಿ ಅಸಮಾನತೆಯನ್ನು ಹುಟ್ಟುಹಾಕುವ ಶೈಕ್ಷಣಿಕ ವ್ಯವಸ್ಥೆಯನ್ನು ಬೆಳೆಸುತ್ತಲೇ ಬಂದರು. ತಮ್ಮ ಅಧಿಕಾರದ ಉಳಿವಿಗಾಗಿ ಮತ ಬ್ಯಾಂಕ್ ಆಧಾರಿತ ರಾಜಕೀಯವನ್ನು ಜೀವನದ ಕ್ರಮವನ್ನಾಗಿ ಮೈಗೂಡಿಸಿಕೊಂಡ ರಾಜಕಾರಣಿಗಳು ಸಮಾನ ಶಾಲಾ ಶಿಕ್ಷಣ ವ್ಯವಸ್ಥೆಯನ್ನು ಜಾರಿಗೊಳಿಸುವ ಭರವಸೆಯನ್ನು 1968, 1986ರ ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು 1992ರ ಪರಿಷ್ಕೃತ ರಾಷ್ಟ್ರೀಯ ಶಿಕ್ಷಣ ನೀತಿಗಳಲ್ಲಿ ಭರವಸೆಯನ್ನಾಗಿ ಸೇರಿಸುವ ಮೂಲಕ ಜನರ ಕಣ್ಣೊರೆಸುವ ತಂತ್ರವನ್ನು ಅಳವಡಿಸಿಕೊಂಡರು. ಸಾರ್ವಜನಿಕವಾಗಿ ಸಮಾನತೆ ಹಾಗೂ ಸಾಮಾಜಿಕ ನ್ಯಾಯದ ಬಗ್ಗೆ ಪುಂಖಾನುಪುಂಖ ಭಾಷಣ ಮಾಡುವ ರಾಜಕಾರಣಿಗಳು ಅಭಿವೃದ್ಧಿಗೆ ಭದ್ರ ಬುನಾದಿಯಾದ ಶಿಕ್ಷಣದಲ್ಲಿ ಸಮಾನತೆಯನ್ನು ಕಂಡುಕೊಳ್ಳುವ ಪ್ರಯತ್ನ ಮಾಡಲಿಲ್ಲ, ಇಂತಹ ಶೈಕ್ಷಣಿಕ ವ್ಯವಸ್ಥೆಯನ್ನು ರೂಪಿಸಿಕೊಳ್ಳಲು ಶಿಕ್ಷಣ ಆಯೋಗವು ತನ್ನ ಶಿಫಾರಸ್ಸಿನಲ್ಲಿ ದೇಶದ ಒಟ್ಟು ಉತ್ಪನ್ನದಲ್ಲಿ ಶೇ 6 ರಷ್ಟನ್ನು ಶಿಕ್ಷಣಕ್ಕೆ ಮೀಸಲಿಡಬೇಕೆಂಬ ಶಿಫಾರಸ್ಸಿನ ಬಗ್ಗೆ ಯೋಚಿಸಲೂ ... ಬದಲಾಗಿ, ಶಿಕ್ಷಣದಲ್ಲಿ ಅಸಮಾನತೆ ಹಾಗೂ ತಾರತಮ್ಯ... ಹುಟ್ಟುಹಾಕುವ ಅನೇಕ ಪದರಗಳುಳ್ಳ ಅಸಮಾನ ಶಿಕ್ಷ... ವ್ಯವಸ್ಥೆಯನ್ನು ಹುಟ್ಟುಹಾಕಿ ಬೆಳೆಸುತ್ತಾ ಬಂದರು.

ಸಮಾಜದ ಎಲ್ಲಾ ವರ್ಗಗಳನ್ನು ಒಂದು ಮಾಡಿ ಸಮಾನತೆಯ ತತ್ವದ ಆಧಾರದ ಮೇಲೆ ಪ್ರಜಾಸತ್ತಾ... ಸಮಾಜವಾದಿ, ಸರ್ವಸ್ವತಂತ್ರ ಗಣರಾಜ್ಯವ... ಸ್ಥಾಪಿಸಬೇಕೆನ್ನುವುದು ಸಂವಿಧಾನದ ಆಶಯ. ಅಂ... ಜನತೆಯ ಆಶಯ. ಆದರೆ ಭಾರತದಲ್ಲಿ ಸಂವಿಧಾ... ವಿರುದ್ಧವಾದ ಪಟ್ಟಭದ್ರ ಹಿತಾಸಕ್ತಿಗಳ ವರ್ಗ... ಆಶಯವೆಂದರೆ ಅಸಮಾನತೆಯ ಆಧಾರದ ಮೇಲೆ ... ರಾಜಕೀಯದ ಮೂಲಕ ಬಂಡವಾಳಶಾಹಿ ಪರವಾದ ಒ... ಪರಾವಲಂಬಿತ ವ್ಯವಸ್ಥೆಯನ್ನು ಸೃಷ್ಟಿಸುವುದೇ ಆಗಿ... ಹೀಗಾಗಿ, ವ್ಯವಸ್ಥೆಯಲ್ಲಿನ ಈ ದ್ವಂದ್ವಗಳನ್ನು ನಾವು ಸರಿಯ... ಅರ್ಥೈಸಿಕೊಳ್ಳದಿದ್ದಲ್ಲಿ ಅಸಮಾನತೆಯ ಶಿಕ್ಷಣದ ಹಿಂದಿ... ಹುನ್ನಾರಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದ... ಈಗಿನ ವ್ಯವಸ್ಥೆಯಲ್ಲಿ ಶಿಕ್ಷಣವನ್ನು ಸಮಾಜದಲ್ಲಿನ ಎ... ವರ್ಗದ ಜನರ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವ... ಮೂಲಕ ಒಂದು ಸಮಾನತೆಯ ನಾಡನ್ನು ಕಟ್ಟಿಕೊಳ್ಳ... ಬದಲು ಶಿಕ್ಷಣವನ್ನು ಒಂದು ಅಸ್ತ್ರವನ್ನಾಗಿ ಬಳಸುವು... ಮೂಲಕ ಯಥಾಸ್ಥಿತಿಯನ್ನು ಕಾಪಾಡಿಕೊಂಡು ತ... ಆಳ್ವಿಕೆಯನ್ನು ಎಲ್ಲಾ ಕಾಲಕ್ಕೂ ಮುಂದುವರಿಸುವು... ಆಗಿದೆ.

ಶಿಕ್ಷಣದ ರಾಜಕೀಯ ಅರ್ಥಶಾಸ್ತ್ರದ ಹಿನ್ನೆಲೆಯ... ನೋಡುವುದಾದರೆ ಸ್ವಾತಂತ್ರ್ಯ ನಂತರದ ಮೊದಲ 30-... ವರ್ಷಗಳಲ್ಲಿ ಸಾರ್ವಜನಿಕ ಹಣವನ್ನು ಹೂಡುವು... ಮೂಲಕ ಕಟ್ಟಿ ಬೆಳೆಸಿದ್ದ ಅಗಾಧವಾದ ಶಿಕ್ಷಣ ವ್ಯವಸ್ಥೆಯ... ಜಾಗತೀಕರಣದ ಭಾಗವಾಗಿರುವ ಖಾಸಗೀಕರಣದ ಒಡೆ... ಒಪ್ಪಿಸುವ ಎಲ್ಲಾ ಪ್ರಯತ್ನಗಳು ನಡೆಯುತ್ತಿ... ಖಾಸಗೀಕರಣವೇ ದೇಶದ ಎಲ್ಲಾ ಸಮಸ್ಯೆಗಳ... ಪರಿಹಾರವೆಂದು ನಂಬಿ ಆಡಳಿತ ನಡೆಸುತ್ತಿರು... ಅಧಿಕಾರಶಾಹಿಯ ಮನಸ್ಥಿತಿ, ಸಾರ್ವಜನಿಕ ಶಿಕ್ಷಣವ... ಬಲವರ್ಧಿಸಲು ಅಗತ್ಯ ಇಚ್ಛಾಶಕ್ತಿ ಮತ್ತು ಹಣಕಾಸು... ಒದಗಿಸದೇ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯಲ್ಲಿ ಗುಣಮಟ್ಟ... ಕೊರತೆಯ ನೆಪವೊಡ್ಡಿ ಶಿಕ್ಷಣ ವ್ಯವಸ್ಥೆಯ... ಖಾಸಗೀಕರಣಗೊಳಿಸಲು ಟೊಂಕಕಟ್ಟಿ ನಿಂತಿದ್ದಾರೆ.

1990ರಲ್ಲಿ ಅಧಿಕೃತವಾಗಿ ಖಾಸಗೀಕರಣ ಪ್ರಕ್ರಿ... ಭಾರತದಲ್ಲಿ ಪ್ರಾರಂಭವಾದಾಗ ಅನೇಕ ಗೆಳೆಯ... ಖಾಸಗೀಕರಣ ಮತ್ತು ಉದಾರೀಕರಣ ಅವಕಾಶವಂಚಿತ... ಒಂದು ವರದಾನವೆಂಬ ಮಾತನಾಡಿದ್ದರು. ಆದರೆ ಇಂ... ಖಾಸಗೀಕರಣ ಮತ್ತು ಅದರ ಮಾಲಿಕತ್ವ ಎಷ್ಟು ಪ್ರಬಲವ... ಬೆಳೆದಿದೆಯೆಂದರೆ ಈ ದೇಶದ ಕಾನೂನುಕಟ್ಟ... ನೀತಿ-ನಿಯಮಗಳನ್ನು ಗಾಳಿಗೆ ತೂರಿ ರಾಜ್ಯಕ್ಕೆ ಧವ... ಹಾಕುವ ಮಟ್ಟಕ್ಕೆ ಬೆಳೆದು ನಿಂತಿರುವುದು ಮು... ಒದಗಿಬರಬಹುದಾದ ಅಪಾಯದ ಮುನ್ಸೂಚನೆ.

ಈ ಎಲ್ಲಾ ಬೆಳವಣಿಗೆಗಳ ಹಿನ್ನೆಲೆಯಲ್ಲಿ, ಕೇಂ... ಸರ್ಕಾರವು ರೂಪಿಸಿರುವ ಉಚಿತ ಮತ್ತು ಕಡ್ಡಾ... ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯ್ದೆ 2009 ಹಲ... ಇತಿಮಿತಿ ಮತ್ತು ನ್ಯೂನತೆಗಳು ಕೂಡಿರುವ ಕಾಯ್ದೆಯಾಗಿ... ಈ ಎಲ್ಲಾ ಇತಿಮಿತಿಗಳ ನಡುವೆ ಮಕ್ಕಳ ಶಿಕ್ಷಣ... ಮೂಲಭೂತ ಹಕ್ಕಿನ ಹೋರಾಟವನ್ನು ಮುಂದುವ... ಸಮಾನ ಶಾಲಾ ಶಿಕ್ಷಣದ ತಾರ್ಕಿಕ ಗುರಿ ಮುಟ್ಟ... ಒಂದು ಸಾಧನವಾಗಿದೆ. ಹೀಗಾಗಿ, ರಾಜ್ಯದಲ್ಲಿ ... ಕಾಯ್ದೆಯನ್ನು ಜಾರಿಗೊಳಿಸುವ ಜೊತೆಜೊತೆಗೆ ಎ... ಮಕ್ಕಳಿಗೆ ಸಮಾನ ಗುಣಮಟ್ಟದ ಶಿಕ್ಷಣವನ್ನು ಒದಗಿಸು... "ಸಮಾನ ಶಾಲಾ ಶಿಕ್ಷಣ ವ್ಯವಸ್ಥೆ"ಯನ್ನು ನೆರೆಹೊರೆ... ತತ್ವದ ಮೇಲೆ ಕಟ್ಟಿಕೊಳ್ಳುವುದು ಇಂದಿನ ತುರ್ತು ಅಗತ್ಯವಾಗಿದೆ.

ಶಿಕ್ಷಣ ಹಕ್ಕು ಕಾಯಿದೆಯನ್ನು ರೂಪಿಸುವಾ... ಕಾಯ್ದೆಯಡಿಯಲ್ಲಿ ಶೇಕಡ ಕನಿಷ್ಠ 25ರಷ್ಟು ಸೀಟುಗಳ... ಅವಕಾಶವಂಚಿತ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗ... ಮಕ್ಕಳಿಗೆ ಮೀಸಲಿಡಬೇಕೆಂಬ ತತ್ವವನ್ನು ಸೇರಿಸಿದ ಆಶ... ವೇನೆಂದರೆ ದೇಶದ ಎಲ್ಲಾ ಶಾಲೆಗಳನ್ನು ಮುಖ್ಯವಾಹಿ...



ಮೂಲಕ ಶ್ರೇಣೀಕೃತವಲ್ಲದ ತಾರತಮ್ಯರಹಿತ ಸಮಾನ ನ್ನು ಕಟ್ಟಿಕೊಳ್ಳುವುದೇ ಹೊರತು ಬಡಮಕ್ಕಳ ಖಾಸಗಿಯವರಿಗೆ ಬಿಡಾರ್ಯ ಅಥವಾ ಕರುಣೆ ಸಲ್ಲ.

ಕ್ಷಣದ ಮೂಲಭೂತ ಹಕ್ಕನ್ನು ಜಾರಿಗೊಳಿಸುವ ದಲ್ಲಿ ರಾಜ್ಯದ ಪಾಲು ಗುರುತರವಾಗಿದ್ದು ಂದಿಗೆ ಕಾನೂನಿನ ಅಡಿಯಲ್ಲಿ ನೋಂದಣಿ ಸುವ ಶಿಕ್ಷಣ ಸಂಘ-ಸಂಸ್ಥೆಗಳ ಪಾಲು ಸಮಾನವಾಗಿ ಬುದು ಮುಖ್ಯವಾದ ಅಂಶ. ಒಂದು ರೀತಿಯಲ್ಲಿ ಘ-ಸಂಸ್ಥೆಗಳು ಸರ್ಕಾರದ ಏಜೆನ್ಸಿಗಳಿದ್ದಂತೆ. ಭೂತ ಹಕ್ಕನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಸಂಸ್ಥೆಗಳು ಸರ್ಕಾರದ ಜೊತೆ ಕೈಜೋಡಿಸಬೇಕಾದುದು ಅನಿವಾರ್ಯ.

ದರಂತೆ, ಶಿಕ್ಷಣ ಹಕ್ಕು ಕಾಯಿದೆಯ 12 ನೇ ದ ಉಪ-ಖಂಡ (ಸಿ) ಅಡಿಯಲ್ಲಿ, ಖಾಸಗಿ ನರಹಿತ ಶಾಲೆಗಳು ಒಂದನೇ ತರಗತಿಯ ಒಟ್ಟು ಗಳ ಸಂಖ್ಯೆಯ ಕನಿಷ್ಠ ಶೇಕಡಾ ಇಪ್ಪತ್ತೈದರಷ್ಟು ಗಳನ್ನು ನೆರೆಹೊರೆಯ ದುರ್ಬಲ ವರ್ಗಕ್ಕೆ ಮತ್ತು ಲಸ್ಥರಲ್ಲದ ಗುಂಪಿಗೆ ಸೇರಿರುವ ಮಕ್ಕಳಿಗೆ ಪ್ರವೇಶ ಅವರ ಶಿಕ್ಷಣ ಮುಗಿಯುವವರೆಗೆ ಉಚಿತ ಮತ್ತು ಪ್ರಾಥಮಿಕ ಶಿಕ್ಷಣವನ್ನು ಒದಗಿಸಬೇಕು. ವಾಗಿದು, ಈ ಶಾಲೆಗಳು ಶಾಲಾ ಪೂರ್ವ ಶಿಕ್ಷಣ ದ್ದಲ್ಲಿ, ಮೇಲಿನ ಅವಕಾಶ ಮಗುವನ್ನು ಶಾಲಾ ಶಿಕ್ಷಣಕ್ಕೆ ಸೇರಿಸಿಕೊಳ್ಳುವುದಕ್ಕೆ ಅನ್ವಯಿಸುತ್ತದೆ. ದರೆ, ರಾಜ್ಯದಲ್ಲಿ ಶಿಕ್ಷಣ ಹಕ್ಕು ಕಾಯ್ದೆಯ ನದ ಸಂದರ್ಭದಲ್ಲಿ ಖಾಸಗಿ ಶಾಲೆಗಳು ಹುಟ್ಟು ವ ವಿವಾದಗಳನ್ನು ಗಮನಿಸಿದರೆ ಕಳೆದ 64 ಗಳಲ್ಲಿ ನಾವು ಕಟ್ಟಿಕೊಂಡ ನಾಗರಿಕ ಸಮಾಜ ಪರಸ್ಪರ , ಸಮನ್ವಯತೆ ಮತ್ತು ಸಹಬಾಳ್ವೆಯನ್ನು ಸಾಧಿಸುವ ಶೋಷಣೆ, ಲಾಭದ ದಾಹ ಮತ್ತು ಜನರ ಯಕತೆಯನ್ನು ಬಂಡವಾಳವನ್ನಾಗಿಸಿಕೊಂಡು ಕಿತ್ತು ಸಂಸ್ಕೃತಿಯನ್ನು ಮೈಗೂಡಿಸಿಕೊಂಡಂತಿದೆ.

ಮ್ಮ ರಾಜ್ಯದ ಖಾಸಗೀ ಅನುದಾನರಹಿತ ಶಾಲೆಗಳ ೀಧೋರಣೆಯನ್ನು ಗಮನಿಸಿದರೆ ಅವು ಸಂಸ್ಥೆಗಳನ್ನು ಸ್ಥಾಪಿಸಿಕೊಂಡಿರುವುದು ಸಮಾಜ ಂತಲೂ ಹೆಚ್ಚಾಗಿ ಲಾಭಗಳಿಸುವ ಉದ್ದೇಶವೇ ವಾದಂತಿದೆ. ರಾಜ್ಯದಲ್ಲಿ ಶಿಕ್ಷಣ ಹಕ್ಕು ಕಾಯ್ದೆಯ ನದಲ್ಲಿ ಖಾಸಗಿ ಶಾಲೆಗಳು ನಡೆದುಕೊಳ್ಳುತ್ತಿರುವ ತಲೆತಗ್ಗಿಸುವಂತಿದೆ. ರಾಜ್ಯವು ಖಾಸಗೀ ಶಾಲೆಗಳನ್ನು ಸಿ ಬಲವಂತದಿಂದ ಶಿಕ್ಷಣವನ್ನು ಒದಗಿಸಬೇಕೆಂಬ ಯುವನ್ನು ಎಂದೂ ಮಾಡಿಲ್ಲ. ಅವರೇ ಪ್ರೇರಣೆಯಿಂದ ಶಾಲೆ ತೆರೆದು ನಾಡಿನ ಕಾನೂನಿನ ನಲ್ಲಿ ನೋಂದಾಯಿಸಿ ಎಲ್ಲಾ ನೀತಿ-ನಿಯಮಗಳನ್ನು ವುದಾಗಿ ಒಪ್ಪಿ ಶಾಲೆಗಳನ್ನು ಪ್ರಾರಂಭಿಸಿ ಈಗ ಕಾನೂನನ್ನು ಗೌರವಿಸದಿರುವುದು ಎಷ್ಟರಮಟ್ಟಿಗೆ ಈಗಾಗಲೇ ಖಾಸಗಿ ಶಾಲೆಗಳಲ್ಲಿ ಕಲಿಯುತ್ತಿರುವ ಮತ್ತು ಅವರ ತಂದೆ-ತಾಯಂದಿರು ಶಾಲಾ ತವರ್ಗ ನೀಡುವ ಎಲ್ಲ ದೌರ್ಜನ್ಯಗಳನ್ನು ಕಪ್ರೇಕ್ಷಕರಾಗಿ ಸಹಿಸುತ್ತಿರುವ ಬಗ್ಗೆ ಅನೇಕ ಹರಣೆಗಳಿವೆ. ಮಕ್ಕಳು ಮತ್ತು ತಂದೆ-ತಾಯಂದಿರ ಯಕತೆಯನ್ನು ಬಂಡವಾಳವನ್ನಾಗಿಸಿಕೊಂಡಿರುವ ೀ ಸಂಸ್ಥೆಗಳು ಜನರನ್ನು ನಿರಂತರವಾಗಿ ಶೋಷಿಸಿ ವನ್ನು ಪಡೆಯುತ್ತಿರುವುದಲ್ಲದೇ ಪರ್ಯಾಯವಾಗಿ ದೇ ಸಾಮ್ರಾಜ್ಯವನ್ನು ನಿರ್ಮಿಸಿಕೊಂಡಿದ್ದಾರೆ.


ರಾಜ್ಯದಲ್ಲಿ ಖಾಸಗೀ ಶಾಲೆಗಳ ಸ್ವೇಚ್ಛಾಚಾರ, ಲಾಭಕೋರ ದಬ್ಬಾಳಿಕೆ-ದಮನಕಾರಿ ನೀತಿಯ ಬಗ್ಗೆ ರಾಜ್ಯ ರಕ್ಕೆ ಸ್ಪಷ್ಟವಾಗಿ ತಿಳಿದಿದ್ದರೂ ಖಾಸಗೀ ಸಂಸ್ಥೆಗಳಿಗೆ ಣ ಹಾಕುವ ಯಾವುದೇ ಕ್ರಮವನ್ನು ಳ್ಳದಿರುವುದು ಸರ್ಕಾರ ಖಾಸಗಿ ಶಾಲೆಗಳ ಮಾಲೀಕರ ಶಾಮೀಲಾಗಿರುವುದು ಸ್ಪಷ್ಟವಾಗಿ ತಿಳಿಯುತ್ತದೆ. ಟಕ ರಾಜ್ಯದಲ್ಲಿ ಹಿಂದೊಮ್ಮೆ ಹೆಂಡದ ದೊರೆಗಳು ದ ರಾಜಕೀಯವನ್ನು ನಿಯಂತ್ರಿಸುತ್ತಿದ್ದಂತೆ ಇಂದು ಗೀ ಶಾಲೆಗಳನ್ನು ನಡೆಸುತ್ತಿರುವ ರಾಜಕಾರಣಿಗಳು, ಿಗಳು ಮತ್ತು ಮಠಾಧೀಶರು ಇಂದಿನ ಕೀಯವನ್ನು ನಿಯಂತ್ರಿಸುತ್ತಿದ್ದಾರೆ. ಅಂದು ಹೆಂಡದ ಇಂದು ಖಾಸಗೀ ಶಿಕ್ಷಣ ಸಂಸ್ಥೆಗಳ ಲಾಬಿ.

ದರೆ ಇದಕ್ಕೆ ಹೊರತಾಗಿ ಎಲ್ಲಾ ಮಕ್ಕಳಿಗೆ ಗುಣಾತ್ಮಕ ವನ್ನು ಒದಗಿಸಬಲ್ಲ ಸಮಾನ ಶಾಲಾಶಿಕ್ಷಣದ ಯನ್ನು ಕಟ್ಟಿಕೊಳ್ಳಲು ಜನಾಂದೋಲನವನ್ನು ಸುವ ಪ್ರಕ್ರಿಯೆ ಮಾತ್ರ ಈ ಎಲ್ಲ ಸಮಸ್ಯೆಗಳಿಗೆ ಪರಿಹಾರವಾಗಬಲ್ಲದು. ಈ ಬಗ್ಗೆ ಕರ್ನಾಟಕದ ಜನರು ಗಂಭೀರವಾಗಿ ಯೋಚಿಸಬೇಕಾಗಿದೆ.

- ಡಾ.ವಿ.ಪಿ.ನಿರಂಜನಾರಾಧ್ಯ
ಫೆಲೋ ಮತ್ತು ಶಾಲಾ ಶಿಕ್ಷಣದ
ಸಾರ್ವತ್ರೀಕರಣ ಕಾರ್ಯಕ್ರಮ ಮುಖ್ಯಸ್ಥರು,
ಮಗು ಮತ್ತು ಕಾನೂನು ಕೇಂದ್ರ,
ಭಾರತ ವಿಶ್ವವಿದ್ಯಾಲಯದ
ರಾಷ್ಟ್ರೀಯ ಕಾನೂನು ಶಾಲೆ, ಬೆಂಗಳೂರು.

ಸಂಸ್ಕೃತ ಕತ್ತರಿಯಲ್ಲಿ ಕನ್ನಡ ಮಗುವಿನ ಕೊರಳು

ಕೆಳಜಾತಿಗಳು ಮೇಲುಜಾತಿಗಳನ್ನು ಅನುಸರಿಸುತ್ತವೆ ಎಂದು ಪಾರಂಪರಿಕ ಸಮಾಜಶಾಸ್ತ್ರ ವಿವರಿಸುತ್ತದೆ. ಕಲಿಯುವ ದಾರಿಯಲ್ಲಿಯಂತೂ ಬೋಧಿಸುವ-ಉಪದೇಶಿಸುವ ಬುದ್ಧಿವಂತರು ಎಂದು ಇವತ್ತಿಗೂ ಮೇಲುಜಾತಿಯಾದ ಬ್ರಾಹ್ಮಣರ ಕಡೆಗೆ ಕೈಮರವನ್ನು ನಿಲ್ಲಿಸಲಾಗಿದೆ. ಇದನ್ನೇ ಬಂಡವಾಳ ಮಾಡಿಕೊಂಡಿರುವ ಇವತ್ತಿನ ಹೊಸಹೊಸ ಮಾದರಿಯ ಅಂತರರಾಷ್ಟ್ರೀಯ ಹೆಸರಿನ ಶಾಲೆಗಳು ಗುರುಕುಲ ಮಾದರಿಯ ರೆಸಾರ್ಟ್‌ಗಳಾಗಿವೆ. ಸಂಸ್ಕೃತದ ತಮ್ಮನಂತೆಯೋ, ಅಣ್ಣನಂತೆಯೋ ಜಗತ್ತಿಗೇ 'ಪವಿತ್ರ'ವಾಗಿರುವ ಇಂಗ್ಲಿಷನ್ನೂ ಗುರುಕುಲದ ಮಾದರಿಯಲ್ಲಿ ಕಲಿಸುತ್ತೇವೆ ಎಂದು ನಮ್ಮ ಸುತ್ತಲ ಶಾಲೆಗಳಲ್ಲಿ ವಾಲಗ ಬಾರಿಸಲಾಗುತ್ತಿದೆ.



ಜಾಗತಿಕ ನಾಲೆಡ್ಜಿನ ಟೈ-ಬೂಟು ತೊಟ್ಟಿರುವ ಇಂಗ್ಲಿಷಿನ ಎದುರು ಕನ್ನಡ ಮಕ್ಕಳನ್ನು ಈಗಾಗಲೇ ಬಡಪಾಯಿಗಳನ್ನಾಗಿ ಮಾಡಿ ಕೂರಿಸಲಾಗಿದೆ. ಇಂಗ್ಲಿಷ್, ಸಂಸ್ಕೃತ ಕಲಿಯದವರ ಬಡಪಾಯಿ ನುಡಿ ಕನ್ನಡ ಎಂದು ಬಿಂಬಿಸಲಾಗಿದೆ. ಸಂಸ್ಕೃತ ಕಮ್ ಇಂಗ್ಲಿಷ್ ಬಲ್ಲವರು 'ಅಯ್ಯೋ ಪಾಪ ಅಂತ ಕಳೆದ ನೂರಕ್ಕೂ ಹೆಚ್ಚು ವರ್ಷಗಳಿಂದ ಕನ್ನಡವನ್ನು ನಡೆಸಿಕೊಂಡು ಬರುತ್ತಿದ್ದೇವೆ' ಎಂದು ಭಾವಿಸಿದ್ದಾರೆ. ಸಂಸ್ಕೃತ ಇಲ್ಲದೆ ಕನ್ನಡಕ್ಕೆ ಬಲ ಇಲ್ಲ, ಇಂಗ್ಲಿಷ್ ಇಲ್ಲದೆ ಉಳಿಗಾಲವಿಲ್ಲ ಎಂದು ಅವರೆಲ್ಲ ಜನರನ್ನು ನಂಬಿಸುತ್ತಲೇ ಇದ್ದಾರೆ.

ಇಂತಹ ಅಭಿಪ್ರಾಯವೊಂದು ಕನ್ನಡ ಮನಸ್ಸುಗಳಲ್ಲಿ ಬೇರು ಬಿಟ್ಟಿದ್ದಾದರೂ ಹೇಗೆ? ಗಂಟಲಿಗೆ ಗಾಳ ಹಾಕಿದಂತೆ ವರ್ತಿಸುವ ಇಂತಹ ಹಿಡನ್ ನಡವಳಿಕೆಗಳೊಳಗಿರುವ ಕುತಂತ್ರಗಳು ಎಂಥವು? ಇವತ್ತಿನ ಕೋಮುವಾದದ ಅಜೆಂಡಾಗಳಿಗೆ ಹೊಂದಿಸಿಕೊಂಡು ನಿಜಬದುಕಿನ ಬೇರುಗಳನ್ನು ಕತ್ತರಿಸಲು ಇವು ಹೇಗೆ ನೆರವಾಗಿವೆ ಎನ್ನುವುದನ್ನು ತಿಳಿಯಲು ಒಂದನೇ ಕ್ಲಾಸಿನ 'ಕನ್ನಡ ಕಲಿ-ನಲಿ' ಪುಸ್ತಕವನ್ನು ನೋಡಿದರೆ ಅರ್ಥವಾಗುತ್ತದೆ. ಜಗತ್ತಿನ ತಿಳಿವಳಿಕೆಯನ್ನು ಕನ್ನಡದಲ್ಲಿ ಅರ್ಥಮಾಡಿಕೊಳ್ಳಲು ಆಗುವುದಿಲ್ಲ ಎಂಬ ಸುಳ್ಳು ಗ್ರಹಿಕೆಗಳು ಹೇಗೆ ಹರಡಲಾಗುತ್ತದೆ ಎನ್ನುವುದೂ ಇದರಿಂದ ಗೊತ್ತಾಗುತ್ತದೆ.

'ಕನ್ನಡ ಕಲಿ-ನಲಿ' ಪುಸ್ತಕದಲ್ಲಿ ಮಕ್ಕಳ ಬದುಕಿನ ಸಂಗತಿಗಳು ಎಷ್ಟಿವೆ, ಕನ್ನಡ ಪದಗಳು ಎಷ್ಟಿವೆ, ಆ ಪದಗಳನ್ನು ಕೂಡಿಸಿ ಮಾಡಿದ ವಾಕ್ಯಗಳು ಎಷ್ಟಿವೆ, ಕನ್ನಡ ವಾಕ್ಯಗಳನ್ನು ಅರಿಯಲು-ಕಟ್ಟಲು ಬೇಕಾದ ಪದ ಸಂಗತಿಗಳು ಎಷ್ಟಿವೆ, ಕನ್ನಡದ ಜಾಯಮಾನ ಅನ್ನೋದೇನಾದರೂ ಅದರಲ್ಲಿದೆಯೇ ಎಂದು ನೋಡಬೇಕಾದ ಪರಿಸ್ಥಿತಿ ನಮ್ಮೆದುರಿಗಿದೆ. ಯಾಕೆಂದರೆ ಒಂದನೇ ಕ್ಲಾಸಿನ ಈ ಕನ್ನಡ ಪುಸ್ತಕ ಸಂಸ್ಕೃತ ಪದಗಳಿಂದ ತುಂಬಿಹೋಗಿದೆ!

ಉದಾಹರಣೆಗೆ ಆ ಪುಸ್ತಕದಲ್ಲಿರುವ ಹಲವು ಪದಗಳನ್ನು ನೋಡಿ:

ಉದರ, ಉರಗ, ಪವನ, ನಯನ, ಇನ, ತನಯ, ಹಯ, ಶರ, ಶತಕ, ಋಣ, ಋತ, ಮಥನ, ಅಭಯ, ಆಭರಣ, ಶಪಥ, ಘಟ, ಝಳ, ಖಗ, ಘನರವ, ಅಂತಃಕರಣ, ಅಂತಃಕಲಹ, ಅನುಸ್ವಾರ, ವಿಸರ್ಗ, ವ್ಯಂಜನಾಕ್ಷರ, ವರ್ಗೀಯ, ಅವರ್ಗೀಯ, ಲವಣ, ಶಯನ, ಪಹರ, ಅನುಕರಣ, ಸಜ್ಜೆ, ಅರುಣೋದಯ, ಸಭಾಪತಿ, ವೈಭವ, ಪಾರಿತೋಷಕ, ಸ್ವರಾಕ್ಷರ, ಐರಾವತ, ಅಂತಃಪುರ, ಆಯುಧ, ಅಭ್ಯಾಗತ, ಅಧ್ಯಯನ, ಶೃಂಗರಿಸು, ಸ್ವಸ್ಥ, ಸೌಖ್ಯ, ಗೃಹ, ಅಶನ, ಭೋಜನ, ರಿಣ, ಐಕ್ಯಮತ್ಯ, ಆಚಾರ್ಯ, ಓಜಸ್ಸು, ಭೋಜನ, ಔತಣ, ಅಕ್ಷಿ, ನೇತ್ರ, ನಿರೂಪಣೆ, ಜಲಚರ, ಮಂಡೂಕ, ಅಶ್ವ, ತುರಗ, ಹಯ, ಪರ, ಪಚನ, ಪಟ್, ಪಡಂಗ....

ಅಲ್ಲಿಗೆ ನಿಲ್ಲುವುದಿಲ್ಲ ಸಂಸ್ಕೃತದ ಹೇರುವಿಕೆ. ಈ ಪದಗಳಿಗೇನು ತಿರುಳು ಎಂದು ಮಕ್ಕಳಿಗೆ ಪಾಠ ಕಲಿಸುವವರಿಗೂ ತಿಳಿಯದ ಪದಬಳಕೆಯೂ ಈ ಪುಸ್ತಕದಲ್ಲಿದೆ. ಅದಕ್ಕೆ ಇಲ್ಲಿವೆ ಹಲವು ಉದಾಹರಣೆಗಳು:

ಶಶಕ, ಔಜಸ, ಐದಳ, ಭಗ, ಐಲ, ಏರಂಡ, ಏವ, ಔರಸ, ಖರ, ಜಲಿಜಲಿ, ಲಗಡ, ಊಷರ, ಊರ, ಏಡ, ಸಳ, ಔಜಸ, ಛದ, ಐಲ, ಘನರವ, ಝಳಪ, ಶಶಕ, ಠಕಣ, ಮುರಾ, ನ್ಯಗ್ರೋಧ, ವಾಯಸ, ಚಮರ....

ವಿಪರ್ಯಾಸದ ಸಂಗತಿ ಯಾವುದೆಂದರೆ ಒಂದನೇ ತರಗತಿಗೆ ಇಡಲಾಗಿರುವ ಈ ಕನ್ನಡ ಪುಸ್ತಕದಲ್ಲಿ ಪದಗಳ ತಿರುಳನ್ನು ಹೇಳಲೂ ಸಂಸ್ಕೃತ ಪದಗಳನ್ನೇ ಬಳಸಲಾಗಿದೆ. ಉದಾಹರಣೆಗಳು:

ವನ (ಅರಣ್ಯ, ಕಾನನ), ಬಕ (ಒಂದು ಜಾತಿಯ ಜಲಚರ ಪಕ್ಷಿ), ಒಗ್ಗಟ್ಟು (ಐಕಮತ್ಯ), ಸುದ್ದಿ (ಸಮಾಚಾರ), ಅತಿಥಿ (ಅಭ್ಯಾಗತ), ಆಲ (ನ್ಯಗ್ರೋದ), ಉದರ (ಗರ್ಭ), ಹಗರಣ (ಪ್ರಕರಣ, ಘಟನೆ), ಸಭಾಪತಿ (ಸಭಾಧ್ಯಕ್ಷ), ಸಫಲ (ಯಶಸ್ಸು, ಸಾರ್ಥಕ), ಸಗರ (ಸೂರ್ಯವಂಶದ ಅರಸು), ಪರ (ವಿಮರ್ಶೆಯ ನುಡಿ, ಅಭಿಪ್ರಾಯ).

ಇದೆಲ್ಲದರ ಜೊತೆಗೆ, ಈ ಪುಸ್ತಕದಲ್ಲಿ ಒಂದು 'ಅರ್ಥಸಹಿತ ಪದಕೋಶ' ಇದೆ. ಇಂತಿಷ್ಟು ಪದಗಳನ್ನು ಪರಿಚಯಿಸಬೇಕೆಂಬ ಷರತ್ತಿನ ಈ ಪದಕೋಶಿಯಲ್ಲಿ ಸುಮಾರು 300 ಪದಗಳಿವೆ. ಇವುಗಳಲ್ಲಿ 212 ಕನ್ನಡ ಪದಗಳಾಗಿದ್ದರೆ, 90ಕ್ಕೂ ಹೆಚ್ಚು ಸಂಸ್ಕೃತ ಪದಗಳಿವೆ.

ಓದಿ - ಹೇಳಿ

ಜೇಬು=ಕಿಸೆ, ಬೊಕ್ಕಣ; ಹಣ=ದುಡ್ಡು, ಕಾಸು, ರೊಕ್ಕ; ಬಕ= ಕೊಕ್ಕರೆ, ಒಂದು ಜಾತಿಯ ಜಲಚರ ಪಕ್ಷಿ; ಮೊಕ=ಮುಖ, ಮೊಗ; ವನ=ಬನ, ಕಾಡು, ಅರಣ್ಯ, ಕಾನನ;

ಗಮನಿಸಿ-ಹೇಳಿ

ಗೊಲ್ಲ-ಗೋವುಗಳನ್ನು ಕಾಯುವವ, ಗೋವಳ, ಗೋಪಾಲ;
ಗೊಲ್ಲನುಲಿ-ಗೊಲ್ಲನ ಕೊಳಲಿನ ನಾದ (ಧ್ವನಿ);

ಅಭ್ಯಾಸ

ಅ. ಒಂದು ಪದದಲ್ಲಿ ಉತ್ತರ ಹೇಳಿಸಿ
೧. ಜೇಬು ತುಂಬ ಏನಿದೆ?
೨. ಬಕ ಎಲ್ಲಿದೆ?
೩. ಬಕ ಹೇಗೆ ಕುಣಿಯುತಿತ್ತು?
೪. ವನದ ಬಣ್ಣ ಯಾವುದು?
೫. ಗೊಲ್ಲ ಎಲ್ಲಿರುವನು?

ಆ. ಹೊಂದಿಸಿ ಹೇಳಿಸಿ

ಅ	ಬ
ಜೇಬು	ವನ
ಹಸುರು	ಬಕ
ನದಿ	ಹಣ

ಇಲ್ಲಿ ಮಕ್ಕಳಿಗೆ ಗೊತ್ತಾಗುವ ಪದಗಳಿಗೂ ತಿರುಳನ್ನು ಹೇಳಲು ಹೋಗಿ ಮಕ್ಕಳಿಗೆ ತಿಳಿಯಲು ಕಷ್ಟವೆನಿಸುವ ಸಂಸ್ಕೃತ ಪದಗಳನ್ನೇ ಕೊಡಲಾಗಿದೆ. ಇಲ್ಲವೇ ತದ್ಭವಗಳನ್ನು ಹೇಳಲಾಗಿದೆ. ಉದಾಹರಣೆಗಳು:

ಅತಿಥಿ-ಅಭ್ಯಾಗತ, ಅಲಂಕರಿಸು-ಶೃಂಗರಿಸು, ಆರೋಗ್ಯ-ಸ್ವಸ್ಥ, ಆಲ-ನ್ಯಗ್ರೋದ, ಆಳ-ಅಗಾಧ, ಊಟ-ಅಶನ, ಋಣ-ರಿಣ, ಋತ-ರಿತ, ಕಣ್ಣು-ಅಕ್ಷಿ ನೇತ್ರ, ಕಾಳು-ಧಾನ್ಯ, ಮಗ-ಪುತ್ರ....

ಹೀಗೆ ತಿರುಳಾಗಿ ಕೊಟ್ಟಿರುವ ಪದಗಳಲ್ಲಿ ಸಂಸ್ಕೃತ ಪದಗಳೇ ಸುಮಾರು 300ಕ್ಕೂ ಹೆಚ್ಚಿವೆ. ಜೊತೆಗೆ ವ್ಯಕ್ತಿ, ಪ್ರಾಣಿಗಳನ್ನು ಪರಿಚಯಿಸುವಾಗಲೂ ಸಂಸ್ಕೃತ ಪದಗಳನ್ನೇ ಬಳಸಲಾಗಿದೆ. ಉದಾಹರಣೆಗೆ: ಆನೆ (ಗಜ, ಕರಿ), ಕಪ್ಪೆ (ಜಲಚರ ಜೀವಿ, ಮಂಡೂಕ), ಕಾಗೆ (ವಾಯಸ), ಕುದುರೆ (ಅಶ್ವ, ತುರಗ), ಭರತ (ಒಬ್ಬ ಮುನಿ), ಹುಲಿ (ವನ್ಯಜೀವಿ, ವ್ಯಾಘ್ರ)...

ಇದೆಲ್ಲವನ್ನು ಗಮನಿಸಿದರೆ, ಯಾವ ಅಗ್ರಹಾರದಲ್ಲಿ ಕುಳಿತು ಪಾಠ ಹೇಳಿಕೊಡುತ್ತಿರುವವರು ಕನ್ನಡ ಕಲಿಸುವ ಈ ಪಠ್ಯಪುಸ್ತಕವನ್ನು ತಯಾರಿಸಿದರು? ಅದಕ್ಕಾಗಿ ಎಷ್ಟು ದಿನ ತಪಸ್ಸು ಮಾಡಿದರು? ಅವರ ದೇಹದಲ್ಲಿ ಕನ್ನಡದ್ದೇ ನರಗಳು ನಿಜಕ್ಕೂ ಕೆಲಸ ಮಾಡುತ್ತಾ ಇವೆಯಾ? ಈ ನೆಲದ ಅನ್ನ ಉಣ್ಣುತ್ತಿರುವ ಮೈ, ಈ ನೆಲದ ಮೇಲೆಯೇ ಮಲಗಿ ಕನಸು ಕಾಣುತ್ತಿರುವ ಮನಸು ಅವರಿಗೆ ಇದೆಯಾ? ಸಂಸ್ಕೃತದ ಈ ಎಂಜಲನ್ನು ಕನ್ನಡ ಕಲಿಯುವ ಮಕ್ಕಳ ಬಾಯಿಗೆ ಬಳಿಯಲು ಎಷ್ಟೆಲ್ಲಾ ಟೀಚರುಗಳು ಟೊಂಕಕಟ್ಟಿ ನಿಲ್ಲಬೇಕು? ಕಲಿಸುವ ನೆಪದಲ್ಲಿ ಕಲಿಯುವವರ ಬದುಕಿನ ಬೇರುಗಳನ್ನು ಹೀಗೆ ಕತ್ತರಿಸಿ ಹಾಕಲು ಇಂಥವರಿಗೆ ಹಕ್ಕು ಕೊಟ್ಟವರು ಯಾರು? ಎಂದೆಲ್ಲಾ ಕೇಳಬೇಕು ಅನಿಸುತ್ತದೆ.

ಕನ್ನಡದ ಮಕ್ಕಳು ನಿಜಕ್ಕೂ ಕನ್ನಡವನ್ನು ಕಲಿಯುವ ಸನ್ನಿವೇಶವಿದೆಯೆಂದಾದರೆ ಅದು ಕನ್ನಡದ ಚಹರೆಯಲ್ಲಿಯೇ ಇರಬೇಕು. ಆದರೆ ಈ ಪುಸ್ತಕವನ್ನು ನೋಡಿದರೆ ನಮ್ಮ ಮಕ್ಕಳು ಕಲಿಯುತ್ತಿರುವ ಕನ್ನಡ ನಮ್ಮದಲ್ಲ ಎನ್ನುವಂತಾಗಿದೆ. ಸಂಸ್ಕೃತವನ್ನು ಕಲಿಯುವ ಕಟ್ಟುಗಳು, ಇಂಗ್ಲಿಷನ್ನು ಓದುವ ನಿಲುವುಗಳು ಕನ್ನಡ ಕಲಿಯುವ ಮಕ್ಕಳ ತಿಳಿವು ಕನ್ನಡದಲ್ಲಿ ಬೆಳೆಯದಂತೆ ಕಟ್ಟಿಹಾಕಲಾಗಿದೆ. ಯಾಕೆಂದರೆ, ನಮ್ಮ ಪ್ರೈಮರಿ ಕನ್ನಡ ಕಲಿಕೆಯ ಪುಸ್ತಕಗಳು ಇಂಗ್ಲಿಷ್‌ನಿಂದ ತಂದುಕೊಂಡ 'ಭಾಷಾವಿಜ್ಞಾನ'ದ ಪದ್ಧತಿಗಳಿಗೆ ಸಂಸ್ಕೃತದ ನುಡಿಕಟ್ಟುಗಳನ್ನು ಹೊಂದಿಸಿ ರೂಪಿಸಿದವುಗಳಾಗಿವೆ. ಇವು 'ಸಂಸ್ಕೃತಗನ್ನಡ'ವನ್ನು ಹುಟ್ಟುಹಾಕಿ ತಳಸಮುದಾಯಗಳನ್ನು ಕೀಳರಿಮೆಯಲ್ಲೇ ಬಿದ್ದಿರುವಂತೆ ಮಾಡುತ್ತವೆ.

ಕೆಳಜಾತಿಗಳು ಬುದ್ಧಿವಂತರಾಗಬೇಕಾದರೆ ಅವರೂ ಸಂಸ್ಕೃತ ಕಲಿಯಲಿ, ಇಂಗ್ಲಿಷ್ ಕಲಿಯಲಿ, ನಾವು ಬೇಡ ಅಂದಿದ್ದೇವೆಯೇ, ಕನ್ನಡವನ್ನೇ ಸರಿಯಾಗಿ ಕಲಿಯದವರು ಇನ್ನು ಇವನ್ನು ಕಲಿತಾರೆಯೇ? ಎಂಬ ಅಣಕ ಮಾತ್ರ ನಮಗೆ ಈ ಪುಸ್ತಕದಲ್ಲಿ ಎದ್ದು ಕಾಣಿಸುತ್ತದೆ. ಆದರೆ ನಾವು ಎದುರಿಸಬೇಕಾಗಿರುವುದು ಈ ಅಣಕವನ್ನಲ್ಲ, ಇಂತಹ ಅಣಕಗಳು ಹುಟ್ಟಲು ಕಾರಣವಾದ ಸಂಗತಿಗಳನ್ನು.

ಇವು ಕೇವಲ ಮೇಲುನೋಟಕ್ಕೆ ಕಾಣಸಿಗುವ ಕೆಲವು ಸಂಗತಿಗಳು ಮಾತ್ರ. ಹೀಗೆ ನೂರಾರು ಪದಗಳು, ಪದಸಂಗತಿಗಳು, ಚಿತ್ರಗಳು 'ನೋಡಿ ಕಲಿ', 'ಆಡಿ ಕಲಿ', 'ಓದಿ ತಿಳಿ' ಎಂಬ ನಮ್ಮ ಮಕ್ಕಳು ಕಲಿಯುವ ಪುಸ್ತಕಗಳಲ್ಲಿವೆ. ಹೀಗೆ ಸಂಸ್ಕೃತ ಪದಗಳನ್ನು ನಮ್ಮ ಮಕ್ಕಳ ಮೇಲೆ ಹೇರುತ್ತಾ, ಮಕ್ಕಳಿಗೆ ಗೊತ್ತಿರುವ ಕನ್ನಡ ಪದಗಳನ್ನೂ ಅವರ ನೆನಪಿನಲ್ಲಿ ಉಳಿಯದಂತೆ ಮಾಡುವ ಷಡ್ಯಂತ್ರ ಇದರಲ್ಲಿ ಅಡಗಿದೆ.


ಶಾಲೆಗೆ ಬರುವ ಮಗುವಿಗೆ ತಾನು ಕಲಿಯಬೇಕಾದ ಬರವಣಿಗೆ ಮತ್ತು ಇತರೆ ಸಂಗತಿಗಳು ತಾನು ಆಡುತ್ತಿರುವ ಮಾತಿಗೆ, ತಾನು ಬೆಳೆಯುತ್ತಿರುವ ಸುತ್ತಮುತ್ತಲಿನ ಜಾಗದ್ದು, ಜನದ್ದು ಎನಿಸಬೇಕಾಗಿರುವುದು ಸಹಜವೂ ಅಗತ್ಯವೂ ಆಗಿದೆ. ಹೀಗಾದಾಗ ಮಾತ್ರ ತಾನಾಡುವ ನುಡಿಯ ಬೇರೆಬೇರೆ ಬಳಕೆಯ ಚಳಕಗಳನ್ನು ಮಕ್ಕಳು ಕಲಿಯುವುದು ಸಲೀಸಾಗುತ್ತದೆ. ತನ್ನ ಬದುಕಿನ, ಸುತ್ತಮುತ್ತಲಿನ ಪರಿಚಿತ ಸಂಗತಿಗಳನ್ನು ಅನುಸರಿಸಿದಾಗ ಸುಲಭವೂ ಆಗುತ್ತದೆ. ಹಾಗೆ ಕಲಿಯುತ್ತಿರುವುದು, ತನ್ನದು, ತಾನು ಬದುಕುತ್ತಿರುವ ಸನ್ನಿವೇಶದ್ದು, ತನಗೆ ಬೇಕಾದದ್ದು ಅನಿಸುತ್ತದೆ. ಹಾಗನಿಸದೇ ಹೋಗುವ ಎಲ್ಲಾ ಕಲಿಕೆಗಳೂ ಕೀಳರಿಮೆಯನ್ನೇ ಮಕ್ಕಳಲ್ಲಿ ಮೂಡಿಸುತ್ತವೆ. ಇದೆಲ್ಲಾ ತಿಳಿಯದಷ್ಟು ಹೊಣೆಗೇಡಿಗಳಾಗಿ ದ್ದಾರೆಯೇ ಪಠ್ಯಪುಸ್ತಕಗಳನ್ನು ಮಾಡುವ ನಮ್ಮ ಎಕ್ಸ್‌ಪರ್ಟ್‌ಗಳು?

-ಡಾ.ಆರ್.ಚಲಪತಿ


ನೀರಿನಿಂದ ಹೊರಬಿದ್ದ ಮೀನು

ಹೊಸದಾಗಿ ಪ್ರಾರಂಭವಾಗಿದ್ದ ಇಂಡೋ-ನಾರ್ವೆ ಪ್ರಾಜೆಕ್ಟ್‌ನ ಅಂಗಡಿಯನ್ನು ನಾನು ಪ್ರತಿ ಸಾರಿ ಹಾದುಹೋಗುವಾಗಲೂ ನನ್ನ ಹೃದಯ ಖುಷಿಯುತ್ತಿತ್ತು. ಅಲ್ಲಿ ಪಶ್ಚಿಮ ಕರಾವಳಿಯಿಂದ ಬಂದ ಹುರಿಯಲು, ಕರಿಯಲು ಅದ್ಭುತವಾದ ಮೀನುಗಳನ್ನು ಕೊಳ್ಳಬಹುದೆಂದು ನನಗೆ ಗೊತ್ತಿತ್ತು.

ಆದರೂ ಅಲ್ಲಿ ನಾನು ಮೀನು ಕೊಳ್ಳುವಂತಿರಲಿಲ್ಲ, ಏಕೆಂದರೆ ಬಹುಜನ ಶಾಖಾಹಾರಿಗಳಿರುವ ಬಡಾವಣೆಯಲ್ಲಿ ನನ್ನ ವಾಸ. ಬಾಯಲ್ಲಿ ನೀರೂರಿಸುವ ವಾಸನೆ ಬೀರದಂತೆ ಮೀನನ್ನು ಹುರಿಯುವ ಕಲೆ ಇನ್ನು ಯಾರಿಗೂ ಸಿದ್ಧಿಸಿಲ್ಲ, ನನಗೆ 'ಘಮ ಘಮ' ಎನಿಸುವ ಹುರಿದ ಮೀನಿನ ಆರೋಮಾ ನಮ್ಮ ಬಡಾವಣೆಯ ಶಾಖಾಹಾರಿಗಳಿಗೆ ಸಹಿಸಲಸಾಧ್ಯವಾದ ಗಬ್ಬು! ಅವರಿಗಾಗಿ ನಾನು ಸಾಧಿಸಿದ್ದ ಮನೋನಿಗ್ರಹ ಒಂದು ದಿನ 'ಟುಸ್' ಎಂದಿತು. ಸುಮ್ಮನೆ ಒಂದು ಪ್ಯಾಕೆಟ್ 'ಲಿಯಾಕುರ' ಮೀನನ್ನು ಆ ಅಂಗಡಿಯಲ್ಲಿ ಕೊಂಡುಕೊಂಡೆ.



ತಕ್ಷಣಕ್ಕೆ ನನ್ನ ಮೀನಿನ ಫ್ರೈಯಿಂದ ಯಾರಿಗೇನೂ ತೊಂದರೆಯಾದ ಹಾಗೆ ಕಾಣಲಿಲ್ಲ. ಮೀನಿನ ವಾಸನೆಯಿಂದ ನಮ್ಮ ಮನೆಗೆ ಬಂದದ್ದು ನಮ್ಮ ಬಡಾವಣೆಯ ಬೆಕ್ಕು. ಬೆಕ್ಕುಗಳಿಗೆ ಮೀನೆಂದರೆ ಪಂಚಪ್ರಾಣ. ಆದ್ದರಿಂದ ಬೆಕ್ಕಿಗೂ ಚೂರುಪಾರು ಮೀನು ಹಾಕುತ್ತಿದ್ದೆ. ಮೊದಮೊದಲು ಆ ಬೆಕ್ಕಿಗೆ ಮೀನು ಹಿಡಿಸಿದಂತೆ ಕಾಣಲಿಲ್ಲ. ಏಕೆಂದರೆ ಅದು ಸಸ್ಯಾಹಾರಿಗಳ ನಡುವೆ ಬೆಳೆದಿತ್ತು. ಆದರೆ ಆನುಷಂಗಿಕ ಪ್ರವೃತ್ತಿ ಅದರ ಸುತ್ತಲಿನ ವಾತಾವರಣದ ನಿರ್ಬಂಧವನ್ನು ಮೀರಿ ಕಾಣಿಸಿಕೊಂಡೇ ಬಿಟ್ಟಿತು. ಕ್ರಮೇಣ ಬೆಕ್ಕಿಗೆ ಮೀನು ಹಿಡಿಸಿತು. ನಾನು ಮೀನು ಹುರಿದಾಗಲೆಲ್ಲಾ ಬೆಕ್ಕು ತನ್ನ ಪಾಲಿಗಾಗಿ ನಮ್ಮ ಮನೆಗೆ ಆಹ್ವಾನವಿಲ್ಲದೆಯೇ ಬರತೊಡಗಿತು.



ಒಂದಲ್ಲ ಒಂದು ದಿನ ನನಗೆ ಕಾದಿದೆ ಗ್ರಹಚಾರ ಎಂದುಕೊಂಡೇ ಇದ್ದೆ. ಒಂದು ದಿನ ಮೀನು ಹುರಿಯುತ್ತಿರುವಾಗ ಬಾಗಿಲು ಕುಟ್ಟಿದ ಸದ್ದು! ವಿಧಿಯಿಲ್ಲದೆ ಬಾಗಿಲು ತೆರೆದರೆ, ನಮ್ಮ ಪಕ್ಕದಲ್ಲೇ ಇದ್ದರೂ ಎಂದೂ ನಮ್ಮ ಮನೆಗೆ ಕಾಲಿಡದಿದ್ದ ರಾಮಸ್ವಾಮಿಯವರು ನಿಂತಿದ್ದಾರೆ! ರಾಮಸ್ವಾಮಿ ಮೀನಿನ ವಾಸನೆ ಬಗ್ಗೆ ತಮ್ಮ ವಿರೋಧ ವ್ಯಕ್ತಪಡಿಸಲು ಬಂದಿದ್ದಾರೆ ಎಂದುಕೊಂಡು ಕೃತಕ ನಗೆ ಬೀರುತ್ತಾ ಅವರಿಗೆ ಕೂರಲು ಕುರ್ಚಿ ತೋರಿಸಿದೆ.

ರಾಮಸ್ವಾಮಿ ಆರಾಮವಾಗಿ ಕೂರುತ್ತಾ "ನಿಮ್ದು ಊಟ ಆಯ್ತೆ?" ಎಂದು ವಿಚಾರಿಸಿದರು.

"ಇನ್ನೂ ಊಟ ಆಗಿಲ್ಲ" ಎಂದ ನಾನು ಮನಸ್ಸಿನಲ್ಲೇ ಅದೇನು ಹೇಳ್ತಾನೊ ಹೇಳಲಿ, ಆಗ ಮೀನು ಹುರಿಯೋದನ್ನ ನಿಲ್ಲಿಸಿಬಿಡ್ತೀನಿ ಅಂತ ಅವನಿಗೆ ಹೇಳ್ತೀನಿ ಎಂದು ಯೋಚಿಸುತ್ತಿದ್ದೆ.

"ನೋಡಿ ಟೈಮಿಗೆ ಸರಿಯಾಗಿ ಊಟ ಮಾಡಿಬಿಡಬೇಕು" ಎಂದು ರಾಮಸ್ವಾಮಿ ಹೇಳಲಾರಂಭಿಸಿದರು. ನನಗೆ ಗೊತ್ತಾಗಿಹೋಯ್ತು, ಇವನು ಸುತ್ತಿ ಬಳಸಿ ಮೀನು ಫ್ರೈ ಮಾಡ್ಬೇಡ ಅಂತ ಹೇಳಕ್ಕೆ ಬಂದಿದ್ದಾನೆ!

"ಅಡುಗೆ ನೀವೇ ಮಾಡ್ಕೊತೀರಿ ಅಂತ ಕಾಣುತ್ತೆ?" ರಾಮಸ್ವಾಮಿ ಪ್ರಶ್ನಿಸಿದರು. ನಾನು ತಲೆಯಾಡಿಸಿದೆ.

"ಇವತ್ತೇನು ಅಡುಗೆ ಮಾಡಿದ್ದೀರಿ?" ಬೇಕಾಗಿರಲಿಲ್ಲ ಈ ಪ್ರಶ್ನೆ. "ಮಿಯಾಂವ್!" ನನ್ನ ಕಾಲ ಬುಡದಲ್ಲಿದ್ದ ಬೆಕ್ಕು ಉತ್ತರಿಸಿತು.

"ಕೊಲ್ಕತ್ತಾದಲ್ಲಿ ನಾನು ಸ್ವಲ್ಪಕಾಲ ಇದ್ದೆ" ಎಂದು ರಾಮಸ್ವಾಮಿ ಮುಗುಳ್ನಗುತ್ತ ಹೇಳಿದರು. ಇವನು ಕೊಲ್ಕತ್ತಾದಲ್ಲಿ ಇದ್ದುದಾದರೆ ಹುರಿದ ಮೀನಿನ ವಾಸನೆ ಗೊತ್ತೇ ಇರುತ್ತದೆ. ನನ್ನ ಮನೆಯಲ್ಲಿ ಮೀನು ಹುರಿಯುವುದು ಇವನಿಗೆ ಹಿಡಿಸದಿದ್ದರೆ ನೇರವಾಗಿ ಹೇಳಬಹುದಲ್ಲಾ ಎಂದುಕೊಳ್ಳುತ್ತಿರುವಾಗ...

ರಾಮಸ್ವಾಮಿ ಕುರ್ಚಿಯನ್ನು ಇನ್ನೂ ಸಮೀಪಕ್ಕೆ ಎಳೆದುಕೊಂಡು ಹೇಳಿದರು. "ನೋಡಿ ನಾನು ನಾಲ್ಕು ವರ್ಷ ಕೊಲ್ಕತ್ತಾದಲ್ಲಿದ್ದೆ. ಆಗ ನಾನು ಸ್ವಲ್ಪವಾದರೂ ಅಡುಗೆ ಮಾಡುವುದನ್ನು ಕಲಿಯಬೇಕಿತ್ತು, ಏನೇ ಆಗಲಿ ಒಂಚೂರಾದ್ರೂ ಅಡುಗೆ ಮಾಡೋದು ತಿಳಿದಿದ್ದರೆ ಒಳ್ಳೆಯದು."

'ಥೂ, ಏನಪ್ಪಾ ಮಾಡೋದು ಈಗ? ಹಾಳು ಮೀನು ಫ್ರೈ ನಿಲ್ಲಿಸಿ ಬಿಡೋಣ' ಎಂದುಕೊಳ್ಳುತ್ತಿರುವಾಗ, ರಾಮಸ್ವಾಮಿ ಮುಗುಳ್ನಕ್ಕು "ನಾನು ಮೊದಲು ಮೀನು ತಿಂದದ್ದು ಕೊಲ್ಕತ್ತಾದಲ್ಲಿ! ನನಗೆ ಮೀನು ತುಂಬಾ ಇಷ್ಟ!" ಎಂದು ಇಂಗಿತಪೂರ್ವಕವಾಗಿ ನನ್ನತ್ತ ನೋಡಿದರು!

"ಮಿಯಾಂವ್!" ಎಂದ ಬೆಕ್ಕು ಅಸಹನೆಯಿಂದ ನನ್ನ ಕಾಲನ್ನು ಪರಚಲಾರಂಭಿಸಿತು.

ಇಂಗ್ಲಿಷ್ ಮೂಲ: ಓ.ಟಿ.ರವೀಂದ್ರನ್
ಕನ್ನಡಕ್ಕೆ : ಪದ್ಮ ಶ್ರೀರಾಮ್

ಅಪರೂಪದ ಫೋಟೋ

ಪ್ಲೇಗ್ ಆಂಬುಲೆನ್ಸ್



1898ರಲ್ಲಿ ಪ್ಲೇಗ್ ರೋಗವು ಬೆಂಗಳೂರಿನ ಮೇಲೆ ತನ್ನ ಹಾವಳಿಯನ್ನಿಟ್ಟಿತು. ಅದರ ದಾಳಿ ಅದೆಷ್ಟು ಪ್ರಬಲವಾಗಿತ್ತೆಂದರೆ ಬೆಂಗಳೂರಿನ ಅರ್ಧಕ್ಕಿಂತ ಹೆಚ್ಚು ನಿವಾಸಿಗಳು ಪ್ಲೇಗ್ ರೋಗಕ್ಕೆ ಬಲಿಯಾದರು. ಆ ಸಂದರ್ಭದಲ್ಲಿ ಪ್ಲೇಗ್ ರೋಗಿಗಳನ್ನು ಆಸ್ಪತ್ರೆಗೆ ರವಾನಿಸಲು ಒಂದು ಆಂಬುಲೆನ್ಸ್ ಅನ್ನು ರೂಪಿಸಲಾಯಿತು. ಅಂತಹ ಆಂಬುಲೆನ್ಸ್ ಒಂದರ ಚಿತ್ರವನ್ನು 1905ರಲ್ಲಿ ಸೆರೆ ಹಿಡಿಯಲಾಗಿತ್ತು. ಆ ಫೋಟೋ ಇಲ್ಲಿದೆ.

ರೆಡ್ಡಿಯವರೊಂದಿಗೆ ಆತ್ಮ ಸಂವಾದ

ಗೆಳೆಯಾ,
ಈ ಕತ್ತಲು ರಾತ್ರಿಗಳ ಗಂವೆನುವ ನಿರಂತರ ಏಕಾಂಗಿತನದಲ್ಲಿ
ಕೊಳಗೊಂಡ ಗರ್ವರಸ ಜರ್ರನೇ ಜರಿದು ಹಸಿಹಸಿಯಾಗಿ ತೊಟ್ಟಿಕ್ಕುತ್ತಿದೆಯೇ
ಪಶ್ಚಿಮದ ಶಸ್ತ್ರಾಗಾರದಲಿ ಉದಯಿಸಿ ಹಸ್ತಿನಾವತಿಯ ಸಪಿಗಸಸ ಬೀಳಿಸಿದ
ಚಕ್ರರತ್ನ ಒರೆಗೆ ಸೇರಿ ಜಂಗು ಉದುರುವ ಸದ್ದು ಕೇಳುತ್ತಿದೆಯಾ?
ಇಲ್ಲವಾದರೆ ಕೇಳಿಸಿಕೋ
ನಿನ್ನದೇ ಮುದ್ದು ಮಗನ ಎಳೆಯ ಆಕ್ರಂದನವ
"ಎಲ್ಲ ಆಸ್ತಿಯನು ಯಾರಿಗಾದರೂ ಕೊಟ್ಟುಬಿಡಿ
ನನಗೆ ನನ್ನ ಅಪ್ಪನನ್ನು ತಂದುಕೊಡಿ."

ಗೆಳೆಯಾ,
ಗಂವೆನುವ ಕತ್ತಲರಾತ್ರಿಗಳ ದುಃಸ್ವಪ್ನಗಳಲ್ಲಿ
ಒಮ್ಮೆಯಾದರೂ ಎದುರಾಗಿದ್ದಾಳೆಯೇ ಸೊಂಡೂರ ಹಡದವ್ವ
ನೀನು ಕತ್ತರಿಸಿಕೊಂಡು ಹೋದ ಅವಳ ಗರ್ಭದ ಚೀಲ
ರೂಪಾಯಿಯಾಗಿ ಬೆಳ್ಳಿ-ಬಂಗಾರ-ವಜ್ರವಾಗಿ ಶಿವಶಿವಾ!
ವಿಶ್ವ ಮಾರುಕಟ್ಟೆಯಲ್ಲಿ ಶಿವಸಂಚಾರ ನಡೆಸಿದೆ
ಕಮಲೋದ್ಭವರ ಸಿಂಹಾಸನದ ಕನಸಿನ ಬುನಾದಿಯಲ್ಲಿ
ಕಲ್ಲು-ಮಣ್ಣು-ಗಾರೆಯಾಗಿ ಅನಾಥವಾಗಿ ಬಿದ್ದಿದೆ.



ಆದರೆ
ಸೊಂಡೂರ ತಾಯ ರಕ್ತ ಕೀವಿನ ಗರ್ಭ ಮಾತ್ರ
ಈಗ ಅಸಂಖ್ಯ ರೋಗಗಳ ಹೆರಿಗೆ ಮನೆ
ಹಡ್ದಿರಲಿಲ್ಲ ರೆಡ್ಡಿ ವಸುಂಧರೆಯ ಒಡಲ
ನಿನ್ನ ಹಾಗೆ ಯಾವ ಚಕ್ರವರ್ತಿಯೂ.
ನಮಗೋ ಈಗ ನಿತ್ಯ ಭೂಕಂಪ!

ಗೆಳೆಯಾ,
ಗೋಡೆಗೋಡೆಗೆ ಬಡಿದ ಬಂಗಾರದ ತಗಡು
ಕಿಟಕಿ ಕಿಟಕಿಗಳ ಬಂಗಾರದ ಸರಳು ಬಂಗಾರದ ಚಿಲಕ
ಕೀಲಿ, ಕೀಲಿಕೈ ನಿನ್ನ ಅಂಗೈ ಸ್ಪರ್ಶಕ್ಕೆ ಅಂಗಲಾಚುತ್ತಿರುವಾಗ
ಇಗೋ ಇಲ್ಲಿ ಕೇಳು ನಿನ್ನರಮನೆಯ ಮೂಲೆಯಲಿ
ಕಾಳುಕಡಿ ಚೀಲಗಳು ಮಾತಾಡಿಕೊಳ್ಳುತ್ತಿವೆ
"ಬಂಗಾರವನೇ ಹಾಸಿದ ಬಂಗಾರವನೇ ಹೊದ್ದ
ತಿನ್ನಲು ಹೇಲಲು ಬದುಕಲು ನಾವೇ ಸಾಕಾಗಿತ್ತೆಂದು ತಿಳಿಯದೇ ಹೋದ."

ಕ್ಷಮಿಸಿ ರೆಡ್ಡಿಯವರೇ,
ಇಷ್ಟೊತ್ತು ಎದುರುಬದುರಾದದ್ದು ಬರಿ ನಿಮ್ಮೊಂದಿಗಲ್ಲ ನಮ್ಮೊಂದಿಗೆ
ಈ ಜಂಬೂದ್ವೀಪದ ಭರತ ಕ್ಷೇತ್ರದ ಕಿಷ್ಕಿಂಧೆಯೆಂಬ ವಿಶ್ವಗ್ರಾಮದಲ್ಲಿ
ನಮ್ಮ ನಮ್ಮಂಥವರ ಮನದ ಕೊನೆಯ ಮೊನೆಯ ಮೇಲೆ ಕೂತ ಗರುಡ ನೀ
ನೀವಿಲ್ಲದಿದ್ದರೆ ಇನ್ನೊಬ್ಬ
ಆಕಾಶದಲ್ಲಿ ರೆಕ್ಕೆ ಬಡಿಯುತ್ತಿದ್ದ
ಭೂಮಿಯ ಲಾಡಿ ಬಿಚ್ಚುತ್ತಿದ್ದ.

ಇಂದು ಬೆಳ್ಳಂಬೆಳಗ್ಗೆ ರೆಡ್ಡಿ ಕೇಳಯ್ಯ ನಾನೊಂದ ಕನಸ ಕಂಡೆ
ಆಕಾಶದಿಂದತ್ತ ಪಶ್ಚಿಮದ ಶ್ರೀಮುಕುಟ ಉರುಳುವದ ಕಂಡೆ
ಪಾತಾಳದಿಂದಿತ್ತಿತ್ತ ಪೂರ್ವದ ವಸುಂಧರೆ ಚಿಗರೆಗಂಗಳ
ಚೆಲುವೆಯಾಗಿ ಕುಣಿಯುವದ ಕಂಡೆ
ಹೊಸಪೇಟೆಯ ಹಸುಳೆಗೆ ಅಪ್ಪ ಸಿಕ್ಕಂತೆ ಕನಸಕಂಡೆ.

• ಡಾ. ಎಂ.ಡಿ.ಒಕ್ಕುಂ

ಅದ್ಯಂಗ್ಲ ಅಂಬರೀಸ ಬಿಜೆಪಿ ಸೇರಿಕತ್ತನೆ!

...ಳಮಾವನಿಗೆ ಯಾವ ಸುದ್ದಿಯೂ ಬೇಕಿಲ್ಲದ ...ಮುದಲ್ಲಿ ಸೀರ ಯಾವುದೊ ಕುಚೋದ್ಯದ ಸಂಗತಿ ...ದಂತೆ ಹಠಾತ್ತನೆ,

"...ಆ ಅಂಬರೀಸ ಹೋಗಿ ಬಿಜೆಪಿ ಸೇರ್ತನಂತಲ್ಲಾ, ...ನ್ನ ಉಗ್ರಿ?" ಎಂದ.

"...ಏನೊಪ್ಪ ಅಂಗಂತ ಸುದ್ದಿ ಬಂದದೆ" ಎಂದ ಉಗ್ರಿ.

"...ಅವುನಿಗೇನು ಬಂದಿತ್ಲ ಬಿಜೆಪಿ ಸೇರೊ ಅಂತದ್ದು?" ...ಳು ಜುಮ್ಮಿ.

"...ಅವುನು ಸೇರ್ತಯಿಲ್ಲ ಕಣೆ. ಬಿಜೆಪಿಗಳು ಸೇರಿಸಿಗತ್ತರಂತೆ. ...ಟ್ಳಿಸಿ ಮಾಡಿ ಮಂತ್ರಿನೂ ಮಾಡ್ತರಂತೆ."

...ಯಲುಸೀಮೆ ಕಟ್ಟೆಪುರಾಣ

• ಬಿ.ಚಂದ್ರೇಗೌಡ

"...ಅವುನೇನಾರ ಸೇರಿದ್ರೆ ಅವುನ ಕತೆ ಮುಗಿತು ಕಂಡ್ಯ" ...ಕಾಳಮಾವ.

"...ಅಲ್ಲಾ, ಇಂತ ಟೇಮಲ್ಲಿ ಬಿಜೆಪಿ ಸೇರ್ತನೆ ಅಂದ್ರೆ ...ನ್ಯಂಥಾ ಇವುನ್ನ?" ಎಂದ ಸೀರ.

"...ನೀನೇಳೊ ಮಾತು ನಿಜಕಣ ಮಾವ. ನಿಜವಾಗ್ಲು ...ರು ಜನ ಬಿಜೆಪಿ ಬುಡೋ ಟೈಮಿದು."

"...ಟೈಮು ಅಂದ್ರೆ?"

"ನೋಡೊ, ಯಾವುದೇ ಸರಕಾರ ಆಡಳಿತ ಮಾಡಿದ್ರು ...ಳಗೆಲಿ ಕೆಲುವು ಜನ ಪಾರ್ಟಿ ಬುಟ್ಟು ಪವರ್ರಿಗೆ ...ಪಾರ್ಟಿಗೆ ಹಾರಿಕಳಕ್ಕೆ ನೋಡ್ತರೆ."

"ಗೊತ್ತಾಯ್ತು ಬುಡು. ಮನಿಗೆ ಬೆಂಕಿ ಬಿದ್ದಾಗ ಇಲಿ ...ಓಡ್ತವಲ್ಲ ಅಂಗೆ."

"ಆದ್ರೆ, ಬಿಜೆಪಿಗಿನ್ನೂ ಬೆಂಕಿ ಬಿದ್ದಿಲ್ಲ. ಹ್ವಗಿಯಾಡ್ತ ...ಹ್ವಗೆ ಅಂದ್ರೆ ಅಂತಿಂತ ಹ್ವಗಿಯಲ್ಲ, ಮುಕಳಿರಿಯ ...ಕಂಡು ಸಯಿಸಿಗತ್ತಾ ಅವುರೆ. ಒಂದು ಕಡೆ ಎಡೂರಪ್ಪನ ...ರು, ಇನ್ನೊಂದು ಕಡೆ ಸದಾನಂದನ ಹತ್ರ ಇರೋರು, ...ಮಾಂಡು ಅನ್ನೋರು, ಇವುರಲ್ಲೆ ಮಂತ್ರಿಯಾಗದೆಯಿದ್ರೆ ...ಜೀವನಾನೆ ವ್ಯರ್ಥ ಅಂತ ಓಡಾಡೋರು, ಒಂದೇ ...ಡೇ ಆ ಮುಂಡೆಮಕ್ಕಳ ಸಮಸ್ಯೆ. ಇಂತ ಟೈಮಲ್ಲಿ ...ರೀಶ್ ಹೆಸರಬ್ಯಾರೆ ತೇಲಿಬುಟ್ಟವುರೆ."

"ಅವುನೇನಂದವುನ್ನ?"

"ದುಬಾಯಿಂದ ಬಂದು ಯಾವುದ್ನು ಹೇಳ್ತಿನಿ ...ವುನೆ ಕಣಮಾವ."

"ದುಬಾಯಿಗ್ಯಾಕೋಯ್ತನವುನು?"

"ಅವುನು ಎಂ.ಪಿ.ನೂ ಅಲ್ಲ, ಎಮ್ಮೆಲ್ಲೆನೂ ಅಲ್ಲ, ...ನು ಕ್ಯಲಸ. ಅಲ್ಲಿರೊ ಫ್ರೆಂಡಗಳ ಜೊತೆ ಆಟ ...ಕಂಡು ಬರನ ಅಂತ ಹೋಯ್ತನೆ. ಅವ್ವನತ್ಗೆ ...ದೇಟಿಗೆ ಇವ್ರು ಇಂತ ಸುದ್ದಿ ಹಬ್ಬಿಸಿರಬವುದು."

"ಸುದ್ದಿನೆ ಕಣೊ ಉಗ್ರಿ, ಆದು ರಿಯಲ್ ಮ್ಯಾಟ್ರಲ್ಲ" ...ಕೊಂಡು ವಾಟಿಸ್ನೆ ಹಾಜರಾದ.

"ಈ ಸುದ್ದಿ ನಿಜವೆ? ನಿಜ ಹೇಳ್ಳ" ಎಂದಳು ಜುಮ್ಮಿ.

"ಇಲ್ಲಿ ನಿಜ, ಸುಳ್ಳು ಅನ್ನದಕಿಂತ ಬಿಜೆಪಿಯಂತಾ ...ಗೆ, ಅದೂ ಈ ಟೈಮಲ್ಲಿ ಅಂಬರೀಶ್ ಹೊಂಟ ...ದೆ ಒಂದು ಜೋಕು ಕಣಕ್ಕ, ಅಂಬರೀಶ್ ಕ್ಯಾರಕ್ಟರೇನು, ...ಪಿ ಏನೂ. ಇವತ್ತು ಅಂಬರೀಶ್ ರಾಜಕಾರಣ ಮಾಡಕ್ಕೆ ...ಗತ್ತಾಯಿರದೆ ಈ ಬಿಜೆಪಿಗಳ ನೋಡಿ. ಯಂಥಾ ಪಾರ್ಟಿನಕ್ಕ ಆದು. ಈ ಪ್ರಪಂಚದಲ್ಲೇ ಇಂತ ಪಾಲಿಟಿಕ್ಸ್ ಪಾರ್ಟಿಯಿಲ್ಲ ಅಂತ ಹೇಳ್ತರೆ!"

"ನಿಜವೇನ್ನ?"

"ಗೊತ್ತಿದ್ರೂ ಕೇಳ್ತಿಯಲ್ಲಕ್ಕ. ಬಿಜೆಪಿ ಅಧಿಕಾರಕ್ಕೆ ಬರ್ತಿದ್ದಂಗೆ ಚರ್ಚುಗಳ ಮೇಲೆ, ಮಸೀದಿ ಮ್ಯಾಲೆ ದಾಳಿ ಮಾಡಿದ್ರು. ಆಮ್ಯಾಲೆ ಉಡುಪಿ ಭಟ್ಟ ಹೆಡತಿ ಕತೆ ಮುಗಿಸಿಬುಟ್ಟ. ರೇಣುಕಾಚಾರಿ ಜಯಲಕ್ಷ್ಮಿ ಹಿಡಕಂಡು ಕಿಸ್ ಕೊಟಗಂಡು ಬ್ರೇಕ್ ಡ್ಯಾನ್ಸ್ ಮಾಡತಿದ್ದ, ಎಡೂರಪ್ಪ ಶೋಬಕ್ಕನ್ನ ಜೊತಿಗಾಯ್ಕಂಡು ಯಜ್ಞ ಹೋಮ ಮಾಡತಿದ್ದ. ಹರತಾಳಾಲಪ್ಪ ಗಂಡುಳ್ಳೊ ಗುರುತಿ ಹಿಡಕಂಡು ಸಿಗಾಯ್ಕಂಡ. ಸವದಿ ಪವದಿ ಅನ್ನಾವು ವಿಧಾನಸಭೆಲಿ ಬರಗಾಲದ ಚರ್ಚೆ ನಡಿವಾಗ ಬ್ಲೂಫಿಲಂ ನೋಡ್ತಿದ್ರು. ಕಟ್ಟಾಸುಬ್ರ ನೆಲ ನುಂಗಿದ. ಕೃಷ್ಣಯ್ಯ ಶೆಟ್ಟಿ ಕೋಮಟಿ ಶೆಟ್ಟಿ ಕೆಲಸ ಮಾಡಿದ. ಸಿ.ಪಿ. ಯೋಗೇಶ್ವರನ್ನ ಇನ್ನು ಪೊಲೀಸ್‌ನೋರು ಹುಡುಕ್ತಾ ಅವುರಂತೆ. ಈ ಸರ್ಕಾರದ ಪ್ರತಿಯೊಬ್ಬ ಮಂತ್ರಿಯಿಂದ ಹಿಡದು ಶಾಸಕರೆಲ್ಲಾ ಕೆಟ್ಟು ಕ್ಯರಹಿಡದೋಗಿರುವಾಗ ಅಂತ ಜಾಗಕ್ಕೆ ಅಂಬರೀಸಣ್ಣ ಹೋಯ್ತನೇನಕ್ಕ?"

"ಅದೆ ನನಿಗೂ ಯೇಚನಾಗಿತ್ತು ಕಂಡ್ಯ. ಅದ್ಯಂಗೋಯ್ತನೆ ಅಂತ."

"ಅಂಬರೀಸ ಸ್ಟ್ರೈಟ್ ಫಾರವರ್ಡ್ ಮ್ಯಾನ್. ಅವುನು ಒಂದೇ ಒಂದೋಟಾಕಿದ್ರೆ ವಾಜಪೇಯಿ ಪ್ರಧಾನಿಯಾಗಿ ಕಂಟನ್ನೂ ಆಗೋನು. ಕೋಟ್ಯಂತ್ರಪಾಯಿ ದುಡ್ಡೂ ಸಿಗದು. ಆದ್ರೆ ಅಂತ ಕ್ಯಲಸ ಮಾಡಲಿಲ್ಲ, ಇವತ್ತು ಬಿಜೆಪಿಗಳು ಮಂತ್ರಿಗಿರಿ ಕೊಡ್ತರೆ ಅಂತ ಹೋಯ್ತನಾ? ಕೇಂದ್ರದ ಮಂತ್ರಿಯಾಗಿದ್ದಾಗ್ಲೆ ರಾಜೀನಾಮೆ ಬಿಸಾಕಿದ ಮನ್ಸ ಅವುನು. ಏನು ದ್ವಡಪ್ಪಾ?"

"ಯಾವ್ದೊ ಸುಳ್ಳು ಸುದ್ದಿ ಹಬ್ಬಿಸ್ಯವೆ ಕಂಡ್ಯ."

"ಯಾವ್ದೊ ಏನು ಬಿಜೆಪಿಗಳೇ ಹಬುಸ್ತವೆ ದೊಡಪ್ಪ, ಅಂಬರೀಸಂಥೋನೆ ನಮ್ಮ ಪಾರ್ಟಿಗೆ ಬತ್ತನೆ ಅಂತ ಮಸಿದಿನ ಹೇಳಿಕಂಡು ತಿರುಗ್ತವೆ. ಅವುನು ಬರ್ಲಿಬುಡ್ಲಿ ಅಷ್ಟುಮಟ್ಟಿಗೆ ತಮ್ಮ ಪಾರ್ಟಿ ಇನ್ನೂ ಮಾನ ಉಳಿಸಿಗಂಡದೆ ಅಂತ ತೋರಬವುದು. ಆಡಾಸ್ ಕಂಪ್ನಿಗೆ ಅಡವಿಟೇಜ್ ಜಾಸ್ತಿ ಅಂತ ಇನ್ನ ಬಿಜೆಪಿಗಳ ಕ್ಯಲಸ್ಯಲ್ಲ ಇಂತವೆಯಾ."

"ಅಂಬರೀಸನ ಗುಣದಲ್ಲಿ ಯಲ್ಲಾ ಜಾತಿನೂ ಒಂದೇ ತರ ನೋಡೊ ಮನಸ್ಯ ಕಣೊ ವಾಟಿಸ್ನೆ."

"ಎಜ್ಜಾಕ್ಟ್ಲಿ ಕರಟ್ ಕಣೊ ಉಗ್ರಿ. ಆ ತುದಿ ದುಬಾಯ್ ಸಾಬಿಯಿಂದ ಹಿಡದು ಜಟಕಾ ಸಾಬಿ ಜಫರುಲ್ಲಾ ಖಾನ್‌ಗಂಟ ಫ್ರೆಂಡ್ಸ್‌ವುರೆ. ದಲಿತ್ರ ಸೋಮಶ್ರೇಕನಿಂದ ಹಿಡದು ಮಾದಯ್ಯನಗಂಟ ಫ್ರೆಂಡ್ಸ್ ಅವುರೆ. ಆ ಬಿಜೆಪಿಗಳಿಗೆ ಸಾಬರ ಕಂಡ್ರಾಗಲ್ಲ, ದಲಿತ್ರ ಕಂಡ್ರೆ ಉಷಾರಾಗಿರತರೆ. ಅಂತ ಪಾರ್ಟಿಗೆ ಹೋದನೇನೋ?"

"ಕಾಂಗ್ರೆಸ್ಸೆ ಅವುನಿಗೆ ಹೇಳಿಮಾಡಿಸಿದ ಪಾರ್ಟಿ."

"ಹಿಂದೂ ಧರ್ಮದಲ್ಲಿ ಹಲವಾರು ಜಾತಿಗಳು ಯಂಗೆ ತಮ್ಮಷ್ಟಕ್ಕೆ ತಾವು ಹಬ್ಬ, ಹರಿದಿನ, ಮದುವೆ, ಮುಂಜಿ, ಸತ್ಯನಾರಾಯಣನ ಪೂಜೆ ಮಾಡಿಕಂಡು ಆರಾಮಾಗ್ಯವುರೊ, ಅದೇ ತರ ಕಾಂಗ್ರೆಸ್ನಲ್ಲಿ ಆರಾಮಾಗಿರಬವುದು. ಬಿಜೆಪಿಲಿ, ಜೆಡಿಎಸ್ಸನಲ್ಲಿ ಅಂಗಿರಕ್ಯಾಗದಿಲ್ಲ."

"ಜೆಡಿಎಸ್ಸಲ್ಲಿ ಯಾಕಿರಕ್ಯಾಗದಿಲ್ಲವ್ವೊ?"

"ಅಲ್ಲೀ ಯಾವನೇ ಲೀಡ್ರು ಕುಮಾರಣ್ಣ, ರೇವಣ್ಣನಿಗಿಂತ ಮುಂದಕೋದ್ರೆ, ದ್ಯಾವೇಗೌಡ್ರು ನಿಗಾವಯಿಸ್ತರೆ ಕಣೊ. ಅರ್ಧರಾತ್ರಿಲಿ ಫೋನ್ ಮಾಡಿ ಅದು ಮಾಡು, ಇದು ಮಾಡು, ಅವುನಿಗೆ ಫೋನ್ ಮಾಡು, ಇವುನ್ನ ಮನೆತಕ್ಕೆ ಹೋಗಿ ಮಾತಾಡುಸು ಅಂತ ತಲೆ ತಿಂತರೆ. ಪಾರ್ಟಿ ಫಂಡ್ ಕಲೆಕ್ಟ್ ಮಾಡು ಅಂತರೆ. ನನ್ನನ್ನ ಕರದು ಪಂಕ್ಷನ್ ಮಾಡು ಅಂತರೆ. ದ್ಯಾವೇಗೌಡ ಜಗಲಿ ಮ್ಯಾಲೆ ಕುಂತಿರೊ ಊರು ಗೌಡನಂಗೆ ಏನೇನೊ ಹೇಳ್ತಾಯಿರತನೆ. ಅಂಗಾಗಿ ಜೆಡಿಎಸ್ಸಲ್ಲಿ ಯಾರಿಗೂ ನೆಮ್ಮದಿಯಿರದಿಲ್ಲ. ಅದೇ ಕಾಂಗ್ರೆಸ್ಸಂಗಲ್ಲ, ಆಲ್ದಮರಿದ್ದಂಗೆ. ಅಲ್ಲಿ ನಿನ್ನ ಕೊಂಬೆ, ನಿನ್ನ ಗೂಡೆ ಬ್ಯಾರೆ ಗೊತ್ತಾಯ್ತ?"

"ನೀನೇಳದು ನೋಡಿದ್ರೆ ಅಂಬರೀಸ ಬಿಜೆಪಿಗೋಗದಿಲ್ಲ ಅನ್ನಂಗಾಯ್ತಪ್ಪ."

"ಅವುನು ನನಿಗೆ ಚನ್ನಾಗಿ ಗೊತ್ತು ಕಂಡ್ಯ, ಹೋಗದಿಲ್ಲ" ಎಂದಳು ಜುಮ್ಮಿ.

"ಪಾಪ ಆ ಸದಾನಂದ ಗೌಡನ್ನ ಇಳುಸ್ತಾರಂತಲ" ಎಂದ ಸೀರ.

"ಯಾಕಿಳಸ್ತರೆ ಗೊತ್ತ ಚಿಗಪ್ಪ? ಸದಾನಂದ ಗೌಡ ಚನ್ನಾಗಿ ಆಡಳಿತ ಮಾಡಿ ಕಂಡು ಹೋಯ್ತಾ ಅವ್ರನೆ. ಅದರಲ್ಲೂ ಅಪ್ಪ ಮಕ್ಕಳ ಮಾತ ಒಂದನೂ ತಗಿಯದಿಲವಂತೆ. ಮುಂದೆ ಯಲಕ್ಷನ್ ನ್ಯಡದು, ಬಿಜೆಪಿ ಮತ್ತು ಜೆಡಿಎಸ್ಸು ಹೊಂದಾಣಿಕೆ ಮಾಡಿಕಳದೆ ಆದ್ರೆ ಸದಾನಂದ ಇದ್ರೆ, ಈಜಿ. ಅಲ್ಲಿಗೆ ಎಡೂರಪ್ಪ ಗಟಾರಕೋದಂಗೆಯ. ಇದು ಗೊತ್ತಾಗಿಬುಟ್ಟು ಶತಾಯಗತಾಯ ಸದಾನಂದನ್ನ ಸೈಡಿಗೆ ತಳ್ಳಿ ಶೆಟ್ಟರ್‌ನೊ ಈಶ್ವರಪ್ಪನ್ನೊ ಕೂರಸಕ್ಕೆ ಮಾಡಿದ್ದರಂತೆ."

"ಈಶ್ವರಪ್ಪಾಗಬೇಕು ಕಣೊ ಚನ್ನಾಗಿರತದೆ."

"ಚೆನ್ನಾಗೇನು, ಮಜಾವಾಗಿರತದೆ ಕಣೊ ಉಗ್ರಿ. ಬಿಜೆಪಿಯಿಂದ ಒಳ್ಳೆ ಎಂಟರ್‌ಟೈನ್‌ಮೆಂಟ್ ಸಿಗತದೆ. ಯಾಕಪ್ಪ ಅಂದ್ರೆ, ಅವುನು ಮುಖ್ಯಮಂತ್ರಿಯಾಗಿ ಮಾತಾಡದಿಲ್ಲ, ಬಿಜೆಪಿ ಸ್ಲಂ ಲೀಡ್ರ ತರ ಮಾತಾಡ್ತನೆ. ಆಗ ಇರದು....."

"ಅದೇನಿದ್ದತ್ಲ?"

"ಏನದೆ ಅಂದ್ರೆ, ಅವುನ ಮಾತ್ನೆ ಅವುನು ಅಲ್ಲಗಳಿತನೆ. ತಿರಗ ಇನ್ನೇನೊ ಹೇಳ್ತನೆ. ಡ್ರಿಂಕ್ ಮಾಡಿರೊ ಮನ್ಸ ಕಡಜನಕ್ಯಲಿ ಕಡಿಸಿಗಂಡು, ದೆವ್ವನ್ನ ನೋಡಿದ್ರೆ ಯಂಗಾಡ್ತನೊ ಅಂಗಾಡ್ತನೆ ಅವುನು ಮುಖ್ಯಮಂತ್ರಿಯಾದ್ರೆ."

"ಅಂಗರೆ ಸೆಟ್ಟರ್ ಪರವಾಗಿಲ್ವೆ?"


"ಶೆಟ್ಟರ್ ಪರವಾಗಿಲ್ಲ ಅಂತ ಇಲ್ಲಿವರಿಗೂ ಅನ್ನಿಸಿಗಂಡಿಲ್ಲ ಚಿಗಪ್ಪ, ಅವುನ ಕೈಯಿಂದ ಡೋಲು ಕಿತಗಂಡು ಡಕ್ಕೆ ಕೊಟ್ರು ಅಂಗೆ ಬಾರುಸ್ತನೆ. ಆ ನಮ್ಮ ಶೋಬಕ್ಕ ಪಂಚಾತಿ ಖಾತೆಗೆ ಒಂಥರಾ ಲವಲವಿಕೆ ತಂದಿದ್ಲು. ಅದ ಕಿತಗಂಡು ಇವುನಿಗೆ ಕೊಟ್ರೆ ಸುಮ್ಮನೆ ಮಡಿಕ್ಯಂಡು ಕುಂತವುನೆ. ಇದಕೇನೇಳ್ತೀ?"

"ನೋಡು ಮತ್ತೆ ಇನ್ಯಂಥಾ ಇವುನಿದ್ದನು. ಪರವಾಗಿಲ್ಲ ಅನ್ನೊ ವಬ್ಬ ಮಂತ್ರಿ ಇಲವಲ್ಲ ಈ ಸರಕಾರದಲ್ಲಿ."

"ಸುರೇಶ್‌ಕುಮಾರ ಅಂತ ಇದ್ದ ಚಿಗಪ್ಪ, ಅವುನ ಮ್ಯಾಲೂ ಸೈಟಿನ ದೂರು ಬಂದು ಅವುನು ಕೂಡ್ಲೆ ರಾಜಿನಾಮೆ ಕೊಟ್ಟ."

"ಓ ಪರವಾಗಿಲ್ಲ ಅಂಗರೆ, ಈಗೇನು ಮಾಡ್ತನವುನು?"

"ಸೈಟ್ ವಾಪಸ್ ಕೊಟ್ಟು, ಮಂತ್ರಿಗಿರಿ ರಾಜಿನಾಮೆಯ ವಾಪಸ್ ತಗಂಡ. ಅದ್ನೆ ಪೇಪರ್‌ನೋರು ಕರ್ನಾಟಕ ರಾಜ್ಯ ಇಲ್ಲಿವರಿಗೂ ಕಂಡಿಲವೇನೊ ಅಂಥ ಪ್ರಾಮಾಣಿಕ, ದಕ್ಷ, ನಿಷ್ಠ ಅಂತ ಏನೇನೊ ಕ್ಯರಿತ ಕುಂತವೆ. ಆ ನನಮಕ್ಕಳಿಗೆ ನಿಜಲಿಂಗಪ್ಪನಿಗೆ ಬೆಂಗಳೂರಲ್ಲಿ ಮನೆಗೆ ಇರಲಿಲ್ಲ ಅನ್ನದು, ಲಾಯರ್‌ಗಿರಿ ಸಂಪಾದನೆಲಿ ಕಡಿದಾಳು ಮಂಜಪ್ಪ ಮನೆಕಟಿಗಂಡಿದ್ದು, ಗೋಪಾಲಗೌಡ್ರಿಗೆ ಸ್ನೇಹಿತರ್ಯಲ್ಲ ಸೇರಿ ಒಂದು ಸೈಟು ತಗೊಟ್ಟಿದ್ದು ಗೊತ್ತಿದ್ದತೊ ಇಲವ್ವೊ. ಗೊತ್ತಿದ್ರು ಬರಿಯಕುಲ್ಲ, ಅಂತ ಕಳ್ಳಬಡಿಮಕ್ಕಳು. ಯಾಕೆ ಅಂದ್ರೆ ಸುರೇಶ್‌ಕುಮಾರನ್ನ ಮ್ಯರಸಬೇಕು ನೋಡು ಅದ್ಕೆ!"






ಅನಿವಾರ್ಯ ಬೆಕ್ಕರ್

...ಮಾನವರೆಲ್ಲ ಹೊಂದಾಣಿಕೆ ಮಾಡಿಕೊಳ್ಳುವುದಕ್ಕಾಗಿಯೇ ಜನ್ಮತಾಳಿದ್ದರೆ ಈ ಸಮಾಜ ಮತ್ತು ವ್ಯಕ್ತಿ ...ಗೆ ಇರುತ್ತಿರಲಿಲ್ಲ, ಎಲ್ಲ ಕಮ್ಯುನಿಸ್ಟ್, ಫ್ಯಾಸಿಸ್ಟ್, ಧಾರ್ಮಿಕ ವ್ಯಕ್ತಿಗಳ ಪ್ರಕಾರ ಒಂದು ಆದರ್ಶಸ್ಥಿತಿ ಏನು ...ತ್ತೆ?... ಖಾಸಗಿ ವಾಹನಗಳು ಇರಕೂಡದು. ಎಲ್ಲರೂ ರೈಲಿನಲ್ಲಿ ಹೋಗುವಂತಾದರೆ, ಸಾರ್ವಜನಿಕ ...ಗಳಲ್ಲಿ ಸಂಚರಿಸುವಂತಾದರೆ ರಸ್ತೆಗಳು ಹೀಗೆ ಕಾರು, ಸ್ಕೂಟರ್, ಟ್ಯಾಕ್ಸಿ, ಎತ್ತಿನಬಂಡಿ, ವ್ಯಾನ್, ಸೈಕಲ್‌ಗಳಿಂದ ...ಂಬಿರಬೇಕಾಗಿರಲಿಲ್ಲ, ಬಸ್‌ಗಳಿಗಾಗಿಯೇ ಒಂದು ರಸ್ತೆ ಮಾಡಿ ಎಲ್ಲರೂ ಬಸ್‌ನಲ್ಲಿ ಸಂಚರಿಸುವಂತಾದರೆ ...ಷ್ಟು ಚೆನ್ನಾಗಿರುತ್ತದೆ. ಸಾವಿರಾರು ಸ್ಕೂಟರ್, ಮೊಬೈಕ್, ಕಾರ್‌ಗಳಿಗೆ ಬದಲು ಹತ್ತಾರು ಬಸ್‌ಗಳು ...ಗುತ್ತವೆ. ಇವತ್ತು ಮುಂದುವರಿದ ದೇಶಗಳ ದೊಡ್ಡ ಸಮಸ್ಯೆ ಈ ಟ್ರಾಫಿಕ್ ಜಾಮ್‌ಗಳು. ...ರಾರು ವರ್ಷದ ಹಿಂದೆ ಮಾಡಿದ ರಸ್ತೆಗಳು ಇಕ್ಕಟ್ಟಿನ ಓಣಿಗಳಂತೆ ಕಾಣಿಸುತ್ತಿವೆ. ...ರ್‌ಗಳು ಗಬ್ಬೆದ್ದು ಹೋಗಿವೆ. ಅಲ್ಲಿ ನಿಲ್ಲಿಸಿರುವ ಕಂಚಿನ, ಅಮೃತಶಿಲೆಯ ಪ್ರತಿಮೆಗಳು ...ಸ್ಯ ಕಸಕಡ್ಡಿಗಳಂತೆ ಕಾಣುತ್ತಿವೆ.

...ದರಿಂದ ಅತ್ಯಾಧುನಿಕ ಸರ್ಕಾರಗಳು ಸಾರ್ವಜನಿಕ ಬಸ್, ರೈಲುಗಳನ್ನು ಮಾತ್ರ ...ಕೊಂಡು ಕಾರ್, ಸ್ಕೂಟರ್ ಇತ್ಯಾದಿಗಳನ್ನೆಲ್ಲ ಬಹಿಷ್ಕರಿಸುವ ಯೋಜನೆಯಲ್ಲಿವೆ. ...ದೆಲ್ಲ ಆಗುವುದಿಲ್ಲ, ಯಾಕೆಂದರೆ ಪ್ರಧಾನಿ ತನಗೆ ತುಂಬ ಕೆಲಸವಿರುವುದರಿಂದ ...ರ್ ಬೇಕೇಬೇಕು ಅನ್ನುತ್ತಾನೆ. ಅವನ ಮಗ ಅದಕ್ಕಿಂತ ಬ್ಯುಸಿಯಾದ್ದರಿಂದ ಅವನಿಗೆ ಕಾರ್ ಬೇಕು. ...ರ್‌ಗಳನ್ನು ರಸ್ತೆಗಳಿಂದ ಹೊರಗಟ್ಟಲು ಆಗುತ್ತಿಲ್ಲ, ...ನಗೆ ಗೊತ್ತು




ಒಂದೇ ಒಂದು ಸೈಕಲ್.... ನಿಮ್ಮಿ ತರಹದವರಿಗೆ ಸ್ವಾತಂತ್ರ್ಯದ ಸಂಕೇತ, ಮನೆಯಲ್ಲಿ ಕಾರ್, ವ್ಯಾನ್ ಇದ್ದರೂ ನಿಮ್ಮಿಗೆ ತನ್ನ ಸೈಕಲ್ ಬೆಕ್ಕರ್ ಇಷ್ಟ. ಸೈಕಲ್ ಹತ್ತಿ ಹೊರಟರೆ ಸ್ವಾತಂತ್ರ್ಯದ ತಂಗಾಳಿ ಬೀಸುತ್ತದೆ. ನಿಮ್ಮಿ ಒಬ್ಬಳೇ. ಅವಳು, ಸೈಕಲ್ ಮತ್ತು ರಸ್ತೆ, ಎಲ್ಲಿ ಬೇಕೆಂದರೆ ಅಲ್ಲಿ ನಿಲ್ಲಿಸಬಹುದು. ಒಂದು ಹೂ ಕಂಡಳು, ಒಂದು ಮೊಲ ಕಂಡಳು, ಒಬ್ಬಳು ಬೇಕೆಂದರೆ... ಹಳ್ಳಿಯ ಹುಡುಗಿಯ ಜೊತೆ ಮಾತಾಡಬೇಕೆನ್ನಿಸಿತು. ಬೆಕ್ಕರ್ ಸಹಕರಿಸುತ್ತಾನೆ. ಆಕೆ ಇದೀ ಒಂದು ಬಸ್ ನಿಲ್ಲಿಸಿ ಒಂದು ಸೇವಂತಿಗೆ ಹೂ ನೋಡುತ್ತಾ ನಿಲ್ಲಲಾಗುವುದಿಲ್ಲ, ಅವಳಿಗೆ ಸೇವಂತಿಗೆ ಇಷ್ಟವಾದರೆ, ಜೊತೆಯ ಇನ್ನೊಬ್ಬಳಿಗೆ ಕಬ್ಬು ಬೇಕು, ಮತ್ತೊಬ್ಬಳಿಗೆ ಇಡ್ಲಿ, ದೋಸೆ.

ವ್ಯಕ್ತಿ ಎಷ್ಟು ಚಡಪಡಿಕೆಯ ಜೀವಿ ಎಂದರೆ.... ಆತನಿಗೆ ಜನ ಬೇಕು, ಹಾಗೆಯೇ ಏಕಾಂಗಿತನ ಬೇಕು. ಜನರ ಗುಂಪಿನಲ್ಲಿ ಖುಷಿಯಾಗುತ್ತದೆ. ಏಕಾಂಗಿತನದಲ್ಲಿ ಚಿತ್ರವಿಚಿತ್ರ ಭಾವನೆ ಉಲ್ಬಣಿಸುತ್ತವೆ. ಜನ ಮತ್ತು ಏಕಾಂಗಿತನದಂತೆಯೇ ನಿಮ್ಮಿಗೆ ಅಮರ್ ಬೇಕು. ಅಮರ್ ಮತ್ತು ನಿಮ್ಮಿ ಇಬ್ಬರೇ ಇದ್ದರೆ ಹರ್ಷ ಉಕ್ಕುತ್ತದೆ. ಇಬ್ಬರ ಮೌನ ಕೂಡ ಮಾತಾಡಿದಂತೆ ಇರುತ್ತದೆ. ಹಾಗೆಯೇ ಅಮರ್ ಬೋರ್ ಅನ್ನಿಸುತ್ತದೆ.

ಇವೆಲ್ಲ ಮೂಡ್‌ಗೆ ತಕ್ಕ ಹಾಗೆ ವಾಹನಗಳಲ್ಲ, ಬೈಕ್ ಇಬ್ಬರಿಗೆ, ಬೆಕ್ಕರ್ ಒಬ್ಬರಿಗೆ, ಕಾರ್ ನಾಲ್ವರಿಗೆ.... ಬಸ್ ಹತ್ತಾರು ಜನಕ್ಕೆ.

ಸ್ವಾತಂತ್ರ್ಯ ಎಲ್ಲೆಲ್ಲಿಂದ ಬರುತ್ತದೆ, ನೋಡಿದಿರಾ?



-ಜುಲೈ 9, 1997

ಬ್ರಾಹ್ಮಣರಿಗೆ ಮಾತ್ರ!

ಜಾಹೀರಾತು ಎಂದರೇನು?

ಸುಳ್ಳುಗಳ ಸರಮಾಲೆ!

ಯಾಕೆ ಇವನ್ನು ನೀಡುತ್ತಾರೆ?

ತನ್ನ ವಸ್ತು ವಿಚಾರ, ವಿಶಿಷ್ಟತೆಗಳ ಅರಿವು ಮೂಡಿಸಲು. ವಿಶಿಷ್ಟತೆಯ ಕುರುಹೂ ಕಾಣದಿರಬಹುದು. ಅದು ಇ ಇದಿರುವುದೇ ಅದರ ವಿಶಿಷ್ಟತೆ! ಅದಕ್ಕಾಗಿ ವಿವಿಧ ರಿ ಋ ಗಿಮಿಕ್ಸ್, ಉಪಯೋಗಕ್ಕಿಂತ ಆಕರ್ಷಣೆ ಮೇಲೇ ೬ ತ ಧ್ಯಾನ!

ಇದು ಏನೇ ಆಗಿರಲಿ. ಇದು ಇಲ್ಲದೆ ಪತ್ರಿಕೆಗಳು ಉಸಿರಾಡಲಾರವು ಎಂಬುದು ಕಟುಸತ್ಯ. ಜಾಹೀರಾತಿಗಾಗಿ ಆದು ಹೊಡದ ಹೂಟ ಇಲ್ಲ, ಆಡದ ಆಟ ಇಲ್ಲ.

ಇಲ್ಲಿ ಒಂದು ಸ್ಪಷ್ಟನೆ ಅಗತ್ಯ.

ಹಣ ಬೇಕು. ನಿಜ. ಹಣ ನೀಡುತ್ತಾರೆ. ಅದೂ ನಿಜ. ಹಾಗೆಂದು ಅವರು ನೀಡಿದ ಆಪದ್ಧಗಳನ್ನೆಲ್ಲ 'ಜಾಹೀರಾತು' ಹೆಸರಿನಲ್ಲಿ ಪ್ರಕಟಿಸಬಹುದೆ?

ಬಾರದು ಎಂಬುದು ನಿಯಮ. ಅದರಲ್ಲಿರುವ ವಿಷಯ ಪರಿಶೀಲಿಸಲೆಂದೇ ಕೆಲವು ಪತ್ರಿಕಾ ಕಾರ್ಯಾಲಯಗಳಲ್ಲಿ ಸಮಿತಿ ಇರುತ್ತಂತೆ. ಅವರು ಜರಡಿ ಹಿಡಿದ ಮೇಲೆ ಪ್ರಕಟ ಮಾಡುತ್ತಾರಂತೆ.

ಜಾಹೀರಾತು ಪ್ರಕಟಿಸುವ ಮುನ್ನ ಇಷ್ಟೆಲ್ಲ ಮುಂಜಾಗ್ರತೆ ಕ್ರಮಗಳನ್ನು ಅನುಸರಿಸುತ್ತಿದ್ದರೂ ನನಗಂತೂ ಅವುಗಳ ಬಗ್ಗೆ ನಂಬಿಕೆಯೇ ಇಲ್ಲ, ಪತ್ರಿಕೆಗಳ ಜಾಹೀರಾತುಗಳ ಕಡೆ ಕಣ್ಣೆತ್ತಿಯೂ ನೋಡುವುದಿಲ್ಲ, ಇಡೀ ಪತ್ರಿಕೆಯಲ್ಲಿ ನನ್ನನ್ನು ಆಕರ್ಷಿಸುವುದು ವಾಚಕರ ಪತ್ರಗಳು. ವಿವಿಧ ವಿಷಯಗಳ ಮೇಲೆ ಸಾಮಾನ್ಯ ಎನಿಸುವವರು ನೀಡುವ ಅಸಾಮಾನ್ಯ ಒಳನೋಟ ಅಚ್ಚರಿ ತರುತ್ತವೆ; ಅರಿವನ್ನು ವಿಸ್ತಾರಗೊಳಿಸುತ್ತವೆ.


'ದ ಹಿಂದೂ' ಪತ್ರಿಕೆಯನ್ನು ನೋಡಿರಬಹುದು. ಬಹುದು ಏನು ನೋಡೇ ಇರುತ್ತೀರಿ. ಅದು ಸಂಪ್ರದಾಯ ಪತ್ರಿಕೆ; ಪತ್ರಿಕಾಧರ್ಮವನ್ನು ಕಟ್ಟುನಿಟ್ಟಾಗಿ ಪಾಲಿಸುತ್ತದೆ ಎಂದು ಓದುಗರು ನಂಬಿದ್ದಾರೆ. 'ವಿಶ್ವಾಸಾರ್ಹ ಪತ್ರಿಕೆ' ಎನ್ನುವುದು ಅದರ ಹೆಚ್ಚುಗಾರಿಕೆ. ಇಂತಹ ನಿಷ್ಠೆಯೂ ಅಪಾಯಕಾರಿಯಾಗಬಹುದು. ವಿಷಯ ಪ್ರತಿಪಾದನೆ, ಜಾಹೀರಾತುಗಳ ನಡುವೆ ಅಸಂವಿಧಾನಕ ಸಂಗತಿಗಳು ನುಸುಳಬಹುದು. ಇಂತಹ ಅಸಂವಿಧಾನಿಕ ವಿಷಯಗಳೇ 'ಮಾನಸಿಕ ಸಂವಿಧಾನ'ಗಳಾಗಿ ಸ್ಥಾಪನೆಗೊಳ್ಳಬಹುದು!

ಇಂತಹ ಅಭಿಪ್ರಾಯಕ್ಕೆ ಬರಲು ಕಾರಣ ಏನು ಅಂದರೆ.....

ಫ್ಲಾಟ್‌ಗಳನ್ನು ಕಟ್ಟಿಸಿ ಆಗಿದೆ. ಅದರ ಮಾರಾಟ ಆಗಬೇಕು. ಉತ್ತಮ ಬೆಲೆ ಸಿಗಬೇಕು. ಬೇಡಿಕೆ ಹೆಚ್ಚಿದರೆ ಮಾಲೀಕನಿಗೆ ಸಂತೋಷ. ಗ್ರಾಹಕರನ್ನು ಆಕರ್ಷಿಸಲು ಜಾಹೀರಾತು ಉತ್ತಮ ಸಾಧನ ಎಂಬುದು ನಿಜವೇ. ಆದರೆ ಜಾಹೀರಾತು ಯಾವ ವಿಷಯವನ್ನು ಒಳಗೊಂಡಿರಬೇಕು? ಗ್ರಾಹಕ ಬಯಸುವುದು ಏನನ್ನು? ವಾಸದ ಮನೆ ಇರುವ ಸ್ಥಳ, ದೊರಕಬಹುದಾದ ಸೌಲಭ್ಯಗಳು ಇಂತಹವು. ಆ ಜಾಹೀರಾತಿನಲ್ಲಿ ಇವೆಲ್ಲವೂ ಇತ್ತಂತೆ. ಇನ್ನೂ ಒಂದು ಇತ್ತಂತೆ. 'ಬ್ರಾಹ್ಮಣರಿಗೆ ಮಾತ್ರ' ಎಂಬ ಧ್ಯೇಯವಾಕ್ಯ!

ಈ ಜಾಹೀರಾತು 'ವಿಶ್ವಾಸಾರ್ಹ' ಹಿಂದೂ ಪತ್ರಿಕೆಯಲ್ಲಿ ಪ್ರಕಟವಾಗಿತ್ತಂತೆ!

ಬ್ರಾಹ್ಮಣರನ್ನು ಹೊರತುಪಡಿಸಿ ಮತ್ತೆ ಯಾರೂ ಫ್ಲಾಟ್‌ಗಳನ್ನು ಪಡೆಯುವುದನ್ನು, ವಾಸಿಸುವುದನ್ನು ನಿಷೇಧಿಸುವುದು ಎಷ್ಟು ಸರಿ? ಇದು ಆಧುನಿಕ ಅಸ್ಪೃಶ್ಯತೆ ಆಚರಣೆ ಅಲ್ಲವೆ? ಧರ್ಮ, ಜಾತಿಗಳ ನಡುವಿನ ಈ ತಾರತಮ್ಯ ಸರಿಯೆ? ಇಂತಹ ವಾಣಿಜ್ಯ ವ್ಯವಹಾರಗಳ ಜಾಹೀರಾತುಗಳನ್ನು ಪ್ರಕಟಿಸುವುದು ಸಂವಿಧಾನದ ಆಶಯಗಳನ್ನು ಕಗ್ಗೊಲೆ ಮಾಡಿದಂತಲ್ಲವೆ? ಎಂದು ಮುಂತಾಗಿ ವಾಚಕರೊಬ್ಬರು ಅದೇ ಪತ್ರಿಕೆಯಲ್ಲಿ ತಮ್ಮ



ಅಳಲನ್ನು ತೋಡಿಕೊಂಡಿದ್ದಾರೆ.


ಆ ಪತ್ರಿಕೆಯ ದೊಡ್ಡತನವನ್ನು ಮೆಚ್ಚಿಕೊಳ್ಳಬೇಕು. ಆ ಪತ್ರದ ಕೆಳಭಾಗದಲ್ಲೇ ಅದರ ಪ್ರತಿಕ್ರಿಯೆ ಇದೆ. ಅದರ ತಾತ್ಪರ್ಯ ಇಷ್ಟು: ಈ ಜಾಹೀರಾತು ಕಣ್ತಪ್ಪಿನಿಂದ ಬಂದಿದೆ. ಜಾತಿ, ಜನಾಂಗಗಳ ನಡುವೆ ದ್ವೇಷಬಿತ್ತುವಂತಹ ನೀಚರು ನಾವಲ್ಲ, ಯಾರ ಮನಸ್ಸನ್ನು ನೋಯಿಸುವ ಉದ್ದೇಶ ನಮಗಿಲ್ಲ, ಇದಕ್ಕಾಗಿ ವಿಷಾದಿಸುತ್ತೇವೆ.

ಹಾಗೆಯೇ ಯೋಚಿಸಿದೆ. 'ವಿಷಾದಿಸುತ್ತೇವೆ' ಎಂದರೆ ಸಾಕೆ? ಆ ಜಾಹೀರಾತು ಕೆಲವು ಸೂಕ್ಷ್ಮ ಓದುಗರಲ್ಲಾದರೂ ಉಂಟುಮಾಡಿರುವ ಮಾನಸಿಕ ಕ್ಷೋಭೆಗೆ ಯಾರು ಹೊಣೆ? ಇದನ್ನು ಪ್ರಕಟಿಸಲು ನೀಡಿದವರಿಗೆ, ಪ್ರಕಟಿಸಿದವರಿಗೆ ಏನು ಶಿಕ್ಷೆ? ಇದಕ್ಕೆಲ್ಲ ಪರಿಹಾರಬೇಡವೆ?

ಇವು ಯಾವೂ ಆದಂತಿಲ್ಲ, ಪತ್ರಿಕೆಯ ಇಂತಹ ಮಾತುಗಳು 'ಬೀದೀಲಿ ಚಪ್ಪಲೀಲಿ ಹೊಡೆದು ಕ್ವಾಸೆಗೆ ಒಂದು ಕಾಲಿಡ್ಕಂತೆ' ಅನ್ನಿಸುತ್ತೆ ಅಲ್ಲವಾ....

ಸಜ್ಜನ ಸಾವಾಸ ಹೆಜ್ಜೇನಹುಳ ಕಡಿದಂತೆ

ಎಚ್.ಎಲ್. ಕೇಶವಮೂರ್ತಿ



ಅಣಕ

ಸುರೇಶ ಕುಮಾರ ರಾಜೀನಾಮೆ ಕೊಟ್ಟವ್ನೆ, ಕೊಟ್ಟವ್ನೆ ಅಂತ ಟೀವಿ ಒಡ್ಕಂತಿತ್ತು, ಯಾಕೆ ಕೊಟ್ಟ ಅಂತ ಯಾವ್ದೂ ಹೇಳೊಲ್ಲೊ, ಸರಳ ನಡತೆಯೋನು ಪ್ರಾಮಾಣಿಕ ಅಂತ ಒಡಕಲು ಗ್ರಾಮಾಫೋನು ಪ್ಲೇಟನಂಗೆ ಹೇಳಿದ್ದೇ ಹೇಳ್ತಿತ್ತು, ಅವರಿವರ್ನೆ ಕರ್ಸಿ ಅವರ ಬಾಯಲ್ಲೂ ಇದೇ ಮಾತ ಉದುರಿಸಿತ್ತಿತ್ತು, ಅಲ್ಲ ದೇಸಕೆಲ್ಲ ಇವನೊಬ್ಬನೇಯ ಹಂಗಿರೋನು. ನಮ್ಮ ಕೇರೀಲೆ 'ಬ್ಯಾರೆಯೋರ ದುಡ್ಡುಯಿಸ ಕಂಡಂಗೆ ಕಾಣೊ' ಹತ್ತಾರು ಜನ ಅವ್ರೆ. ಅಂತದ್ರಲ್ಲಿ ಅದೇ ದೊಡ್ಡ ಸಂಗ್ತಿ ಅನ್ನೋ ಹಂಗೆ ಆಡ್ತಾಬದ್ದಾವಲ್ಲ, ಮಂತ್ರಿಯಾಗೂ ಹಂಗೆ ಬದುಕ್ತಾ ಅವ್ನೆ ಅಂತ ಹೇಳ್ತಿರಬೇಕು ಅನ್ನೋದು. ಅಲ್ಲ ಮಂತ್ರಿ ಮಾಡಿರೋದೆ ಹಂಗೆ ಬದುಕಿ ಜನರಿಗೆ ಮಾದರಿಯಾಗಿರ್ಲಿ ಅಂತಲ್ಲವಾ. ಮಂತ್ರಿ ಆಗೋದೆ ಅಂತಾವ ತಲೇಲೇ ಮೆರೀಲಿ, ಜನ ಬಡ್ಡು ಬಾಯಿಗಾಕ್ಕಳ್ಳಿ ಅಂತ ಅಲ್ಲವಲ್ಲಾ, ಅದು ಬುಡ್ರುಲಾ ರಾಜೀನಾಮೆ ಯಾಕೆ ಕೊಡಂಗಾಯ್ತು ಹೇಳ್ರಲಾ ಅಂದೆ. ಅವಕ್ಕೆಲ್ಲಿ ಕೇಳ್ತಿತ್ತು ಅದು. ಒದರಿದ್ದೇ ಒದರ್ತಾ ಬಿದ್ದಾದ್ದೊ.

ಎಲ್ಲಾ ಟಿವಿಯೋವ್ರೂ ಇದೇ ಕಸುಬಿಗೆ ನಿಂತಿದ್ದವಲ್ಲಾ, ಸರಳ, ಪ್ರಾಮಾಣಿಕ ಅನ್ನೋ ಗದ್ದಲದಲ್ಲಿ ಕಾರಣ ಹುಡುಕೋದು ಹುಲ್ಲಿನ ಮೆದೇಲಿ ಸೂಜಿ ಹುಡುಕದಂಗಾಯ್ತು, ಕೊನೆಗೂ ಅದು ಸಿಕ್ತು ಅನ್ನಿ. ಅದೇನೋ ಅವನು ಸುಳ್ಳುಪಳ್ಳು ಹೇಳಿ ಒಂದು ಸೈಟ್ ಹೊಡ್ಕಂಡಿದ್ನಂತೆ. ಎಷ್ಟೇ ಆಗಲಿ ಚುರುಕು ಬುದ್ಧಿಯವನಲ್ಲವಾ. ಅದ ಯಾರ್ಗೂ ತಿಳೀದಂಗೆ ಗುಟ್ಟಾಗಿ ಇಟ್ಟಿದ್ನಂತೆ. ಯಾರಿಗೂ ಪತ್ತೆ ಆಗಿರ್ಲಿಲ್ಲವಂತೆ; ಕೆಮ್ಮೂ ಹಾದರಾನೂ ಮುಚ್ಚಿಟ್ಟುಕೊಳ್ಳೋಕೆ ಆದಾತಾ. ಹಂಗೇ ಇದೂವೆ. ಈಗ ಸಿಗಾಕಂಡವ್ನಂತೆ. ಅಲೆಲಾ ಕದ್ದುಮುಚ್ಚಿ ಏನೇನೋ ಮಾಡ್ಕಂಡ್ರೂ 'ಬೇಸ್ ಇವನು ಸರಿಕಣಯ್ಯ' ಅನ್ನೊ ಹಂಗೆ ಬಾಳ್ತಿದ್ದ. ಈಗ ನನ್ನ ಬಂಡವಾಳ ಬಯಲಾಯ್ತಲ್ಲಾ. ಸುಮ್ನಿದ್ರೆ ಇನ್ನೂ ಏನೇನು ಹೊರಕೆಳೀತಾರೋ ಏನೋ. ನನ್ ಮಾನ್ಕೆ ಯಿನಾಯ ಆಯ್ತು ಅಂತ ರಾಜೀನಾಮೆ ಕೊಟ್ಟುದಾನ ಅಂತಾವ ಕೊಟ್ನಂತೆ.

ಕೊಡ್ಲಿಬುಡು. ಉಪ್ಪು ತಿಂದ ಮೇಲೆ ನೀರು ಕುಡಿಲೇಬೇಕು ಅಂತ ನಮಗೆ ನಿಮಗೆ ಅನ್ನಿಸಬಹುದು. ಆದರೆ ಸಿನೇಹಿತಗಾರರು ಇರ್ತಾರಲ್ಲಾ, ಅವರಿಗೆ ಹಂಗನ್ನೋದಿಲ್ವಂತೆ. ಯಾರೂ ಮಾಡಬಾರ್ದ ನೀನೇನೂ ಮಾಡಿಲ್ಲಕನ. ಎಲ್ರೂ ಮಾಡೋದ್ನೆ ನೀನೂ ಮಾಡಿದ್ದೀಯೆ. ಹಂಗೆ ನೋಡಿದ್ರೆ ಬ್ಯಾರೆಯೋರು ಕಂಠಮಟ್ಟ ತಿಂ... ನೀನೆಲ್ಲೋ ರುಚಿ ನೋಡಿದ್ದೀಯ ಅಷ್ಟೇಯ. ರಾಜೀನಾ... ವಾಪಸ್ಸು ತಗೊ ಅಂತ ಜೀವ ತಿನ್ತಾ ಅವ್ರಂತೆ.

ಇನ್ನೊಂದು ಅದ್ಯಾವ್ರದೋ ಗಡ್ಡ ಬುಟ್ಕೊಂಡು ಗಂ... ಹರಿಯೋಹಂಗೆ ಅರುಚ್ತದಲ್ಲಾ.. ಅದ್ರದೇನೋ ಹೆಸ... ಹಾಂ ಸೀಟಿ ರವಿ ಅಂತಾನಂತೆ. ಅದು ನಿಮ್ಮದೇ... ತಪ್ಪಿಲ್ಲ ಕಣ್ರಿ. ಶಾಸಕ ಅಂದ್ರೇನು ಅಂತ ತಿಳ್ಕಂಡಿದ್ದಿ... ಸೈಟು ಪಡೆಯೋದು ಅವರ ಹಕ್ಕು, ಅದ ನಿ... ಚಲಾಯಿಸಿದೀರಿ ಅಷ್ಟೇಯ ಅಂದದಂತೆ. ಶಾಸಕರಿಗೆ ಸರ... 'ಸೈಟು ಬಳುವಳಿ' ಕೊಡ್ತದೆ ಅಂದಂಗಾಯ್ತು, ಇದು ಸು... ಕುಮಾರಂಗೆ ಗೊತ್ತಿರಲಿಲ್ಲವ್ರೋ ಏನು ಕತೆಯೊ.


ಇನ್ನೊಸಿ ಜನ ಸುರೇಶ ಕುಮಾರ ಸಜ್ಜನ, ಸ... ಅಂತಾರೆ. ಇದ್ದೊಬ್ಬ ಸಜ್ಜನಾನೂ ಹೋದ್ನಲ್ಲ ... ಅಳುಬುರುಕಿ ಮೊಕ ಮಾಡ್ಕಂಡು ಕುಂತವೆ. ಅಲ್ಲ ಇವನ... ಸಜ್ಜನ ಅಂದ್ರೆ ಉಳಿದೋರೇನು ದುರ್ಜನವಾ. ಸ... ಅನ್ನಿಸಿಕೊಂಡ ಮೇಲೆ ಅವನಂಗೆ ಬಾಳಿ ಬದುಕಬೆ... ಅವನ ಸಾವಾಸ ಹೆಜ್ಜೇನು ಸವಿದಂತೆ ಅಂತ ಸಿನೇಹಿತರಾ... ಅವರು ದಾರಿ ತಪ್ಪಿದಾಗ ಅವ್ನ ಉಗಿದು ಸರಿದಾ... ತರಬೇಕು. ನಾಯಿಬಾಲ ಸರಿದಾರಿಗೆ ಬರಲಿಲ್ಲ, ಅ... ಸಂಗಬಟ್ಟು ಕಡೀಬೇಕು. ಆಗ ಅವ್ನ ಸಜ್ಜನ ಅನ್ನಿಸ್ಕೊ... ಇವನು ಏನಿಲ್ಲ ಎಂತಿಲ್ಲ, ತಿನ್ನೋರು ತಿನ್ತಾನೆ ಇ... ಲೂಟಿ ಮಾಡೋರು ಮಾಡ್ತಾನೆ ಇದ್ರು, ಮಜ ಮಾಡೊ... ಮಾಡ್ತಾನೆ ಇದ್ರು. ಇದ ಕಂಡೂಕಂಡೂ ಸುಮ್ಮನಿದ್ದ... ಇವನೆಂತ ಸಜ್ಜನ ಅಂತೀನಿ. ಅಂತ ದೊಡ್ಮನ್ಸ ಅ... ಅವತ್ತೇ ಧಾಜೀನಾಮೆ ಕೆರೆದು ಬಿಸಾಕಿ ಬರಬೇಕಾಗಿತ್ತು...

ಈಗಲಾದರೂ ಕೊಟ್ಟವರಲ್ಲಾ ಅಂದ್ರೆ ಅವೆಲ್ಲಾ ಅ... ರಂಗಿನಾಟಕನಯ್ಯ, ಸದಾನಂದ ಗೌಡ ಹೆಂಗಿದ್ರೂ ಹೇತ್ಲಾ... ರಾಜೀನಾಮೆ ಒಪ್ಕೊಳೋ ತಾಕತ್ತು ಅವನಿಗಿಲ್ಲ, ... ಅಂತಾನೆ. ಇಲ್ಲ ತಗಾನೆಬೇಕು, ಆರೋಪದಲ್ಲಿ ಹುರು... ಅಂದಮೇಲೆ ನಾನು ಮಂತ್ರಿ ಆಗ್ತೀನಿ ಅಂತ ನಾ... ಆಡಿದ್ರೆ ಜನಾದ ಜನ ಎಲ್ಲ 'ಎಂತ ದೊಡ್ಡ ಮನ್ಸ ಇ... ಮಾತು ಅಂದ್ರೆ ಅವನ್ದು ಕಣಯ್ಯ, ಮಂತ್ರಿ ಅ... ಹಿಂಗಿರಬೇಕು' ಅಂತಾರೆ. ಆಗ ಗೌಡ ಏನು ಮಾಡ... ತಿಪ್ಪೆ ಸಾರಿಸಬೇಕಲ್ಲಾ, ತನಿಖೆ ಅಂತ ಮಾಡುಸ್ತಾನೆ. ... ಆರೋಪದಲ್ಲಿ ಉಪ್ಪು ಹುಳಿ ಯಾವುದೂ ಇಲ್ಲ ಅ... ಬರುಸ್ತಾನೆ!

ಕಿಲೀನ್ ಚಿಟ್ ಸಿಗ್ತಲ್ಲ, ಇನ್ನೇನು ಮಂತ್ರಿಯಾಗ... 'ಸಜ್ಜನ' ಪ್ರಭಾವಳಿ ನೆರಳಲ್ಲಿ ನಿರಾತಂಕವಾಗಿ ತನ್ನ ... ಬೇಯಿಸಿಕೊಳ್ತಾನೆ!

ಇಂತಹ ಸಜ್ಜನ ಸಾವಾಸ ಹೆಜ್ಜೇನ ಹುಳ ಕಡಿದ... ಇರುತ್ತೇನೋ....

'ಕಂಡಹಾಗೆ' ಯುಪಿಎ ಸರ್ಕಾರದ ಗೋಮುಖ ವ್ಯಾಘ್ರತನವನ್ನು ತೋರಿಸಿತು



ಬಡವರು ಕೂಳಿಲ್ಲದೆ ಸಾಯುತ್ತಲಿದ್ದಾರೆ. ಕಾರ್ಮಿಕರು ದುಡಿದು ದುಡಿದು ಮುಟ್ಟುಗಿಯಾಗಿದ್ದಾರೆ. ರೈತರು ಪಾಪು-ಚಟಾಕು ಜ್ವಾಳಕ್ಕೂ ಕಡ ಬೇಡುವಂತಾಗಿದೆ. ಸರ್ಕಾರಗಳ ಸುಡುಗಾಡು ಆರ್ಥಿಕ ನೀತಿಗಳು ಜನರ ಹೊಟ್ಟೆಗೆ ನಾಲ್ಕು ಅಗುಳು ತಲುಪಿಸುತ್ತಿಲ್ಲ. ವರ್ಷದಿಂದ ವರ್ಷಕ್ಕೆ ಆಯವ್ಯಯದ ಮೊತ್ತ ಗಗನಮುಖಿಯಾಗಿದೆಯೇ ಹೊರತು, ಬಡ ಗುಡಿಸಲುಕಾರನ ದೇಹಕ್ಕೆ ಸತುವು ತಂದುಕೊಟ್ಟಿಲ್ಲ.

ಸಾಮಾನ್ಯ ಜನರಿಗಾಗಿ ಯೋಜನೆ ರೂಪಿಸುತ್ತೇವೆ ಎಂದು ಬಡಬಡಿಸುವ ನಿಷ್ಕರುಣಿ ಭೂರಿ ಭೋಜನಕಾರರ ಖರ್ಚು-ವೆಚ್ಚ ಗಮನಿಸಿದರೆ ಇವರೆಂಥಾ ಮಹಾನ್ 'ಯೋಜನಕಾರರು' ಎಂದು ಗೊತ್ತಾಗುತ್ತದೆ. ಪರದೇಶದೊಂದಿಗೆ ಯಾವುದೋ ಒಪ್ಪಂದ ಮಾಡಿಕೊಂಡ, ಮಾಡಿಕೊಳ್ಳುವ ಕಾರಣಕ್ಕೆ ಆ ದೇಶಗಳು ಹೇಳಿದಂತೆ ಕುಣಿಯುವ ಸರ್ಕಾರಗಳು ಎಷ್ಟು ಜನಪರವಾಗಿ ಯೋಚಿಸಬಲ್ಲವು? ನಮ್ಮನ್ನೇ ನಾವು ಕೇಳಿಕೊಳ್ಳಬೇಕಾದ ಪ್ರಶ್ನೆ, ಪಕ್ಷ, ಸ್ವಹಿತ ಹೊರತುಪಡಿಸಿ ಕನಿಷ್ಠ ಜನಹಿತ ಬಯಸದ ಇವುಗಳು ನೀಡುವ ಕೊಡುಗೆಯಾದರೂ ಎಂತದ್ದು?

ಗೋದಾಮುಗಳಲ್ಲಿ ಲಕ್ಷಾಂತರ ಟನ್ ಆಹಾರ ಧಾನ್ಯ ಕೊಳೆಯುತ್ತಿದ್ದರೂ, ಹಸಿವಿನಿಂದ ಬಳಲುತ್ತಿರುವ ಕುಟುಂಬಗಳಿಗೆ ತಲುಪಿಸದೇ ಜನದ್ರೋಹಿತನವನ್ನು ಪ್ರದರ್ಶಿಸಿರುವ ಕೇಂದ್ರ ಸರ್ಕಾರ ಅಧಿಕಾರದಲ್ಲಿ ಯಾವ ನೈತಿಕತೆಯಿಂದ ಉಳಿದುಕೊಂಡಿದೆ ಎನ್ನುವುದು ಆದಕ್ಕೆ ಗೊತ್ತು. ಬಡವರ ಕುಣಿಯ ಮೇಲೆ ಹೋಳಿಗೆ ಊಟ ಮಾಡುತ್ತಿರುವ ಸರ್ಕಾರಗಳಿಗೆ ಸರಿಯಾದ ಛಾಟಿ ಬೀಸಲು ಕೈ ಹುರಿಗೊಳಿಸಿಕೊಳ್ಳಬೇಕಾಗಿದೆಯಷ್ಟೆ. 'ಕಂಡಹಾಗೆ' ಲೇಖನ ಯುಪಿಎ ಸರ್ಕಾರದ ಗೋಮುಖ ವ್ಯಾಘ್ರತನವನ್ನು ತೋರಿಸಿತು. ಮೇಡಂ ಅವರಿಗೆ ಧನ್ಯವಾದಗಳು.

- ಬಸವರಾಜ ಹಳ್ಳಿ, ಹುಮ್ನಾಬಾದ್

ರಹೀಮ್ ಅವರಿಂದ ಹಿಂದೂತ್ವವಾದಿಗಳು ಮಾನವೀಯತೆ ಕಲಿಯಲಿ

ಮುಸಲ್ಮಾನರೆಂದರೆ ಭಯೋತ್ಪಾದಕರು, ಮುಸ್ಲಿಂ ಯುವಕರದ್ದು ಹಿಂದೂ ಹೆಣ್ಣುಗಳನ್ನು ಪಟಾಯಿಸಿ ಲವ್ ಜಿಹಾದ್ ಮೂಲಕ ಮತಾಂತರಗೊಳಿಸುವುದೇ ಮುಖ್ಯ ಕಾಯಕ ಎಂದು ಮುಸ್ಲಿಮರ ವಿರುದ್ಧ ಇಲ್ಲಸಲ್ಲದ ಕಟ್ಟುಕತೆಗಳನ್ನು ಕಟ್ಟಿ ಸಮಾಜದಲ್ಲಿ ದ್ವೇಷ ಬಿತ್ತುವ ಹಿಂದೂತ್ವ ವಾದಿ ಗಳು ಹಾಗು ಇಂತವಕ್ಕೆಲ್ಲ ನೀರೆರೆಯುವ ಧಾರ್ಮಿಕತೆಯ ಸೋಗಿನ ಮಠಾಧೀಶರುಗಳು ರಹೀಮರಂತವರಿಂದ ಕಲಿಯುವುದು ಬಹಳಷ್ಟಿದೆ.

ತಾನೇ ಖುದ್ದು ಸಮಸ್ಯೆಯಲ್ಲಿ ಮುಳುಗಿದ್ದರೂ ಮಹಿಳೆಯರೂ ಸೇರಿದಂತೆ ಇತರ ಸಹ ಪ್ರಯಾಣಿಕರಿಗಿಂತ ಭಿನ್ನವಾಗಿ ಕಷ್ಟದಲ್ಲಿದ್ದ ಮಹಿಳೆಯೊಬ್ಬರ ನೋವು-ದುಗುಡಕ್ಕೆ ಸ್ಪಂದಿಸಿದ ರಹೀಂ ಅಭಿನಂದನಾರ್ಹರು. ಅಪಾಯವನ್ನು ಮೈಮೇಲೆಳೆದುಕೊಂಡು ಅನ್ಯರ ಸಹಾಯಕ್ಕೆ ಮುನ್ನುಗ್ಗುವ ಮುಸಲ್ಮಾನರನ್ನು ನಾನೇ ಕಣ್ಣಾರೆ ನೋಡಿದ್ದೇನೆ. ಆದರೀಗ ಅಂತಹ ವಾತಾವರಣ ಕರಾವಳಿ ಜಿಲ್ಲೆಯಲ್ಲಿ ಇಲ್ಲವೆಂಬುದೂ ಸತ್ಯ. ಮುಸ್ಲಿಮ್ ಒಬ್ಬರು ಹಿಂದೂ ಒಬ್ಬರನ್ನು ಮಾತನಾಡಿಸಿದರೆ ಅವರಿಬ್ಬರನ್ನು "ವಿಚಾರಿಸುವ" ಅನೈತಿಕ ಪೊಲೀಸರು ಗಸ್ತು ತಿರುಗುವ ಕಾಲ ಇದು. ಆದರೂ ರಹೀಮರಂತವರು ಇವ್ಯಾವುವನ್ನೂ ನೋಡಹೋಗರು.

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.




ಮೊನ್ನೆ ಪುತ್ತೂರಿನ ಬೆಟ್ಟಂಪಾಡಿ ಎಂಬಲ್ಲಿ ತಲೆಕೆಟ್ಟ ಬ್ರಾಹ್ಮಣನೊಬ್ಬ ಕಾಲೇಜಿಗೆ ಹೋಗುವ ವಯಸ್ಸಿನ ತನ್ನ ಮೂರು ಮಕ್ಕಳು ಹಾಗು ಹೆಂಡತಿಯನ್ನು ಕಡಿದು ಕೊಲೆ ಮಾಡಿದ್ದ, ಮೀಟರ್ ರೀಡರ್ ಪತ್ತೆ ಹಚ್ಚಿದ ಈ ಶವಗಳು ಕೊಳೆತು ವಾಸನೆ ಹೊಡೆಯುತ್ತಿದ್ದವು. ಬಿಸಿ ಸುದ್ದಿ ನೋಡಲುಬಂದ ನೂರಾರು ಮಂದಿಗಳಲ್ಲಿ ಈ ಭಟ್ಟನ ಶವ ಸಾಗಣೆಗೆ ಪೊಲೀಸರಿಗೆ ಸಹಕರಿಸಿದವರು ಮಾತ್ರ ಆ ಗುಂಪಿನಲ್ಲಿದ್ದ ಮುಸಲ್ಮಾನ ಯುವಕರು.

ಜನಪರ ನಿಲುವಿನ ಹಿರಿಯ ಹೋರಾಟಗ... ಬಿ.ವಿ.ಕಕ್ಕಿಲ್ಲಾಯರ ನಿಧನ ಮುಖ್ಯವಾಗಿ ಕೋಮುವಾದದ... ನಲುಗುತ್ತಿರುವ ಕರಾವಳಿ ಜಿಲ್ಲೆಗೆ ದೊಡ್ಡ ನಷ್ಟ. ಜನ... ಚಿಂತನೆಯ 'ಲಂಕೇಶ್' ವಾರಪತ್ರಿಕೆಯನ್ನು ಮೆಚ್ಚಿದ್ದ ಕಕ್ಕಿಲ್ಲಾ... ಹಾಗು ಕೆ.ಜಿ.ಶೆಟ್ಟಿ ಕಡಂದಲೆಯಂತ ಹಿರಿಯರ ಅ... ಈ ಜಿಲ್ಲೆಗಿತ್ತು.

ಪೇಜಾವರ ಮಠದ ಕಾರ್ಯದರ್ಶಿಯವರ ಪ... ತಿರುಳು ನಮ್ಮ ಮಾಜಿ ಸಿ.ಎಂ.ಯಡಿಯೂರ... ಮಾತಿನಂತೆಯೇ ಇದೆ. ಏನೋ ಹೇಳಬೇಕ... ಹೇಳಲಾಗಿದೆಯೇ ಹೊರತು ಆ ಮಾತಿನಲ್ಲಿ ಹುರುಳೇನಿ... ಸಹಪಂಕ್ತಿ ಭೋಜನದ ಕುರಿತು ಪೇಜಾವರರ ನಿಲು... ಏನೆಂಬುದನ್ನ ಕನ್ನಡಪ್ರಭದಲ್ಲಿಯೇ ವಿಸ್ತೃತವ... ಚರ್ಚಿಸಲಾಗಿದೆ. ಮಾನ್ಯ ಕಾರ್ಯದರ್ಶಿಯವರು ಅಂದ... ಪೇಜಾವರರು ಸಹಪಂಕ್ತಿ ಭೋಜನದ ಪರವಾಗಿದ್ದದ್ದೇ ಆ... ಬಾಯಲ್ಲಿ ಹೇಳುವ ಬದಲು ಉಳಿದವರನ್ನು ... ಪಂಕ್ತಿಭೋಜನಕ್ಕೆ ಕರೆದು ಅಥವಾ ತಾನೇ ಶೂದ್ರ ಪಂಕ್ತಿಯ... ಕೂತು ಎಲ್ಲರನ್ನು ಬಾಯಿ ಮುಚ್ಚಿಸುತ್ತಿದ್ದರು.

- ರವಿ ಪುತ್ತೂರ್, ...



ಶಾಮನೂರರು ವಿಶ್ರಾಂತಿ ಪಡೆಯಲಿ

ದಾವಣಗೆರೆಯ ರಾಜಕಾ... ಶಾಮನೂರು ಶಿವಶಂಕರಪ್ಪನವರ ...

ಮತ್ತೊಮ್ಮೆ 'ಮರೆಯಲಾರೆ'







ಹಳೆಯ ಚಿತ್ರಗಳ ಅಥವಾ ಹಾಡುಗಳ ಹೆಸರನ್ನು ತಮ್ಮ ಹೊಸ ಚಿತ್ರಗಳಿಗೆ ಇಡುವುದು ಗಾಂಧಿನಗರದಲ್ಲಿ ಈಗ ಹೊಸ ಟ್ರೆಂಡ್ ಆಗಿದೆ. ಮೊನ್ನೆ ಪುನೀತ್ ರಾಜ್‌ಕುಮಾರ್ ಅಭಿನಯಿಸುತ್ತಿರುವ ಹೊಸ ಚಿತ್ರಕ್ಕೆ 'ಯಾರೇ ಕೂಗಾಡಲಿ' ಎಂದು ಹೆಸರಿಡಲಾಗಿತ್ತು. ಈಗ ಶಿವರಾಜ್‌ಕುಮಾರ್ ನಟಿಸುತ್ತಿರುವ ಹೊಸ ಚಿತ್ರಕ್ಕೆ 'ನಾ ನಿನ್ನ ಮರೆಯಲಾರೆ' ಎಂದು ಹೆಸರಿಡಲಾಗಿದೆ.

ಡಾ. ರಾಜ್‌ಕುಮಾರ್ ಅಭಿನಯದ 'ನಾ ನಿನ್ನ ಮರೆಯಲಾರೆ' ಚಿತ್ರವನ್ನು ಯಾರಿಗೆ ತಾನೇ ಮರೆಯಲು ಸಾಧ್ಯ? ಅದೇ ಹೆಸರಿನ ಚಿತ್ರದಲ್ಲಿ ಈಗ ರಾಜ್‌ಕುಮಾರ್ ಅವರ ಮಗ ಶಿವರಾಜ್‌ಕುಮಾರ್ ನಟಿಸುತ್ತಿರುವುದು ವಿಶೇಷ. ಆದರೆ ಈ ಚಿತ್ರ ಖಂಡಿತವಾಗಿಯೂ ಹಳೆಯ ಚಿತ್ರದ ರೀಮೇಕ್ ಅಲ್ಲವಂತೆ.


ಅಂದಹಾಗೆ, ಈ ಚಿತ್ರವನ್ನು ಹಳೆಯ ತಲೆಮಾರಿನ ನಿರ್ದೇಶಕ ಡಿ. ರಾಜೇಂದ್ರಬಾಬು ನಿರ್ದೇಶಿಸುತ್ತಿದ್ದಾರೆ. ಅಷ್ಟೇ ಅಲ್ಲ, ರಾಜೇಂದ್ರಬಾಬು ಮತ್ತು ಶಿವರಾಜ್‌ಕುಮಾರ್ ಸುಮಾರು ಒಂಭತ್ತು ವರ್ಷಗಳ ನಂತರ ಮತ್ತೆ ಜೊತೆಯಾಗಿ ಕೆಲಸ ಮಾಡುತ್ತಿದ್ದಾರೆ. ಈ ಹಿಂದೆ ಇವರಿಬ್ಬರ ಜೋಡಿಯ ಅನೇಕ ಚಿತ್ರಗಳು ಬಾಕ್ಸ್ ಆಫೀಸ್‌ನಲ್ಲಿ ಹಣವನ್ನು ಲೂಟಿ ಮಾಡಿದ್ದವು. ಅವುಗಳಲ್ಲಿ ಮುಖ್ಯವಾಗಿ 'ಪ್ರೀತ್ಸೆ' ಮತ್ತು 'ಕುರುಬನ ರಾಣಿ' ತಟ್ಟನೆ ನೆನಪಿಗೆ ಬರುವಂತಹ ಚಿತ್ರಗಳು.

ಸ್ನೇಹಿತರ ಮಧ್ಯೆ ಪೈಪೋಟಿ

ಮತ್ತೆ ಛೇಂಬರ್ ಚುನಾವಣೆಗೆ ವೇದಿಕೆ ಸಜ್ಜಾಗುತ್ತಿದೆ. ಕಳೆದ ಬಾರಿ ಥಿಯೇಟರ್ ಮಾಲಿಕರು ಅಧ್ಯಕ್ಷರಾದರೆ ಈ ಬಾರಿಯ ಸರದಿ ಸಿನಿಮಾ ನಿರ್ಮಾಪಕರದ್ದು. ಈಗಾಗಲೇ ಅಧ್ಯಕ್ಷ ಪದವಿಗೆ ರಾಜೇಂದ್ರ ಸಿಂಗ್ ಬಾಬು, ರಾಕ್‌ಲೈನ್ ವೆಂಕಟೇಶ್ ಮತ್ತು ಬಿ.ಎನ್.ಗಂಗಾಧರ್‌ರವರ ಹೆಸರು ಕೇಳಿಬರುತ್ತಿದೆ. ವಿಶೇಷವೆಂದರೆ ಈ ಮೂವರೂ ಅತ್ಯಂತ ಆತ್ಮೀಯ ಸ್ನೇಹಿತರು. ನಿರ್ಮಾಪಕರಾಗಿ ಕನ್ನಡ ಚಿತ್ರರಂಗಕ್ಕೆ ಈ ಮೂವರ ಕೊಡುಗೆಯೂ ಬಹಳ ದೊಡ್ಡದು. ಇನ್ನೂ ಒಂದು ವಿಶೇಷವೆಂದರೆ, ಈ ಮೂವರಲ್ಲಿ ಯಾರೂ ಈತನಕ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷರಾಗಿದ್ದೇ ಇಲ್ಲ. ಈಗ ಈ ಸ್ನೇಹಿತರೇ ಪರಸ್ಪರರ ವಿರುದ್ಧ ಆಖಾಡಕ್ಕೆ ಇಳಿಯುತ್ತಿರುವುದು ಆಶ್ಚರ್ಯಕರವಾಗಿದೆ.

ರಾಕ್‌ಲೈನ್ ವೆಂಕಟೇಶ್ ಈಗ ಕಲಾವಿದರ ಸಂಘದ ಕಾರ್ಯದರ್ಶಿ ಆಗಿದ್ದಾರೆ. ಮತ್ತೊಂದೆಡೆ ಅವರ ಹತ್ತಿರದ ಬಂಧು ಮುನಿರತ್ನಂ ನಾಯ್ಡು ಅವರು ನಿರ್ಮಾಪಕರ ಸಂಘದ ಅಧ್ಯಕ್ಷರಾಗಿದ್ದಾರೆ. ಸ್ವತಃ ರಾಕ್‌ಲೈನ್ ರಾಜ್‌ಕುಮಾರ್ ಕ್ಯಾಂಪ್, ವಿಷ್ಣು ಕ್ಯಾಂಪ್ ಮತ್ತು ಅಂಬರೀಷ್ ಕ್ಯಾಂಪ್ - ಈ ಮೂರೂ ಕಡೆ ಗುರುತಿಸಿಕೊಂಡು ಚಿತ್ರರಂಗದ ಮಟ್ಟಿಗೆ ಅಜಾತಶತ್ರು ಎಂದೆನಿಸಿಕೊಂಡಿದ್ದಾರೆ. ಹೀಗಾಗಿ ಸದ್ಯದ ಪರಿಸ್ಥಿತಿಯಲ್ಲಿ ಈ ಮೂರು ಜನ ಸ್ಪರ್ಧಿಗಳ ಪೈಕಿ ರಾಕ್‌ಲೈನ್ ಮುಂಚೂಣಿಯಲ್ಲಿದ್ದಾರೆ ಎಂದು ಹೇಳಬಹುದು. ಆದರೆ ಚುನಾವಣಾ ಸಂದರ್ಭದಲ್ಲಿ ಇನ್ನೇನೇನು ಬೆಳವಣಿಗೆಗಳು ಆಗುತ್ತವೋ ಎಂದು ಹೇಳಲು ಸಾಧ್ಯವಿಲ್ಲ, ಅಲ್ಲಿಯತನಕ ಕಾದು ನೋಡಬೇಕಾಗಿದೆ.



ರಾಜಕಾರಣಿಗಳಿಗೆ ರಮ್ಯಾ ರಗಳೆ!

ಇದು ವಿಧಾನಸೌಧದ ಕಾರಿಡಾರ್‌ನಲ್ಲಿ ಕೇಳಿಬರುತ್ತಿರುವ ಸಿನಿದಾ ಸುದ್ದಿ, ಅದೇನೆಂದರೆ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಮಲ್ಲೇಶ್ವರಂ ಕ್ಷೇತ್ರದಿಂದ ಸ್ಪರ್ಧಿಸಬೇಕೆಂದು ಕನ್ನಡ ಚಿತ್ರರಂಗದ ನಂಬರ್ ಒನ್ ನಾಯಕಿ ರಮ್ಯಾ ಅವರಿಗೆ ಕಾಂಗ್ರೆಸ್ ಹೈಕಮಾಂಡ್ ಸೂಚನೆ ನೀಡಿದೆಯಂತೆ.


ಈ ಸುದ್ದಿಯನ್ನು ರಮ್ಯ ಆಗಲಿ, ಕಾಂಗ್ರೆಸ್ ಪಕ್ಷವಾಗಲಿ ಇನ್ನೂ ದೃಢಪಡಿಸಿಲ್ಲ, ಆದರೆ ಮಲ್ಲೇಶ್ವರಂ ಕ್ಷೇತ್ರವನ್ನು ಈಗ ಪ್ರತಿನಿಧಿಸುತ್ತಿರುವ ಬಿಜೆಪಿಯ ಅಶ್ವಥ್ ನಾರಾಯಣ್ ಅವರು ಈ ಸುದ್ದಿಯನ್ನು ಕೇಳಿ ತಬ್ಬಿಬ್ಬಾಗಿದ್ದಾರೆ. ಮೊನ್ನೆ ಅವರು ತಮ್ಮ ಪಕ್ಷದ ಕಾರ್ಯಕರ್ತರನ್ನೆಲ್ಲ ಕರೆದು, "ನೋಡಿ! ಕಾಂಗ್ರೆಸ್‌ನವರು ನನ್ನ ವಿರುದ್ಧ ರಮ್ಯಾಳನ್ನು ಸ್ಪರ್ಧೆಗೆ ನಿಲ್ಲಿಸುತ್ತಾರಂತೆ. ನಾವು ಯಾವುದೇ ಕಾರಣಕ್ಕೂ ಈ ಸುದ್ದಿಯನ್ನು ನಿರ್ಲಕ್ಷಿಸಬಾರದು" ಎಂದು ತಮ್ಮ ಹಿಂಬಾಲಕರನ್ನು ಹುರಿದುಂಬಿಸಿದ್ದಾರೆ.

ಕನ್ನಡ ಸಿನಿಮಾದ ಕೆಲವು ನಾಯಕ-ನಾಯಕಿಯರನ್ನು ಕೆಲಕಾಲ ವಿವಿಧ ಕಾರಣಗಳಿಗಾಗಿ ದುಃಸ್ವಪ್ನವಾಗಿ ಕಾಡಿದ್ದ ರಮ್ಯಾ ಮುಂಬರುವ ದಿನಗಳಲ್ಲಿ, ಬೆಂಗಳೂರು ನಗರದ ಹಾಲಿ ಚಡ್ಡಿ ಶಾಸಕರನ್ನೂ ದುಃಸ್ವಪ್ನದಂತೆ ಕಾಡಿದರೆ ಅಚ್ಚರಿ ಇಲ್ಲ!!

ಇಮ್ರಾನ್‌ನ ಹೊಸ ತಾಳ

ಹರ್ಷ ನಂತರ ಕನ್ನಡದ ಮತ್ತೊಬ್ಬ ಪ್ರತಿಭಾವಂತ ನೃತ್ಯ ನಿರ್ದೇಶಕ ಇಮ್ರಾನ್ ಸರ್ದಾರಿಯ ಈಗ ನಿರ್ದೇಶಕರಾಗಿ ಬಡ್ತಿ ಪಡೆದಿದ್ದಾರೆ. ಇತ್ತೀಚಿನ ದಿನಗಳಲ್ಲಿ ಇಮ್ರಾನ್ ತನ್ನ ಅತ್ಯುತ್ತಮವಾದ ನೃತ್ಯ ಸಂಯೋಜನೆಯಿಂದ ಗಾಂಧಿನಗರದ ಎಲ್ಲ ನಾಯಕ-ನಾಯಕಿಯರಿಗೂ ಇಷ್ಟವಾಗಿದ್ದರು. ಇಂತಹ ಇಮ್ರಾನ್ ಪ್ರತಿಭೆಯನ್ನು ಗುರುತಿಸಿ ಅವರನ್ನು ನಿರ್ದೇಶನದ ಕೆಲಸಕ್ಕೆ ಹಚ್ಚಿರುವವರು ನಿರ್ಮಾಪಕ ಕೆ. ಮಂಜು.

ಇಮ್ರಾನ್ ತಮ್ಮ ಹೊಸ ಚಿತ್ರಕ್ಕೆ ದಿಗಂತ್, ಪ್ರಜ್ವಲ್ ಮತ್ತು ಯೋಗೀಶ್ ಎಂಬ ಯುವನಟರನ್ನು ಆಯ್ಕೆಮಾಡಿದ್ದಾರೆ. ಈ ಮೂವರು ಮೊದಲ ಬಾರಿಗೆ ಒಂದು ಚಿತ್ರದಲ್ಲಿ ಜೊತೆಯಾಗಿ ನಟಿಸುತ್ತಿರುವುದು ವಿಶೇಷ. ಇವರೊಂದಿಗೆ ಮೂರು ಜನ ನಾಯಕರು ಇರುತ್ತಾರೋ ಎಂಬುದು ಸ್ಪಷ್ಟವಾಗಿಲ್ಲ. ಇಮ್ರಾನ್ ಸ್ವತಃ ನೃತ್ಯ ನಿರ್ದೇಶಕರಾಗಿರುವುದರಿಂದ ಚಿತ್ರದಲ್ಲಿ ನೃತ್ಯಕ್ಕೆ ಸಿಕ್ಕಾಪಟ್ಟೆ ಸ್ಕೋಪ್ ಇರುತ್ತಾ ಎಂದು ಕೇಳಿದರೆ "ಈ ಚಿತ್ರ ಖಂಡಿತವಾಗಿಯೂ ನೃತ್ಯಪ್ರಧಾನ ಚಿತ್ರವಲ್ಲ, ಬದಲಾಗಿ ಇದು ಸಾಹಸಮಯ ಮತ್ತು ಹಾಸ್ಯಮಯ ಚಿತ್ರ" ಎನ್ನುತ್ತಾರೆ ಇಮ್ರಾನ್.



ಅಂದಹಾಗೆ ತನ್ನ ಚೊಚ್ಚಲ ನಿರ್ದೇಶನದ ಚಿತ್ರಕ್ಕೆ ಇಮ್ರಾನ್ ಒಳ್ಳೆಯ ತಂತ್ರಜ್ಞರನ್ನೇ ಆರಿಸಿಕೊಂಡಿದ್ದಾರೆ. ಛಾಯಾಗ್ರಹಣದ ಕೆಲಸವನ್ನು ಸತ್ಯ ಹೆಗ್ಡೆ ವಹಿಸಿಕೊಂಡಿದ್ದರೆ, ಸಂಗೀತದ ಜವಾಬ್ದಾರಿಯನ್ನು ಹರಿಕೃಷ್ಣ ಅವರೂ, ಸಂಕಲನದ ಕೆಲಸವನ್ನು ದೀಪು ಅವರು ವಹಿಸಿಕೊಂಡಿದ್ದಾರೆ.

ಕಳೆದ ಹಲವಾರು ವರ್ಷಗಳಿಂದ ನೃತ್ಯ ನಿರ್ದೇಶಕರಾಗಿ ಹರ್ಷ ಮತ್ತು ಇಮ್ರಾನ್ ಕನ್ನಡ ಚಿತ್ರರಂಗದಲ್ಲಿ ಅತ್ಯಂತ ಬೇಡಿಕೆಯನ್ನು ಹೊಂದಿದ್ದರು. ಈಗ ಇವರಿಬ್ಬರೂ ಪೂರ್ಣಪ್ರಮಾಣದ ನಿರ್ದೇಶಕರಾಗಿ ಪರಿವರ್ತನೆಗೊಳ್ಳುತ್ತಿರುವುದರಿಂದ ಕನ್ನಡ ಚಿತ್ರರಂಗದಲ್ಲಿ ನೃತ್ಯ ನಿರ್ದೇಶಕರ ಕೊರತೆ ಎದ್ದುಕಾಣುತ್ತಿದೆ. ಮುಂಬರುವ ದಿನಗಳಲ್ಲಿ ಈ ಕಾರಣದಿಂದಾಗಿ ಪರಭಾಷಾ ನೃತ್ಯ ನಿರ್ದೇಶಕರು ಕನ್ನಡಕ್ಕೆ ಬಂದು ಮೊಕ್ಕಾಂ ಹೂಡಿದರೂ ಆಶ್ಚರ್ಯವಿಲ್ಲ.

-ಶೆಣೈ

...ಪಿಸುತ್ತಾ ನಿಮ್ಮ ವರದಿಗಾರರು ಕಾಂಗ್ರೆಸ್ ಪಕ್ಷ ಅವರಿಗೆ ...ತ್ತು ವರ್ಷಗಳಿಂದಲೂ ಅನ್ಯಾಯ ಮಾಡುತ್ತಲೇ ಬಂದಿದೆ ...ದಿರುವುದು ಸರಿಯಲ್ಲ. ವಿಪರ್ಯಾಸವೆಂದರೆ ...ನೂರು ಶಿವಶಂಕರಪ್ಪನವರು ವಿಧಾನಸಭೆಗೋ, ...ಕಸಭೆಗೋ ಆಯ್ಕೆಯಾದಾಗಲೆಲ್ಲಾ ಕಾಂಗ್ರೆಸ್ ...ಕಾರದಲ್ಲಿರಲಿಲ್ಲ, ಅದಲ್ಲದೇ ಅವರ ಮಗ ಮಲ್ಲಿಕಾರ್ಜುನ ...ಗ್ರೆಸ್‌ನಿಂದಲೇ ಶಾಸಕರಾಗಿ, ಮಂತ್ರಿಯೂ ಆಗಿದ್ದರು. ...ಹೋದಸಲ ವಿಧಾನಸಭೆ ಚುನಾವಣೆ ಸಮಯದಲ್ಲಿ ...ಮಕ್ಕಳ ಸಣ್ಣತಪ್ಪು ಮತ್ತು ಇವರ ಹಿಂಬಾಲಕರ ...ರ್ಷನದಿಂದಲೇ ಒಬ್ಬ ಅಲ್ಪಸಂಖ್ಯಾತ ಮುಖಂಡನಿಗೆ ...ನಾವಣೆಗೆ ಸ್ಪರ್ಧಿಸುವ ಅವಕಾಶ ತಪ್ಪುತ್ತಲ್ಲದೇ, ಪ್ರಾರಂಭ ...ಕ ಕಾಂಗ್ರೆಸ್ ಪಕ್ಷಕ್ಕೆ ಸೋಲಿನ ಬೋಣಿಗೆಯಾಯಿತು.

ಇವರಿಬ್ಬರು ಸ್ವಲ್ಪ ತಾಳ್ಮೆ, ...ಯಮದಿಂದ ವರ್ತಿಸಿದ್ದರೆ ಬಹುಶಃ ...ಂದಿನ ಲೋಕಸಭೆ ಚುನಾವಣೆ... ...ಲ್ಲಿ ಅವರ ಮಗ ಮಲ್ಲಿಕಾರ್ಜುನ ...ಲ 2-3 ಸಾವಿರ ಮತಗಳ ...ಅಂತರದಲ್ಲಿ ಸೋಲುತ್ತಿರಲಿಲ್ಲ.

...ಈಗಲೂ ಚುನಾವಣೆ ಬಂದರೆ ...ಮಕ್ಕಳಿಗೆ ಪರಿಸ್ಥಿತಿಗೆ ತಕ್ಕಂತೆ ...ಗ್ರೆಸ್‌ನಲ್ಲಿ ಪ್ರಥಮ ಆದ್ಯತೆ ಇದ್ದೇ ...ತ್ತದೆ. ಆದರೂ ಈ ವಯಸ್ಸಿನಲ್ಲಿ ...ನೂರರು ತಮ್ಮ ಮಕ್ಕಳನ್ನು ರಾಜ ...ಕೆ ಬಿಟ್ಟು, ಕೆ.ಎಚ್ ರಂಗನಾಥ್, ...ನ್‌ರವರಂತೆ ವಿಶ್ರಾಂತ ...ಜೀವನ) ಜೀವನದ ಬಗ್ಗೆ



ಯೋಚಿಸಿದರೆ ಅವರ ಹಿರಿಮೆಯನ್ನು ಹೆಚ್ಚುತ್ತದೆ.

- ಅಹ್ಮದ್ ಷರೀಫ್, ದಾವಣಗೆರೆ

ನಿರಾಣಿಯ ಗೂಂಡಾಗಿರಿ



ಜುಲೈ 4 ರ ಸಂಚಿಕೆಯಲ್ಲಿ 'ನಿರಾಣಿಯ ಗೂಂಡಾಗಿರಿ!' ಎಂಬ ವರದಿ ಓದಿ ಬೆಚ್ಚಿಬಿದ್ದೆ. ಅತ್ತ 'ದೇಶದ ಬೆನ್ನೆಲುಬು ರೈತ' ಎಂದು ಸರ್ಕಾರ ಘಂಟಾಘೋಷವಾಗಿ ಹೇಳುತ್ತಿದ್ದರೆ, ಇತ್ತ ಬೃಹತ್ ಕೈಗಾರಿಕಾ ಮಂತ್ರಿ ಮುರುಗೇಶ್ ನಿರಾಣಿ ರೈತನೊಬ್ಬನ ಕಪಾಳಮೋಕ್ಷ ಮಾಡಿರುವುದನ್ನು ನೋಡಿದರೆ ನಿರಾಣಿಯ ಸೊಕ್ಕು ಅಧಿಕಾರದ ಮದ ಯಾವ ಮಟ್ಟಕ್ಕೆ ಹೋಗಿದೆ ಎಂದು ಅರ್ಥವಾಗುತ್ತದೆ. ಬಾಡಿಗೆ ಗೂಂಡಾಗಳನ್ನು ಕರೆಸಿ ರೈತರ ಮೇಲೆ ಗೂಂಡಾಗಿರಿ ನಡೆಸುವ ಈ ರೈತ ವಿರೋಧಿ ನಿರಾಣಿಯ ನಿಜಬಣ್ಣವನ್ನು ಬಯಲು ಮಾಡಿರುವ ಪತ್ರಿಕೆಗೆ ವಂದನೆಗಳು.

- ರಾಮಜಾನ್ ಕೆ. ಕೊರ್ತಿ, ಬಾದಾಮಿ

ನಮ್ಮ ದೇಶವನ್ನು ಕಾಂಗ್ರೆಸ್ ಆರ್ಥಿಕವಾಗಿ ಹಾಳುಮಾಡುತ್ತಿದೆ. ಸಾಮಾಜಿಕವಾಗಿ ಬಿಜೆಪಿ ಹಾಳು ಮಾಡುತ್ತಿದೆ. ಈ ಎರಡೂ ಪಕ್ಷಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. 'ಬಡವರ ಬಟ್ಟೆ ಕಸಿದು ಶ್ರೀಮಂತ ದೇಶಗಳ ಕಣ್ಣೀರು ಒರೆಸುವ ಪ್ರಧಾನಿ' ಎಂಬ ಗೌರಿ ಲಂಕೇಶರ ಬರಹ ಪ್ರಧಾನಿ ಮನಮೋಹನ್ ಸಿಂಗ್ ಮತ್ತು ಅವರ ಸರ್ಕಾರದ ನಿಜಬಣ್ಣವನ್ನು ಬಯಲಾಗಿಸಿದೆ. ಪತ್ರಿಕೆ ಹೀಗೇ ಮುಂದುವರೆಯಲಿ.

- ವಿಕಾಸ್ ಆರ್. ಮೌರ್ಯ, ಬೆಂಗಳೂರು

ಪ್ರವೀಣ್ ಎಸ್. ಶೆಟ್ಟಿ ಅವರ ಈ ವಾರದ ಪತ್ರವನ್ನು ಪೇಜಾವರ ಸ್ವಾಮಿ ಮತ್ತು ಅವರ ಪಟಾಲಂ ಓದುವಂತಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು.

- ರವಿಕುಮಾರ್, ಹಾಸನ

ಜೂನ್ 27 ರ ಸಂಚಿಕೆಯಲ್ಲಿನ ಕಂಡಹಾಗೆ ಅಂಕಣದಲ್ಲಿನ 'ಅವತಾರ್ ಸಿಂಗ್‌ನೊಂದಿಗೆ ಸತ್ತ ಸತ್ಯಗಳು...' ಓದಿ ಇದನ್ನು ಬರೆಯುತ್ತಿದ್ದೇನೆ.

ಈ ದೇಶದಲ್ಲಿ ಮಾನವ ಹಕ್ಕುಗಳ ರಕ್ಷಣೆಯ ಹೆಸರಿನಲ್ಲಿಯೇ ಸತತವಾಗಿ ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತ ಬಂದಿರುವುದು ಹೊಸತೇನಲ್ಲ. ಸಿಖ್ ಉಗ್ರಗಾಮಿಗಳನ್ನು ಮಟ್ಟ ಹಾಕುವ ನೆಪದಲ್ಲಿ ಸಾವಿರಾರು ಮುಗ್ಧ ಸಿಖ್‌ರನ್ನು ಅಮಾನುಷವಾಗಿ ನಡೆಸಿಕೊಂಡಿದ್ದು, ಕಾಶ್ಮೀರದ ಮುಸ್ಲಿಂ ಯುವಕರನ್ನೆಲ್ಲ ಉಗ್ರಗಾಮಿಗಳು ಎಂಬಂತೆ ಹಣೆಪಟ್ಟಿ ಕಟ್ಟಿ, ಅವರನ್ನು ರಾತ್ರೋರಾತ್ರಿ ಕಣ್ಮರೆ ಮಾಡಿದ್ದು, ಈಶಾನ್ಯದಲ್ಲಿನ ತೀವ್ರಗಾಮಿಗಳನ್ನು ಹತ್ತಿಕ್ಕುವ ನೆಪದಲ್ಲಿ ಅಲ್ಲಿನ ಬುಡಕಟ್ಟು ಜನರ ಮೂಲಭೂತ ಹಕ್ಕುಗಳನ್ನು ನಿರಾಕರಿಸಿದ್ದು, ಇನ್ನು ನಕ್ಸಲ್ ಚಟುವಟಿಕೆ ಹೆಚ್ಚಾಗಿರುವ ಪ್ರದೇಶದಲ್ಲಿನ ಸಾಮಾನ್ಯ ಜನರನ್ನು ನಕ್ಸಲರ ಬೆಂಬಲಿಗರೆಂಬ ನೆಪದಲ್ಲಿ ಪೊಲೀಸರು ವಿಚಾರಣೆಗೊಳಪಡಿಸಿ ಹಿಂಸಿಸುವುದು–ಈ ನಾಡಿನ ಮಟ್ಟಿಗೆ ಹಳೆಯ ಕಾಯಿಲೆ. ದುರಂತವೆಂದರೆ ಸರ್ಕಾರ ಇದೆಲ್ಲವನ್ನೂ ಮಾಡುವುದು ಪ್ರಜಾಪ್ರಭುತ್ವದ ರಕ್ಷಣೆಯ ಹೆಸರಿನಲ್ಲಿ ಮತ್ತು ಹಾಗಂತಲೇ ನಮ್ಮನ್ನು ನಂಬಿಸಲಾಗುತ್ತಿದೆ. ಇದು ಈ ನಾಡಿನ ದುರಂತ!

ಇನ್ನು ಹಿಂದೂತ್ವ ಮತ್ತು ದಲಿತರ ಬಗೆಗಿನ ಲೇಖನ ಕುರಿತು: ಹಿಂದೂತ್ವದ ಬಗ್ಗೆ ಎಲ್ಲರಲ್ಲೂ ನಂಬಿಕೆ ಹುಟ್ಟಿಸುವ ಮತ್ತು ದಲಿತ-ಶೂದ್ರರನ್ನು ಹಿಂದೂತ್ವದ ಬಲೆಯೊಳಗೆ ಕೆಡವಲು ಸಂಘಪರಿವಾರ ಸಾಕಷ್ಟು ಕಸರತ್ತುಗಳನ್ನು ಮಾಡುತ್ತಿರುವುದು ಸರಿಯಷ್ಟೇ. ಈ ದಿಸೆಯಲ್ಲಿ ಅದು ಗ್ರಾಮೀಣ ಪ್ರದೇಶದಲ್ಲಿ ಹೊಸರೀತಿಯ ಚಟುವಟಿಕೆಗಳನ್ನು ಹಮ್ಮಿಕೊಂಡಿದೆ. ಅದೆಂದರೆ ಸಾಮೂಹಿಕ ಸತ್ಯನಾರಾಯಣ ಪೂಜೆಗಳನ್ನು ಹಳ್ಳಿಗಳಲ್ಲಿ ಏರ್ಪಡಿಸಿ ದಲಿತರು-ಶೂದ್ರರು ಅದರಲ್ಲಿ ಭಾಗವಹಿಸುವಂತೆ ಮಾಡುವುದು. ಇಂತಹ ಪೂಜೆಗಳಲ್ಲಿ ಭಾಗವಹಿಸದಿದ್ದರೆ ದೇವರಿಗೆ ಕೋಪ ಬರುತ್ತದೆಯೆಂಬ ಭಯವನ್ನು ಜನರಲ್ಲಿ ಹುಟ್ಟಿಸಿ ಅವರು ಪೂಜೆಗೆ ಬರುವಂತೆ ಮಾಡುವುದು ಸಂಘಪರಿವಾರದ ಹೊಸ ತಂತ್ರವಾಗಿದೆ. ಆ ಭಾಗದ ಶ್ರೀಮಂತ ವರ್ತಕರ ಬಳಿ ಅಪಾರ ಹಣ ಸಂಗ್ರಹಿಸಿ ಇಂತಹ ಪೂಜೆಗಳನ್ನು ಏರ್ಪಡಿಸಿ ದಲಿತ ಮತ್ತು ಶೂದ್ರರಲ್ಲಿ ವೈದಿಕ ಆಚರಣೆಗಳೇ ಶ್ರೇಷ್ಠವೆನ್ನುವ ಭಾವನೆ ಮೂಡಿಸಿ ಹಿಂದೂತ್ವದ ಬಗ್ಗೆ ಅವರಲ್ಲಿ ಭ್ರಮೆಯನ್ನು ಸೃಷ್ಟಿಸಿ ತಮ್ಮ ವೋಟ್ ಬ್ಯಾಂಕನ್ನಾಗಿ ಮಾಡಿಕೊಳ್ಳುವುದು ಸಂಘಪರಿವಾರದ ಫ್ಯಾಸಿಸ್ಟ್ ತಂತ್ರದ ಒಂದು ಭಾಗವಾಗಿದೆ.

ಇವತ್ತು ನಮ್ಮಿಂದಾಗಬೇಕಿರುವ ಕೆಲಸವೆಂದರೆ ಸಂಘಪರಿವಾರದ ಇಂತಹ ಕುತಂತ್ರಗಳನ್ನು ದಲಿತ ಮತ್ತು ಶೂದ್ರ ಸಮುದಾಯಗಳಿಗೆ ಅರ್ಥ ಮಾಡಿಕೊಡುವುದು.

-ಹು.ಸ ಮಧುಸೂದನ್, ರುಗೇನಹಳ್ಳಿ, ತರೀಕೆರೆ

Registered No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 11-07-2012



ವಿಲನ್ ಸುದೀಪ್

ಸುದೀಪ್ ಮುಂದಿನ ವಾರ ಖಳನಾಯಕನಾಗಿ ಕನ್ನಡದ ಪ್ರೇಕ್ಷಕರಿಗೆ ಪರಿಚಿತರಾಗಲಿದ್ದಾರೆ. ಆದರೆ ಕನ್ನಡ ಸಿನಿಮಾದ ಮೂಲಕವಲ್ಲ, ತೆಲುಗು ಚಿತ್ರದ ಮುಖಾಂತರ. ತೆಲುಗಿನ ಪ್ರಖ್ಯಾತ ನಿರ್ದೇಶಕ ರಾಜಮೌಳಿ ನಿರ್ದೇಶಿಸಿರುವ 'ಈಗ' ಮುಂದಿನ ವಾರ ಆಂಧ್ರ ಮತ್ತು ಕರ್ನಾಟಕ ಮಾತ್ರವಲ್ಲ ವಿಶ್ವಾದ್ಯಂತ ತೆರೆ ಕಾಣುತ್ತಿದೆ. ಈ ಚಿತ್ರದಲ್ಲಿ ಸುದೀಪ್ ಖಳನಟನಾಗಿ ನಟಿಸಿದ್ದು ಈಗಾಗಲೇ ಟ್ರೈಲರ್‌ಗಳಲ್ಲಿ ಮಿಂಚುತ್ತಿದ್ದಾರೆ.

ಈ ಹಿಂದೆಯೂ ದೇವರಾಜ್, ಪ್ರಭಾಕರ್, ಉಪೇಂದ್ರ ತರಹದ ಕನ್ನಡ ಸಿನಿಮಾದ ಹೀರೋಗಳು ಇಲ್ಲಿ ನಾಯಕನಟರಾಗಿ ಮಿಂಚಿದ್ದರೂ ತೆಲುಗು ಸಿನಿಮಾಗಳಲ್ಲಿ ಖಳನಾಯಕರಾಗಿ ಆರ್ಭಟಿಸಿದ್ದರು. ಅಷ್ಟೇ ಏಕೆ? ದೇವರಾಜ್ ಅವರಿಗೆ ಆಂಧ್ರ ಸರ್ಕಾರ ನೀಡುವ ನಂದಿ ಪ್ರಶಸ್ತಿಯೂ ದೊರಕಿತ್ತು. ಇವರಲ್ಲದೆ, ಕನ್ನಡದವರೇ ಆದ ಪ್ರಕಾಶ್ ರೈ ತನ್ನ ಖಳನಾಯಕನ ಪಾತ್ರಗಳಿಂದಲೇ ಆಂಧ್ರದಲ್ಲಿ ಮನೆ ಮಾತಾಗಿದ್ದಾರೆ.

ಆದರೆ ಸಾಧಾರಣವಾಗಿ ನಮ್ಮ ಸಿನಿಮಾದ ಹೀರೋಗಳು ಇತರೆ ಭಾಷೆಗಳಲ್ಲಿ ವಿಲನ್‌ಗಳಾಗುವುದಲ್ಲದೆ, ಅಲ್ಲಿನ ನಾಯಕನಟರ ಕೈಯಲ್ಲಿ ಒದೆ ತಿನ್ನುವುದು ಅವರ ಅಭಿಮಾನಿಗಳು ಇಷ್ಟಪಡುವುದಿಲ್ಲ. ಆದರೆ ಇಂತಹ ವಿಷಯಗಳ ಬಗ್ಗೆ ತಲೆ ಕೆಡಿಸಿಕೊಳ್ಳದ ಸುದೀಪ್ ಮಾತ್ರ 'ಈಗ' ಚಿತ್ರದಲ್ಲಿ ಖಳನಾಯಕನಾಗಿ ನಟಿಸಿದ್ದಾರೆ. ಚಿತ್ರದ ಪ್ರೀಮಿಯರ್ ಷೋ ನೋಡಿದವರೆಲ್ಲ ಸುದೀಪ್ ನಟನೆ ಅದ್ಭುತವಾಗಿದೆ ಎಂದು ಹೊಗಳಿದ್ದಾರೆ. ಆದರೂ ಈ ಚಿತ್ರ ಬಿಡುಗಡೆಯಾದ ನಂತರ ಆತನ ಅಭಿಮಾನಿಗಳು ಆತನ ಈ ಹೊಸ ಅವತಾರವನ್ನು ಹೇಗೆ ಸ್ವೀಕರಿಸುತ್ತಾರೆ ಎಂಬುದನ್ನು ನೋಡಬೇಕು.

ಇತ್ತೀಚಿನ ದಿನಗಳಲ್ಲಿ ಸುದೀಪ್‌ನಂತಹ ಒಬ್ಬ ಒಳ್ಳೆಯ ಕಲಾವಿದ ತೆಲುಗು ಮತ್ತು ಹಿಂದಿ ಚಿತ್ರಗಳಲ್ಲಿ ನಟಿಸುವ ಮುಖಾಂತರ ಅಖಿಲ ಭಾರತ ಮಟ್ಟದಲ್ಲಿ ತನ್ನನ್ನು ಗುರುತಿಸಿಕೊಳ್ಳುತ್ತಿದ್ದಾರೆ. ಆದರೆ ಈ ಕಾರಣಕ್ಕೆ ಅವರು ಕನ್ನಡ ಸಿನಿಮಾಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತಿಲ್ಲ ಎಂಬ ಅಪವಾದವೂ ಕೇಳಿಬರುತ್ತಿದೆ. ಹೀಗಾಗಿ 'ಈಗ' ಸಿನಿಮಾ ಸುದೀಪ್ ಪಾಲಿಗೆ ತಂತಿ ಮೇಲಿನ ನಡಿಗೆಯಂತಾಗಿದೆ.



ಮಧುಚಂದ್ರನ 'ಫೈಬರ್'... ಕಾವ್ಯ

ಮಧುಚಂದ್ರ ಎಂಬ ಯುವಕ ತನ್ನ ವಿಭಿನ್ನ ಹೆಸರಿನ ಚಿತ್ರ ಮತ್ತು ಅದಕ್ಕೆ ಸಿಗುತ್ತಿರುವ ವಿಚಿತ್ರ ತರಹದ ಪ್ರಚಾರದಿಂದ ಸುದ್ದಿ
ಈತ ಮೊದಲ ಬಾರಿಗೆ ನಿರ್ದೇಶಿಸುತ್ತಿರುವ ಚಿತ್ರದ ಹೆಸರು 'ಫೈಬರ್ ಯುಗದೊಳ್ ನವ ಯುವ ಮಧುರ ಪ್ರೇಮ ಕ
ಚೊಚ್ಚಲ ಪ್ರಯತ್ನದಲ್ಲೇ ಏನಾದರೂ ಹೊಸತನ್ನು ಮಾಡಬೇಕು ಎಂಬ ಉತ್ಸಾಹದಲ್ಲಿರುವ ಮಧುಚಂದ್ರ ತನ್ನ ಸಿನಿ
ಮೈಲುದ್ದದ ಹೆಸರನ್ನು ಇನ್ನೂ ಪತ್ರಿಕೆಗಳಿಗೆ ಬಿಡುಗಡೆ ಮಾಡಿಲ್ಲ, ಅದರ ಬದಲಿಗೆ ಪದಬಂಧವನ್ನು ನೀಡಿ ಅದರಲ್ಲಿರು
ಹೆಸರನ್ನು ಸೂಚಿಸಿದವರಿಗೆ ಪ್ರಶಸ್ತಿ ನೀಡುವುದಾಗಿ ಘೋಷಿಸಿದ್ದಾರೆ. ಆದರೆ ಈ ಚಿತ್ರದ ಹೆಸರು ಏನೆಂಬುದು
ಜಗಜ್ಜಾಹೀರಾಗಿದೆ. ಅಂದಹಾಗೆ, ಈ ಚಿತ್ರದಲ್ಲಿ ನಟಿಸುತ್ತಿರುವ ನಾಯಕ-ನಾಯಕಿಯರ ಹೆಸರುಗಳನ್ನಾಗಲೀ, ಫೋಟೋ
ಇನ್ನೂ ಬಹಿರಂಗಪಡಿಸಿಲ್ಲ. ಮಧುಚಂದ್ರ ಪ್ರಕಾರ ಇದು ಕೂಡ ಒಂದು ರೀತಿಯ 'ನಿಗೂಢ' ಪ್ರಚಾರವಂತೆ.

ಇಂತಹ ಮೈಲುದ್ದದ ಹೆಸರನ್ನು ಪ್ರೇಕ್ಷಕ ಹೇಗೆ ಸ್ವೀಕರಿಸುತ್ತಾನೆ? ಚಿತ್ರದ ಶೀರ್ಷಿಕೆ ನೋಡಿಯೇ ಯಾರಾದ
ನೋಡಲು ಹೋಗುತ್ತಾರೆಯೇ? ಎಂದು ಕೇಳಿದರೆ ಮಧುಚಂದ್ರ "ನನ್ನ ಚಿತ್ರದ ಶೀರ್ಷಿಕೆ ಜನರನ್ನು ಆಕರ್ಷಿಸುತ್ತದೆ
ವಾದಿಸುತ್ತಾರೆ. ಈ ಮಧುಚಂದ್ರ ಕನ್ನಡ ಚಿತ್ರರಂಗದಲ್ಲಿ ಸಂಭಾಷಣಾಕಾರರಾಗಿ ಹೆಸರು ಮಾಡಿರುವ ಮಂಜು ಮಾಂಡೊ
ಸಹೋದರ. ಈತ ಟಿ.ಎನ್. ಸೀತಾರಾಂ ಮತ್ತು ಉಪೇಂದ್ರ ಜೊತೆ ಹಲವಾರು ವರ್ಷಗಳ ಕಾಲ ಕೆಲಸ
ಅನುಭವವನ್ನು ಹೊಂದಿದ್ದಾನಂತೆ. ಆದರೂ ಆತನ ಮಾತು, ಚಿತ್ರದ ಕಥಾವಸ್ತು, ಶೀರ್ಷಿಕೆ, ಪ್ರಚಾರ
ನೋಡಿದರೆ ಈತನ ಮೇಲೆ ಉಪೇಂದ್ರ ಹೆಚ್ಚು ಪ್ರಭಾವ ಬೀರಿರುವುದು ಎದ್ದು ಕಾಣಿಸುತ್ತದೆ. ಮೊನ್ನೆ
ಕ್ಯಾಸೆಟ್ ಬಿಡುಗಡೆ ಸಮಾರಂಭಕ್ಕೂ ಉಪೇಂದ್ರರನ್ನೇ ಮುಖ್ಯ ಅತಿಥಿಯಾಗಿ ಆಹ್ವಾನಿಸುವ
ಮಧುಚಂದ್ರ ತನ್ನ ಗುರುಭಕ್ತಿಯನ್ನು ಪ್ರದರ್ಶಿಸಿದರು.

ಅದೇನೇ ಇರಲಿ, ಈ ಹುಡುಗನ ಉತ್ಸಾಹ ಮತ್ತು ಆತ್ಮವಿಶ್ವಾಸ ನೋಡಿದರೆ ಈ ಚಿತ್ರದ ಬಗ್ಗೆ ಒಂದಿಷ್ಟು ಕುತೂಹಲ ಹುಟ್ಟುತ್ತದೆ. ನೋಡೋಣ ಮುಂದೇನಾಗುತ್ತದೆ ಎಂದು...



'ದಂಡುಪಾಳ್ಯ'ದಲ್ಲಿ ಮನರಂಜನೆ!

ಈ ವಾರ ತೆರೆ ಕಾಣಲಿರುವ 'ದಂಡುಪಾಳ್ಯ' ಚಿತ್ರ ಈಗಾಗಲೇ ಅನೇಕರ ಕುತೂಹಲಕ್ಕೆ ಕಾರಣವಾಗಿದೆ. ಶ್ರೀನಿವಾಸ್‌ರಾಜು ನಿರ್ದೇಶನದ ಈ ಚಿತ್ರ ಇಡೀ ಕರ್ನಾಟಕವನ್ನು ಬೆಚ್ಚಿಬೀಳಿಸಿದ ದಂಡುಪಾಳ್ಯ ಗ್ಯಾಂಗ್‌ನ ಅನಾಚಾರವನ್ನೇ ಕಥಾವಸ್ತುವಾಗಿ ಹೊಂದಿದೆ ಎಂಬುದು ಈಗ ಬಹಿರಂಗ ಸತ್ಯ. ಆದರೂ ನಿರ್ದೇಶಕ ಶ್ರೀನಿವಾಸರಾಜು ಮೊನ್ನೆ ಪತ್ರಿಕಾಗೋಷ್ಠಿಯಲ್ಲಿ "ಈ ಚಿತ್ರ ಮನರಂಜನೆಗಾಗಿ ನಿರ್ಮಾಣಗೊಂಡದ್ದು" ಎಂಬ ಹಾಸ್ಯಾಸ್ಪದ ಹೇಳಿಕೆ ನೀಡಿದ್ದಾರೆ.

ರಘು ಮುಖರ್ಜಿ, ನಿಶಾ ಕೊಠಾರಿ, ಪೂಜಾ ಗಾಂಧಿ, ಪೆಟ್ರೋಲ್ ಪ್ರಸನ್ನ, ಮುಂಬೈನ ದೇಶಪಾಂಡೆ, ಕರಿಸುಬ್ಬು ... ಹೀಗೆ ಅನೇಕ ಭಾಷೆಯ ಕಲಾವಿದರು ಈ ಚಿತ್ರದಲ್ಲಿ ನಟಿಸಿದ್ದಾರೆ. ಆರಂಭದಲ್ಲಿ ಪೂಜಾ ಗಾಂಧಿಯ ಅರೆನಗ್ನ ಫೋಟೋದಿಂದಾಗಿ ಈ ಚಿತ್ರ ಭಾರೀ ಪ್ರಚಾರ ಪಡೆದಿದ್ದರೂ ಈಗ ಚಿತ್ರದ ಬಗ್ಗೆ ಒಳ್ಳೆಯ ಟಾಕ್ ಕೇಳಿಬರುತ್ತಿದೆ. ಇದನ್ನು ನೋಡಿರುವವರ ಪ್ರಕಾರ ಇದು ತಾಂತ್ರಿಕವಾಗಿ ಉತ್ತಮವಾಗಿ ಮೂಡಿಬಂದಿದೆ.



ದಂಡುಪಾಳ್ಯ
ನಿಶಾ ಕೊಠಾರಿ

ಹಂಸ್-ರವಿ ಹೊಸ ರೀತಿಯ ಕುಚ್ಚಿಕು!

ಇತ್ತೀಚೆಗೆ ಹಂಸಲೇಖ ಅವರ ಹುಟ್ಟುಹಬ್ಬದ ಸಮಾರಂಭದಂದು ಅವರ ಒಂದು ಕಾಲದ ಆತ್ಮೀಯ ಗೆಳೆಯ ರವಿಚಂದ್ರನ್ ನೀಡಿದ ಉಡುಗೊರೆಯನ್ನು ನೋಡಿ ಹಂಸಲೇಖ ರೋಮಾಂಚನಗೊಂಡಿದ್ದಾರೆ.

ಹಂಸ್ ಅವರ ಹುಟ್ಟುಹಬ್ಬದ ದಿನವಾದ ಜೂನ್ 23 ರಂದು ಅವರ ದೇಶೀಯ ಸ್ಕೂಲ್‌ಗೆ ಸಂಬಂಧಪಟ್ಟ ಸಮಾರಂಭವೊಂದನ್ನು ಅವರು ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಂಡಿದ್ದರು. ಮುಖ್ಯಮಂತ್ರಿ ಸದಾನಂದ ಗೌಡರು ಉದ್ಘಾಟಿಸಿದ ಆ ಸಮಾರಂಭದಲ್ಲಿ ಹಂಸಲೇಖ ಅವರಿಗೆ ಶುಭಕೋರಿ ಕೆಲವರು ದೃಶ್ಯ ಮಾಧ್ಯಮದ ಮುಖಾಂತರ ಸಂದೇಶಗಳನ್ನು ಕಳುಹಿಸಿದ್ದರು. ಅದರ ಕೊನೆಯಲ್ಲಿ ಒಂದು ಅಚ್ಚರಿ ಇತ್ತು.



ಅದೇನೆಂದರೆ ಒಂದಿಷ್ಟು ಕ್ಯಾಂಡಲ್, ದೀಪ ಹಾಗೂ ಪಾರಿವಾಳಗಳನ್ನು ಬಳಸಿ, ಸಂಗೀತ ಮತ್ತು ಧ್ವನಿಯನ್ನು ಬೆರೆಸಿ, ಒಂದು ಇಡೀ ದಿನ ಶೂಟ್ ಮಾಡಿ, ಹದಿನೈದು ನಿಮಿಷಗಳ ವಿಶೇಷ ಸಂದೇಶವನ್ನು ರವಿಚಂದ್ರನ್ ಚಿತ್ರೀಕರಿಸಿದ್ದರು. ಅದೆಲ್ಲದರ ಕೊನೆಯಲ್ಲಿ ರವಿಚಂದ್ರನ್ ಅವರು "ರಾಜು, ನೀನು ನನಗಾಗಿ ಹುಟ್ಟಿದ್ದಕ್ಕೆ ತುಂಬಾ ಥ್ಯಾಂಕ್ಸ್, ಹುಟ್ಟುಹಬ್ಬದ ಶುಭಾಶಯಗಳು" ಎಂದು ಸೇರಿಸಿದ್ದರು. ಈ ವಾಕ್ಯವನ್ನು ಕೇಳಿದ ನಂತರ ಹಂಸಲೇಖ ರೋಮಾಂಚನಗೊಂಡರು ಮಾತ್ರವಲ್ಲ ಅವರ ಕಣ್ಣಲ್ಲಿ ಆನಂದಭಾಷ್ಪವೂ ಕಾಣಿಸಿಕೊಂಡಿತಂತೆ. ಸ್ವತಃ ಹಂಸಲೇಖ ಅವರು ರವಿಚಂದ್ರನ್ ಕಳುಹಿಸಿದ್ದ ಈ ಸಂದೇಶದ ಬಗ್ಗೆ ಎಲ್ಲರ ಬಳಿ ಸಂತೋಷದಿಂದ ಹೇಳಿಕೊಳ್ಳುತ್ತಿದ್ದಾರೆ.

ಈ ಬಗ್ಗೆ ಕ್ರೇಜಿಸ್ಟಾರ್ ಅವರನ್ನು ಪ್ರಶ್ನಿಸಿದಾಗ "ಹಂಸಲೇಖ ಅವರ ಮಗಳು ಸಂದೇಶ ಕೇಳಿ ಕ್ಯಾಮರಾ ತೆಗೆದುಕೊಂಡು ಬಂದಿದ್ದರು. ಆದರೆ ನಾನು ಕ್ಯಾಮರಾ ಎದುರು ಮಾತನಾಡುವುದಿಲ್ಲ, ಅದರ ಬದಲಿಗೆ ನಾನೇ ಹದಿನೈದು ನಿಮಿಷಗಳ ಕಾರ್ಯಕ್ರಮ ಮಾಡಿಕೊಡುತ್ತೇನೆ ಎಂದು ಅವರನ್ನು ಕಳುಹಿಸಿದ್ದೆ. ನನ್ನ ಸಿನಿಮಾದ ಶೂಟಿಂಗ್‌ಅನ್ನು ಬದಿಗಿಟ್ಟು ಒಂದು ದಿನ ಈ ಕಾರ್ಯಕ್ರಮ ಮಾಡಿದೆ. ಕಾರ್ಯಕ್ರಮದ ಕೊನೆಯಲ್ಲಿ ನನಗೆ 'ರಾಜು, ನೀನು ನನಗಾಗಿ ಹುಟ್ಟಿದ್ದಕ್ಕೆ ತುಂಬಾ ಥ್ಯಾಂಕ್ಸ್' ಎಂದು ಹೇಳಬೇಕೆನಿಸಿತು. ಏಕೆಂದರೆ ನನ್ನ ಮತ್ತು ಅವರ ಪ್ರೀತಿ, ಬಾಂಧವ್ಯ ನಮ್ಮ ಜೋಡಿ ಕಳೆದ ಒಳ್ಳೆಯ ಕ್ಷಣಗಳನ್ನು ನೆನಪಿಸಿಕೊಂಡಾಗ ನನಗೆ ಹಾಗೆ ಹೇಳಬೇಕೆನಿಸಿತು" ಎಂದು ಹೇಳಿ ನಕ್ಕರು. ಇದೇ ಜೋಡಿ ಈ ಹಿಂದೆ ಬೇರ್ಪಟ್ಟದ್ದಾಗ ಹಂಸಲೇಖ ಪತ್ರಕರ್ತರೊಂದಿಗೆ ರವಿಚಂದ್ರನ್ ವಿಷಯ ಮಾತನಾಡುವಾಗ ಅವರನ್ನು 'ಹಳೆಯ ಯಜಮಾನರು' ಎಂದು ಸಂಬೋಧಿಸುತ್ತಿದ್ದರು. ಹಾಗೆಯೇ ರವಿ ಕೂಡ ಹಂಸ್ ಅವರನ್ನು ನಿರ್ಲಕ್ಷಿಸುತ್ತಿದ್ದರು. ಅದೆಷ್ಟೋ ವರ್ಷಗಳ ಕಾಲ ಅವರಿಬ್ಬರೂ ಮಾತನಾಡುತ್ತಲೇ ಇರಲಿಲ್ಲ. ಆದರೆ ಈಗ ಮತ್ತೆ ಅವರ ನಡುವಿನ ಸಂಬಂಧ, ಬಾಂಧವ್ಯ ಗಟ್ಟಿಯಾಗುತ್ತಿರುವುದನ್ನು ನೋಡಿದರೆ ರಾಜಕೀಯದಂತೆ ಚಿತ್ರರಂಗದಲ್ಲೂ ಶಾಶ್ವತವಾದ ಶತ್ರುಗಳಿಲ್ಲ ಎಂದು ಅರಿವಾಗುತ್ತದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail...